ಅಪರಂಜಿ


ತಿಳಿನಗೆಯ ಕಾರಂಜಿ

ಅಕ್ಟೋಬರ್ 2007



ಬೆಳ್ಳಿ ಹಬ್ಬದ ವರ್ಷ






ಬಿಡಿ ಪ್ರತಿ: ರೂ. 20.00

ಅಪರಂಜಿ

ತಿಳಿನಗೆಯ ಕಾರಂಜಿ




ಸಂಪುಟ 25
ಸಂಚಿಕೆ - 1
ಅಕ್ಟೋಬರ್ - 2007

ಚಂದಾ ವಿವರ:
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತುವರ್ಷದ ಚಂದಾ: ರೂ. 750/-
ಕೆಲಸದ ವೇಳೆ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ
ಮುದ್ರಣ: ರವಿ ಗ್ರಾಫಿಕ್ಸ್
ಅಕ್ಷರಜೋಡಣೆ:
ಒಮೇಗಾ ಲೇಸರ್ ಟೆಕ್

ಈ ಸಂಚಿಕೆಯಲ್ಲಿ .....

ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: aparanji@hotmail.com website: aparanjimag.com

ಸಂಪರ್ಕ ವಿಳಾಸ: ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 808-26688488. email: brmurthy@dataone.in



ಮೊದಲ ಮಾತು

ಇಪ್ಪತ್ತೈದಕ್ಕೆ ಕಾಲಿಡುತ್ತಿರುವ ಅಪರಂಜಿಗೆ ಬೆಳ್ಳಿಯ ಹಬ್ಬವನ್ನು ಉಚಿತ ರೀತಿಯಲ್ಲಿ ಆಚರಿಸಲು ಅಪರಂಜಿ ಬಳಗ ಸಂಭ್ರಮದ ಸಿದ್ಧತೆಗಳನ್ನು ನಡೆಸುತ್ತಿದೆ. ಕೊರವಂಜಿಯ ಲೇಖಕರಾಗಿದ್ದ ಮೊದಲಿನಿಂದಲೂ ಅಪರಂಜಿಗೆ ಒತ್ತಾಸೆಯಾಗಿ ನಿಂತಿರುವ ಮಾನ್ಯ ಮಿತ್ರ ಎನ್.ರಾಮಾನುಜ ಅವರು ಭಾರತೀಯ ವಿದ್ಯಾಭವನದ ಸಂಪೂರ್ಣ ಬೆಂಬಲ ದೊರಕುವಂತೆ ಮಾಡಿ ಸಹಕರಿಸಿದ್ದಾರೆ. ಹತ್ತುವರುಷದ ಹಬ್ಬವನ್ನು ಅಪರಂಜಿ ಆಚರಿಸಿದ್ದು ಭಾರತೀಯ ವಿದ್ಯಾಭವನದಲ್ಲೇ. ಹದಿನೆಂಟರ, ಇಪ್ಪತ್ತರ ಸಂಭ್ರಮಗಳೂ ಅಲ್ಲಿಯೇ ನಡೆದದ್ದು. ಹಾಗಾಗಿ ಈ ಬೆಳ್ಳಿಯ ಹಬ್ಬವೂ ಸಹಾ ಅಲ್ಲಿ ನೆರವೇರುತ್ತಿರುವುದು ತೀರ ಉಚಿತ. ಅಕ್ಟೋಬರ್ ಎರಡರಂದು ಅಲ್ಲಿ ನಡೆಯಲಿರುವ ಕಾರ್ಯಕ್ರಮದ ವಿವರಗಳನ್ನು ನಮ್ಮ ಹಿಂದಿನ ಸಂಚಿಕೆಯಲ್ಲೇ ಸೂಚಿಸಿದ್ದೇವೆ. ಈ ಸಂಚಿಕೆ ನಿಮ್ಮ ಕೈ ಸೇರುವ ಹೊತ್ತಿಗಾಗಲೇ ಸಮಾರಂಭ ಮುಗಿದು ಅದನ್ನು ಮೆಲಕು ಹಾಕುವ ಸಮಯ ಒದಗಿ ಬಂದಿರಬಹುದು. ಅಪರಂಜಿಯ ಈ ವಿಶೇಷ ಸಂಚಿಕೆಯನ್ನೂ ಆ ಸಂದರ್ಭದಲ್ಲಿಯೇ ಬೆಳಕುಗಾಣಿಸುತ್ತಿದ್ದೇವೆ. ಅನೇಕ ಹಿರಿಯ ಕಿರಿಯ ಲೇಖಕ, ಲೇಖಕಿಯರು ಬರಹಗಳನ್ನು ನೀಡಿ ಈ ಸಂಚಿಕೆಯ ಕೆಲಸವನ್ನು ಸುಗಮಗೊಳಿಸಿದ್ದಾರೆ. ಅವರೆಲ್ಲರಿಗೂ ಅಪರಂಜಿಯ ಕೃತಜ್ಞತೆಗಳು.

ಈ ಬೆಳ್ಳಿಯ ಹಬ್ಬದ ವರ್ಷದಲ್ಲಿ ಅಪರಂಜಿಯ ರಕ್ಷಾಪುಟಕ್ಕೆ ಒಂದು ಹೊಸರೂಪವನ್ನು ಕೊಡಲು ನಿರ್ಧರಿಸಿದಾಗ, ಗೆಳೆಯ ಶ್ರೀ ಚಂದ್ರನಾಥ್ ಆಚಾರ್ಯ ನಮ್ಮ ನೆರವಿಗೆ ಬಂದು ಒಂದು ಬಹು ಆಕರ್ಷಕವಾದ ವಿನ್ಯಾಸವನ್ನು ಸೃಷ್ಟಿಸಿಕೊಟ್ಟರು. ಅವರಿಗೆ ಅಪರಂಜಿ ಆಭಾರಿ.

ರಕ್ಷಾಪುಟದ ಮೇಲಿನ ವ್ಯಂಗ್ಯಚಿತ್ರ, ಕಿರಿಯ ಮಿತ್ರ ಜನಾರ್ಧನ ಸ್ವಾಮಿಯವರ ಕೌಶಲ. ಅಮೆರಿಕೆಯಿಂದ ತಾಯ್ನಾಡಿಗೆ ಮರಳಿಬಂದು ಈಗ ಇಲ್ಲಿ ನೆಲೆಸಿರುವ ಇವರ ಸೃಜನಶೀಲತೆ ಬೆರಗುಗೊಳಿಸುವಂತಹದು. ಇವರು ನಮ್ಮ ಬಳಗಕ್ಕೆ ಸೇರಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಹಲವು ವಾರಗಳ ಹಿಂದೆ ಪ್ರಕಾಶ ಸಾಹಿತ್ಯದವರು ಒಂದು ಅನಿರೀಕ್ಷಿತ ಸಿಹಿಸುದ್ದಿಯನ್ನು ತಂದರು. ರಾ.ಶಿ.ಯವರ ಅಪ್ರಕಟಿತ ಹಸ್ತಪ್ರತಿಯೊಂದು ಎಲ್ಲೆಲ್ಲೋ ಸುತ್ತಿ ಈಗ ಕಾಲು ಶತಮಾನದ ನಂತರ ತನ್ನ ಅಜ್ಞಾತವಾಸದಿಂದ ಹೊರಬಂದು ಇವರ ಕೈ ಸೇರಿತ್ತಂತೆ. 'ವೈಭೋಗದ ಕ್ಲಬ್ಬಿನಲ್ಲಿ' ಎಂಬ ಈ ಕೃತಿಯೂ ಸಹಾ ಅಕ್ಟೋಬರ್ ಎರಡರ ಸಮಾರಂಭದಲ್ಲಿ ಅನಾವರಣಗೊಳ್ಳಲಿದೆ. ಇದೇ ಸಮಯಕ್ಕೆ ವಸಂತ ಪ್ರಕಾಶನದವರು ರಾ.ಶಿ.ಯವರ 'ಕೊರವಂಜಿಯ ಪಡುವಣ ಯಾತ್ರೆ' ಪುಸ್ತಕದ ಮರುಮುದ್ರಣವನ್ನೂ ಹೊರತಂದಿದ್ದಾರೆ. ಈ ಎಲ್ಲ ಹಾಸ್ಯ ಹೂರಣದ ಕರಿಗಡುಬುಗಳನ್ನೂ ಜನಪ್ರಿಯ ಚಿತ್ರನಟ ರಮೇಶ್ ಅರವಿಂದ್‌ರವರು ಬಿಡುಗಡೆ ಮಾಡಲಿದ್ದಾರೆ.

ಈ ಸಂಚಿಕೆಗೆ ಜಾಹೀರಾತುಗಳನ್ನು ಒದಗಿಸಿ ಅದಕ್ಕೊಂದು ಆರ್ಥಿಕ ಸ್ಥಿರತೆಯನ್ನು ಗಳಿಸಿಕೊಟ್ಟ ಶ್ರೀಯುತರುಗಳಾದ ರಾಜಗೋಪಾಲ್, ಪಿ.ಆರ್.ನಾಥ್, ಒಮೆಗಾದ ರವಿ, ಮತ್ತಿತರ ಎಲ್ಲಾ ಸಹೃದಯರಿಗೂ ಅಪರಂಜಿಯ ಪ್ರೀತಿಪೂರ್ವಕ ನಮನಗಳು. ಡಿಟಿಪಿ ಕೆಲಸವನ್ನು ಚೊಕ್ಕಟವಾಗಿ ನಿರ್ವಹಿಸಿದ ಒಮೆಗಾದ ಶ್ರೀಮತಿ ವಸಂತಾ, ಮುದ್ರಣವನ್ನು ಸಕಾಲಕ್ಕೆ ಮಾಡಿಕೊಟ್ಟ ರವಿಗ್ರಾಫಿಕ್ಸ್‌ನ ಎಲ್ಲ ಸಿಬ್ಬಂದಿವರ್ಗದವರಿಗೂ ನಮ್ಮ ಕೃತಜ್ಞತೆಗಳು. ಅತ್ಯಂತ ಮುತುವರ್ಜಿವಹಿಸಿ ಕರಡನ್ನು ತಿದ್ದಿಕೊಟ್ಟ ಶ್ರೀ ಗೋಪಾಲಕೃಷ್ಣ ಅವರಿಗೆ ನಾವು ಋಣಿಗಳು. ಈ ಬೆಳ್ಳಿಯ ಹಬ್ಬದ ಅಂಗವಾಗಿ ಅಪರಂಜಿ ಬಳಗದ ಎಲ್ಲರಿಗೂ ಒಂದು ನೆನಪಿನ ಕಾಣಿಕೆಯನ್ನು ಕೊಡುವ ಯೋಚನೆ ಮಾಡಿದಾಗ ಬಹು ಉತ್ಸಾಹದಿಂದ ಈ ಕೆಲಸದಲ್ಲಿ ನಮ್ಮ ನೆರವಿಗೆ ಬಂದವರು ಗೆಳೆಯ ಪಿ.ಎಂ. ಪ್ರಕಾಶ್. ಅಪರಂಜಿಯ ಪ್ರತಿ ಕೃತಿಗಳನ್ನು ತುಂಬಾ ಚೆನ್ನಾಗಿ ಮಾಡಿಕೊಟ್ಟಿರುವ ಪ್ರಕಾಶ್‌ಗೆ ನಮ್ಮೆಲ್ಲರ ಕೃತಜ್ಞತೆಗಳು.

ಸಕಲರೂ ನಗುನಗುತ್ತಾ ಸುಖವಾಗಿರಲಿ.

❖ **ಶಿವಕುಮಾರ್**



ಕೃಪೆ- ಶೇಖರ್ ಗುರೇರ



○ ಪ್ರಕಾಶ್

ಉಪ ಮುಖ್ಯಮಂತ್ರಿಗಳು, ಎಡೆಯೂರಲು ಬಿಡಪ್ಪ ಅನ್ನುತ್ತಾರೆ ಎಂಬುದು ಶುದ್ಧ ಕುಹಕ

★★★

ರಾಮಸೇತು ಒಡೆಯದಂತೆ ಕೋರ್ಟು ತಡೆ

- ಸುದ್ದಿ

ರಾಮ, ರಾಮ!

★★★

ಭಯೋತ್ಪಾದಕರಿಗೆ ದೇಶ ಮಣಿಯದು

- ಸೋನಿಯಾ

ರಾಜಕಾರಣಿ - ಭಯೋತ್ಪಾದಕರ ಬಗ್ಗೆ??

★★★

"ತ್ರಿಶೂಲ - ರೂಪದ ಮೆಣಸಿನ ಕಾಯಿ"

- ಸುದ್ದಿ

ಬಾಳಕ ಮಾಡಲು ಬಾಳ್ ಠ್ಯಾಕರೆ ಮನೆಗೆ ಕಳಿಸಬೇಕು

★★★

ದುಶ್ಚಟಗಳನ್ನು ಬಿಟ್ಟರೆ ತೃಪ್ತಿಯ ಬದುಕು ಸಾಧ್ಯ

- ಹೇಳಿಕೆ

ಅದೂ ಬದುಕೇ ಅಂತ ಅಪರಂಜಿ ಬಳಗದವರು ನಕ್ಕರಂತೆ

★★★

ರೈಲ್ವೇ ನೇಮಕಾತಿಯಲ್ಲಿ ಅನ್ಯಾಯ, ಪ್ರತಿಭಟನೆ

- ಸುದ್ದಿ

ಎಲ್ಲೋ ನಿಯಮ ಹಳಿ ತಪ್ಪಿರುವಂತಿದೆ

★★★

"ನಮ್ ಕಾಲ ಮುಗಿಯಿತು"

- ಮಾಜೀ ಪ್ರಧಾನಿಗಳು

ಅದು ಅವರಿಗೆ ಎಂದೋ ಹೊಳೆಯಬೇಕಾಗಿತ್ತು!!


★★★

ದಾವೂದ್ ಇಬ್ರಾಹಿಂಗೆ ನಗರದ ನಂಟು?

- ಸುದ್ದಿ

ಯಾಕೋ ಬೆಂದಕಾಳೂರು ಬೇಯುತ್ತಿದೆ!!

★★★



ಕನ್ನಡ ಬಲಿಷ್ಠವಾಗಿದೆ

(ಒಂದು ತನಿಖಾವರದಿ)

❖ ಅರಾಸೇ

"ಅಷ್ಟೇ ಅಲ್ಲ ಕಾಲುಝಾಡಿಸಿ ಆಕ್ರಮಣಕಾರರನ್ನು ಒದೆಯುತ್ತಿದೆ ಎಂದರೆ ನೀವು ನಂಬಲಿಕ್ಕಿಲ್ಲ. ಅಲ್ಲದೆ ಇದು ಬೆಂಗಳೂರಿನಲ್ಲೇ ಆಗುತ್ತಿದೆ ಎಂದರೆ ನಿನಗೆ ತಲೆ ಸಮ ಇಲ್ಲ ಎನ್ನುತ್ತೀರಿ. ನೀವು ಏನಾದರೂ ಅನ್ನಿ ಈ ಮಾತು ನಿಜ. ಖುದ್ದಾಗಿ ನಾನೇ ನೋಡಿದ ಪ್ರಸಂಗ" ಎಂದವನು ಹೇಳುತ್ತಿದ್ದ. ನಾನು ಹತ್ತಿರದಲ್ಲೇ ಕುಳಿತು ಕೇಳುತ್ತಿದ್ದೆ.

"ಮೊನ್ನೆ ನಾನು ಒಬ್ಬಾನೊಬ್ಬನನ್ನು ನೋಡುವ ಪ್ರಸಂಗ ಬಂದಿತು. ಅವನ ಹೆಸರನ್ನು ಕಟ್ಟಿಕೊಂಡೇನು? ಅವನು ಸೋಮಿ ಎಂದಿಟ್ಟುಕೊಳ್ಳೋಣ. ಸೋಮಿ ಒಂದಾನೊಂದು ದೊಡ್ಡ ಬಿಲ್ಡಿಂಗಿನ ನಾಲ್ಕನೇ ಮಹಡಿಯಲ್ಲಿರುವ ಒಂದು ಬಹುಭಾರೀ ಕಂಪನಿಯಲ್ಲಿ ಕೆಲಸಮಾಡುತ್ತಿದ್ದಾನೆ.

ನಾನಲ್ಲಿಗೆ ಹೋದೆ. ಲಿಫ್ಟು ಕೈಕೊಡಲಿಲ್ಲ. ನನಗೆ ಅಚ್ಚರಿಯೋ ಅಚ್ಚರಿ. ಆಫೀಸಿನ ಮುಂದೆ ಕುಳಿತ ಕಾವಲುಗಾರ ನನ್ನನ್ನು ಪ್ರಶ್ನಿಸಲೇ ಇಲ್ಲ. ಇದು ಇನ್ನೂ ವಿಸ್ಮಯ – ಒಲವಿನ ಹಾಗೆ.

ಸೋಮಿ ಗಾಜಿನ ಗೋಡೆಯ ಒಂದು ಛೇಂಬರಿನಲ್ಲಿ ಕುಳಿತಿದ್ದ. ಬೃಹತ್ತಾದ ಮೇಜಿನ ಮೇಲೆ ಕೈಲಾಸನಾಥ್.ಎಂ. ಸುಲ್ತಾನಿಪುರ್ ಎಂಬ ಕಟ್ಟಿಗೆ ಫಲಕವಿತ್ತು. ಸೋಮಿ ನನ್ನನ್ನು ಸನ್ನೆ ಮಾಡಿ ಒಳಗೆ ಕರೆದ. ನಾನು ಹೋಗಿ ಅವನ ಪಕ್ಕದಲ್ಲಿ ಕುಳಿತೆ. ಮೇಲೆ ಹೇಳಿದ ಕೈಲಾಸನಾಥ ಒಳ್ಳೆ ಕಟ್ಟುಮಸ್ತಾದ ಆಳು. ಅವನು ನನ್ನನ್ನು ನೋಡಿದ ಶೀವಿ ಹೇಗಿತ್ತು ಎಂದರೆ ನಾನು ಸೊಳ್ಳೆಯೋ ನೊಣವೋ ಇರಬೇಕು ಎನ್ನಿಸಿತು.

ಕೈಲಾಸನಾಥನೆದುರಿಗೆ ಮೇಜಿನ ಆಚೆ ಒಬ್ಬ ತಲೆ ತಗ್ಗಿಸಿ ನಿಂತಿದ್ದ. ಅವನು ಕನ್ನಡಿಗನಲ್ಲ ಎಂದು ಅವನ ನಿಲುವೇ ಹೇಳುತ್ತಿತ್ತು. ಕೈಲಾಸನಾಥ ಕೈಯಲ್ಲಿ ಒಂದು ಕಾಗದ ಹಿಡಿದುಕೊಂಡಿದ್ದ. ಅದನ್ನೇ ನೋಡುತ್ತಾ ಅಲೇ ತಮ್ಮಾ ಈ ರಿಪೋರ್ಟ್‌ನಗೆ ಏನ್ನೆತೆ ಅಂತ ತಿಳ್ಕಂಡದೀ. ನಂಗೇನೋ ತಿಳೀಲಿಲ್ಲ. ಬರ್ದದಿಯಲ್ಲ ನಿಂಗಾರೂ ತಿಳ್ದತೇನೋ?" ಎಂದು ಗುಡುಗಿದ.

ಆ ವ್ಯಕ್ತಿ "ಐಕೆನಾಟ್ ಅಂಡರ್ ಸ್ಟ್ಯಾಂಡ್ ವಾಟ್ ಯು ಆರ್ ಟೆಲಿಂಗ್. ಐಡೋಂಟ್ ನೋ ಕನ್ನಡ" ಎಂದಿತು.

ಕೈಲಾಸನಾಥ "ಎಷ್ಟ್ ಮಸ್ತನ ತಗ್ದದೀ! ಡೋಂಟ್ ನೋ ಕನಡ ಅಂತಿಯ ಡೋಂಟ್ ಕಂ ಪಿಯರ್. ಹೊರಗ್ಹೋಗಿ ಕೆಳ್ಗಿರ ರಸ್ತೆಗೆ ಹಾರಿಬಿಡು ಆಗ ಕನಡ ಬರ್ತತೆ" ಎಂದ

ಅವ "ವಾಟ್ ಯು ಆರ ಟೆಲ್ಲಿಂಗ್?" ಎಂದ.

ಕೈಲಾಸ "ಹೊಂಟ್ಹೋಗು. ಕನ್ನಡ ಕಲ್ತ್‌ಗಂಡು ಇಲ್ಲಿಗೆ ಬಾ"

ಅವ "ಸರ್, ಬಟ್"

ಕೈಲಾಸ "ಸರ್‌ಗಿರ್, ಬಟ್‌ಗಿಟ್ ಎಲ್ಲಾ ನೀನು ಕನಡ ಕಲ್ತ್ ಮ್ಯಾಲೆ" ಎಂದು ಬಿಟ್ಟ ಕಾವಲುಗಾರನನ್ನು ಕರೆದು ಅವನನ್ನು ಹೊರಗೆ ಕಳಿಸಿಬಿಟ್ಟ

ಬಳಿಕ ಅತ್ಯಂತ ಆಕರ್ಷಕವಾಗಿದ್ದ ಸಿನಿಮಾ ಹೀರೋ ಜಾಹೀರಾತು ರೂಪದರ್ಶಿಗಳ ಮೊತ್ತದಂತಿದ್ದ ಒಬ್ಬ ವ್ಯಕ್ತಿ ಒಳಕ್ಕೆ ಬಂದು ಕಡತವನ್ನು ಕೈಲಾಸನಾಥನ ಕೈಗಿತ್ತ. ಅವನು ಐ.ಸಿ.ಬಿ.ಎಫ್ ನ ಆದಾಯ ತೆರಿಗೆ ವಿಭಾಗದ ಮುಖ್ಯಸ್ಥನೆಂದು ಆಮೇಲೆ ತಿಳಿಯಿತು. ಐ.ಸಿ.ಬಿ.ಎಫ್. ಎಂದರೆ ಇಂಟರ್‌ಕಾಂಟಿನೆಂಟಲ್ ಬ್ಯಾಂಕಿಂಗ್ ಫೆಸಿಲಿಟೀಸ್ ಎಂದು ಅರ್ಥವಂತೆ. ಆ ಸಂಸ್ಥೆಯ ಐದುರೂಪಾಯಿ ಷೇರು ಈಗ ಮಾರುಕಟ್ಟೆಯಲ್ಲಿ ಎಂಟುನೂರು ರೂಪಾಯಿಗೆ ಮಾರಾಟವಾಗುತ್ತಿದೆಯಂತೆ ಎಂದು ಆಮೇಲೆ ತಿಳಿಯಿತು.

ಕೈಲಾಸನಾಥ ಅದನ್ನು ತೆರೆದು ನೋಡಿದ

"ಏನ್ರೀ, ಮೂವತ್ತು ಲಕ್ಷ ತೆರಿಗೆ ಕಟ್ಟಬೇಕೇ? ನಾವು ಕಟ್ಟಬೇಕಾದ್ದು ಮೂರೂವರೆ ಲಕ್ಷ ನಿಮಗೆ ಲೆಕ್ಕ ಹೇಳಿಕೊಟ್ಟರು ಯಾರು? ಮೆಜೆಸ್ಟಿಕ್‌ನಲ್ಲಿ ಎಷ್ಟುವರ್ಷದಿಂದ ಪಿಕ್ ಪಾಕೆಟ್ ಮಾಡ್ಕೆಂತ ಅದಿ?" ಎಂದ.

ಆ ಸುಂದರಾಂಗ "ಐಡುನಾಟ್ ನೋ ಕನ್ನಡ" ಎಂದ.

ಕೈಲಾಸನಾಥ "ಬಡ್ಕೋ ಬಾಯಿ. ನಿನ್ನ ಕಂಟ್ರ್ಯಾಕ್ಟ್ ಕ್ಯಾನ್ಸಲ್ ಮಾಡೆದಿನಿ. ನಾನೇ ಇನ್ಕಂಟ್ಯಾಕ್ಸ್ ನೋಡ್ಕೆಂತಿನಿ. ಕನಡ ಕಲ್ತ್‌ಗಂಡ್ ಇಲ್ಲಿಗ್ಬಾ" ಎಂದು ಬಿಟ್ಟ

ಅಷ್ಟರಲ್ಲಿ ಸಾಧಾರಣ ಬಿಳಿ ಪೈಜಾಮಾ ಜುಬ್ಬಾ ಹಾಕಿಕೊಂಡ ಒಬ್ಬ ವೃದ್ಧರು ಛೇಂಬರಿನೊಳಕ್ಕೆ ಬಂದರು. ಕೈಲಾಸ ಎದ್ದು ನಿಂತು ನಮಸ್ಕಾರ ಮಾಡಿದ. ಸಿನಿಮಾ ಹೀರೋ ಕಂ ರೂಪದರ್ಶಿ ಅವರಿಗೆ ಹಿಂದಿಯಲ್ಲಿ ಏನೇನೋ ಹೇಳಿದ.

ಆ ವೃದ್ಧರು "ಕೈಲಾಷ್ ಸಚ್ ಕೆಹ್ತಾ ಎಂದು ಬಿಟ್ಟರು. ಆ ರೂಪದರ್ಶಿ ಹೊರಕ್ಕೆ ಹೋದ. ಆ ವೃದ್ಧರು "ಏನಪ್ಪಾ, ಕೈಲಾಷ್ ಅವನಿಗೆ ಸರಿಯಾಗಿ ಹೇಳಿದ್ದೀ" ಎಂದು ಹೇಳಿ ಹೊರಗೆ ಹೋದರು. ಆ ವೃದ್ಧರು ಕಂಪನಿಯ ಮುಖ್ಯಸ್ಥರಂತೆ. ಕೈಲಾಸನ ಜೊತೆ ಸರಿ ತಪ್ಪು ಎಂದು ಹೇಳುವಷ್ಟು ಕನ್ನಡ ಕಲಿತಿದ್ದಾರಂತೆ. ಅವರ ಮಾತೃ ಭಾಷೆ ಹಿಂದಿಯಂತೆ.

ಕೈಲಾಸನಾಥ ನನ್ನನ್ನು ಮತ್ತೆ ನೋಡಲೇ ಇಲ್ಲ. ಫೈಲುಗಳ ರಾಶಿಯಲ್ಲಿ ಮುಳುಗಿ ಹೋದ. ಸ್ವಲ್ಪ ಹೊತ್ತಾದ ಮೇಲೆ ಒಂದಾನೊಂದು ಫೈಲನ್ನು ನೋಡಿ, ಅದನ್ನು ರಪ್ಪನೆ ಮೇಜಿಗೆ ಬಡಿದು,

"ಆ ಹೊಸಹುಡುಗಿ ಆಶಾನನ್ನು ಕರ್ಕಂಬಾ". ಎಂದು ಅಬ್ಬರಿಸಿದ. ಕೈಲಾಸನಿಗೆ

ಬಿ.ಪಿ.ಯಂತೆ. ಅದು ಅತಿ ಏರಿದರೆ ಹಾಗೆ ಅಬ್ಬರಿಸುತ್ತಾನಂತೆ. ಸ್ವಲ್ಪ ಹೊತ್ತಾದ ಮೇಲೆ ಆಶಾ ಬಂದಳು. ಪರ್ವಾಗಿಲ್ಲ ಎನ್ನಬಹುದಾದ ತರುಣಿ ಅವಳು.

"ಏನ್ತಾಯೀ, ನಿನ್ನ ಯಾರು ಇಲ್ಲಿ ಕೆಲ್ಸಕ್ಕೆ ಸೇರ್ಸಿದ್ರು?" ಎಂದ.

ಆಶಾ "I cannot understand Kannada" ಎಂದಳು.

ಕೈಲಾಸ "ಕನಡ ಬರಲ್ಲ ಹೌದಲ್ಲೋ. ನಿನ್ನನ್ನು ಇಲ್ಲಿಗೆ ಸೇರಿಸ್ದೋನು, ನೀನು ಇಬ್ಬರೂ ಬಾತಿಕೆರೆಗೆ ಹಾರಿ ಬಿಡ್ರಿ" ಎಂದ

ಆಶಾ "what is this ಬಾತಿಕೆರೆ!" ಎಂದು ಉದ್ಗರಿಸಿದಳು.

ನಾನು "ಬಾತಿ ಅನ್ನದು ಒಂದು ಊರು. ಅಲ್ಲಿರ ಕೆರೆಯೇ ಬಾತಿ ಕೆರೆ. ಅದ್ರೊಳ್ಗೆ ಹಾರಿದರೆ ಸೊಂಟದವರೆಗೆ ಕೆಸರೊಳಗೆ ಸಿಕ್ಕಂತಿರಿ. ಮ್ಯಾಲಕ್ಕೆ ಬರಕ್ಕಾಗಲ್ಲ, ಕಳ್ಳ ಉಸುಗು ಅಂತರೆ ಅದನ್ನ" ಎಂದೆ.

ಕೈಲಾಸಗೆ ಖುಷಿಯೋ ಖುಷಿ.

"ಸರಿಯಾಗಿ ಹೇಳಿದ್ರಿ. ನೀವು ನಮ್ಮೂರ್ನೆರೇ ಇರ್ಬುಕು!" ಎಂದ

ಪಕ್ಕದಲ್ಲೇ ಕೂತಿದ್ದ ಸೋಮಿ "ಸರ್, ಇವರು ಕನ್ನಡ ಲೇಖಕರು. ಪುಸ್ತಗ ಬರ್ದದರೆ" ಎಂದ.

ಕೈಲಾಸ "ನೋಡ್ರೀ, ನನಗೆ ತುರಿಸ್ಗೆಂಬಕ್ಕೆ ಪುರ್ಸತ್ತಿಲ್ಲ. ನಿಮ್ಮವು ಎಲ್ಲಾ ಪುಸ್ತಗ ಎರಡೆರ್ಡುಪ್ರತಿ ಕಳ್ಸಿಕೊಡ್ರೀ ರೊಕ್ಕ ಕಳ್ಸಿಕೊಡ್ತೀನಿ" ಎಂದ

ಆಶಾ, ಮಿಕಿ ಮಿಕಿ ಕಣ್ಣು ಬಿಡುತ್ತಾ

"ವಾಟ್‌ಷಲ್ ಐಡೂ" ಎಂದಳು.

"You are dismissed!" ಎಂದ ಕೈಲಾಸ.

ಸೋಮಿ "ಸರ್, ಇವರು ಬಾಸ್ ಕಡೆಯವರು" ಎಂದು "ನೀನು ಹೋಗಮ್ಮ ಕೆಲ್ಸನೋಡು" ಎಂದ ಕೈಲಾಸ "ನಾಳೆ ಒಳ್ಗೆ ಕನಡ ಕಲಿ" ಎಂದ.


ಸೋಮಿ "Today is dead line. Learn Kannada before sun rises tomorrow" ಎಂದ.

❖❖❖

ನಡೆ - ನುಡಿ

ಭಾಷಣಗಳಲ್ಲಿ ಹೇಳುತ್ತಾರೆ
ಟಿ.ವಿ. ನಮ್ಮ ವೈರಿ
ಮನೆಗೆ ಬಂದು ನೋಡುತ್ತಾರೆ
ತಪ್ಪದೆ ಕ್ರೈಂ ಡೈರಿ

- ಎಚ್. ಡುಂಡಿರಾಜ್



ನನ್ನ ದೃಷ್ಟಿಯಲ್ಲಿ ಉತ್ತಮ ಹಾಸ್ಯಸಾಹಿತ್ಯ

❖ ಕು.ಗೋ.

ಡಾ|| ವ್ಯಾಸರಾವ್ ನಿಂಜೂರ್ ವಿಜ್ಞಾನಿಯೂ ಹೌದು, ಸಾಹಿತಿಯೂ ಹೌದು. ಪ್ರಜಾವಾಣಿ ವಿಶೇಷ ಸಂಚಿಕೆಗಳಲ್ಲಿ ಅಲ್ಲದೆ ಇತರ ಪತ್ರಿಕೆಗಳಲ್ಲೂ ಇವರ ಕತೆಗಳು ಕಾಣಿಸಿಕೊಂಡು ಉತ್ತಮ ಕತೆಗಾರರೆಂದೇ ಪ್ರಸಿದ್ಧರಾದವರು. ಅವರ ಕಾದಂಬರಿ 'ಚಾಮುಂಡೇಶ್ವರಿ ಭವನ' ಅವರ 'ಮಾಸ್ಟರ್ ಪೀಸ್' ಎಂದು ಪರಿಗಣಿಸಿದವರಲ್ಲಿ ನಾನೂ ಒಬ್ಬ. ನಿಂಜೂರರ ಬರಹಗಳಲ್ಲಿ ಲವಲವಿಕೆ, ಓದಿಸಿಕೊಂಡು ಹೋಗುವ ಗುಣ, ಎಲ್ಲಕ್ಕಿಂತ ಹೆಚ್ಚಾಗಿ ಅವರ ವಕ್ರನೋಟ, ವಿಡಂಬನೆ, ಹಾಸ್ಯಗಳಿಗೆ ಮಾರುಹೋದವ ನಾನು. ಕುಂಕುಮ, ಮಂಚ ಇವರ ಕಥಾಸಂಕಲನಗಳು, ಉಸಿರು, ಚಾಮುಂಡೇಶ್ವರಿ ಭವನ ಕಾದಂಬರಿಗಳು ನಲವತ್ತರ ನಲುಗು ನಾಟಕ. ಹೋಮಿ ಬಾಬಾ, ನೀರು, ಆಹಾರ ಸಂಸ್ಕರಣೆ ಮತ್ತು ಸಂರಕ್ಷಣೆ, ಜೀವನ ಶೈಲಿ ಹಾಗೂ ಸ್ವಾಸ್ಥ್ಯ, ಲೋಹ ಮತ್ತು ಮಾನವ ಇವರ ಇತರ ಪ್ರಕಟಿತ ಕೃತಿಗಳು.

ಮುಂಬಯಿಯಲ್ಲಿ ವಾಸ್ತವ್ಯ ಹೂಡಿದ್ದರೂ ಅವರ ಹೆಚ್ಚಿನ ಬರಹಗಳು ಅವರ ಹುಟ್ಟೂರಿನ ಸುತ್ತಮುತ್ತಲಿನ ವ್ಯಕ್ತಿಗಳ, ಘಟನೆಗಳ ಸರಮಾಲೆಯೇ ಸರಿ. ಒಂದೆರಡು ಕತೆಗಳು ಮುಂಬಯಿ ಪರಿಸರಕ್ಕೆ ಸಂಬಂಧಿಸಿದವುಗಳಿರಬಹುದು. ನಿಂಜೂರರೊಡನೆ ಸಂಭಾಷಿಸುವುದೇ ಒಂದು ಅಪೂರ್ವ ರಸಾನುಭವ. ಅವರ ತಲೆಯಲ್ಲಿ ತುಂಬ ಕತೆಗಳು ಹುಟ್ಟಿಕೊಳ್ಳುತ್ತವೆ, ಸುಳಿದಾಡುತ್ತವೆ. ಅವರ ಹಾಸ್ಯಪ್ರಜ್ಞೆ ಎಲ್ಲ ಕತೆ, ಕಾದಂಬರಿಗಳಲ್ಲಿ ಎದ್ದು ಕಾಣುತ್ತದೆ ಎಂಬುದು ಸುಳ್ಳಲ್ಲ. ಡಾ|| ಶಾಂತಾರಾಮ ಸೋಮಯಾಜಿ, ಬಿ.ಆರ್. ನಾಗೇಶ, ಬಾಗ್ಲೋಡಿ ದೇವರಾಯರ ಸಾಲಿಗೇ ಸೇರುವ ನಿಂಜೂರರು ಒಬ್ಬ ಹಾಸ್ಯ ಬರಹಗಾರರೆಂದು ಬ್ರ್ಯಾಂಡ್ ಆಗದಿದ್ದರೂ ಅವರ ಬರಹಗಳಲ್ಲಿರುವ ಲಾಲಿತ್ಯ, ಲವಲವಿಕೆ, ಜೀವನೋತ್ಸಾಹ, ವಿನೋದ – ವಿಡಂಬನೆ – ಹಾಸ್ಯಗಳಿಗೆ ಮಾರುಹೋಗದವರೇ ಇಲ್ಲ. ಎಲ್ಲೂ ಅತಿ ಎನಿಸದೆ ಮಿತಿಯಾಗಿ ಛೇಡಿಸದ ಪ್ರವೃತ್ತಿ ಇವರದಾದರೂ ಒಮ್ಮೆ ಓದಿದ ಬರಹವನ್ನು ಇನ್ನು ಒಮ್ಮೆ ಓದುವ ಎನಿಸುವಷ್ಟು ಉತ್ಸಾಹಭರಿತವಾಗಿರುತ್ತದೆ.

ಅಪರಂಜಿಗಾಗಿ ನಾನು ಆರಿಸಿದ ನಿಂಜೂರರ ಬರಹ 'ನಿರಾಕರಣೆ' ಸ್ವಲ್ಪ ದೀರ್ಘ ಲೇಖನವೆನಿಸಿದರೂ, ಓದಬೇಕಾದ ಓದಬಹುದಾದ, ಓದಿಸಿಕೊಂಡು ಹೋಗುವ ಈ ಕೃತಿ ಅಪರಂಜಿ ಓದುಗರಿಗೂ ರುಚಿಸಬಹುದು ಎಂಬ ನಂಬುಗೆ ನನ್ನದು.

❖❖❖

ನಿರಾಕರಣೆ

✣ ವ್ಯಾಸರಾವ್ ನಿಂಜೂರ್

ಇದೊಂದು ಜೇನುಗೂಡು, ಕಸದ ತೊಟ್ಟಿ, ಕಸಾಯಿಖಾನೆ, ಹೆರಿಗೆ ಮನೆ, ಬೆವರಿನ ಮರಿಗೆ. ಜೊತೆಗೇ ಅದ್ಭುತ ಅರಮನೆ. ವಿಲಾಸದ ಆಗರ. ಝೀಂಗುಡುವ ಮಂಚಗಳ ಜೋಕಾಲಿಯಾಡುವ ಆಸನಗಳ, ಕಿಂಕಿಣಿಸುವ ಗ್ಲಾಸುಗಳ, ಗದ್ದಲದಲ್ಲೆ ಅಡಗಿರುವ ಪಿಸುಮಾತುಗಳ, ಥಳಕು ಬೆಳಕುಗಳ ಅಮರಾವತಿ. ಇಲ್ಲಿ ನರಮನುಷ್ಯ ಎಂಬೋ ಮಾನವ ಬರೇ ತೆವಳುವ ಹುಳು, ಮುತ್ತುವ ಇರುವೆ, ಕಾಡುವ ಸೊಳ್ಳೆ. 'ದಮ್ಮಿದ್ದರೆ ಬಾ ಹಿಡಿ' ಎಂದು ಸವಾಲೆಸೆಯುವ ಪತಂಗ. ಚಾಕು, ಚೂರಿ, ತಲವಾರು, ತುಪಾಕಿ, ಬಾಂಬ್‌ಗಳ ನೆರಳಲ್ಲಿ ಉಸಿರು ಬಿಗಿಹಿಡಿದು ಜೀವ ಉಳಿಸಿಕೊಳ್ಳಬೇಕಾದ ಹುಲು ಮಾನವ ಇಲ್ಲಿ ಕೇವಲ ಒಂದು ಸಂಖ್ಯೆ. ಭಾರೀ ಹೆಚ್ಚೆಂದರೆ ಆತ ಒಂದು ರೇಷನ್ ಕಾರ್ಡ್.

ಮಹಾನಗರವೆಂದು ಅಭಿದಾನ ಹೊತ್ತ ಈ ಮುಂಬಯಿಯಲ್ಲಿ ಬದುಕುವುದೇ ಒಂದು ಕಸರತ್ತು. ಪ್ರಯಾಣವೆನ್ನುವುದು ತ್ರಾಣ ಹಾಗೂ ಚಾಕಚಕ್ಯತೆಯ ಸತ್ವ ಪರೀಕ್ಷೆ. ಕ್ಲುಪ್ತವಾಗಿ, ಗುಡುಗುಡಿಸುತ್ತ ಸಾಗುವ ಇಲ್ಲಿನ ಲೋಕಲ್ಲುಗಳು ವಿಶ್ವದ ಅದ್ಭುತಗಳಿಗೆ ಸವಾಲೆಸೆಯುವ ತಾಕತ್ತುಳ್ಳವು. ಪುತು ಪುತು ಎಂದು ಲಕ್ಷಗಟ್ಟಲೆ ಹುಳುಗಳು ಜಾಡಿಯಿಂದ ಉರುಳಿ ಬಿದ್ದಂತೆ ರೈಲಿನಲ್ಲಿ ಉಳಿಯುವ ಜನಗಳು. ವೀರಯೋಧರ ಕೆಚ್ಚಿನಲ್ಲಿ, ಗುರಿ ತಲುಪಲು ಏನನ್ನೂ ಮಾಡಬಹುದೆಂದು ಬಲವಾಗಿ ನಂಬಿ, ಹಳಿಗೆ ಬಿದ್ದ ಯಾತ್ರಿಯ ಕುರಿತು ಯೋಚಿಸಲೂ ಪುರುಸೊತ್ತಿಲ್ಲದೆ ಧುಮು ಧುಮು ಎಂದು ನುಗ್ಗುತ್ತ ರೈಲು ಹತ್ತುವ ಜನಗಳು.

ರೈಲಿನ ಕಂಪಾರ್ಟ್‌ಮೆಂಟಾದರೊ ಥೇಟ್ ದರಿದ್ರ ಭಾರತ. ಇಂಡಿಯಾದ ಜನಸಂಖ್ಯೆಗೆ ಸ್ಪಷ್ಟ ಉದಾಹರಣೆ. ಮಾನವ ಶರೀರ ಶಾಸ್ತ್ರದ ಅಧ್ಯಯನಕ್ಕೆ ಅಪಾರ ಅವಕಾಶ ಕಲ್ಪಿಸುವ ರೇಖಾಚಿತ್ರಗಳು ಇಲ್ಲಿವೆ. "ಬಸಿರೇ? ಕೇವಲ 75 ರೂಪಾಯಿಗಳಲ್ಲಿ ಎಂ.ಆರ್.ಪಿ.ಎಂ.ಡಿ., ಪಿ.ಎಚ್.ಡಿ. ಬಿರುದಾಂಕಿತರಾದ ವೈದ್ಯರು ಗರ್ಭಪಾತ ಮಾಡಿಸುತ್ತಾರೆ. ಹಸ್ತಮೈಥುನ, ವೀರ್ಯಪತನ, ನರ ದೌರ್ಬಲ್ಯದಂತಹ ಯೌವನ ನಾಶದ ಕಾಯಿಲೆಗಳೆ? ಅಂತಾರಾಷ್ಟ್ರೀಯ ಖ್ಯಾತಿಯ ಲೈಂಗಿಕ ತಜ್ಞರು ಗುಹ್ಯರೋಗಗಳು, ಏಡ್ಸ್‌ಗಳನ್ನೂ ಗುಣಪಡಿಸುತ್ತಾರೆ. ನಗರದ ಹೆಸರಾಂತ ಹೊಟೇಲಿನಲ್ಲಿ ಇವರನ್ನು ಭೇಟಿ ಮಾಡಬಹುದು" – ಎಂಬಿತ್ಯಾದಿ ಜಾಹೀರಾತುಗಳಿಂದ ವಿರಾಜಮಾನವಾದ ಕಂಪಾರ್ಟ್‌ಮೆಂಟ್‌ನಲ್ಲಿ ಜನಗಳ ನಿಗ್ಗಿಗೆ ಹೆದರಿ ಫ್ಯಾನುಗಳು ನಿದ್ರಿಸುತ್ತಿರುತ್ತವೆ, ಪೆನ್ಸಿಲು, ಕಡ್ಡಿ, ಕೋಲು, ಬಾಲ್‌ಪೆನ್ನಿನ

ತಿಪಿಟದಿಂದ ಎಚ್ಚೆತ್ತು ಅವು ಆಕಳಿಸುತ್ತ ಬೇಕೋ ಬೇಡವೋ ಎಂದು ತಿರುಗುವಾಗ, ತಟ್ಟೆಯಲ್ಲಿ ಬೇಯುವ ಇಡ್ಲಿಗಳಂತೆ ಬೆವರಳಿಸುತ್ತ, ಮೈಗಂಧವನ್ನು ಪುಕ್ಕಟೆ ಬಟವಾಡೆ ಮಾಡುವುದರ ಜೊತೆ ಪೇಪರಿಗೆ ಮೊಗವಿಕ್ಕಿ ಪಾಲು ನೌಕೆಯಂತೆ ಲಯಬದ್ಧವಾಗಿ ಮೈದೂಗಿಸುವ, ಯಾರದೋ ಪಾದದ ಮೇಲೆ ಹೆಜ್ಜೆ ಇಟ್ಟು, ಆತ "ಕಣ್ಣು ಕಾಣಿಸುವುದಿಲ್ಲವೆ?" ಎಂದು ಚೀರಿದಾಗ "ಕಾಲಿಗೆ ಕಣ್ಣಿಲ್ಲ ಮಾರಾಯ" ಎಂದು ಸಮಜಾಯಿಷಿ ನೀಡುವ ಮಂದಿ ಒಂದೆಡೆಯಾದರೆ, ಗೃಹಸ್ಥ ಧರ್ಮ ಪೂರೈಸುವಷ್ಟರಲ್ಲೆ ಐದೂ ಮುಕ್ಕಾಲರ ಫಾಸ್ಟ್ ಲೋಕಲ್ ಹಿಡಿಯಬೇಕೆಂಬುದು ನೆನಪಾಗಿ, ತುರ್ತಿನಲ್ಲೆ ಬಾಲ್ದಿ ಮಗ್ಗು ಚಹಾ ಕಪ್ಪುಗಳೊಂದಿಗೆ ಸಂವಾದ ನಡೆಸಿ, ನಿದ್ದೆಯಲ್ಲೇ ಸವಿಗನಸು ಕಾಣುತ್ತಿರುವ ಕಂದಮ್ಮಗಳ ಕೆನ್ನೆಯ ಮೇಲೆ ಅಪ್ಪತನದ ಕರ್ತವ್ಯದ ಮುತ್ತೆಸೆದು, ಊಟದ ಡಬ್ಬ ಕೊಟ್ಟೊಡನೆ ಖೋಲಿಯಲ್ಲಿರುವ ಏಕೈಕ ಮಂಚದತ್ತ ಆಕಳಿಸುತ್ತ ಸಾಗಿ ಮಂಪರಿಗೆ ಮರುಪಯಣ ನಡೆಸುವ ಹುನ್ನಾರಿನಲ್ಲಿದ್ದ ಹೆಂಡತಿಯ ಬಗ್ಗೆ ಸ್ವಲ್ಪ ಮತ್ಸರಿಸಿ ಬಾವ ಪತಿವರ್ಯರುಗಳು, ನಿದ್ದೆಯ ಶಿಲ್ಕನ್ನು ಪೂರ್ತಿಗೊಳಿಸುವ ಯತ್ನದಿಂದಿರುವಾಗಲೆ ಕಡಿಯುವ ನುಸಿಗೊಂದು ತನ್ನ ಕೆನ್ನೆಗೆ ತಾನೇ ಬಾರಿಸಿಕೊಂಡ ಪೆಟ್ಟಿನಿಂದ ಗಡಬಡಿಸಿ ಎಚ್ಚೆತ್ತುಕೊಳ್ಳುವ ದೃಶ್ಯ ಲೋಕಲ್‌ನಲ್ಲಲ್ಲದೆ ಇನ್ನೆಲ್ಲಿ ಕಾಣಸಿಕ್ಕೀತು?

ಕೇಶವ ಎಂಬೊ ಹೆಸರು ಕೆಸರಿನಂತೆ ತನ್ನನ್ನು ಮೆತ್ತಿಕೊಂಡದ್ದನ್ನು ಕಳಚಿಕೊಳ್ಳಲೆಂದಲ್ಲವಾ ತಾನು ಮುಂಬಯಿಗೆ ಪುಡ್ಚೊ ಮಾಡಿದ್ದು! ಇಲ್ಲಿಯ ಲೋಕಲ್ಲುಗಳಲ್ಲಿ ಬಾಚಣಿಗೆ, ಹೇರ್‌ಪಿನ್ನು, ಅಗರಬತ್ತಿ, ಸೂಜಿ, ಬಾಲ್‌ಪೆನ್ ಮಾರಿಯೊ, ಗಲ್ಲಿಯಲ್ಲಿ ಬಟಾಟವಡಾ ಪಾವ್, ಪಾನಿಪುರಿ, ಸೇವ್‌ಪುರಿ, ಭೇಲ್ ಮಾರಿಯಾದರೂ ಜೀವಿಸಿಯೇನು ಹೊರತು ಆ ಕೊಳಕ ಅಪ್ಪಯ್ಯನ ಹಂಗುಬೇಡ ಎಂದಲ್ಲವೇ ಯೋಚಿಸಿದ್ದು. ಕೇಶವ ಎನ್ನುವ ಹೆಸರು ಅದನ್ನು ಕೇಳಿದೊಡನೆ ತೀರಾ ಅಸಹ್ಯವೆನಿಸುತ್ತಿತ್ತು ಅವನಿಗೆ. 'ಕೇಶವ, ನಾರಾಯಣ, ಗೋವಿಂದ ಹರೀ ಹರೀ' ಎನ್ನುತ್ತ ಉಟ್ಟ ಕೌಪೀನ ಒದ್ದೆಯಾಗದಿದ್ದರೂ, ನಾಲ್ಕು ಕೊಡಪಾನ ನೀರು ಮೊಗೆದು ಮೈಗೆ ಸುರಿದುಕೊಳ್ಳುವ ಅಪ್ಪಯ್ಯನಿಗೆ ಕರೆಯಲು ಸಲೀಸಾಗಲಿ ಅಂತಲೇ ಇರಬೇಕು ತನಗೆ ಈ ಹೆಸರು ಇಟ್ಟದ್ದು. ಅವನದ್ದು ಎಂತಹ ಮಡಿಯೋ, ಪರಮಾತ್ಮನಿಗೇ ಪ್ರೀತಿ. ಬೈರಾಸ, ಜನಿವಾರ ಎರಡು ಒದ್ದೆಯಾದರೆ ಮುಗೀತು, ಎಲ್ಲ ಶುದ್ಧವಾದ ಹಾಗೆ. ಈ ಬುರ್ನಾಸು. ಮಡಿ – ಶುದ್ಧಗಳಿಂದ ಹೊರಬಿದ್ದು ಅಪ್ಪಟ ಮನುಷ್ಯನಾಗಬೇಕು. ಗುಡ್ಡೆಯಲ್ಲಿ ಕಾಲ್ನಡೆಗಳನ್ನು ಮೇಯಿಸುತ್ತ, ಕರಂಡೆ, ಕುಂಟಾಲ, ಜೋಗಿ, ಕೇಪಳ ಹಣ್ಣುಗಳನ್ನು ಹೆಕ್ಕಿ ತಿನ್ನುತ್ತ, ದೈತ್ಯಾಕಾರವಾಗಿ ಬೆಳೆದು ನಿಂತ. ಶಿವರಾಮ ಮಯ್ಯರ ಜಕ್ಕ ಜವ್ವನದ ಮಗನನ್ನು ನುಂಗಿ ನೀರು ಕುಡಿದ ಬ್ರಹ್ಮರಾಕ್ಷಸನ ಆವಾಸಸ್ಥಾನವೆಂದು ಪ್ರತೀತಿ ಇರುವ ಗೋಳಿ ಮರವನ್ನೇರಿ ಅದರ ಬೀಳಲುಗಳಂತಹ ಬೇರುಗಳಲ್ಲಿ ಉಯ್ಯಾಲೆಯಾಡಬೇಕು. ಮರದಲ್ಲಿ ಮನೆ ಮಾಡಿಕೊಂಡು ಇನಿದನಿಯಲ್ಲಿ ಉಲಿಯುತ್ತ ಆಗಾಗ್ಗೆ ಆಗಸದತ್ತ ಜಿಗಿಯುವ ನಾನಾ ಹಕ್ಕಿ ಪಕ್ಕಿಗಳೊಂದಿಗೆ ಉಭಯ ಕುಶಲೋಪರಿ ನಡೆಸಬೇಕು. ರಣಗುಡುವ ಬಿಸಿಲಿನಲ್ಲಿ ಕಾದ ಹೋಳಿಗೆಯ ಹಂಚಿನಂತಾದ ಪಾದೆಯ ಬಳಿಯೋಡಿ, ಕಲ್ಲುಕಂಬದಲ್ಲಿ ವಿಶ್ರಾಂತಿ ಪಡೆಯುತ್ತಿರುವ ಕಲ್ಕುಡನೊಂದಿಗೆ "ಚಪ್ಪರವಂತೂ ಇಲ್ಲ, ಒಂಚೂರೂ ನೆರಳೂ ಸೂಂಬು.

ಇಂಥದಲ್ಲಿ ಅದ್ಹೇಗೆ ಮೈಕಾಸಿಕೊಂಡು ನಿಂತಿದ್ದಿ ಮಾರಾಯ'' ಎಂದು ಮೂಕ ಸಂಭಾಷಣೆ ನಡೆಸಬೇಕು. ಜಾನುವಾರು ಇತ್ತ ಬಂದರೆ ತಾರ್ಕಣೆಯಾಗುತ್ತದಂತೆ. ಮತ್ತೆ ಅವು ಬಿಲ್‌ಕುಲ್ ಹಾಲು ಕೊಡುವುದಿಲ್ಲವಂತೆ ನೊಗಕ್ಕೆ ಕಟ್ಟಿದ ಎತ್ತುಗಳ ಮೇಲೆ ಕಲ್ಕುಡನ ಕಣ್ಣು ಬಿದ್ದಲ್ಲಿ ನೊಗ, ನೇಗಿಲು ಎಲ್ಲ ಕಿತ್ತೆಸೆದು ಅವು ದಿಕ್ಕಾಪಾಲು ಜಿಗಿದೋಡಿಬಿಡುತ್ತವಂತೆ. ಅವು ಸಮವಾಗುವುದು. ಅಪ್ಪಯ್ಯ ಮಂತ್ರಿಸಿಕೊಟ್ಟ ಹಗ್ಗ ಕಟ್ಟಿದಲ್ಲಿ ಮಾತ್ರವಂತೆ. ಎಲ್ಲ ಗಪ್ಪಾಸು. ಇವೆಲ್ಲ ಅಗ್ರಹಾರದ ಬ್ರಾಹ್ಮಣರಿಗೆ ಬೇರೆ ಕಸುಬಿಲ್ಲದೆ ಕಾಲಹರಣಕ್ಕಾಗಿ ಹೊಸೆದ ಹಸೀ ಸುಳ್ಳು ಕಥೆಗಳು. ಇದೆಲ್ಲ ಸುಳ್ಳಾ ಬದ್ದವಾ ಎಂದು ತಾನಂತೂ ಪರೀಕ್ಷಿಸುವುದು ಗ್ಯಾರಂಟಿ ಎಂದಾತ ಅಂದುಕೊಂಡಿದ್ದುಂಟು.

ಕೇಶವ ಎನ್ನುವುದರ ಬದಲು ತೋಮ, ಅಂಗಾರ, ಬೂದ, ಗುರುವ, ತುಕ್ರ, ತನಿಯ, ಐತ ಎಂದಾಗಲಿ ಬಚ್ಚ, ತಬುರ, ಕೊರಗ, ಚೀಂಕ್ರ, ಗುಡ್ಡ ಎಂದಾಗಲಿ ಅಪ್ಪಯ್ಯ ಯಾಕೆ ತನಗೆ ಹೆಸರಿಡಲಿಲ್ಲ? ಅದಕ್ಕೆಲ್ಲ ಮಾರಿ ಬಡಿಯಲಿ. ಕನಿಷ್ಠ ಸೀನ, ಕಾಳ, ಪೋಕ್ರ, ಬೊಳ್ಳ, ಕುಷ್ಟ ಎಂಕ್ಟ ಆದರೂ ಆಗುತ್ತಿತ್ತು. ಇವೆಲ್ಲ ಹೆಸರುಗಳು ಬ್ರಾಹ್ಮಣರಿಗೇಕಿಲ್ಲ ಎಂದು ಆಲೋಚಿಸುತ್ತಿದ್ದಂತೆ, ಕೇಶವನಿಗೆ ತನ್ನ ನಿರ್ಧಾರ ಪೂರ್ತಿ ಸರಿಯಾದುದು ಎಂದು ಮನವರಿಕೆಯಾಗತೊಡಗಿತು.

ಬ್ರಾಹ್ಮಣ ದ್ವಿಜ ಅಂತೆ. ಎರಡು ಸಲ ಹುಟ್ಟುವುದಂತೆ. ಒಮ್ಮೆ ಅಬ್ಬೆಯ ಗರ್ಭದಿಂದ, ಮತ್ತೊಮ್ಮೆ ಉಪನಯನವೆಂದು ಕರೆಯಲ್ಪಡುವ 'ಬ್ರಹ್ಮೋಪದೇಶ' ಎನ್ನುವ ಘನ ಗಂಭೀರ ನಾಟಕ ಮುಗಿದ ಮೇಲೆ, ಕೌಪೀನಧಾರಿ ವಟುವಿಗೆ ಚೌಲಾನಂತರ ಅರಿಶಿನದಲ್ಲಿ ಅದ್ದಿದ ಬೈರಾಸ ಉಡಿಸಿ, ಒಂದು ಉತ್ತರೀಯ ಜೋತು ಹಾಕಿ, ಕೈಗೊಂದು ದಂಡಿಕೋಲು ಕೊಟ್ಟು ಮುಸುಕು ಹಾಕಿ ದರ್ಭೆಯಿಂದ ಇಡೀ ದೇಹ ಬಿಗಿಯುವುದೇ ಎರಡನೆಯ ಗರ್ಭದ ಪ್ರತೀಕವಂತೆ. ಇದನ್ನು ಮಂತ್ರದೊಟ್ಟಿಗೆ ಎಂಜಲು ಹನಿ ಉದುರಿಸುವ ಬೋಡುಬಾಯಿಯ ಮಕ್ಕಿತ್ತಾಯರು ಉವಾಚಿಸುವಾಗ ಇರಬಹುದು ಎಂದು ಅನ್ನಿಸುತ್ತಿತ್ತು.

ಉಪನಯನ ಸಂಸ್ಕಾರವಾದ ಬಳಿಕ ಮರ ಹತ್ತುವುದು, ಕಲ್ಲು ಬಿಸಾಡುವುದು, ಊಟ ಮಾಡುವಾಗ ಮಾತಾಡುವುದು ವರ್ಜ್ಯ. ತ್ರಿಕಾಲ ಸಂಧ್ಯಾವಂದನೆ. ಅಗ್ನಿ ಕಾರ್ಯ ಮಾಡಿಕೊಂಡು ಸದಾ ಬ್ರಹ್ಮಚರ್ಯ ಪರಿಪಾಲನೆ ಅಪೇಕ್ಷಣೀಯ ಎಂದು ವಟುವಿಗೆ ಭಿಕ್ಷೆ ಹಾಕುತ್ತಿದ್ದ ಸುಮಂಗಲಿಯರತ್ತ ಕಳ್ಳನೋಟ ಬೀರುವುದರೊಂದಿಗೆ ಹುಳುಕು ನಗು ನಗುತ್ತ ಉಪದೇಶಾಮೃತ ಪಠಿಸುತ್ತಿದ್ದ ಮಕ್ಕಿತ್ತಾಯರಿಗೆ ಇತಿಶ್ರೀ ಕಾಣಿಸಬೇಕು ಎಂದು ಆಗ ಮನಸ್ಸಾಗಿದ್ದಿದೆ. ಏಳು ಹೆಣ್ಣು ಮಕ್ಕಳಿಗೆ ಜನ್ಮ ನೀಡಿದ ಈ ನಸ್ರಾಣಿ ಬ್ರಾಹ್ಮಣನಿಗೆ ಇನ್ನೂ ಶೃಂಗಾರ ಪರ್ವದ ಭ್ರಾಂತು.

ಬ್ರಾಹ್ಮಣರು ಭೂಸುರರಂತೆ. ಏನಾದರೂ ಉತ್ಪ್ರೇಕ್ಷೆ ಮಾಡಬೇಕಾದರೆ ಅದಕ್ಕೊಂದು ಪುಕುಳಿ ಬಾಯಿ ಬೇಡವ? ಅಪ್ಪಯ್ಯ, ಮಕ್ಕಿತ್ತಾಯರಂತವರು ಈ ಭೂಮಿಯ ದೇವತೆಗಳು ಅಂತಾದರೆ ತಾನು ಸಾಕ್ಷಾತ್ ದೇವತಾ ಪುತ್ರ. ಮಕ್ಕಿತ್ತಾಯರ ಕನ್ಯಾ ಶಿಖಾಮಣಿಗಳು ಧರೆಗಿಳಿದ ಅಪ್ಸರೆಯರು. ವಾಹ್, ಎಂತಹ ಮಜ!

ಒಂದಿಷ್ಟು ವರ್ಷಗಳು, ಮತ್ತಷ್ಟು ಒರಲೆಯ ವಿಚಕ್ಷಣವಾದ ಕಾರ್ಯವೈಖರಿಯಿಂದ ಬುರ್ನಾಸು ಎಂದು ಅಪ್ಪಯ್ಯನಿಂದ ಸರ್ಟಿಫಿಕೇಟು ದೊರಕಿಸಿಕೊಂಡ ಮದ್ದಲೆ ಅಟ್ಟದಲ್ಲಿ ಅನಾಮತ್ತಾಗಿ ಮಲಗಿದ್ದು, ಅದಕ್ಕೆ ಜೀವ ತುಂಬಬೇಕೆಂಬ ಮಹದಾಶೆಯಿಂದ ಕರ್ಣಕ್ಕೆ ಬಡಿಯಬೇಕಾದ ಅವಲಕ್ಕಿ ಜೊತೆಗೆ ಸ್ವಲ್ಪ ಬೆಳ್ತಿಗೆ ಅಕ್ಕಿಯ ತೆಳಿಯನ್ನು ಬೆರಸಿ. ಸಜ್ಜಾದ ಮಿಶ್ರಣದೊಂದಿಗೆ ಅಟ್ಟ ಹತ್ತಿದ್ದೇ ತಡ. ಕೆಂಪು ಬಣ್ಣದ ಸಿಪಾಯಿ, ಅಪ್ಪಯ್ಯನ ಖಾಸಾ ಅಕ್ಕ ಕಿರುಚಿಕೊಂಡದ್ದನ್ನು ನೆನೆದರೂ ಈಗಲೂ ಆಶ್ಚರ್ಯವಾಗುತ್ತದೆ. ''ಮಾಣಿಗೆ ತಲೆಸಮ ಉಂಟೋ ಇಲ್ಲವ್ವೋ, ಮಡಿ ಬಟ್ಟೆ ಅಂತ ಇಲ್ಲ. ಬೊಜ್ಜ ಬೊಳಂಬು ಎಂಥದೂ ಇಲ್ಲ. ಮೈಸಂದಾಯನ ಹಾಗೆ ನುಗ್ಗುತ್ತದೆ. ಹಡೆ ಎಲ್ಲಿಯಾದರೂ. ಹೌದಾ, ಗೌರಿ. ನಿನಗೆ ಆ ಮಾಣಿಗೆ ಒಂಚೂರು ಬುದ್ಧಿ ಹೇಳಲಿಕ್ಕಾಗುವುದಿಲ್ಲವಾ? ಅವನಂತೂ ಮಡಿ. ಮೈಲಿಗೆ ಇಲ್ಲದೆ ಬಸವನ ಹಾಗೆ ಎಲ್ಲೆಂದರಲ್ಲಿ ನುಸುಳುತ್ತಾನೆ. ಆದರೆ ನಿನ್ನ ಅಕಲು ಎಲ್ಲಿ ಇಟ್ಟುಕೊಂಡಿದ್ದಿ. ನಾನಂತೂ ಇದನ್ನೆಲ್ಲ ಸಹಿಸಿಕೊಂಡು ಇರುವಂತಹವಳಲ್ಲ. ನಂದಿಗೋಣನ ಹಾಗೆ ಬೆಳೆದಿದ್ದಾನೆ, ಬುದ್ಧಿ ಬೇಕೊ ಬೇಡವ್ವೊ. ಅಟ್ಟದಲ್ಲಿ ವಸ್ತ್ರ ಒಣಗಲು ಹಾಕಿದ್ದೆ. ಆ ಮುಸುರೆ ಕೈಯಲ್ಲೆ ರಪ್ಪಂತ ಅದನ್ನು ಸರಿಸಿದ. ಆ ಹಾಳು ಮದ್ದಳೆ ಇಳಿಸಿದ. ಇವ್ನಿಗೇನು ದಶಾವತಾರ ಮೇಳ ಸೇರಲಿಕ್ಕುಂಟಾ? ಅಸ್ತ್ರಿಬಿದೆ ಎಲ್ಲಿಯಾದರೂ, ಅನಂತ ಬರಲಿ. ಅವನಿಗೆ ಹುಣಿಸೆ ಅಡರಿನಲ್ಲಿ ಪೂಜೆ ಮಾಡಿಸದಿದ್ದರೆ ನನ್ನ ಹೆಸರು ಕಿಟ್ಟಮ್ಮನೇ ಅಲ್ಲ, ಏನು ಕೇಳ್ತಿತಾ?''

ಅಪ್ಪಯ್ಯನಿಗೆ ದೂರು ಒಪ್ಪಿಸುತ್ತೇನೆ ಎಂದು ಕಿಟ್ಟತ್ತೆ ಹೇಳಿದ್ದೇ ತಡ, ಅಮ್ಮ ಕಸಿವಿಸಿಗೊಂಡು ತನಗೆ ರಂದುತ್ತಾಳೆ. ''ಅಲ್ಲವ್ವೊ ಬಾಲೆ, ನೀನು ಹೀಗೆಲ್ಲ ಬೇಡದ್ದನ್ನು ಮಾಡಿ. ಎಲ್ಲರ ಜೀವ ತಿಂದರೆ ನನ್ನ ಪಾಡೇನು. ನಿನ್ನ ಅಪ್ಪಯ್ಯನ ಅವತಾರ ನಿನಗೆ ಗೊತ್ತಿಲ್ಲದ್ದ? ನಿನ್ನ ತಪ್ಪಿಗಾಗಿ ನನಗೆ ಕತ್ತಿಯಿಂದ ಕುಕ್ಕಿದರೂ ಕುಕ್ಕಿದರೆ! ಹೇಳಿ ಕೇಳಿ ಥೇಟ್ ಜಮದಗ್ನಿ. ಹೀಗಿರುವಾಗ ನೀನು ಸ್ವಲ್ಪ ನನ್ನ ಹೊಟ್ಟೆ ಉರಿಸುವುದನ್ನು ಕಮ್ಮಿ ಮಾಡಬಾರದ?'' ಅಮ್ಮನ ಕಣ್ಣಂಚಿನ ಹನಿಗಳನ್ನು ಕಂಡಾಗ ಕರುಳು ಬಾಯಿಗೆ ಬಂದಂತಾಗುತ್ತದೆ.

ಕಾಳ, ಬೊಳ್ಳ, ಕರಿಯ, ಕೊರಗ ಎಂದು ಕರೆಯದಿದ್ದರೂ, ಅಪ್ಪಯ್ಯ ತನ್ನ ಬಿಚ್ಚುತ್ತಿರುವ ಶಿಖೆಯನ್ನು ಕಟ್ಟಿಕೊಳ್ಳುತ್ತ, ಆಗಾಗ ಕಂಕುಳಿನ ಬೆವರನ್ನು ಕಪ್ಪು ಬಣ್ಣಕ್ಕೆ ತಿರುಗಿದ ಬೈರಾಸದಿಂದ ಒರೆಸಿಕೊಳ್ಳುತ್ತ ''ಒಡು, ಹಡೆ, ಅನ್ನದಂಡ, ಮೂರು ಕಾಸಿನವ, ವರ್ಷ ಹದಿನಾರಾದರೂ ಗಾಯತ್ರಿ ಮಂತ್ರವನ್ನೂ ಹೇಳದ ಜಡ್ಡು ಕಟ್ಟಿದ ನಾಲಿಗೆಯ ಬಿಕನಾಸಿ'' ಎಂದೆಲ್ಲ ಬಿರುದು ಬಾವಲಿಗಳನ್ನು ತನಗೊಪ್ಪಿಸಿ ಕೆಂಗಣ್ಣಿನಿಂದ ತನ್ನತ್ತ ನೋಡುವುದನ್ನು ನೆನೆದಾಗ ಮೂಕ ಸಿಟ್ಟು ಬ್ರಹ್ಮರಂಧ್ರಕ್ಕೇರುತ್ತದೆ.

ಇನ್ನು ಸುಮ್ಮನಿರುವುದು ಸಮವಲ್ಲ, ಧುರವೀಳ್ಯವನ್ನು ಪಡೆದು, ತನ್ನ ಮಟ್ಟಿಗೆ ಥೇಟ್ ಹಡಬೆ ಎನಿಸಿಕೊಂಡ ಅಪ್ಪಯ್ಯನೊಂದಿಗೆ ರಣಾಗ್ರ ನಡೆಸಬೇಕು. ''ಎಲ ಎಲವ್ವೊ, ಮಡಿ ಮಡಿ ಎನ್ನುತ್ತ ಇಡೀ ದೇಹ ಕೊಳಕು ಮಾಡಿಕೊಡ ನರಾಧಮಾ. ನಿನ್ನ ಬ್ರಾಹ್ಮಣಿಕೆಗೆ ಒಂದು ಸೇರು ಉಪ್ಪು, ಅಲ್ಲವ್ವೊ, ಶಾಲಿಗ್ರಾಮಕ್ಕೆ ಒಂದು ಶಂಖ ನೀರೆರೆದುಬಿಟ್ಟಲ್ಲಿ, ಜನಿವಾರದ ನೂಲಿಗಾಗಿ ತಕಲಿ ತೂಗಿದಲ್ಲಿ, ಶ್ರಾದ್ಧ ಕರ್ಮಗಳ ನೆಪದಲ್ಲಿ ಊರೂರು ಮೇದು,

ಅಪಾನವಾಯು ಬಿಡುತ್ತ ಚೊಂಬು ನೀರು ಕೈಕಾಲಿಗೆ ಸುರಿದು ಶುದ್ಧ ಮಾಡಿಕೊಂಡರೆ ಅಷ್ಟರಲ್ಲೆ ಬ್ರಾಹ್ಮಣಿಕೆ ಮುಗಿಯಿತೇನೊ. ಇದೊ ಅಯಾಚಿತವಾಗಿ ನಿನ್ನ ಮಗ ಎನಿಸಿಕೊಂಡ ನನಗೆ ಆ ಗೊಡ್ಡ ಬ್ರಾಹ್ಮಣ್ಯ ಬೇಡ. ನೀನಿಟ್ಟ ಪುಸ್ಕಾಟ್ ಕೇಶವ ಅಂಬೊ ನಾಮಧೇಯವೂ ಬೇಡ. ತಿಳಿಯಿತ? ಧೈರ್ಯ ಇದ್ದರೆ ಕಾಳಗಕ್ಕೆ ಎದುರಾಗು'' – ಎಂದು ದಿಗಿಣ ಹಾಕಬೇಕು ಎಂದುಕೊಂಡದ್ದು ಅದೆಷ್ಟು ಸಲ! ಆದರೆ ಅಪ್ಪಯ್ಯನ ಎಂಟು ದಿನ ಬೆಳೆದ ಸುಣ್ಣ ಬಣ್ಣದಲ್ಲಿ ಕಪ್ಪು ಸೇರಿಕೊಂಡ ಕುರುಚಲು ಗಡ್ಡದ ಕೋಲು ಮುಖ, ಕೆಂಪುಕಲ್ಲಿನ ವಂಟಿ ಶೋಭಿತವಾದ, ಊರಿನ ಸಮಸ್ತ ವರ್ತಮಾನಗಳನ್ನು ಸಂಗ್ರಹಿಸುವ ಬೀಸಣಿಗೆಯಂತಹ ಕಿವಿಗಳು, ಬೆಳ್ಳಿಯಲ್ಲಿ ಕಟ್ಟಿದ ತುಳಸಿ ಮಣಿ ಸರದೊಂದಿಗೆ, ಅಲಾದಿನಂತಿರುವ ಜನಿವಾರ ಪರಡಿಕೊಂಡ ಬಾಕ್ಯಾರು ಗದ್ದೆಯಂತಹ ರೋಮಭರಿತ ಎದೆ – ಥೇಟ್ ಸೈಂಧವ, ಒಂಚೂರೂ ಅನುಮಾನವಿಲ್ಲ – ಎಣಿಸಿದಾಗ ಕಚ್ಚೆಯಲ್ಲಿ ಉಚ್ಚೆ ಒಸರಿಬಿಡುವ ಭಾಸವಾಗುತ್ತಿತ್ತು. ಅಲ್ಲಿಗೇ ರಂಗಸ್ಥಳಕ್ಕೆ ಮಂಗಳ ಹಾಡಿ ವೇಷ ಚೌಕಿಗೆ ನಡೆದುಬಿಡುತ್ತಿತ್ತು.

ವನಜ, ಗಿರಿಜ, ಜಲಜ, ಮಂಜುಳ, ಯಮುನೆ ಇತ್ಯಾದಿ ಹೆಸರನ್ನು ಪಡೆದಿದ್ದ ಮಕ್ಕಿತ್ತಾಯರ ಹೆಣ್ಣುಗಳೆಲ್ಲ ತಾನು ಊರು ಬಿಡುವಾಗ ಕುಪ್ಪಸದೊಳಗೆ ಮೊಗ್ಗು ನೈದಿಲೆ ಅರಳಿಸಿಕೊಂಡು ಎಲ್ಲಿಂದಲೋ ಶೃಂಗಾರಲೋಲರಾದ ಮಕ್ಕಿತ್ತಾಯರು ಎಗರಿಸಿ, ಪೆಠಾರಿಯಲ್ಲಿ ಭದ್ರವಾಗಿರಿಸಿದ್ದ 'ಅನಂಗರಂಗ'ದ ಏಕೈಕ ಪ್ರತಿಯನ್ನು ಹತ್ತನೆ ಬಾರಿಯೊ, ಹದಿನೈದನೆ ಬಾರಿಯೊ ಓದಿ ಮೈ ಬಿಸಿಮಾಡಿಕೊಳ್ಳುತ್ತಿದ್ದವು. ಹಾಗೆ ನೋಡಿದರೆ ಕಡೆಯ ಹೆಣ್ಣೊಂದು ಬಿಟ್ಟರೆ, ಬಾಕಿ ಜವ್ವನೆಯರೆಲ್ಲ ಮಕ್ಕಿತ್ತಾಯರ ಪೇಟೆಂಟ್ ಕಲರನ್ನಾಗಲಿ, ಮೋರೆಯ ಲಕ್ಷಣವನ್ನಾಗಲೀ ಪಡೆಯದೆ, ಅವರಮ್ಮ ''ನಮ್ಮ ಹೆಣ್‌ಗಳನ್ನ ತುಟಿ ಪಿಟಿಕ್ ಅನ್ನದೆ ಲಗ್ನ ಆಪೂಕೆ ಯಾರೂ ಬತ್ರೆ. ಅದ್ರದ್ದೇನ್ ಮಂಡೆ ಬಿಸಿ ಇಲ್ಲೆ. ಮಂಡೆ ಸ್ವಲ್ಪ ನಮ್ ಕಡೇ ಹೆಣ್ಣೀದೇ'' ಎಂದು ಸರ್ಟಿಫಿಕೇಟ್ ಕೊಡುವಷ್ಟು ಅಂಗ ಪುಷ್ಟಿ ದೇಹ ಪುಷ್ಟಿಯೊಂದಿಗೆ ರೂಪವನ್ನೂ ಪಡಕೊಂಡಿದ್ದವು. ಮಂಡೆ ಬಿಸಿ ಇವಳದ್ದೆ ಎಂದು ಶ್ರೀಮತಿ ಮಕ್ಕಿತ್ತಾಯರು ಕೊರಗಿದರೂ ಸಹ ಅವರ ಕಡೆಯ ಕಡಸು ಕಾವೇರಿ ಅಕ್ಕಂದಿರ ಹೋಲಿಕೆಯಲ್ಲಿ ಸ್ವಲ್ಪ ಪಡಪೋಶಿ ಎನಿಸುವುದು ಕೇವಲ ಅವಳ ಕೃಷ್ಣ ವರ್ಣದಿಂದಷ್ಟೇ ಹೊರತು ಬೇರಾವುದೇ ಬಾಬಿನಲ್ಲಿ ಅವಳಲ್ಲಿ ಕೊರತೆ ಇದ್ದಿಲ್ಲ.

ಸಪ್ತ ಮಾತೃಕೆಯರ ಅಪ್ಪನಾದ ವೇದಮೂರ್ತಿ ಮಾನ್ಯ ಶ್ರೀ ಮಕ್ಕಿತಾಯರಿಗೆ ಮನೆಯಲ್ಲಿ ಬರೀ ಹೆಣ್ಣು ಸಂತಾನ ಎನ್ನುವ ಸಮಸ್ಯೆ ಎಂದಾದರೂ ಕಾಡಿದ್ದೂಂಟೂಂತ ಮಾಡಿದಿರ? ಊಹ್ಞೂ, ಅವರ ಪ್ರಕಾರ ಎಲ್ಲ ಭಗವದಿಚ್ಛೆ. ಪೈಪೋಟಿಗಳಿಗಿಳಿದವರಂತೆ ಕೆಲವೊಮ್ಮೆ ಇಬ್ಬರೂ ಮೂವರೂ ಒಟ್ಟಿಗೆ ಚೆಂಬು, ಓಲೆ ಚಾಪೆ ಹಿಡಿದು ಕೂತಾಗ ದಿಗಿಲಾಗುವುದು ಹೌದಾದರೂ, ಅವರೆಂದೂ ಧೈರ್ಯ ಕಳಕೊಂಡವರಲ್ಲ ಹಾಗೆಂದು ಅದಷ್ಟು ಬೇಗ ಇವುಗಳಿಗೆ ಪಾಣಿಗ್ರಹಣ ಮಾಡಿಸಬೇಕು ಎನ್ನುವ ಅಂತಹ ಜರೂರಿಯೂ ಅವರಿಗಿರಲಿಲ್ಲ. ಮದುವೆ, ಸೀಮಂತ, ಉಪನಯನ, ಗೃಹಪ್ರವೇಶದಂತಹ ಸಮಾರಂಭದ ಪೌರೋಹಿತ್ಯಕ್ಕೆ ಹೋಗುವಾಗ ಅವರ ಕಾಲಂಗುಲ ಜರಿಯಂಚಿನ ಕೆಂಪು ಪಟ್ಟೆಯ ಡೌಲಾಗಲಿ ಸತಿಮಣಿ

ಸುಭದ್ರಮ್ಮ 'ವರಮಹಾಲಕ್ಷ್ಮಿ ವ್ರತ'ದಂದು ಕೆನ್ನೆಗೆ ಅರಿಸಿನ ಬಡಿಸಿಕೊಳ್ಳಲು ಹೋಗುವಾಗ ಧರಿಸುವ ಲಾವಂಚದಿಂದ ಘಮಘಮಿಸುವ ಕೊಳ್ಳೇಗಾಲ ರೇಸಿಮೆಯ ಸೀರೆಯಾಗಲಿ ತನ್ನ ಜುಜುಬಿ ಪೌರೋಹಿತ್ಯದ ಸಂಪಾದನೆಯಿಂದ ಬಂದದ್ದಲ್ಲ ಎಂದು ಮಕ್ಕಿತ್ತಾಯರಿಗೆ ತಿಳಿದಿತ್ತು. ಇದಕ್ಕೆ ಕಾರಣ ಅನಂಗರಂಗದ ಓದು. ಗಜ್ಜುಗ ಹಾರಿಸಿ ಓಡಿಯುವ ಪೊಕ್ಕು ಆಟ. ಚೆನ್ನೆಮಣೆ, ಪಗಡೆಯಾಟವಲ್ಲದೆ ಬೇರಾವ ಮನರಂಜನೆಯೂ ಇಲ್ಲದೆ ಭೀಕರ ಪುರುಸೊತ್ತು ಇರುವ ಜಕ್ಕ ಜವ್ವನೆಯರು ಮನೆಯಲ್ಲೇ ಆರಂಭಿಸಿದ ಬೀಡಿಯ ಫ್ಯಾಕ್ಟರಿಯೇ ಆಗಿತ್ತು. ಚಕ ಚಕ ಎಲೆ ಕತ್ತರಿಸುವುದರಿಂದ ಹಿಡಿದು, ಬೀಡಿ ಸುತ್ತಿ, ಅದಕ್ಕೆ ತಂಬಾಕು ತುಂಬಿ, ನೂಲು ಬಿಗಿದು, ಕಟ್ಟುಕಟ್ಟಿ ಪೇಟೆಗೆ ಸಾಗಿಸುವ ವರೆಗಿನ ಎಲ್ಲ ಕೆಲಸ ಮನೆಯಿಂದ ನಡೆಯುತ್ತಿತ್ತು. ಅವರು ಈ ಉದ್ಯಮದಲ್ಲಿ ಅದೆಷ್ಟು ಬ್ಯುಸಿ ಎಂದರೆ ಮೂಡುಬೆಟ್ಟು, ಪಂದುಬೆಟ್ಟು ಕಳೀಬೈಲು, ಬೆಳ್ಕಳೆ, ಕೊಡವೂರುಗಳಂತಹ ಹತ್ತಿರದ ಸ್ಥಳಗಳಲ್ಲಿ ಊಟದ ಹೇಳಿಕೆ ಇದ್ದರೂ, ಅದನ್ನು ಮನ್ನಿಸಲು ಇವರಿಗೆ ಪುರುಸೊತ್ತಾಗುತ್ತಿರಲಿಲ್ಲ.

★★★

ಕುಂಡೆಗೆ ಕಾಲು ಕೊಟ್ಟು ಕೇಶವ ರಟ್ಟಿದ್ದು ಮುಂಬಯಿಗೆ. ಅಪ್ಪಯ್ಯನ ಪೆಠಾರಿಯಿಂದ ಸಿಕ್ಕಷ್ಟು ನೋಟುಗಳನ್ನೂ, ಮುಷ್ಟಿಗಟ್ಟಲೆ ಚಿಲ್ಲರೆ, ನಾಣ್ಯಗಳನ್ನೂ ಲಪಟಾಯಿಸಿ. ಅಪ್ಪಯ್ಯ ರೋಷದಿಂದ ಬಾಕ್ಯಾರು ಗದ್ದೆಯ ಹುಣಿಯಿಂದ. ನಾಗಬನ, ಅಶ್ವತ್ಥಕಟ್ಟೆಯತನಕ ಏನೇನೋ ಹಬೆರುತ್ತ ನಡೆಯುತ್ತಿರುವುದನ್ನು ನೆನಸಿಕೊಂಡು "ಅವನಿಗೆ ಹದಾ ಆಗಬೇಕು" ಎಂದು ಮನಸ್ಸಲ್ಲೆ ಅಂದುಕೊಂಡು ಬೆಳಗಾವಿಯ ಬ್ಯಾರಿ ಹೋಟೆಲಲ್ಲಿ ಬಸ್ಸು ನಿಂತಾಗ, ಅರ್ಜಂಟಿನಲ್ಲಿ ತನ್ನ ಜನಿವಾರ ಕಿತ್ತು. ಅದನ್ನು ಪಾಯಿಖಾನೆಗೆ ಹಾಕಿ, ಫ್ಲಶ್ ಎಳೆದು ತನ್ನ ಬ್ರಾಹ್ಮಣ್ಯ ನಿರಾಕರಣೆಯ ಪ್ರಥಮ ಅಂಗವಾಗಿ ಡಬಲ್ ಬೈದಾ ಆಮ್ಲೆಟಿಗೆ ಆರ್ಡರು ಮಾಡಿದ. ಗಂಗಸರವನ್ನೂ ಕುಡಿದು, ಒಂದೆರಡು ಎಲುಬನ್ನೂ ಕಡಿದು ಬ್ರಾಹ್ಮಣ್ಯಕ್ಕೆ ತಿಥಿ ಮಾಡಬೇಕೆಂದು ಅವನು ಬಯಸಿದ್ದರೂ ದಾರಿಯಲ್ಲಿ ವಾಂತಿಯಾದರೆ ಫಜೀತಿ ಎಂದು ಆ ಕಾರ್ಯಕ್ರಮಕ್ಕೆ ತಾತ್ಕಾಲಿಕ ಬ್ರೇಕ್ ಹಾಕಿದ.

"ನೀನು ಬಾ ಮಾರಾಯ. ನಾನೆಲ್ಲ ವ್ಯವಸ್ಥೆ ಮಾಡ್ತೇನೆ. ಆದ್ರೆ ಊರಿನ ಹಾಗೆ ಉಪ್ಪರಿಗೆ ಮನೆ ಬೇಕು ಅಂತಾದ್ರೆ ಬರ್ಲೇ ಬೇಡ. ನನ್ದು ಮನೆ ಅಲ್ಲ. ಒಂದು ಗುಡಿಸಲು ಡಬ್ಬೆಯ ತಗಡಿನ ಗೋಡೆ, ಮೇಲಿಗೆ ಪ್ಲಾಸ್ಟಿಕ್ ಶೀಟಿನ ಮಾಡು. ಯಾವತ್ತೋ ಸಮತಟ್ಟಾಗಿಸಿ ಸೆಗಣಿ ಸಾರಿಸಿದ ನೆಲ, ಉಚ್ಚೆ ಹೊರಕಡೆ ಎಲ್ಲ ಎಲ್ಲೆಂದರಲ್ಲಿ, ನೀರು ಹಿಡೀಲಿಕ್ಕೆ ಬೆಳಗ್ಗೆ ನಾಲ್ಕು ಗಂಟೆಗೆ ಎಲ್ಲರೂ ಬಳಸುವ ನಲ್ಲಿಗೆ ನಮಸ್ಕಾರ ಹೊಡೀಬೇಕು. ನಿನಗೆ ಇದೆಲ್ಲ ಆಗುವ ಬಾಲ್ತಲ್ಲ ಅಂತಾದ್ರೆ, ನಂದೇನೂ ತಕರಾರಿಲ್ಲ. ನೀನು ಎಲ್ಲಾದ್ರೂ ನೋಡ್ಕೊ." ಪಸ್ಕು ನಾಯ್ಕನ ಮಗ ಇನಾಸ ಬರೆದಿದ್ದ. ಕೇಶವನಿಗೆ ದಾರಿಯಲ್ಲೆಲ್ಲ ಒಂದೇ ಯೋಚನೆ. ಈ ಬೇವಾರ್ಸಿ ಇನಾಸನನ್ನು ಹೇಗೆ ಹುಡುಕುವುದು! ಕಾಗದದಲ್ಲಿ ವಿಳಾಸವೇನೂ ಕೊಟ್ಟಿದ್ದ. ಇವ ಮರು ಟಪ್ಪಾಲು ಬರೆದದ್ದು ವಿಳಾಸ ಸರಿಯಿಲ್ಲವೆಂದು ವಾಪಾಸು ಬಂದಿತ್ತು.

ಸಯಾನಿನಲ್ಲಿ ಇಳಿದವನಿಗೆ ಮುಂಬಯಿಯ ನಿಗ್ಗು ಕಂಡು ಕಣ್ಣುಕತ್ತಲೆ ಬಂದಂತಾಗಿತ್ತು. ಒಂದೆರಡು ದಿನ ರೂಪಮ್ ಸಿನೆಮಾ ಮಂದಿರದ ರಸ್ತೆಯ ಫುಟ್‌ಪಾತ್‌ನಲ್ಲೆ ದಿನ ಕಳೆದ ಕೇಶವನಿಗೆ, ರಾತ್ರಿ ಇತರ ಫುಟ್‌ಪಾತ್‌ವಾಸಿಗಳಿಂದ, ಪೊಲೀಸರಿಂದ ಕಿರುಕುಳ ತಡೆಯಲಾಗದೆ ಅಳು ಬರುವ ಹಾಗಾಗಿಬಿಟ್ಟಿತು. ಆದರೂ ಬ್ರಾಹ್ಮಣ್ಯವನ್ನು ಧಿಕ್ಕರಿಸಿ, ಮನುಷ್ಯರುಗಳ ಜೊತೆ, ಕೆಲವೊಮ್ಮೆ ಬೀದಿ ನಾಯಿಗಳ ಜೊತೆ ಕಾಲ ಕಳೆಯುತ್ತಿದ್ದುದು ಅಪಾರ ತೃಪ್ತಿ ತಂದಿತ್ತು ಆದರೆ ರಾತ್ರೋರಾತ್ರಿಯಲ್ಲೊಮ್ಮೆ ಗಾಢ ನಿದ್ದೆಯಲ್ಲಿದ್ದಾಗ ಅದಾಗಲೇ ಒಗೆತ ಕಾಣದೆ ಅವನಿಗೆ ಅಸಾಧ್ಯ ಕಿರಿಕಿರಿ ಮಾಡುತ್ತಿದ್ದ ಪ್ಯಾಂಟಿನ ಝಿಪ್ಪೊನ್ನು ಯಾರೋ ಎಳೆಯುತ್ತಿದ್ದಂತೆ ಭಾಸವಾದ ಕೇಶವ ಗಪ್ಪನೆ ಕೈಯನ್ನು ಹಿಡಿದುಕೊಂಡ. ಕೈಯಲ್ಲಿ ಇದ್ದ ಬೆರಳುಗಳು ಅಲ್ಲಲ್ಲಿ ಅರೆಬರೆಯಾಗಿದ್ದು ಮಂಪರು ಬೆಳಕಿನಲ್ಲಿ ಕಂಡು ವಾಂತಿ ಬರುವಷ್ಟು ಅಸಹ್ಯವಾಗಿ, ಕಿಟಾರನೆ ಕಿರಿಚಿಕೊಂಡ. ಸ್ವಲ್ಪ ದೂರದಲ್ಲಿ ಮಲಗಿದ್ದ ಮುದುಕಿ ಗೊಣಗಿಕೊಂಡಳು. "ಕುಷ್ಠ ಹಿಡಿದ ಬೇವಾರ್ಸಿ, ತವಲಿಗೇನು ಕಡಿಮೆ ಇಲ್ಲ" ಎಂದಿತು. ಕೇಶವನಿಗೀಗ ಹತ್ತು ಸಲ ಸ್ನಾನ ಮಾಡಬೇಕೆಂದಿನಿಸಿತು. ಆದರೆ ನೀರಿಗೆಲ್ಲಿ ಹೋಗಬೇಕು? ಮೆಲ್ಲನೆ ಜಾಗ ಖಾಲಿ ಮಾಡಿದ ಆತ ರೈಲ್ವೆ ಸ್ಟೇಷನ್ ಬಳಿಯ ರಸ್ತೆ ಬದಿಯಲ್ಲಿ ಬಿದ್ದುಕೊಂಡ.

ರಾತ್ರಿ ಗೊಣಗಿಕೊಂಡ ಮುದುಕಿ ರದ್ದಿ ಸಂಗ್ರಹಿಸುತ್ತಿತ್ತು. ಗೊರಬಿನಂತೆ ತಲೆಯಿಂದ ಬೆನ್ನಿನವರೆಗೆ ಆವರಿಸುವಂತೆ ಪ್ಲಾಸ್ಟಿಕ್ ಶೀಟನ್ನು ಹೊದೆದುಕೊಂಡ ಮುದುಕಿ ಬೆಳಕಿನ ಝಾವದಲ್ಲೆ ಸ್ಟೇಷನ್‌ನ ಬಳಿ ಬೇಕಾಬಿಟ್ಟಿ ಬಿದ್ದ ಪೇಪರು, ರಟ್ಟು, ಪ್ಲಾಸ್ಟಿಕ್ ವಸ್ತುಗಳನ್ನು ಹೆಕ್ಕಿ ಹೆಕ್ಕಿ ಚೀಲಕ್ಕೆ ತುಂಬಿಸಿಕೊಳ್ಳುತ್ತಿತ್ತು. ಅವಳ ಜೊತೆಯೆ. ಅವಳನ್ನು ಎಲ್ಲೆಂದರಲ್ಲಿ ಹಿಂಬಾಲಿಸುತ್ತಿದ್ದ ಮೂರು ನಾಯಿಗಳು ಕುಂಯಿಗುಟ್ಟುತ್ತ, ಕೆಲವೊಮ್ಮೆ ಆಕೆಯನ್ನು ಪ್ರೀತಿಯಿಂದ ಮೂಸುತ್ತ ಅರೆಬರೆ ತಿಂದು ಬಿಸಾಡಿದ ರಸ್ತೆಯಂಚಿನಲ್ಲಿದ್ದ ತಿಂಡಿ ಪದಾರ್ಥಗಳನ್ನು ಮುಕ್ಕುತ್ತಿದ್ದವು. ಆಚಾನಿಕ್ ಕೇಶವನ್ನು ಕಂಡದ್ದೇ ಆಕೆ ತಮಿಳು ಮಿಶ್ರಿತ ಹಿಂದಿಯಲ್ಲಿ "ಯಾವ ಊರಾಯ್ತು ಮಗಾ, ಇಲ್ಲಿ ಬಿದ್ದುಕೊಂಡಿದ್ದಿ. ಏನು ಕೆಲಸ? ಮನೆಯಲ್ಲಿ ಜಗಳ ಆಯ್ತಾ? ಅಥವಾ ಓಡಿ ಬಂದವನಾ, ಮದುವೆ ಆಗಿದೆಯಾ, ಹೆಂಡತಿ ಮಕ್ಕಳು ಎಲ್ಲಿ, ಎಲ್ಲ ದರಿದ್ರದವು. ಎಲ್ಲೆಂದರಲ್ಲಿಂದ ನಮ್ಮ ಸಿಟಿಗೆ ಬರುತ್ತಾರೆ. ನಮಗಿಲ್ಲಿ ಒರಗಲಿಕ್ಕೂ ಜಾಗ ಇಲ್ಲ. ಅದಕ್ಕೂ ಪೋಟಿ ಕೊಡುತ್ತಾರೆ. ಏನು ಮಾಡೋಣ. ಎಲ್ಲರೂ ಬದುಕಬೇಕಲ್ಲ, ನಾವೂ ಬದುಕುತ್ತೇವೆ. ಈ ನನ್ನ ಪ್ರೀತಿಯ ನಾಯಿಗಳೂ ಬದುಕುತ್ತವೆ. ಅವುಗಳಿಗೆ ಮಧ್ಯಾಹ್ನ ನಮ್ಮ ಉಸ್ಮಾನ್ ಭಾಯಿಯ ಅಂಗಡಿಯಿಂದ ನಾಲ್ಕು ಪಾವ್ ತಂದು ಹಾಕುತ್ತೇನೆ. ರಾತ್ರಿಗೆ ನಮ್ಮ ಧಾರಾವಿಯ ಹೊಟೇಲ್‌ನ ಶೆಟ್ಟರು ಮಿಕ್ಕಿದ ಅನ್ನ, ಮೀನು ಗಸಿ ಹಾಕುತ್ತಾರೆ. ಒಂದು ನಾಯಿ ಅಲ್ಲಿ ರಾತ್ರಿ ಇಡೀ ಕಾವಲು ಕೂರುತ್ತದೆ. ಉಳಿದೆರಡು ಈ ಪಟಿಯ ಸುದ್ದಿಗೆ ಯಾರೂ ಬರದಂತೆ ನೋಡಿಕೊಳ್ಳುತ್ತವೆ. ನನ್ನ ಈ ದಂಧೆಯಲ್ಲಿ ಕಾಸು ಒಳ್ಳೆಯದುಂಟು. ಕೆಲವೊಮ್ಮೆ ಆ ಹಲ್ಕಾ ನನ್‌ಮಗ ಪೇಪರ್‌ವಾಲಾ ತೂಕದಲ್ಲಿ ಮೋಸ ಮಾಡುತ್ತಾನೆ. ಮೋಸ ಮಾಡಿದವರಿಗೆ ಬರ್ಕತ್ತಾಗಲುಂಟ! ಆ ಮುರುಗ ನೋಡಿಕೊಳ್ಳುತ್ತಾನೆ' ಪ್ರಶ್ನೆ ಸ್ವಗತ. ಸ್ವಪರಿಚಯ ಎಲ್ಲವನ್ನೂ ವಟವಟ ಅಂತ ಹೇಳುತ್ತಿದ್ದರೂ

ಮುದುಕಿ ತನ್ನ ಹೆಕ್ಕುವ ಕಾರ್ಯದಲ್ಲಿ ತಲ್ಲೀನಳಾಗಿದ್ದಳು. "ಹಾಗೆ ಸಂಪಾದಿಸಿದ ಕಾಸಿನಲ್ಲಿ ಮಗಳಿಗೆ ಮದುವೆ ಮಾಡಿಸಿದೆ. ಅವಳೀಗ ಎರಡು ಮಕ್ಕಳನ್ನು ಹೆತ್ತು ಮೂರನೆಯದರ ಬಸಿರು. ಊರಲ್ಲಿದ್ದಾಳೆ. ಅಳಿಯನಿಗೆ ಅಂಗಡಿ ಹಾಕಿಸಿಕೊಟ್ಟಿದ್ದೇನೆ. ಧಾರಾವಿಯ ಅಣ್ಣಾ ಚೌಕದ ಹತ್ತಿರ ನಲ್ಲಿ, ಬಲ್ಬ್ ಎಲ್ಲ ಇರುವ ಖೋಲಿ ಉಂಟು. ಎಂಟುನೂರು ರೂಪಾಯಿ ಬಾಡಿಗೆ ಬರುತ್ತದೆ ನೀನ್ಯಾಕೆ ಇಲ್ಲಿ ರಸ್ತೆ ಬದಿಯಲ್ಲಿ ನೆಗರುತ್ತಿ? ಹೊಟೇಲು ಶೆಟ್ಟರು ನಿಮ್ಮ ಕಡೆಯವರೆ. ಅವರು ನಿನಗೇನಾದರೂ ವ್ಯವಸ್ಥೆ ಮಾಡುತ್ತಾರೆ, ಗೊತ್ತಾಯ್ತಾ" ಎಂದದ್ದೆ ಕೇಶವನಿಗೆ ಪುಕ್ಕಲು ಶುರುವಾಯಿತು.

ಎಲ್ಲಿಯಾದರೂ ಈ ಶೆಟ್ಟರು ಊರಿಗೆ ವರ್ತಮಾನ ಕಳಿಸಿಬಿಟ್ಟರೆ ವ್ಯಾಪಾರ ಕೋಚಾಗುತ್ತದೆ. ಅರೆ ತೋಳಿನ ಅಂಗಿ. ಲೋಡಿನಡಿ ಇರಿಸಿ ಇಸ್ತ್ರಿಮಾಡಿದ ಬಿಳಿ ಮುಂಡು ಧರಿಸಿ. ಕಾಲಿಗೆ 'ಜೀಕ್ ಜೀಕ್' ಎಂದು ಕಠಿಣ ಸ್ವರ ಹೊರಡಿಸುವ ಮೆಟ್ಟು ಮೆಟ್ಟಿಕೊಂಡು ಸವಾರಿ ಮುಂಬಯಿಗೆ ಪುತ್ರಾನ್ವೇಷಣೆ ಹೊರಟರೂ ಹೊರಟೀತೆ. ಆಗ ತಾನು ಅಂದುಕೊಂಡದ್ದೆಲ್ಲ ನೀರಿನಲ್ಲಿ ಹೋಮ ಮಾಡಿದಂತಾಗುತ್ತದೆ. ಈ ಮುದುಕಿಯ ಸಹವಾಸ ಒಳ್ಳೇದಲ್ಲಪ್ಪ ಎಂದುಕೊಳ್ಳುತ್ತಿದ್ದಂತೆ ಮುದುಕಿ ಅಪಾರ ವಾತ್ಸಲ್ಯದಿಂದೆಂಬಂತೆ ಹೇಳಿತು. "ಮಗಾ, ನಿನಗೆ ಈ ರೋಡು ಸೈಡು ಆಗದು. ನನ್ನ ಖೋಲಿಯ ಪಳನಿಯಪ್ಪ ಈಗ ಒಬ್ಬನೇ ಉಂಟು. ಶೆಟ್ಟರ ವ್ಯಾಪ್ತಿ ನಿನಗೆ ಬೇಡ ಎಂದು ನಿನ್ನ ಸೊಡ್ಡು ನೋಡಿದರೇ ಗೊತ್ತಾಗುತ್ತದೆ. ನಾನು ಏನಂದೆ? ಅದೇ ಆ ಪಳನಿಯಪ್ಪ ಈಗ ಒಬ್ಬನೇ ಇದ್ದಾನೆ ಎಂದೆ. ಅವನ ಹೆಂಡತಿ ಊರಿಗೆ ಹೋಗಿದೆ. ಖೋಲಿ ಉಂಟು ಎಂತ ಇದ್ದರೆ ನಮ್ಮ ಜನಕ್ಕೆ ಕಸುಬು ಬೇಡವ. ಕಲ್ಯಾಣವಾಗಿ ಅಬ್ಬಬ್ಬ ಎಂದರೆ ಏಳೆಂಟು ತಿಂಗಳೂ ಆಗಿರಲಿಕ್ಕಿಲ್ಲ. ಗುರುವಾಯೂರಪ್ಪ ಕೋವಿಲ್‌ನಲ್ಲಿ ಮದುವೆ ಆದದ್ದು. ಈಗ ಏಳು ತಿಂಗಳು. ತಿಪ್ಪೂರಿಗೆ ಹೋಗಿದ್ದಾಳೆ. ಪಳನಿಗೆ ನಾನು ತಾಕೀತು ಮಾಡಿದ್ದೇನೆ. ಯಾವ ಬೋಳಿಮಕ್ಕಳನ್ನೂ ಬಾಡಿಗೆಗೆ ಸೇರಿಸಿಕೊಳ್ಳಬಾರದು ಎಂದು. ನೀನು ಅಲ್ಲಿ ಸ್ವಲ್ಪ ಸಮಯ ಇದ್ದರೆ ಅಡ್ಡಿ ಇಲ್ಲ. ತಿಂಗಳಿಗೆ ಇನ್ನೂರು ಕೊಡು. ಬೇರೆ ಎಲ್ಲಾದರೂ ಸಿಗುವ ವರೆಗೆ. ನಿನಗೆ ಈ ರಸ್ತೆಯ ಸಹವಾಸ ಲಾಯಕ್ಕಲ್ಲ" ಎಂದು ಮುದುಕಿ ಹೇಳಿದ್ದೇ ಕೇಶವನಿಗೆ ಸ್ವರ್ಗ ಸಿಕ್ಕಿದಷ್ಟು ಸಂತೋಷವಾಗಿಬಿಟ್ಟಿತು.

ಹೇಗೂ ಮನೆಯಿಂದ ಎಗರಿಸಿದ ಹಣವುಂಟು. ಈ ಮುದುಕಿಗೆ ಮುಂಗಡ ಕೊಡಲು ಏನೂ ಗಾಬರಿ ಇಲ್ಲ. ಮತ್ತೆ ನೋಡಿಕೊಂಡರಾಯಿತು ಎಂದು ಮೂರು ನಾಯಿಗಳ ಮಹಾತಾಯಿಗೆ ತನ್ನ ಅಪಾರ ಕೃತಜ್ಞತೆ ಸಲ್ಲಿಸಿ ಪಳನಿಯಪ್ಪನ ಪೇಯಿಂಗ್ ಗೆಸ್ಟ್ ಆಗಿಬಿಟ್ಟ ಕೇಶವ.

ಉಳಕೊಳ್ಳಲೇನೋ ಆಸರೆಯಾಯಿತು. ಹೊಟ್ಟೆಯ ಪಾಡು ನೋಡಿಕೊಳ್ಳಬೇಕಲ್ಲ. ತನಗೆ ಯಾವುದೇ ಘನಂದಾರಿ ಕೆಲಸ ಬೇಕಾಗಿಲ್ಲ. ಖರ್ಚು ವೆಚ್ಚ ತೂಗಿಸಲು, ದುಡಿತದ ದಣಿವಿನಿಂದ ಚೆನ್ನಾಗಿ ನಿದ್ದೆ ಬರಲು ಒಂದು ಕಸುಬು ಬೇಕು. ಅದಕ್ಕೆಂದೇ ಕೈಗಾಡಿ ತಳ್ಳುವ ಕೆಲಸ ಆರಿಸಿಕೊಂಡ ಕೇಶವ. ಫುಲ್ ಲೋಡ್ ಆದ ಇಟ್ಟಿಗೆಯೊ, ಮರಳೊ, ಕಬ್ಬಿಣದ ಸರಳೊ. ಫ್ಯಾಕ್ಟರಿಯ ಸಾಮಾನುಗಳೊ ಇವನ್ನೆಲ್ಲ ಡೆಲಿವರಿ ಜಾಗಕ್ಕೆ ಒಯ್ಯಬೇಕಾದರೆ,

ಕೈಗಾಡಿಗೆ ಟಯರು ಕುಯ್ದು ಮಾಡಲಾದ ಬಲವಾದ ಹಗ್ಗ ಬಿಗಿದು, ಅದನ್ನು ಹೆಗಲಿಗೆ ಹಾಕಿಕೊಂಡು ಒಬ್ಬ ಜಗ್ಗಿ ಎಳೆಯಬೇಕು. ಮತ್ತೊಬ್ಬ ಹಿಂದಿನಿಂದ ತಳ್ಳಬೇಕು. ಬಸ್ಸು ಕಾರು, ಬೈಕು, ಟ್ಯಾಕ್ಸಿ ಜನಗಳ ಗದಿಯಲ್ಲಿ ದಾರಿ ಮಾಡಿಕೊಂಡು ಆ ದಟ್ಟಣೆಯಲ್ಲೆ ಕಿವಿಗಡಚಿಕ್ಕುವ ಹಾರ್ನ್‌ಗಳ ಕರ್ಕಶ ಸಂಗೀತದ ಅಲೆಯಲ್ಲಿ ಕೆಲವೊಮ್ಮೆ ಮೈಲಿಗಟ್ಟಲೆ ದಾರಿ ಕ್ರಮಿಸಬೇಕು. ಕೆಲಸವೇನೊ ಅಪ್ಯಾಯಮಾನವೆನಿಸಿತು. ಆದರೆ ಮೂರು ಜೊತೆ ಹವಾಯಿ ಚಪ್ಪಲಿಗಳ ಉಂಗುಷ್ಠ ಕಿತ್ತು. ಎರಡು ಜೊತೆ ಚಪ್ಪಲಿಗಳು ಎರಡೇ ತಿಂಗಳುಗಳಲ್ಲಿ ಫಿನ್ಲೆ ಧೋತಿಗಳಷ್ಟು ತೆಳುಗಟ್ಟಿದಾಗ ಅವನಿಗೆ ಟೆಂಪರರಿ ಕೆಲಸ ಕೊಟ್ಟಿದ್ದ ಲಖನ ಪ್ರಸಾದ ಬಿಹಾರದಿಂದ ಮರಳಿದ್ದರಿಂದ ಇವ ಕೆಲಸ ಕಳಕೊಳ್ಳಬೇಕಾಯಿತು.

ಪುನಃ ಕೆಲಸದ ಬೇಟೆ. ಕೆಲದಿನ ಟ್ರಾಫಿಕ್ ಸಿಗ್ನಲುಗಳಲ್ಲಿ ನಿಂತು ಬಲೂನು ಮಾರಿದ್ದಾಯಿತು. ಉತ್ಪತ್ತಿ ಕಡಿಮೆ. ಕೆಮ್ಮು ಜಾಸ್ತಿ. ಅದನ್ನು ಬಿಟ್ಟು ಗರಮಾಗರಮ್ ಕಡ್ಲೆಕಾಯಿ ಮಾರಾಟದ ಬಿಸಿನೆಸ್ ಆರಂಭಿಸಿದ. ನಾಯಿಗಳ ಮಾತೆ 'ಪಾಟಿ' ತಾನು ಸಂಗ್ರಹಿಸಿದ ಕಾಗದಗಳಲ್ಲಿ ಕೆಲವನ್ನು ಉದಾರವಾಗಿ ಇವನಿಗೆ ಸುರುಳಿ ಸುತ್ತಿ ಕೊಡುತ್ತಿತ್ತು. ಅಲ್ಲಿ ಇಲ್ಲಿ ಬಿದ್ದ ಚೆಕ್ಕೆಗಳನ್ನು ಸಂಗ್ರಹಿಸಿ ಬುಟ್ಟಿಯಲ್ಲಿ ಬಟಾಣಿ, ಕಡಲೆ, ಸೇಂಗಾಗಳನ್ನು ಬಿಸಿ ಮಾಡಿ ಎಂಟಾಣೆಗೊಂದು ಪೊಟ್ಟಣದಂತೆ ರೇಲ್ವೆ ಸ್ಟೇಶನ್‌ನ ಹೊರಗೊ, ಶಾಲೆಯ ಆಸುಪಾಸಿನಲ್ಲೊ ಮಕ್ಕಿ ಬಂದರೆ ಶಿವಾಜಿ ಪಾರ್ಕ್ ಮೈದಾನದಲ್ಲೊ ಮಾರುವ ದಂಧೆ ಸುರುವಿಟ್ಟುಕೊಂಡ. ಒಳ್ಳೆಯ ವ್ಯಾಪಾರ. ಆದರೆ ಅದಕ್ಕೂ ಪೊಲಿಸರ ಕಾಟ. ಜೊತೆಗೆ ಏರಿಯಾದ ಕಡ್ಲೆಕಾಯಿ ಮಾರುವ ಇತರ ಧಾಂಡಿಗರ ಹಿಂಸೆ. ಪೊಲೀಸರ ಪುಕ್ಕಟೆ ಕಡ್ಲೆಕಾಯಿ ಕೊಡುವುದಲ್ಲದೆ ಹಫ್ತಾ ಸಲ್ಲಿಸಬೇಕಾಗುತ್ತಿತ್ತು. ಕಡ್ಲೆಕಾಯಿ ಮಾರಾಟ ಮಾಡುವ ಇತರರಿಗೆ, "ಇವತ್ತು ಲಾಸ್ಟ್, ಇನ್ನು ಈ ಏರಿಯಾಗೆ ಬರುವುದಿಲ್ಲ" ಎಂದು ದಮ್ಮಯ್ಯ ದಕ್ಕಯ್ಯ ಹಾಕಿ ಕಪ್ಪ ಒಪ್ಪಿಸಬೇಕಾಗುತ್ತಿತ್ತು.

"ಅಲ್ಲವೊ ಕಣ್ಣಾ, ನೀನು ನಿನ್ನ ಕಷ್ಟ ಹೇಳುತ್ತಿ. ಈ ಮುದುಕಿಗೆ ಉಪದ್ರವ ಸ್ವಲ್ಪವಾ. ಪೊಲೀಸರಿಗೆ ಟೀ ಕುಡಿಯಲು ಕಾಸು ಕೊಡಬೇಕು. ಮುನ್ಸಿಪಾಲಿಟಿ ಝಾಡಮಾಲಿಗಳಿಗೆ ಹಫ್ತಾ ಸಲ್ಲಿಸಬೇಕು. ನಾಯಿ ಹಿಡಿಯುವ ವ್ಯಾನ್‌ನವರ ಕಣ್ಣು ತಪ್ಪಿಸಿ ಓಡಾಡಬೇಕು. ಅವರ ಕೈಗೆ ಸಿಕ್ಕಿದರೆ ನಾಯಿ ಇಟ್ಟುಕೊಂಡ ತಪ್ಪಿಗೆ, ಸಾವಿರ ತಗಾದೆಯಿಂದ ಬಚಾವಾಗಲು ಅವರಿಗೂ ಒಂದಿಷ್ಟು ಹೇಲು ತಿನ್ನಿಸಬೇಕು. ಬೊಂಬಾಯಿಯಲ್ಲಿ ಈಗೀಗ ನಿಯತ್ತು ಎಂಬುದೇ ಇಲ್ಲ ಮಗಾ. ಆದರೂ ಬದುಕಬೇಕಲ್ಲ, ಬೊಂಬಾಯಿ ಬದುಕಲು ಬಿಡುತ್ತದೆ. ಉಸಿರುಗಟ್ಟಿ ಸಾಯಲು ಬಿಡುವುದಿಲ್ಲ, ಅಷ್ಟೆ ತೃಪ್ತಿ. ಊರಲ್ಲಿ ಇದು ಸಾಧ್ಯವಾ ಹೇಳು" ಎಂದೆಲ್ಲ ಒಮ್ಮೊಮ್ಮೆ ಸೆರಗಿನ ಗಂಟಿನಿಂದ ತಂಬಾಕಿನ ಪೊಟ್ಟಣ ತೆಗೆದು, ಅದಕ್ಕೆ ಸುಣ್ಣ ಹಚ್ಚಿ ಹದವಾಗಿ ಸುಣ್ಣದೊಂದಿಗೆ ತಿಕ್ಕಿ ಬೆರೆಸಿ ಮಿಶ್ರಣವನ್ನು ನಾಲಗೆಯಡಿ ಇರಿಸಿ ತಂಬಾಕಿನ ಸುಖವಾದ ಲೋಲುಪತೆಯನ್ನು ಅನುಭವಿಸುತ್ತ ಮುದುಕಿ ಹೇಳುವುದಿತ್ತು. ಆಗ ಆಕೆಯ ನಾಯಿಗಳು ಸಮ್ಮತಿಪೂರ್ವಕವಾಗಿ ಖುಶಿಯಿಂದ ಕುಂಯಿಗುಟ್ಟುತ್ತ ಆಕೆಯ ಸೆರಗನ್ನು ಮೂಸುವುದೊ, ಕೈಯನ್ನು ನೆಕ್ಕುವುದೊ, ತಲೆಯ ಮೇಲೆ ಅತಿ ಪ್ರೀತಿಯಿಂದ ಥಂಗನೆ

ನೆಗೆಯುವುದೊ ಮಾಡುತ್ತಿದ್ದವು. ಮುದುಕಿ ಅಜ್ಜಿಯೊಂದಿಗಿನ ನಿಟ್ಟಿನಲ್ಲಿ, ಪೇಪರು ಪಕ್ಕಲು ಬಳಸುತ್ತಿದ್ದ ತನ್ನ ಕಬ್ಬಿಣದ ಸರಳಿನಲ್ಲಿ ನಾಯಿಗಳಿಗೆ ಹೊಡೆದೇ ಬಿಡುವ ನಟನೆ ಮಾಡುತ್ತಿದ್ದಳು. ಘಾಟಿ ನಾಯಿಗಳಾದರೂ ಅವಳ ಸುಳ್ಳು ಪೆಟ್ಟಿನಿಂದ ತಪ್ಪಿಸಿಕೊಂಡು ಪುನಃ ಬಂದು ತಮ್ಮ ಪೂರ್ವಕಾರ್ಯಗಳಲ್ಲಿ ನಿರತವಾಗುತ್ತಿದ್ದವು.

ಪಳನಿಯಪ್ಪ ಒಂದು ತಳ್ಳುಗಾಡಿ ಇರಿಸಿಕೊಂಡು ಬಾಳೆ ಹಣ್ಣಿನ ವ್ಯಾಪಾರ ಮಾಡುತ್ತಿದ್ದ. ಈ ದಂಧೆಯಲ್ಲಿ ಒಳ್ಳೆ ಮುನಾಫೆ ಉಂಟು ಎಂದೂ ಹೇಳುತ್ತಿದ್ದ. ಸಾಧ್ಯವಾದರೆ ತಾನೂ ಒಂದು ಕೈ ನೋಡಬೇಕೆಂದು ವ್ಯಾಪಾರದ ಆದ್ಯಂತ ತಿಳಿಯಲು ಬೈಕುಲಾ ಮಾರ್ಕೆಟಿಗೆ, ಹಣ್ಣಿನ ಖರೀದಿಗೆ ಪಳನಿಯಪ್ಪ ಹೋಗುವಾಗ ಕೇಶವ ಕಂಪನಿ ಕೊಡುವುದಿತ್ತು. ಹಾಗೆ ಒಮ್ಮೆ ನಾಗ್ಪಾಡಾದಲ್ಲಿ ಸಿಕ್ಕಿದ ಗುಜ್ಜರಬೆಟ್ಟಿನ ಅಂಗಾರನನ್ನು ನೋಡಿದ್ದೇ, ಬಾಲ್ಯದ ದಿನಗಳೆಲ್ಲ ಅವನಿಗೆ ನೆನಪಾದವು. ಅಂಗಾರ ಅಪರೂಪಕ್ಕೆ ಅಬ್ಬೆಯ ಜೊತೆಗೊ. ಅಪ್ಪನ ಜೊತೆಗೊ ತನ್ನ ಮನೆಗೆ ಬರುತ್ತಿದ್ದುದು, ಕೊಟ್ಟಿಗೆಯಲ್ಲಿ, ನಾತ ಬೀರುವ ಹಟ್ಟಿಯ ಪಕ್ಕದಲ್ಲಿ ಕುಳಿತು ತಾವೇ ತಂದ ಅಲ್ಯುಮಿನಿಯಂನ ದಬರಿಯಲ್ಲಿ, ಅಮ್ಮ ನೀಡಿದ ನೀರು ಮಜ್ಜಿಗೆಯನ್ನೊ, ಕೊತ್ತಂಬರಿ ಕಷಾಯವನ್ನೊ ಕುಡಿದು, ದೂರದಿಂದ ಬಿಸಾಡಿದ ಎಲೆ ಅಡಿಕೆಯನ್ನು ಸೆರಗಲ್ಲೊ, ಉಟ್ಟ ಬಟ್ಟೆಯ ಚುಂಗಿನಲ್ಲೊ ಹಿಡಿದು ದೂರದ ತೆಂಗಿನ ಕಟ್ಟೆಯ ಬಳಿ ಅದನ್ನು ಬಾಯಿಗೆ ಹಾಕಿಕೊಳ್ಳುತ್ತಿದ್ದುದು, ಉಗಿಯಲು ಸಾಕಷ್ಟು ದೂರದ ಗದ್ದೆಯತ್ತ ಹೋಗುತ್ತಿದ್ದುದು. "ಅವರೆಲ್ಲ ಯಾಕಮ್ಮ ಹಾಗೆ ಮಾಡುತ್ತಾರೆ" ಎಂದು ಅಮ್ಮನನ್ನು ಕೇಳಿದರೆ "ಅವು ಕೀಳು ಜಾತಿಯವು ಮಗೂ" ಎಂದಾಗ ನನಗೆ ಅರ್ಥವಾಗದೆ ಕಣ್ ಕಣ್ಣು ಬಿಡುತ್ತಿದ್ದುದು ಎಲ್ಲ ನಿನ್ನೆ ಮೊನ್ನೆ ನಡೆದಂತೆ ತೋರುತ್ತಿತ್ತು. ತೆಂಗಿನ ಮರದಿಂದ ಕಾಯಿ ಕೀಳಲು ಮಾತ್ರ ಅಂಗಾರನ ಅಪ್ಪ ತುಕ್ರನೇ ಅಪ್ಪಯ್ಯನಿಗೆ ಬೇಕಾಗುತ್ತಿತ್ತು. ಕೊಯ್ದ ಕಾಯಿಗಳಿಗೆ ಮಾತ್ರ ಮೈಲಿಗೆಯಾಗುತ್ತಿರಲಿಲ್ಲ, ಅವುಗಳನ್ನು ತೊಳೆಯದೆಯೇ ಮನೆಯೊಳಗಿನ ಉಗ್ರಾಣದಲ್ಲಿ ಇಡಲಾಗುತ್ತಿತ್ತು. ಆದರೆ ಅಂಗಾರನ ಜೊತೆ, ತಾನು ಬೆರೆಯುವಂತಿಲ್ಲ, ಆಡುವಂತಿಲ್ಲ, ಅವನ ಹರಕಲು ಚಡ್ಡಿಯ ಕಿಸೆಯಲ್ಲಿ ಜೋಪಾನವಾಗಿ ಇರಿಸಿಕೊಂಡ ಫಳ ಫಳ ಹೊಳೆಯುವ ಗೋಲಿಗಳನ್ನು ಮುಟ್ಟುವಂತಿಲ್ಲ. ಮುಟ್ಟಿದ್ದೇ ಆದರೆ ಮೀಯಬೇಕು. ಮೀಯುವ ಮೊದಲು ಸಹಸ್ರ ನಾಮಾರ್ಚನೆ, ಅದರಿನ ಪೂಜೆ ಸ್ವೀಕರಿಸಬೇಕು.

ತುಕ್ರ ಆಕಾಶದೆತ್ತರ ಬೆಳೆದ ಮರಕ್ಕೂ ಚಕ ಚಕ ಎಂದು ಹತ್ತಬಲ್ಲವ. ದಿನಕ್ಕೆ ಆರು ಕೊಯ್ಲು ಗದ್ದೆಯ ಬಳಿ ಕಡಿದು, ಇಪ್ಪತ್ತು ಮೂವತ್ತು ತೆಂಗಿನ ಕಟ್ಟೆಗೂ ಮಣ್ಣು ಎತ್ತಿ ಹಾಕುವ ತಾಕತ್ತುಳ್ಳವ. ಅವ ಮುಡಿ ಕಟ್ಟಿದ ಎಂದರೆ ಮುಗಿಯಿತು. ಹುಳ ಹುಪ್ಪಟೆ ಬರುವುದು ಬಿಡಿ, ಇಲಿಗೂ ಅದನ್ನು ಭೇದಿಸಿ ಒಳ ಹೋಗುವುದು ಸಾಧ್ಯವಾಗುತ್ತಿರಲಿಲ್ಲ. ಏನೂ ಕೆಲಸವಿಲ್ಲವೆಂದಾದಲ್ಲಿ ಪಾಡ್ದನ ಹಾಡುತ್ತ ರಾಶಿಗಟ್ಟಲೆ ಮಡಲು ಹೆಣೆದಾನು. ಮಡಲಿಗೂ ತತ್ವಾರವಾದರೆ ಗುಡ್ಡೆಯಿಂದ ಬೀಳಲುಗಳನ್ನು ಆರಿಸಿ ತಂದು ಬುಟ್ಟಿಗಳನ್ನೊ, ಮೊರಗಳನ್ನೊ ರಚಿಸುತ್ತ ಕೂತಾನು. ಮಾಗಣೆಯಲ್ಲಿ ಎಲ್ಲಿ ಭೂತಕ್ಕೆ ಭೋಗ, ಫನಿಯಾರ, ಬಲಿ ಆಗಬೇಕಾದರೂ ತುಕ್ರ ಬೇಕೇ ಬೇಕು. ಅಂತಹ ಜನಾನುರಾಗಿ. ಆದರೇನು ಮಾಡೋಣ

ಒಂದು ದಿನ ದೂಜ ಪುಡ್ತಾದರ ತೋಟದಲ್ಲಿ ಕಾಯಿ ಕೀಳಲು ಮರ ಹತ್ತಿದವ ಆಯತಪ್ಪಿ ಬಿದ್ದುಬಿಟ್ಟ. ಮಣಿಪಾಲದ ಆಸ್ಪತ್ರೆಗೆ ಒಯ್ದರೂ ಅವನ ಪ್ರಾಣ ಉಳಿಯಲಿಲ್ಲ. "ಕಿರಿಸ್ತಾನರ ತೆಂಗಿನ ತೋಟಕ್ಕೆ ಅವರು ಹಂದಿ ಹೇಲು ಹಾಕುವುದಲ್ಲವ? ಹೇಳಿ ಕೇಳಿ ಸಾಕ್ಷಾತ್ ಕಲ್ಪವೃಕ್ಷ, ಅದೂ ಲಕ್ಷ್ಮೀ ಸಮೇತ ಶ್ರೀಮನ್ನಾರಾಯಣನಿಗೆ ಪ್ರಿಯವಾದ ತರು. ಪರಧರ್ಮದವರ ತೋಟವಂತೂ ಆಯ್ತು. ಲಕ್ಷ್ಮೀನಾರಾಯಣರಿಗೆ ಮೈಲಿಗೆ ಬೇರೆ. ಹೀಗಾಗಿ ತುಕ್ರ ಪ್ರಾಣ ಕಳಕೊಂಡ" ಎಂದು ಅಗ್ರಹಾರದ ಜನ ಸರ್ಟಿಫಿಕೇಟು ಕೊಟ್ಟರೆ, "ಇದು ಖಂಡಿತ ಕಲ್ಕುಡನದೇ ಪೆಟ್ಟು. ಏನೂ ಅನುಮಾನವಿಲ್ಲ. ಎಲ್ಲಿ ಪೂಜೆ ಮಾಡುವಾಗ, ಪಾಪ ವಿಧಿ ತಪ್ಪಿದನೊ ಅಥವಾ ವಾಟೀಸು ಹಾಕಿ ಧೂಪ ಹಿಡಿದನೊ, ಯಾರಿಗ್ಗೊತ್ತು. ಆ ಕಲ್ಕುಡನ ಕಾರ್ಣಿಕ ಎಂದರೆ ಕೇಳಬೇಕ? ತಡಬಡ ಮಾಡಲಿಕ್ಕಿಲ್ಲ ಅವ. ಪೆಟ್ಟೊಂದು ತುಂಡೆರಡು ಒಟ್ಟಾರೆ ತುಕ್ರನ ನಸೀಬು ಹಾಳು" ಎಂದಾಡಿಕೊಂಡಿತು ಗ್ರಾಮದ ಇತರ ಜನ ಸಮೂಹ. ಒಟ್ಟಾರೆ ತುಕ್ರನ ಹೆಂಡತಿ ನರ್ಸಿ ಹಾಗೂ ಮಗ ಅಂಗಾರ ಅನಾಥರಾದುದಂತೂ ನಿಜ. ಅವರಿಗೆ ಉಣ್ಣಲು ತತ್ವಾರವಾದುದೂ ನಿಜ. ಆಗ ಊರು ಬಿಟ್ಟವ ಅಂಗಾರ ಹಾಸನದಲ್ಲೊ ಮೈಸೂರಲ್ಲೊ ಇದ್ದ ಎನ್ನುವ ವದಂತಿಯಾಗಿ ಆತ ಒಂದೆರಡು ಬಾರಿ ಊರಿಗೆ ಮರಳಿದಾಗ ಕೈಗೆ ವಾಚು, ಕಣ್ಣಿಗೆ ಕಪ್ಪು ಕನ್ನಡಕ, ಎದೆಯ ನೆಟ್ ಬನೀನು ಕಾಣುವಂತೆ ಹಾಕಿಕೊಂಡ ಅರೆ ತೆರೆದ ಟರಿಲೀನ್ ಶರಟು. ಪುಲ್ಲನ್ ಪ್ಯಾಂಟು ಎಲ್ಲ ಕಂಡು ಈತನೇನು ಧರೆಗಿಳಿದ ದೇವತೆಯೊ ಎಂಬಂತೆ ಆತನನ್ನು ಅಚ್ಚರಿ ಮಿಶ್ರಿತ ಅಸೂಯೆಯಿಂದ ದಿಟ್ಟಿಸಿದ್ದುಂಟು. ಜೊತೆಗೆ ಆತ ಬೊಂಬಾಯಿ ಶೇತಾಣಿ ಯಾರಿಗೊ ಟೊಪ್ಪಿ ಹಾಕಿ ಬಂದದ್ದಂತೆ. ಅವನಿಗೆ ಅಲ್ಲಿ ಮಟ್ಕಾ ದಂಧೆಯ ಜೊತೆ ನ್ಯೂಯಾರ್ಕ್ ಅರಳೇ ಪೇಟೆಯ ಓಪನ್ ಕ್ಲೋಸ್‌ನಲ್ಲಿ ಬೊಳ್ಳ (ನೆರೆ) ಬಂದಂತೆ ಹಣ ಬರುತ್ತದಂತೆ, ಆತ ಮೈಸೂರು ಹಾಗೂ ಘಟ್ಟದ ಮೇಲಿಂದ ಮುಂಬಯಿಯ ತೊಗಲು ವ್ಯಾಪಾರಕ್ಕೆ ಹೆಣ್ಣುಗಳನ್ನು ಸಪ್ಲೈ ಮಾಡುತ್ತಾನಂತೆ – ಎಂಬಿತ್ಯಾದಿ ಊಹಾಪೋಹದ ಕಥೆಗಳೂ ಪ್ರಚಲಿತವಾದುದುಂಟು.

ಈಗ ಅಂಗಾರನನ್ನು ಕಂಡಾಗ ಕೇಶವನಿಗೆ ಹಿಂದಿನದ್ದೆಲ್ಲ ನೆನಪಾಯಿತು.

"ಏನು ಭಟ್ರೆ, ಇಲ್ಲಿಯಾದ್ರೂ ನನ್ನನ್ನು ಮುಟ್ಟಲಿಕ್ಕೆ ಅಡ್ಡಿ ಇಲ್ಲವಷ್ಟೆ" ಎಂದು ಕೊಂಕಿದ ಅಂಗಾರನಿಗೆ "ಮುಟ್ಟುವುದು ಎಂಥದಾ. ನಿನ್ನ ಒಟ್ಟಿಗೆ ಕೂತು ಒಮ್ಮೆ ಡಿಂಗಾಗಬೇಕು. ಚಿಕನ್ ಸಿಕ್ಸ್ಟಿಯೊ ಬೊಜ್ಜವೊ ಉಂಟಲ್ಲ ಅದು ತಿನ್ನಬೇಕು. ಸಾಧ್ಯವಾದರೆ ಸ್ವಲ್ಪ ಮೈಕಾಸಿಕೊಳ್ಳುವುದನ್ನೂ ಮಾಡಬೇಕು" – ಎಂದು ಕೇಶವ ಮಾರುತ್ತರಿಸಿದ.

ಗೆಳೆಯರೀರ್ವರೂ ಇರಾಣಿ ಹೊಟೇಲಿನಲ್ಲಿ ಚಹಾ ಮಸ್ಕಾಪಾವ್‌ನೊಂದಿಗೆ ಹೊಟ್ಟೆ ತುಂಬ ಮಾತಾಡಿದರು. ತಟ್ಟನೆ ಅಂಗಾರ ಏನೋ ಹೊಳೆದಂತೆ "ಹೌದಾ, ಕೇಶವ – ಮೈಕಾಸಿಕೊಳ್ಳುವುದು ಎಂದು ನೀನಂದದ್ದೆ ನೆನಪಾಯಿತು ನೋಡು. ನಿಮ್ಮ ಕೇರಿಯಲ್ಲಿ ಆ ಏಳು ಹೆಣ್ಣುಗಳ ಅಪ್ಪ ಇಲ್ಲವೊ" – ಎಂದ.

"ಮಕ್ಕಿತ್ತಾಯರು"

"ಅದೇ ಅವರ ಕಡೆಯ ಪುತ್ರಿ... ಕಾವೇರಿಯಲ್ಲವೊ ಅವ್ಳ ಹೆಸರು".

''ಹೌದು''

''ಅಲ್ಲ ಮಾರಾಯ, ಸುಳ್ಳ ಬದ್ದವಾ ಎಂದು ನನಗೇನು ಗೊತ್ತಿಲ್ಲ. ನಾನೇನು ಕಂಡಿದ್ದೇನ? ಆದ್ರೂ ವರ್ತಮಾನವಪ್ಪ''.

''ಏನದು?''

''ಮಾಡಿದವರ ಪಾಪ, ಆಡಿದವರಿಗಂತೆ. ನಮಗ್ಯಾತಕ್ಕೆ ಬೇಡದಿದ್ದ ಜಂಬರ. ಹೋಗ್ಲಿ ಬಿಡು.''

ಕಾವೇರಿಯ ಸುದ್ದಿ ಎಂದದ್ದೇ. ಆಕೆಯ ಮೇಲೆ ಒಂದು ತರಹದ ಸೋದರತ್ವದ ಸೋಂಕಿರದ ವ್ಯಾಮೋಹವನ್ನು ಬೆಳೆಸಿಕೊಂಡಿದ್ದ ಕೇಶವನಿಗೆ ಅಂಗಾರ ವಿಷಯ ಹೇಳದೆ ಸತಾಯಿಸುವುದನ್ನು ಕಂಡು ಕೆಟ್ಟ ಕೋಪ ಬಂದಿತ್ತು.

''ಎಂಥಧನ ಶೇಳೆ. ವಿಷಯ ಹೇಳಬಾರದ'' - ಎಂದು ಕೇಶವ ಗದರಿದ್ದಕ್ಕೆ ಅಂಗಾರ.

''ಅಲ್ಲ, ಮಾರಾಯ, ಬ್ರಾಂಬ್ರ ಸುದ್ದಿ, ಶೂದ್ರ ಬೇವರ್ಸಿಗಳಿಗೆ ಯಾಕೆ? ನೀವು ಭಟ್ರ ಬಗೆಯವ್ರು ಶಾಪ ಗೀಪ ಕೊಟ್ಟುಬಿಟ್ರೆ'' ಎಂದು ಸುಳ್ಳು ಭಯ ವ್ಯಕ್ತಪಡಿಸಿದ.

''ಸಾಕು ನಿನ್ನ ತಮಾಷೆ, ಏನಾಯ್ತು ಹೇಳು''

''ನಮ್ಮ ಇನಾಸ ಇಲ್ವನಾ, ಪಸ್ಕು ನಾಯ್ಕ್ರ ಮಗ.''

''ಹೌದೌದು. ಅವ್ನೆ, ನಂಗೆ ಇಲ್ಲಿ ಠಿಕಾಣಿ ಕೊಡುತ್ತೇನಂತ ಹೇಳಿದವನಿಗೆ ಕಾಗ್ದ ಬರೆದರೆ ಕಾಗ್ದನೆ ವಾಪಾಸ್.''

''ಕಾಗ್ದ ಹೇಗೆ ಬರೀತಾನೆ ಮಾರಾಯ. ಯಾರದೋ ತಪ್ಪಿಗೆ - ಅದೆಂಥದೊ ಮಾರಾ ಮಾರಿಯೊ, ಮತ್ತೆಂಥದೊ - ಮೂರು ನಾಲ್ಕು ದಿನಾ ಪೊಲೀಸ್ ಸ್ಟೇಶನ್‌ನಲ್ಲಿ ಒದೆ ತಿಂದ. ಇನ್ನು ಬೊಂಬಾಯಿಯ ಗೊಡವೆಯೇ ಬೇಡ ಅಂತ ಊರಿಗೆ ಹೋದ. ಆದ್ರೆ ಈ ಶಹರದ ಸೆಳೆತ ಉಂಟಲ್ಲ, ಯಾರನ್ನೂ ಬಿಡುವುದಿಲ್ಲ, ಪುನಃ ಬಂದ. ನನಗೆ ಕಾವೇರಿಯ ಮಲಾಮತ್ತೆಲ್ಲ ಹೇಳಿದ್ದು ಅವ್ನೆ.''

''ಎಂಥಹ ಮಲಾಮತ್ತು ಮಾರಾಯ?''

''ಸ್ವಲ್ಪ ಕೇಳು, ಇನಾಸ ಪೊಲೀಸರಿಂದ ಮೈಪುಡಿ ಮಾಡಿಸಿಕೊಂಡ ಬಳಿಕ ಸೀದಾ ಊರಿಗೆ ಗಾಡಿ ಬಿಡಲಿಲ್ಲವಂತೆ. ಹಾಸನಕ್ಕೊ, ಮಡಿಕೇರಿಗೊ ಅವನ ತಂಗಿಯನ್ನು ಕೊಟ್ಟಿದ್ದಲ್ಲವ? ಅಲ್ಲಿಗೆ ಹೋಗಿ ನಾಲ್ಕಾರು ವಾರ ಕಳೆದು ಊರಿಗೆ ಹೋದದ್ದಂತೆ. ಆಗ ನಡೆದದ್ದು ಈ ಮಲಾಮತ್ತ'' ಅಂಗಾರ ದನಿ ಇಳಿಸಿ ಮುಂದರಿಸಿದ.

''ಆ ಕಾವೇರಿ ಉಂಟಲ್ಲ ಮಾರಾಯ. ಸಾಮಾನ್ಯದ್ದಲ್ಲವಂತೆ. ಒಂದು ದಿನ ಬೆಳಗ್ಗೆಯ ಹೊತ್ತಿಗೇ ಅಪ್ಪಯ್ಯ ಬನ್ನಂಜೆಯಲ್ಲೊ, ಅಂಬಲಪಾಡಿಯಲ್ಲೊ ಪೌರೋಹಿತ್ಯಕ್ಕಂತ ಹೊರಟಾಗ ಬೀಡಿಯ ಬಂಡಲ್‌ಗಳು ತುಂಬಿದ ಚೀಲದ ಜೊತೆಗೆ ಉಡುಪಿಗೆ ಹೊರಟಿತಂತೆ. ಅಪ್ಪಯ್ಯ ತಮ್ಮ ಪೌರೋಹಿತ್ಯದ ಮನೆಯತ್ತ ಕಾಲು ಹಾಕಿದಾಗ ಇವಳು ಹಿಂಭಾರ,

ಮುಂಭಾರ ತೂಗಿಕೊಂಡು ನಡೆಯುವುದನ್ನು ಬೈಸಿಕಲ್ಲಿನಲ್ಲಿ ಹೋಗುತ್ತಿದ್ದ ಐತಪ್ಪಣ್ಣನ ಮಗ ರವಿ ಕಂಡದ್ದೆ "ಎಲ್ಲಿಗಮ್ಮ, ಮಮ್ಮದೆಯ ಅಂಗಡಿಗಲ್ಲವ? ನಿಮ್ಗೆ ಲಟಾರಿ ಬಸ್ಸಿನ ವ್ಯಾಪ್ತಿ ಯಾಕೆ? ಹತ್ತಿ, ನಂಗೂ ಮಮ್ಮದೆಯ ಅಂಗಡಿಯ ಹತ್ರಾನೇ ಹೋಗಲಿಕ್ಕುಂಟು" ಎಂದವನೇ ಆಕೆಯನ್ನು ಡಬಲ್‌ರೈಡ್ ಮಾಡಿಕೊಂಡೇ ಅಂಗಡಿಯಲ್ಲಿ ಬಿಟ್ಟನಂತೆ. ಮಮ್ಮದೆ ಲೆಕ್ಕಾಚಾರ ಎಲ್ಲ ಚುಕ್ತಾ ಮಾಡಿದ ಬಳಿಕ. ಇಬ್ಬರೂ ಮಾರ್ನಿಂಗ್ ಶೋ ನೋಡಿದರಂತೆ. ಮ್ಯಾಟಿನಿ ಶೋ ನಡೆದದ್ದು ಮಾತ್ರ ಹಾಡಹಗಲೇ ಹೊಟೇಲಿನಲ್ಲಂತೆ. ಅಂತೂ ಕಾವೇರಿ ಎನ್ನುವ ಹೆಸರಿಗೂ, ಅವರ ಏರಿದ ಕಾವಿಗೂ ಸರಿಹೋಯ್ತು. ಇದು ನಾನು ಕಂಡದ್ದಲ್ಲ, ಹೇಳಿದ್ದನ್ನು ಕೇಳಿದ್ದು. ವರ್ತಮಾನ ಇನ್ನೂ ಬೆಳೆದು, ರವಿ ಅವಳನ್ನು ದುಬಾಯಿಗೆ ಕರಕೊಂಡು ಹೋಗುತ್ತೇನೆ ಎಂದು ಮಂಗಾಟಿಸಿ ಆಕೆಯನ್ನು ಇಲ್ಲೆ ಎಲ್ಲೊ ಕಾಮಾಠಿಪುರದಲ್ಲೊ, ಅಪೆರಾ ಹೌಸ್‌ನಲ್ಲೋ ಘರ್‌ವಾಲಿಗೆ ಒಪ್ಪಿಸಿದ್ದಾನಂತೆ. ಅದು ಇರಲಿಕ್ಕಿಲ್ಲ. ಅವಳನ್ನು ಬಿಟ್ಟದ್ದು ಬ್ಯೂಟಿಪಾರ್ಲರಿನಲ್ಲಿ ಎನ್ನುವ ಸಮಾಚಾರವೂ ಉಂಟಂತೆ."

"ಪಾಪ, ಆಕೆಗೆ ಹಾಗಾಗಬಾರದಿತ್ತು" ತುಂಬ ಕುಗ್ಗಿದ ದನಿಯಲ್ಲಿ ಕೇಶವ ಖೇದ ವ್ಯಕ್ತಪಡಿಸಿದಾಗ "ಹೌದಪ್ಪ ನಿಂಗೆ ಸಿಕ್ಕದ ಹೆಣ್ಣು ಯಾರಿಗೊ ಸಿಕ್ಕಿತು ಅಂತ ಅಲ್ಲವಾ ನಿಂಗೆ ದುಃಖ. ಅದರಲ್ಲೂ ಮಾಣಿಯ ಜಾತಿ ಪ್ರೇಮ ಎಲ್ಲಿ ಹೋಗುತ್ತದೆ. ಬ್ರಾಂಬ್ರ ಹುಡುಗಿಯನ್ನು ಶೂದ್ರರು ಅನುಭವಿಸುವುದೂಂದ್ರೆ ಘಾತಕ ಅಲ್ವ" ಎಂದು ಅಂಗಾರ ಚುಚ್ಚಿದ.

"ಕಾವೇರಿ ಮಾತ್ರವಲ್ಲ, ಯಾವ ಹೆಣ್ಣಿಗೆ ಇಂತಹ ಸ್ಥಿತಿ ಬಂದರೂ ನಂಗೆ ದುಃಖ ಆಗುತ್ತದೆ. ಇಲ್ಲಿ ಬ್ರಾಹ್ಮಣ, ಶೂದ್ರ ಎನ್ನುವ ಪ್ರಶ್ನೆಯೇ ಇಲ್ಲ. ಯಾಕೆ ನಿಂಗೆ ಹರ್ಷೋದ್ರೇಕದಿಂದ ರೋಮಾಂಚನವಾಯ್ತು?" - ಕೇಶವ ಪ್ರತಿಭಟಿಸಿದ.

"ನಂಗೂ ತುಂಬಾ ಕೆಡುಕೆನಿಸಿತು ಬಿಡು. ಆದ್ರೆ ನಾನು ಇನಾಸನ ಕಥೆಯನ್ನು ಪೂರ ನಂಬುವುದಿಲ್ಲ, ಹುಡುಗನೊಬ್ಬನ ಜೊತೆ ಹುಡುಗಿ ಹೋದರೆ ಅದು ಹಾಸಿಗೆಯಲ್ಲೆ ಕೊನೆಗೊಳ್ಳುತ್ತದೆ ಎಂದು ಯಾಕೆ ತಿಳಕೊಳ್ಳಬೇಕು? ಅಂತೂ ಪಾಪದ ಹುಡುಗಿ ನಾಲ್ಕು ಜನರಿಗೆ ನಾಲಿಗೆ ಚಪಲಕ್ಕೆ ಒಳಗಾದಳಲ್ಲ"

★★★

ಅಂಗಾರ ಸಿಕ್ಕಿದ ಬಳಿಕ ಕೇಶವನಿಗೆ ಉಳಕೊಳ್ಳುವ ಸಮಸ್ಯೆ ಮುಗಿಯಿತು. ಟೆಂಪರರಿಯಾಗಿ ಆತನಿದ್ದ ಧಾರವಿಯ ಪಳನಿಯಪ್ಪನ ಮನೆಗೆ ಆತನ ಹೆಂಡತಿ ಮಗು ವಾಪಸು ಬರುವ ಮೊದಲೇ ಕೇಶವ ಅಲ್ಲಿಂದ ಅಂಗಾರನ ಬಳಿ ನಡೆದಿದ್ದ. ಅಂಗಾರನ ಖೋಲಿ ಇದ್ದುದು ಕೆಂಪುದೀಪದ ಜಾಗಕ್ಕೆ ಸಮೀಪ, ಗೋಲ್ ಪೀಟಾದ ಬಳಿ, ಅಂಗಾರನ ಮಾವನೊ, ಚಿಕ್ಕಪ್ಪನೊ ಬ್ರಿಟಿಷರ ಕಾಲದಲ್ಲಿ ನೌಕಾ ಸಂಸ್ಥೆಯೊಂದರಲ್ಲಿ ದುಡಿಯುತ್ತಿದ್ದರಂತೆ. ಆಗ ಅವರು ಇರುತ್ತಿದ್ದ ಖೋಲಿ ಅದು. ಅಂಗಾರನನ್ನು ಮುಂಬಯಿಗೆ ಕರೆಸಿದ್ದೂ ಅವರೆ. ಮಕ್ಕಳಿಲ್ಲದ ಅವರಿಗೆ ಅಂಗಾರನೇ ಮಗನಾಗಿದ್ದ. ಹೆಂಡತಿಯೂ, ಟೈಫಾಯ್ಡ್‌ನಿಂದ ಕಾಲವಾದ ಮೇಲೆ ತನ್ನ ಏಕೈಕ ಆಸ್ತಿಯಾದ ಖೋಲಿಯನ್ನು ಅಂಗಾರನ ಹೆಸರಿಗೆ ಬರೆದು "ಇದೊ ಮಗಾ, ನಾನು ಒಂದು ದೇವಸ್ಥಾನ ಇಲ್ಲಿ ಮಾಡಬೇಕೆಂದು ಬಯಸಿದೆ. ಭಜನಾ

ಮಂಡಳಿಯಿಂದ ಮುಂದೆ ಹೋಗಲಿಲ್ಲ ಆ ಇಚ್ಚೆ ಈಗೀಗ ಭಜನೆಗೂ ಜನ ಬರುವುದು ಕಡಿಮೆ. ನಾನು ಮುದುಕನಾಗಿದ್ದೇನೆ. ನನಗೆ ಒಂಚೂರೂ ಕೂಡುವುದಿಲ್ಲ. ನೀನು ರಾತ್ರಿ ಶಾಲೆಗಾದರೂ ಹೋಗಿ ಮುಂದೆ ಬರಬೇಕು. ಏನಾದರೂ ಮಾಡಿ ಒಂದು ಗುಡಿ ಮಾಡಬೇಕು'' ಎಂದು ತೀರಿಕೊಂಡಿದ್ದ.

ಹೀಗಾಗಿ ಅಂಗಾರ - ನಲ್ಲಿ, ಲೈಟು ಇರುವ ಚಾಳ್ ಒಂದರಲ್ಲಿ ಒಂದು ಕೋಣೆಯ ಮಾಲಿಕನಾಗಿದ್ದ. ನಾಲ್ಕನೆಯ ಮಹಡಿಯಲ್ಲಿ ಇವನ ಖೋಲಿ ಕೆಲಸ ಪರ್ಮಿಟ್ ರೂಮಿನಲ್ಲಿ. ಕೆಲಸ ಕೊಡಿಸು ಎಂದು ಅಂಗಾರನನ್ನು ಕೇಶವ ರಂದುತ್ತಿದ್ದ. ''ನಿನಗದೆಲ್ಲ ಆಗಲಿಕ್ಕಿಲ್ಲ ಮಾರಾಯ. ಮೀನು, ಮಾಂಸ, ಸರಾಯಿ, ಜಗಳ, ಪೆಟ್ಟು, ಪೊಲೀಸರು ಎಲ್ಲ ನಿನಗೆ ಸಾಧ್ಯವಾಗುವ ಬಾಬತ್ತಲ್ಲ. ಬೇಕಾದರೆ ಕೆಲಸ ಮಾಡದೆ ಖೋಲಿಯಲ್ಲಿ ಕುತುಕೊ. ನನಗೆ ಸಂಬಳವಲ್ಲದೆ ಒಳ್ಳೆ ಟಿಪ್ಸ್ ಬರುತ್ತದೆ. ನಮಗಿಬ್ಬರಿಗೆ ಯಥೇಷ್ಟವಾಯಿತು. ಹ್ಞಾ, ಅಂದ ಹಾಗೆ ನಿನಗೆ ಒಳ್ಳೆಯ ಕೆಲಸ ಸದ್ಯದಲ್ಲೆ ಕೊಡುತ್ತೇನೆ. ನನ್ನ ಪ್ಲಾನ್ ಎಲ್ಲ ಸಕ್ಸಸ್ ಆದಲ್ಲಿ ನಾವು ವಿಮಾನದಲ್ಲೆ ಊರಿಗೆ ಹೋಗಿಬರಬಹುದು'' ಎನ್ನುತ್ತಿದ್ದ ಅಂಗಾರ.

ಅಂಗಾರ ತನ್ನ ಚಿಕ್ಕಪ್ಪನೂ ಮಾವನೂ ಆದ ವ್ಯಕ್ತಿಯ ಇಚ್ಚೆಯಂತೆ ಒಂದು ದೇವರ ಗುಡಿ ಕಟ್ಟಿ ಬಿಟ್ಟಿದ್ದ. ಆದರೆ ರಸ್ತೆ ಬದಿಯಲ್ಲಿ ''ಶ್ರೀ ಶ್ರೀ ಲಲಿತಾಂಬಾ ಕ್ಷೇತ್ರ''ವೆಂದು ಬೋರ್ಡು ತಗಲಿಸಿಕೊಂಡ ಆ ಗುಡಿಯನ್ನು ಮುನಿಸಿಪಾಲಿಟಿಯವರು ಆಗಾಗ ಕೆಡವುತ್ತಿದ್ದರು. ಭಜನಾ ಮಂಡಳಿಯ ಕೆಲವು ಸ್ನೇಹಿತರ ಸಹಾಯದಿಂದ ಆತ ರಾತ್ರಿ ಬೆಳಗಾಗುವುದರಲ್ಲೆ ಗುಡಿ ಪುನಃ ಹೆಚ್ಚು ದೊಡ್ಡದಾಗಿ ತಲೆ ಎತ್ತುವಂತೆ ಮಾಡುತ್ತಿದ್ದ. ಕೆಲವು ಆಸ್ತಿಕ ಮಹನೀಯರು ಮಹಿಳೆಯರ ಆಗ್ರಹಕ್ಕೆ ಮಣಿದು, ವಿಶಾಲವಾದ ಫುಟ್‌ಪಾತ್‌ನಲ್ಲಿ ಜಂಕ್‌ಶೀಟ್ ಹೊದೆಸಿ ಚಪ್ಪರ ಹಾಕಿಸಿದ. ಆದರೆ ಪೂಜೆ ಎನ್ನುವುದು ದೇವಿಗೆ ಅಲಂಕಾರ, ಧೂಪ ದೀಪದಾರತಿಯಿಂದ ಮುಂದೆ ಹೋಗಿರಲಿಲ್ಲ. ಮಂತ್ರ, ತಂತ್ರ ಎಲ್ಲ ತಿಳಿದ ಯಾರನ್ನಾದರೂ ನೇಮಿಸಿದರೆ ಆದಾಯ ಚೆನ್ನಾಗಿರುತ್ತದೆ ಎನ್ನುವ ನದುರು ಅವನದು. ಊರಿನ ಹೆಂಗಸರಂತೂ ಆ ಏರಿಯಾದಲ್ಲಿ ಕಡಿಮೆ ಇರಲಿಲ್ಲ. ಅವರ ದಂಧೆ ಚೆನ್ನಾಗಿ ನಡೆಯಬೇಕೆಂದು ಮಂಗಳವಾರ, ಶುಕ್ರವಾರ ಗುಂಪುಕಟ್ಟಿ ಬಂದು ಲಲಿತಾಂಬೆಗೆ ಅಡ್ಡ ಬೀಳುತ್ತಿದ್ದರು. ಆಗ ಅಂಗಾರಕನಿಗೆ ಹೊಳೆದುದು ಕೇಶವ ಮಾಣಿಯ ಉಪಯುಕ್ತತೆ.

ಹಡೆ ಮಾಣಿ, ಥೇಟ್ ಮಂಡೆ ಸಮ ಇಲ್ಲದ್ದು. ಇಲ್ಲಿ ಇತ್ತಾಗಿನವರು ಮಂತ್ರ ತಂತ್ರ ಕಲಿತಿದ್ದರೆ ಎಷ್ಟು ಲಾಯಕ್ಕಾಗುತ್ತಿತ್ತು ಎಂದು ನೇಪಲಾಗುತ್ತಿದ್ದರೆ, ಅವನಿಗೆ ಬ್ರಾಹ್ಮಣ್ಯ ಬೇಡ ಅಂತೆ. ಏನಾದರೂ ಮಾಡಿ ಆ ಮಾಣಿಯನ್ನು ಒಪ್ಪಿಸಿದರೆ ಊರಿಗೇನು. ವಿಲಾಯಿತಿಗೂ ವಿಮಾನದಲ್ಲಿ ಹೋಗಬಹುದು ಎಂದು ಯೋಚಿಸುತ್ತಿದ್ದ ಅಂಗಾರ. ಈ ವಿಷಯವನ್ನು ಕೇಶವನಲ್ಲಿ ಪ್ರಸ್ತಾಪಿಸಿದ್ದಕ್ಕೆ ಬಿಲ್‌ಕುಲ್ ಆಗುವುದಿಲ್ಲ ನಾನು ಬ್ರಾಹ್ಮಣಿಕೆ ಬಿಟ್ಟವ, ಮನುಷ್ಯನಾಗಲು ಹೊರಟವ, ಲಂಗು ಲಸ್ಕು ಮುಂತಾಗಿ ಆತ ಆರ್ಭಟಿಸಿದ.

''ಅಲ್ಲ ಮಾರಾಯ, ನಾನು ಹೇಳುವುದನ್ನು ಕೇಳು. ನೀನು ಆಜೀವ ಪರ್ಯಂತ ಕಡ್ಲೆಕಾಯಿ ಬಾಳೆಹಣ್ಣು ಮಾರಿಕೊಂಡೆ ಇರುವವನ? ನನಗಾಗಲಿ ನಿನಗಾಗಲಿ ಮನೆ ಮಡದಿ

ಮಕ್ಕಳು ಅಂತ ಬೇಡವ. ಇದಕ್ಕೆಲ್ಲ ನಾವು ದುಡಿಯುವುದು ಸಾಕಾಗುತ್ತದ? ನಾನೇ ಇಡೀ ದಿನ ಇಲ್ಲಿ ಕೂತುಕೊಳ್ಳುವ ಅಂದರೆ ನನ್ನ ಕೆಲಸ ಅಂತ ಒಂದು ಉಂಟಲ್ಲ. ಮಧ್ಯಾಹ್ನ ಸಂಜೆ ಗಡದ್ದಾಗಿ ಪೂಜೆ ಮಾಡಿಕೊಂಡು ಇರು. ಸ್ವಲ್ಪ ಸಮಯದಲ್ಲಿ ನನ್ನ ಇನ್ನೊಂದು ಪ್ಲಾನ್ ಶುರುಮಾಡಲಿಕ್ಕುಂಟು'' - ಅಂಗಾರ ಹೇಳಿದ್ದಕ್ಕೆ ''ಏನದು'' ಎಂದು ಕೇಶವ ಕೇಳಲೇ ಬೇಕಾಯಿತು ''ಅದು ನಿನಗೆ ಮತ್ತೆ ತಿಳಿಯುತ್ತದೆ. ಈಗ ಬಾಳೆ ಹಣ್ಣಿನ ಬುಟ್ಟಿ ಗಾಡಿ ಬಿಸಾಡಿ ನಾನು ಹೇಳಿದ ಹಾಗೆ ಮಾಡು'' ಎಂದು ಕಡಕ್ ಆಗಿ ಹೇಳಿದ ಅಂಗಾರನಿಗೆ ಎದುರಾಡಲಾಗದೆ ಒಂದೊಮ್ಮೆ ತಾನು ಒಪ್ಪದಿದ್ದಲ್ಲಿ ಖೋಲಿಯನ್ನು ಬಿಡಬೇಕಾದ ಪ್ರಸಂಗವೂ ಬರಬಹುದು. ಮತ್ತೆ ಸಯಾನಿನ ಪಾಟಿಯೇ ಗತಿ ಎಂದು ಯೋಚಿಸಿದ ಕೇಶವ ಒಂದೊಮ್ಮೆ ನಗರವನ್ನು ಬಿಟ್ಟು ಪುನಃ ಊರಿಗೆ ಹೋದರೆ ಅಪ್ಪಯ್ಯ ಕುಚ್ಚಣಿಸದಿರುತ್ತಾನೆಯೇ. ಒಟ್ಟಾರೆ ಅಲ್ಲಿ ರಾಜಿ ಮಾಡಿ ಹೊಂದಿಕೊಳ್ಳುವುದಕ್ಕಿಂತ ಇಲ್ಲಿ ಪರಿಸ್ಥಿತಿಯೊಂದಿಗೆ ಹೊಂದಿಕೊಳ್ಳುವುದೇ ಲೇಸೆಂದು ಬಗೆದ.

ಹೀಗೆ ಬ್ರಾಹ್ಮಣಿಕೆಯನ್ನು ಬಿಟ್ಟ ಅಬ್ರಾಹ್ಮಣ ತೋಮ, ತುಕ್ರ, ಕರಿಯನೆಂಬಿತ್ಯಾದಿ ಹೆಸರುಗಳಿಗೆ ಹಪಹಪಿಸಿದ ಕೇಶವ ''ಶ್ರೀ ಲಲಿತಾಂಬಾ ಕ್ಷೇತ್ರ''ದ ಭಟ್‌ಜೀ, ಮಹಾರಾಜ್ ಆಗಿಬಿಟ್ಟ. ಭಟ್‌ಜೀಯ ಪೂಜೆ, ಮಂತ್ರಘೋಷ, ಹೋಮ, ಪಾರಾಯಣದಿಂದ ಸಂಪ್ರೀತಳಾದ ಲಲಿತಾಂಬೆ ಮುನಿಸಿಪಾಲಿಟಿಗೆ ಸಡ್ಡು ಹೊಡೆಯುವಷ್ಟು ಖ್ಯಾತಳಾದಳು. ಯಾರೋ ಒಬ್ಬ ಶೇಟ್ ಆಕೆಗೆ ಬಂಗಾರದ ಕಿರೀಟ ಮಾಡಿಸಿದ. ಕಿರೀಟಾರೋಹಣದಂದೆ ಅಂಗಾರನಿಗೆ ದೇವಿಯು ಮೈಮೇಲೆ ಬಂದು ದರ್ಶನ ಶುರುವಾಯಿತು. ಕ್ರಮೇಣ ಪ್ರತಿ ಶುಕ್ರವಾರ, ಮಂಗಳವಾರ ತಪ್ಪದೆ ದೇವಿಯ ದರ್ಶನ, ಕೇಳುಗರ ಅಹವಾಲು, ಪಾತ್ರಯಾದ ಅಂಗಾರ ನೀಡುವ ಪರಿಹಾರ ಎಲ್ಲ ನಗರದೆಲ್ಲೆಡೆಗಳಿಂದ ಜನರನ್ನು ಮಂದಿರದತ್ತ ಆಕರ್ಷಿತರಾಗುವಂತೆ ಮಾಡಿತು.

ಅಂಗಾರ ಈಗ ಕಾವಿ ತೊಟ್ಟು ಶ್ರೀ ಶ್ರೀ ಅಂಗಾರಕ ಸ್ವಾಮಿಯಾಗಿದ್ದಾನೆ. ಶ್ರೀ ಕೇಶವಾನಂದರು ಮಕ್ಕಿತ್ತಾಯರ ಕಡೆಯ ಕನ್ಯೆ ಎಂದಾದರೂ ಕಣ್ಣಿಗೆ ಬಿದ್ದಾಳೆಯೇ ಎಂದು ದೇವಿಯ ತೀರ್ಥ ಪ್ರಸಾದ ನೀಡುವಾಗ ಮೈ ಎಲ್ಲ ಕಣ್ಣಾಗಿ ಹುಡುಕುತ್ತಿದ್ದಾರೆ.

❖❖❖

ಕಳೆದದ್ದು

ಪಾಪ ಕಳೆದುಕೊಳ್ಳಲು
ಮಂದಿರಕ್ಕೆ ಹೋದರೆ ಅಲ್ಲಿ
ಕಳೆದುಹೋಯಿತು
ಪಾಪ
ಹೊಸಾ ಚಪ್ಪಲಿ

- ಎಚ್. ಡುಂಡಿರಾಜ್

ನನ್ನ 'ಸೈಟ್ ಸೀಯಿಂಗ್' ಸಾಹಸ

❖ ಭುವನೇಶ್ವರಿ ಹೆಗಡೆ

'ಈ ಬೆಲ್ಲದಚ್ಚಿನ ಅಪಾರ್ಟ್‌ಮೆಂಟಿನಲ್ಲಿ ಎಷ್ಟು ದಿನ ಅಂತ ಇರ್ತೀರಾ? ಒಂದು ಸೈಟು ಖರೀದಿಸಿಬಿಟ್ಟು ಮನೆ ಅಂತ ಕಟ್ಟಿಕೊಳ್ರಪ್ಪ. ಒಂದು ಬಾಳೆಗಿಡ, ಒಂದು ತುಳಸಿ ಗಿಡ....ನಮ್ಮದೂ ಅಂತ ಒಂದು ಗೇಣು ನೆಲ ಇದ್ರೆ ಆ ಮಾತೇ ಬೇರೆ. ಯೋಚನೆ ಮಾಡಿ ಮೇಡಂ 'ಬಿಟ್ಟುಬಿಡದೇ ನನಗೆ ಈ ವರಾತ ಹಚ್ಚಿದವರು ನನ್ನ ಸಹೋದ್ಯೋಗಿ ಹಿತೈಷಿಗಳೊಬ್ಬರು. ವರ್ಷಾನುಗಟ್ಟಲೆಯಿಂದ ಒಬ್ಬರು ಒಂದೇ ಉಪದೇಶ ಮಾಡುತ್ತಿದ್ದರೆ ಒಂದಲ್ಲ ಒಂದು ದಿನ ಹೂಂ ಆಯ್ತು ಅಂದು ಬಿಡುತ್ತೇವೆ ಎನಿಸುತ್ತದೆ. ನಾನು ಹೂಂ ಅಂದಿದ್ದೇ ತಡ ನನ್ನ ಹಿಂದೆ ಮುಂದೆ ಎಡಕ್ಕೆ ಬಲಕ್ಕೆ' ಸೈಟು ಕೊಡಿಸುವ ಜನ ಹುಟ್ಟಿಕೊಂಡರು. ಎಲ್ಲಿದ್ದರೋ ಇಷ್ಟು ದಿನ ! ಪ್ರತ್ಯಕ್ಷವಾಗಿ ಬಿಟ್ಟರು.

'ನಿಮ್ಮ ಬಜೆಟ್ ಏನು? ಯಾವುದಾದರೂ ಪರ್ಟಿಕ್ಯುಲರ್ ಏರಿಯಾ Choice ಇದೆಯಾ? ಲೋನಾ? ಸೇವಿಂಗ್ಸಾ? ವಾಸ್ತು ಪ್ರಕಾರ ಇರ್ಬೇಕಾ? ದೊಡ್ಡದಿರಲಿಯಾ? ಚಿಕ್ಕದಾ? 'ಸೈಟು ಸಂಬಂಧೀ ಪ್ರಶ್ನೆಗಳು' ಒಂದೇ ಎರಡೇ? ಅಬ್ಬಬ್ಬಾ ಪ್ರಶ್ನೆಗಳಿಗೆ ಸಿದ್ಧತೆ ನಡೆಸಿಕೊಂಡಿದ್ದರೆ ತಾನೆ ಉತ್ತರ ನೀಡುವದು? ನಿರುತ್ತರೆಯ ಪ್ರಲಾಪ ನನ್ನದಾಗಿ ಹೋಯ್ತು.

ನನ್ನ ಮನಸ್ಸಿನಲ್ಲಿ ಭೂಮಿ ಎಂದರೆ ಮಲೆನಾಡಿನ ನಮ್ಮ ಹಳ್ಳಿಯ ಅಡಿಕೆ ತೋಟದ 'ಲೆಕ್ಕಕ್ಕಿಲ್ಲದೆ ಹಸಿರಾಗಿ ಹೊನಲಾಗಿ ಹಬ್ಬಿರುವ' ಭೂಮಿ. ಪ್ರಶ್ನೆಗಳೇ ಇಲ್ಲದ ವರ್ಷಾನುಗಟ್ಟಲೆಯಿಂದ ಅದೇ ನಿಶ್ಚಲ ನಿಶ್ಚಿತ ರೂಪದ ಭೂತಾಯಿ.

ಮನೆ ಎಂದರೆ ಬೀಗಗಳೇ ಇಲ್ಲದ ಮನೆ ತುಂಬಾ ಜನ ತುಂಬಿದ್ದು ಬಂದು ಹೋಗುವ ಬಂಧುಗಳಿಂದ ಆಳುಕಾಳು ಬೆಕ್ಕುನಾಯಿ ದನ ಎಮ್ಮೆಗಳಿಂದ ತುಂಬಿರುವ ಹದಿನಾರಂಕಣದ ಮನೆ 'ತುಂಬಿದ ಮನೆ'.

ಈಗ ಭೂಮಿ ಎಂದರೆ ಗೇಣುಗಳಲ್ಲಿ, ಬೆರಳುಗಳಲ್ಲಿ ಅಳೆಯುವ ಸೆಂಟು ಪೈಂಟುಗಳ ಲೆಕ್ಕದಲ್ಲಿ ಮಾತ್ರ ಸಿಗುವ ತೆಂಗಿನ ಮರಗಳನ್ನು ಕಡಿದು ಸೈಟಾಗಿಸಿದ ಒಣ ಗೇಣಗಲದ ಭೂಮಿ. ಇಂಚಿಂಚು ಅಂಚಿನ ಕೊಂಚ ಜಾಗ ಅಷ್ಟೆ

ಮನೆ ಎಂದರೆ ಭೂಮಿಯ ಸ್ಪರ್ಶವಿಲ್ಲದ ಆಕಾಶಕಾಣಲು ಬಾಲ್ಕನಿಗೋಡುವ ಸದಾ ಬಾಗಿಲು ಹಾಕಿಕೊಂಡಿದ್ದು ಪಕ್ಕದ ಮನೆಯವರ ಪರಿಚಯವಿಲ್ಲದ ಅಪಾರ್ಟ್‌ಮೆಂಟುಗಳು.

ಯೋಚನೆ ಮಾಡಲು ವಿಚಾರ (ಅಯ್ಯಬ್ಬ!) ಮಾಡಲು ಸಮಯ ಬೇಕು.....ಎನ್ನುತ್ತಲೇ ಐದಾರು ತಿಂಗಳು ಕಳೆದೆ. ವಿಚಾರಾಂತರ ಮಾಡಲಿಕ್ಕೇ ನಾನು ಇಷ್ಟು ಒದ್ದಾಡುತ್ತೇನೆ, ಪಕ್ಷಾಂತರ ಮಾಡುವ ರಾಜಕೀಯ ಪಟುಗಳನ್ನು ನೋಡು ಕಲಿಯಬಾಕದೇ ಎನ್ನಿಸಿದ್ದೂ ಉಂಟು.

ಕಾಲೇಜು ರಜೆ ಶುರುವಾಗಿದ್ದೇ "Sight (site) Seeing" ಕಾಯಕಕ್ಕೆ ಮೊದಲ ಪ್ರಾಶಸ್ತ್ಯ ಕೊಟ್ಟೆ. ಎಡಬಲ ಹಿಂದೆ ಮುಂದಿನ ಮಾಹಿತಿದಾರರು ನೀಡಿದ ವಿವರಗಳನ್ನು ಗುರುತು ಹಾಕಿಕೊಂಡೆ. ಯಯ್ಯಾಡಿ 4 ಸೆಂಟ್ಸು, ಕಪಿತಾಸಿಯೋ 5 ಸೆಂಟ್ಸು....ಕೋಡಿಕಲ್ 7 ಸೆಂಟ್ಸು.... ಲೆಕ್ಕದ ಪ್ರಕಾರ ಪಟ್ಟಿ ಸಿದ್ಧಪಡಿಸಿದೆ.

ನನಗೆ ಮಾಹಿತಿ ಒದಗಿಸಿದವರಲ್ಲಿ ಕೆಲವರು ಭೂಮಿ ಬೆಳೆಸುವವರು (Land Developers) ಅಂದರೆ ಹತ್ತಕ್ಕೆ ಕೊಂಡು ನೂರಕ್ಕೆ ಮಾರಿ ಹಣದ ಬೆಳೆ ಭೆಳೆಸುವ ವೃತ್ತಿ ನಿರತರೂ, ಇಡೀ ಗುಡ್ಡವನ್ನೇ ಖರೀದಿಸಿ ಕಡಿದು ಸೈಟಾಗಿಸಿ ಲಾರಿಗಳಲ್ಲಿ ಮಣ್ಣು 'ಮಾರಿ ' ಹಣದ ದಾರಿ ಕಂಡುಕೊಂಡ 'ಭೂಮಾರಿ' ಗಳು, ಅಪ್ಪ ಸಾಯುವುದನ್ನೇ ಕಾಯುತ್ತಿದ್ದು ಒಮ್ಮೆ ಸತ್ತ ಕೂಡಲೇ ಹದ್ದಿನ ಹಾಗೆ ಅಪ್ಪನ ಹೆಸರಿನಲ್ಲಿರುವ ತುಂಡು ಭೂಮಿಯನ್ನು ಮಾರಿ ಕಾರು ಖರೀದಿಸಿ ಪೋಕಿಮಾಡುವ ಮಗರಾಯರುಗಳು, ಕುಟುಂಬದ ಆಸ್ತಿ ಸಾಕಷ್ಟಿದ್ದು ದುಬಾಯ್‌ನಲ್ಲಿರುವ ಚಿಕ್ಕಪ್ಪನಿಂದಾಗಿ dispute ಆಗಿರುವ ಭೂಮಿಯನ್ನು ಮಾರಲಾಗದೇ ಕೈಕೈ ಹಿಸುಕಿಕೊಳ್ಳುವ ವ್ಯಾಜ್ಯ ಪೀಡಿತರು......., ಸೈಟು ಮಾರಿ ಅಪಾರ್ಟ್‌ಮೆಂಟ್ ಖರೀದಿಸಿ ಬದುಕಬೇಕೆಂಬ ಕೆಟಗರಿಯವರು...... ಎಷ್ಟು ವೆರೈ! ಯಾವೆಲ್ಲ ಪ್ರಕಾರಕ್ಕೆ ಸೇರಿದ ಜೀವಿಗಳನ್ನು ಕಂಡೆ ! ಕಂಡು ಬೆರಗಾಗಿ ಹೋದೆ. ಯಾರು ಹಿತವರು ನನಗೆ ಎಂದೇ ತಿಳಿಯದೆ ಭೂಮಿಗಿಳಿದು ಹೋದೆ.

ನನಗೆ ಸೈಟು ಕೊಡಿಸಲು ಬಂದ land developers-ರೊಬ್ಬರು ಎ.ಸಿ.ಕಾರಿನಲ್ಲಿ ಕೂಡಿಸಿಕೊಂಡು ರೊಂಯ್ಯೆಂದು ಹೈವೇ ದಾಟಿ, ಜುಂಯೆಂದು ಪ್ರಪಾತಕ್ಕಿಳಿದು, ಒಂದು ಗದ್ದೆ ಬಯಲು ಪಕ್ಕದಲ್ಲಿ ಒಂದು ಗುಡ್ಡೆ ಪ್ರದೇಶಕ್ಕೆ ಹೋಗಿ ನಿಲ್ಲಿಸಿದರು. ಇದು ನಮ್ಮ ಲೇಔಟ! ಬಯಲಿನ ಸೈಟುಗಳೆಲ್ಲ ಬಿಸಿಕೇಕಿನ ಹಾಗೆ ಮಾರಾಟ ಆಗಿಬಿಟ್ಟಿವೆ. ನಿಮಗೆ ಬೇಕಾದರೆ ಆಗೋ ಆ ಗುಡ್ಡದ ಮೇಲೆ ಕೊಡುವಾ ಎಂದರು. ಆಕಾಶದತ್ತ ಕೈತೋರಿಸಿದಂತೆ ಕಂಡಿತು. ಕತ್ತೆತ್ತಿ ನೋಡುತ್ತೇನೆ, ಕಡಿದಾದ ಗುಡ್ಡ ಒಂದು ಕಡೆ ಅಗೆದಾಗಿದೆ. ಇನ್ನೊಂದು ಕಡೆ ಬಿಳಿ ಸುಣ್ಣದಿಂದ ಗೆರೆ ಎಳೆದಿದ್ದಾರೆ. ರಸ್ತೆ, ಸೈಟು, ಚಿಕ್ಕದು, ದೊಡ್ಡದು, ಎಂದೆಲ್ಲ ತೋರಿಸಿದ. ಭೂಮಧ್ಯರೇಖೆ, ಸಮಭಾಜಕ ವೃತ್ತ, ಎಂದೆಲ್ಲ ಭೂಗೋಳದಲ್ಲಿ ಕಲಿಸಿದ್ದು ನೆನಪಾಯ್ತು.

ಆ ಗುಡ್ಡದ ಮೇಲೆ ಹೇಗೆ ಮನೆ ಕಟ್ಟೋದ್ರಿ ....ಎಂದು ಕೇಳಿಬಿಟ್ಟೆ. ವ್ಯವಹಾರ ಜ್ಞಾನವಿಲ್ಲದ ಕ್ರಿಮಿಯನ್ನು ನೋಡಿದಂತೆ ನನ್ನನ್ನು ನೋಡಿ ಸೊಟ್ಟದಾಗಿ ನಕ್ಕ 'ಭೂಮಾರಿ'

'ಅಯ್ಯೋ ಈಗ ಗುಡ್ಡದ ಹಾಗೆ ಕಾಣ್ತಿದೆ. ಪಕ್ಕದ ಗುಡ್ಡನೋಡಿ ಮೇಡಂ. ಅಂತಸ್ತು ಅಂತಸ್ತಾಗಿ ಕಟ್ ಮಾಡಿಕೊಡ್ತಾರೆ. ನಿಮ್ಮ ಅಂತಸ್ತು ಯಾವುದಾದೀತು' ಎಂದು ಕೇಳಿದ.

ತೀರಾ ನಮ್ಮ ಎದುರೇ ನಿಮ್ಮ ಅಂತಸ್ತು ಯಾವುದು? ಎಂದು ಕೇಳಿದರೆ ಏನೆಂದು ಉತ್ತರ ಕೊಡುವದು. ಪುನಃ ನಿರುತ್ತರೆಯಾದೆ.

ನನ್ನ ಅಂತಸ್ತಿಗೆ ಸರಿ ಹೊಂದುವ ಅಂತಸ್ತು - ಸೈಟೆಂಬ ಗೇಣಗಲದ ಭೂಮಿ ಅದೆಲ್ಲಿಯೋ ಯಾವ ಗುಡ್ಡದ ಮೇಲಿದೆಯೋ ಮಗ್ಗುಲಲ್ಲಿದೆಯೋ ಆ ಭೂಮಿತಾಯಿಗೇ ಗೊತ್ತು ಎನಿಸಿತು.

ನೀವು ಸಮುದ್ರದಲ್ಲೂ ಸೈಟು ಕೊಡಿಸುತ್ತೀರಿ? ಎಂದು ಕೇಳಿ ಬಿಟ್ಟೆ. ನನ್ನ ಪ್ರಶ್ನೆಯ ಒಳಗಿದ್ದ ಅಧಿಕ ಪ್ರಸಂಗವನ್ನು ಲೆಕ್ಕಿಸಿಯೂ ಲೆಕ್ಕಿಸದಂತೆ 'ಕೊಟ್ಟರೆ ಕೊಡಬಹುದು. ಮುರ್ಡೇಶ್ವರದಲ್ಲಿ ನೋಡಿಲ್ವಾ? ಸಮುದ್ರದ ಒಳಗೇ ಹೊಟೆಲ್ಲು. ಯಾರಿಗ್ಗೊತ್ತು. ಮುಂದೆ ಮನೆ ಕಟ್ಟೋರು ಸಮುದ್ರದ ಒಳಗೇ ವಾಸಿಸಲಿಕ್ಕೆ ಇಷ್ಟಪಟ್ಟರೆ ಅದೂ ಸಿಗಬಹುದು. ....' ಎಂದು ಹೇಳತೊಡಗಿದ.

ನನಗ್ಯಾಕೋ ಕಾಲ್ಪನಿಕ ಸೈಟುಗಳನ್ನು ಬುಕ್ಕು ಮಾಡೋದು, ವೆಬ್‌ಸೈಟ್ ಬುಕ್ ಮಾಡಿಟ್ಟಹಾಗೆ ಅರ್ಥವಾಗದ ವಿಷಯವಾಗಿ ತೋರತೊಡಗಿತು. ಮನಸ್ಸು ಮತ್ತೆ ಊರಿನತ್ತ, ಅಲ್ಲಿನ ಅಡಿಕೆ ಮರಗಳತ್ತ, ಬಾಳೆ ತೋಟಗಳತ್ತ, ವಾಲತೊಡಗಿತು. ಮತ್ತೆ ಭೆಟ್ಟಿ ಮಾಡ್ತೀನಿ ......ಎಂದು 'ಭೂಮಾರಿ' ಗೆ ಕೈ ಮುಗಿದು ಕಳಚಿಕೊಂಡೆ.


❖❖❖



ಎಲ್ರೂ ಕ್ರೆಡಿಟ್ ಕಾರ್ಡೋಂತ ಓಡಾಡಿದ್ರೆ ನಮ್ಗತಿ ಏನಪ್ಪೋ ?

ಕೆ. ಪುರಂದರನ ಸಾರಥಿ ಸಮಸ್ಯೆ

❖ ಶಿವು




ತನ್ನ ಮೊಮ್ಮಗು ಸುಧೀರನ ಹುಟ್ಟಿದ ಹಬ್ಬದ ಪಾರ್ಟಿಗೆ ಇಬ್ಬರೂ ಬಂದು ಮಗೂಗೆ ಆಶೀರ್ವಾದ ಮಾಡಿ ಹೋಗಿ ಅಂತ ನಮ್ಮ ಪಕ್ಕದ ಫ್ಲಾಟಿನ ಶೀಲು ಆಂಟಿ ಬಹಳ ಬಲವಂತಮಾಡಿದ್ರು.. ಮೊದಲು ಶರಲೇಖ 'ನನಗಾಗುಲ್ಲ, ನೀನೊಬ್ನೇ ಹೋಗಿ ಬಾ' ಅಂತ ತಪ್ಪಿಸಿಕೊಳ್ಳಲು ನೋಡಿದ್ದ. 'ಶೀಲು ಆಂಟಿ ಎರೆಯಪ್ಪ ಮಾಡ್ದಾಗ್ಲೆಲ್ಲಾ ಒಂದು ಸ್ಟೆಯಿನ್‌ಲೆಸ್ ಸ್ಟೀಲ್ ಡಬ್ಬೀಲಿ ನಮಗೆ ಅದನ್ನ ಕಳಿಸ್ತಾರೆ ಅನ್ನೋದನ್ನ ಮರೀಬೇಡ. ವೃಥಾ ಅವರೊಂದಿಗೆ ಮನಸ್ತಾಪ ಯಾಕೆ?' ಅಂತ ಅವನಿಗೆ ವಿವೇಕ ಹೇಳಿದ ಮೇಲೆ ಅವನೂ ನನ್ನ ಜೊತೆ ಬಂದ. ಬರೋದಕ್ಕೆ ಅಷ್ಟು ತಕರಾರು ಮಾಡಿದರೂ, ಪಾರ್ಟೀಲಿ ಮಾತ್ರ ಶರಲೇಖ ಸೂಪರ್ ಹಿಟ್. ಮಕ್ಕಳಿಗೆಲ್ಲಾ ಮ್ಯಾಜಿಕ್ ಟ್ರಿಕ್‌ಗಳನ್ನ ತೋರಿಸೋದ್ರಿಂದ ಹಿಡಿದು, ಟೆನ್ನಿಸ್ ಬಾಲ್‌ನ ಬಚ್ಚಿಟ್ಟು ಆಮೇಲೆ ಕ್ಲೂಗಳನ್ನ ಆಧರಿಸಿ ಅದನ್ನ ಹುಡುಕೋದನ್ನ ಹೇಳಿಕೊಡೋವರೆಗೂ ಚಿಣ್ಣರಿಗೆಲ್ಲಾ ಚೆನ್ನಾಗೇ ಮನರಂಜನೆ ಮಾಡ್ದ. ನಾವು ಪಾರ್ಟಿಲಿದ್ದಾಗಲೇ ಸರೋಜಮ್ಮ ಬಾಗಿಲ ಬಳಿ ಬಂದು ಶರಲೇಖನನ್ನ ಕರೆದರು. ನಿಮಗೆ ತಿಳಿದಿರೋ ಹಾಗೆ ಸರೋಜಮ್ಮ ನಮ್ಮ ಮನೆ ಅಡುಗೆಯಾಕೆ. ನಂಬಿಕಸ್ಥೆ. ಹಾಗಾಗಿ ದಿನಕ್ರಮೇಣ ಮನೆ ವಹಿವಾಟುಗಳನ್ನೆಲ್ಲಾ ಆಕೇನೇ ನೋಡಿಕೊಳ್ಳೋದು. ವಿಚಾರ ಏನೂ ಅಂತ ತಿಳಿಯೋಕ್ಕೆ ನಾನೂ ಬಾಗಿಲ ಬಳಿ ಹೋದೆ.

'ಯಾರೋ ನಿಮ್ಮನ್ನ ಹುಡೀಕ್ಕೊಂಡು ಬಂದಿದಾರೆ. ನೋಡುಕ್ಕೆ ನಾಟಕದೋರ ತರಹ ಕಾಣುತ್ತೆ. ಏನೋ ಅರ್ಜೆಂಟ್ ಇರಬೇಕು' ಅಂದರು ಸರೋಜಮ್ಮ.

'ಅರ್ಜೆಂಟ್ ಅಂತ ಹೇಗೆ ಹೇಳ್ತೀರಾ?' ಶರಲೇಖನಿಂದ ಇಂತಹ ಪಾಟೀಸವಾಲು ಸರೋಜಮ್ಮನವರಿಗೆ ಮಾಮೂಲು.

'ಯಾಕೇಂದ್ರೆ ಆತ ನಾಟಕದ ಡ್ರೆಸ್‌ನಲ್ಲೇ ಬಂದ್ಬಿಟ್ಟಿದ್ದಾರೆ. ಅರ್ಜೆಂಟ್ ಇಲ್ದೇ ಇದ್ರೆ ಬಟ್ಟೇನಾದ್ರೂ ಬದಲಾಯಿಸ್ಕೊಂಡು ಬಂದಿರೋರು'.

'ಪರವಾಗಿಲ್ಲಾ ಸರೋಜಮ್ಮಾ, ನೀವು ಖಂಡಿತ ಒಳ್ಳೇ ಪತ್ತೇದಾರಿಣಿ ಆಗೋ ಲಕ್ಷಣ



ತೋರಿಸ್ತಾ ಇದ್ದೀರ' ಎಂದ ಶರಲೇಖ. ಶೀಲಮ್ಮನವರ ಅಪ್ಪಣೆ ಪಡೆದು ನಾವಿಬ್ಬರೂ ನಮ್ಮ ಫ್ಲಾಟಿಗೆ ಹೋದೆವು.

ನಮ್ಮ ಗಿರಾಕಿ ಡೈನಿಂಗ್ ಹಾಲಿನಲ್ಲಿ ಸೋಫಾದ ಮೇಲೆ ಕುಳಿತಿದ್ದ. ಸರೋಜಮ್ಮ ನಿಜವನ್ನೇ ಹೇಳಿದ್ದರು. ಯಾವ್ದಾದರೂ ಪೌರಾಣಿಕ ನಾಟಕದಲ್ಲೋ ಸಿನಿಮಾದಲ್ಲೋ ಶ್ರೀಮನ್ಮಹಾವಿಷ್ಣುವಿನ ಪಾತ್ರಾನ ನೀವು ನೋಡಿರಬಹುದಲ್ವೇ. ಹಳದಿ ಬಣ್ಣದ ಜರತಾರಿ ಅಂಚಿನ ಪಂಚೆ, ಅದೇ ಬಣ್ಣದ ಉತ್ತರೀಯ, ಮಿರಮಿರನೆ ಹೊಳೆಯುತ್ತಿರುವ ಕಿರೀಟ, ತೋಳಿಗೆ ಭುಜಕೀರ್ತಿ. ಕೈಯ್ಯಲ್ಲಿ ಸಿಗರೇಟ್‌ಬೆಳ್ಳಿಯ ವಜ್ರಾಯುಧ ಇವನ್ನೆಲ್ಲಾ ಧರಿಸಿದ್ದ ಆ ಆಸಾಮಿಯ ಮುಖ ಮಾತ್ರಾ ಶಾಂತವಾಗಿ ಮೆಲುನಗೆಯಿಂದ ಕೂಡಿತ್ತು. ಶರಲೇಖನಿಗೆ ಇದು ಹೊಸದು. ಈ ವಿಚಿತ್ರ ವೇಷ ಭೂಷಣದ ಬಗ್ಗೆ ನಾನು ಹೇಳ್ತಾ ಇಲ್ಲ. ಸಾಮಾನ್ಯವಾಗಿ ಶರಲೇಖನನ್ನ ನೋಡಲು ಬರೋ ಗಿರಾಕಿಗಳೆಲ್ಲಾ ಆತಂಕದ ಮುಖ ಹೊತ್ಕೊಂಡು ಬಂದಿರ್ತಾರ್ಯೇ ಹೊರ್ತು ಈತನ ತರಹ ಶಾಂತ ಮುಖಮುದ್ರೆ, ಮೆಲುನಗೆ ಖಂಡಿತ ಹೊಂದಿರೋದಿಲ್ಲ. ಅವನ ನಗುಮುಖ ನೋಡಿ ಶರಲೇಖನಿಗೆ ಸ್ವಲ್ಪ ರೇಗಿತೇನೋ ಅನ್ನಿಸಿತು.

'ನಾನು ಶರಲೇಖ. ಖ್ಯಾತ ಪತ್ತೇದಾರ ಅಲ್ಲದಿದ್ದರೂ, ಜೀವನೋಪಾಯಕ್ಕಾಗಿ ಏನೋ ಒಂದಿಷ್ಟು ಕೆಲಸ ಹಚ್ಚಿಕೊಂಡಿದ್ದೇನೆ. ನಿಮಗೆ ಏನಾದರೂ ಸಮಸ್ಯೆಯಿದ್ದರೆ ಸಹಾಯ ನೀಡುವುದು ನನ್ನ ಕರ್ತವ್ಯ. ಆದರೆ ನಿಮ್ಮ ಮುಖಚರ್ಯೆ ನೋಡಿದರೆ ನಿಮಗೇನೂ ತೊಂದರೆ ಇರೋ ಹಾಗೆ ಕಾಣೋದಿಲ್ಲ. ತೊಂದರೆ ಇರ್ದೇ ಇರೋರ ಹತ್ರ ಹರಟೋದಕ್ಕೆ, ಕ್ಷಮ್ಸಿ, ನನಗೆ ವ್ಯವಧಾನ ಇಲ್ಲ.' ಅಂತ ಸ್ವಲ್ಪ ಖಾರವಾಗಿಯೇ ಹೇಳಿದ.

ಬಂದ ಆಗಂತುಕ ಇದರಿಂದ ವಿಚಲಿತನಾಗಲಿಲ್ಲ. 'ನೀವು ಖ್ಯಾತ ಪತ್ತೇದಾರರು ಎನ್ನುವುದು ಜಗತ್ತಿಗೇ ತಿಳಿದಿದೆ. ಸಮಸ್ಯೆ ಇರುವುದರಿಂದಲೇ ನಿಮ್ಮ ನೆರವನ್ನು ಬೇಡಿ ಬಂದಿದ್ದೇನೆ. ಸಮಸ್ಯೆಯನ್ನು ಬಾಯಲ್ಲಿ ಹೇಳಿದರೆ ಸಾಲದೇ. ಮುಖದಲ್ಲೂ ಅದನ್ನ ತೋರಿಸಬೇಕೇಕೆ?'

ಹೊಗಳಿಕೆ ಒಂದು ಬಲವಾದ ಅಸ್ತ್ರ. ಶರಲೇಖ ಪ್ರಸನ್ನನಾದ.

'ಆಯಿತು. ಮೊದಲಿಗೆ ನಿಮ್ಮ ಹೆಸರು.?'

'ಪುರಂದರ'

'ಇನಿಷಿಯಲ್ಸ್?'

'ಇನಿಷಿಯಲ್ಸ್? ಅರ್ಥವಾಗಲಿಲ್ಲ.'

'ಹಾಗೆಂದರೆ ನಿಮ್ಮ ತಂದೆಯ ಹೆಸರಿನ ಮೊದಲಕ್ಷರ, ಅಥವಾ ನಿಮ್ಮ ಊರಿನ ಹೆಸರಿನ ಮೊದಲಕ್ಷರ'

'ಹಾಗಾದರೆ ಕೆ. ಅಂತ ಬರೆದುಕೊಳ್ಳಿ.. ನಮ್ಮ ತಂದೆ ಕಾಶ್ಯಪ ಮುನಿ'

ಶರಲೇಖ ನನ್ನ ಮುಖ ನೋಡಿದ. 'ಇದು ನಿನ್ನ ಗಿರಾಕಿ ಇರಬಹುದೇ?' ಎನ್ನುವಹಾಗಿತ್ತು ಅವನ ಪ್ರಶ್ನಾರ್ಥಕ ದೃಷ್ಟಿ

ಪ್ರಶ್ನೆ ಮುಂದುವರಿಯಿತು

'ಊರು?'

'ಇಂದ್ರಲೋಕ'

'ಓಹೋ, ಇಂದ್ರಲೋಕ, ನಿಮ್ಮ ರಾಜ ದೇವೇಂದ್ರ ಕ್ಷೇಮವಾಗಿದ್ದಾರೆ ತಾನೆ?' ಪ್ರಶ್ನೆಯ ವ್ಯಂಗ್ಯ ಆಗಂತುಕನನ್ನು ತಾಗಿದಂತೆ ಕಾಣಲಿಲ್ಲ.

'ನಾನೇ ದೇವೇಂದ್ರ'

'ಮತ್ತೆ ಈಗತಾನೇ ಪುರಂದರ ಅಂತ ಹೇಳಿದ್ರಿ'

'ಇಂದ್ರ, ದೇವೇಂದ್ರ ಅನ್ನೋದೆಲ್ಲಾ ಆ ಅಧಿಕಾರದ ಹೆಸರು. ನೀವು ಮುಖ್ಯಮಂತ್ರಿ, ಪ್ರಧಾನಿ ಅನ್ನೋಲ್ಲವೇ, ಹಾಗೆ. ನನ್ನ ಹೆಸರು ಪುರಂದರ, ಕಾಶ್ಯಪ ಮುನಿ ನನ್ನ ತಂದೆ, ಅದಿತಿ ದೇವಿ ನನ್ನ ತಾಯಿ. ನನ್ನ ಪತ್ನಿ ಶಚೀದೇವಿ. ಈಗ ನನ್ನ ಸಮಸ್ಯೆ ಬಗ್ಗೆ ಪ್ರಸ್ತಾಪಿಸಬಹುದೇ?'

ನನಗೆ ಶರಲೇಖನ ಬಗ್ಗೆ ಯಾವಾಗಲೂ ಮೆಚ್ಚುಗೆ ಏಕೆಂದರೆ, ಆತ ಯಾವುದೇ ಪರಿಸ್ಥಿತಿಯಲ್ಲೂ ತನ್ನ ಫೋಕಸ್ ತಪ್ಪೋದಿಲ್ಲ. ಆಗಂತುಕನ ಈ ಮಾತುಗಳನ್ನು ಕೇಳಿ ಶರಲೇಖ ನೇರವಾಗಿ ಮುಂಬಾಗಿಲಿಗೆ ಹೋಗಿ ಬಾಗಿಲನ್ನು ಮುಚ್ಚಿ ಬೀಗ ಹಾಕಿದ. ಆಮೇಲೆ ಆಗಂತುಕನನ್ನು ಕುರಿತು,

'ನಿಮ್ಮ ಸಮಸ್ಯೆ ಬಗ್ಗೆ ನಾನು ಕೇಳಿಸಿಕೊಳ್ಳುವುದಕ್ಕೆ ಮುಂಚೆ ನೀವು ಯಾರು ಅನ್ನೋದು ನನಗೆ ಖಾತರಿ ಆಗಬೇಕು. ನೀವು ದೇವಲೋಕದಿಂದ ಬಂದ ದೇವತೆಯೇ ಆಗಿದ್ದರೆ ನೀವು

ಕೂತಿರೋ ಸೋಫಾದಿಂದ ಅಂತರ್ಧಾನರಾಗಿ ಬಾಗಿಲಿನ ಹೊರಗೆ ಮತ್ತೆ ಪ್ರತ್ಯಕ್ಷರಾಗಿ ಕರೆಗಂಟೆ ಒತ್ತಿ. ಹಾಗೆ ಮಾಡಲು ನಿಮಗೆ ಸಾಧ್ಯವಾದರೆ ನನ್ನ ಕೈಲಾದಷ್ಟು ಮಟ್ಟಿಗೆ ನಿಮ್ಮ ನೆರವಿಗೆ ಬರುತ್ತೇನೆ. ಹಾಗಾಗದಿದ್ದರೆ, ನಿಮ್ಮನ್ನು ಯಾವುದಾದರೂ ಮನೋವೈದ್ಯರ...............'

ಶರಲೇಖ ತನ್ನ ಮಾತನ್ನು ಮುಗಿಸುವುದಕ್ಕೆ ಮುಂಚೆಯೇ ಆಗಂತುಕ ಮಾಯವಾಗಿದ್ದ, ಬಾಗಿಲ ಕರೆಗಂಟೆ ಮತ್ತೆ ಕಿಚುಗುಟ್ಟಿತು. ನಾನೇ ಹೋಗಿ ಬಾಗಿಲು ತೆಗೆದೆ. ಹೊರಗೆ ನಿಂತಿದ್ದ ಇಂದ್ರದೇವನನ್ನು ಒಳಕ್ಕೆ ಕರೆದು ಪುನಃ ಅದೇ ಸೋಫಾದಮೇಲೆ ಆತನನ್ನ ಪ್ರತಿಷ್ಠಾಪಿಸಿದೆವು. ಅಡಿಗೆ ಮನೆಯಲ್ಲಿ ಇಲ್ಲಿನ ಮಾತುಕತೆಗಳಮೇಲೆ ಒಂದು ಕಿವಿ ಇಟ್ಟಿದ್ದ ಸರೋಜಮ್ಮ ಒಂದು ತಟ್ಟೆಯಲ್ಲಿ ಹಣ್ಣುಕಾಯಿ ಊದುಬತ್ತಿ ಕರ್ಪೂರ ಎಲ್ಲವನ್ನೂ ಇಟ್ಟುಕೊಂಡು ಡೈನಿಂಗ್‌ಹಾಲಿಗೆ ಬಂದರು. ಶರಲೇಖ, 'ಸರೋಜಮ್ಮ, ವಿಷಯ ತುಂಬಾ ಗಹನ, ಡಿಸ್ಟರ್ಬ್‌ಮಾಡಬೇಡಿ' ಅಂತ ಹೇಳಿದ ನಂತರವೇ ಆಕೆ ಮನಸ್ಸಿಲ್ಲದ ಮನಸ್ಸಿನಿಂದ ಒಳಕ್ಕೆ ಹೋದರು.

ಇಂದ್ರದೇವ ತಾನು ಬಂದ ಕಾರಣವನ್ನು ತಿಳಿಸಲು ಮುಂದಾದ.

'ಸಂಕ್ಷಿಪ್ತವಾಗಿ ಹೇಳಿಬಿಡ್ತೇನೆ. ಭೂಲೋಕದ ತರಹಾನೇ ಇಂದ್ರಲೋಕ ಸಹಾ ಸತತವಾಗಿ ಬದಲಾಗ್ತಾ ಇದೆ. ಈಚೆಗೆ ಅಲ್ಲಿ ರಾಕ್ಷಸರ ಹಾವಳಿ ಹೆಚ್ಚಾಗಿದೆ. ಮುಖ್ಯವಾಗಿ ತಮಗೇ ಒಂದು ಪ್ರಾಂತ ಬೇಕೆಂದು ಈ ಆತಂಕವಾದಿಗಳ ವಾದ. ಮೊನ್ನೆ ರಾಕ್ಷಸಲೋಕದಿಂದ ಗುಪ್ತವಾಗಿ ಆಯುಧಗಳನ್ನು ತರಿಸಿಕೊಂಡು ನಮ್ಮಲ್ಲಿ ಗಲಭೆ ಎಬ್ಬಿಸಲು ಈ ಉಗ್ರವಾದಿಗಳು ಸಂಚು ಹೂಡಿದ್ದರು. ನಮ್ಮ ಗುಪ್ತಚಾರದಳದ ಮುಖ್ಯಸ್ಥ ಚಿತ್ರಸೇನ ಇದನ್ನು ಪತ್ತೆ ಹಚ್ಚಿ ಈ ಕಾರ್ಯದಲ್ಲಿ ನಿರತರಾಗಿದ್ದವರನ್ನು ಬಂಧಿಸಲು ಮುಂದಾದ. ನನ್ನ ಸಾರಥಿ ಮಾತಲಿಯೂ ತನ್ನ ಮನೆಯಲ್ಲಿ ಆಯುಧಗಳನ್ನು ಸಂಗ್ರಹಿಸಿ ಇಟ್ಟಿದ್ದ ಎಂಬ ಮಾಹಿತಿ ಬಂದ ತಕ್ಷಣ ಅವನನ್ನೂ ಬಂಧಿಸಲು ಆಜ್ಞೆ ಮಾಡಿದೆ. ಆದರೆ ಹೇಗೋ ಇದರ ಸುಳಿವು ಸಿಕ್ಕಿ ಅವನು ಭೂಲೋಕಕ್ಕೆ ಮನುಷ್ಯಾವತಾರದಲ್ಲಿ ತಪ್ಪಿಸಿಕೊಂಡು ಬಂದು ತಲೆ ಮರೆಸಿಕೊಂಡಿದ್ದಾನೆ. ಇಲ್ಲಿ ಅವನನ್ನ ಪತ್ತೆ ಹಚ್ಚಬೇಕಾದರೆ ನೀವೇ ಸೂಕ್ತವ್ಯಕ್ತಿ ಅಂತ ಚಿತ್ರಸೇನ ಹೇಳಿದಮೇಲೆ ನಾನೇ ನಿಮ್ಮನ್ನು ನೋಡಲು ಬಂದೆ. ಅವನನ್ನ ಹುಡುಕಿಕೊಡ್ತೀರಾ?'

ಒಂದೆರಡು ನಿಮಿಷ ಶರಲೇಖ ಏನೂ ಮಾತನಾಡಲಿಲ್ಲ. ಅನಂತರ, 'ಆಯಿತು, ಪ್ರಯತ್ನಿಸುತ್ತೇನೆ. ಆದರೆ ಹಿಡಿಯಲು ಹೋದಾಗ ಅವನು ತನ್ನ ದೈವೀಶಕ್ತಿಯಿಂದ ಅಂತರ್ಧಾನನಾದರೆ....'

'ಇಲ್ಲ, ಮನುಷ್ಯಾವತಾರ ತಾಳಿರುವಾಗ ಈ ಶಕ್ತಿಗಳ ಬಳಕೆ ಅಸಾಧ್ಯ. ಇಗೋ ಇಲ್ಲಿ ಆತನ ಸಮಸ್ತ ಮಾಹಿತಿ ಇದೆ. ನನ್ನ ಈ ದೇವದಂಡವನ್ನ ಈ ಬಡುವಿನ ಮೇಲೆ ಇಟ್ಟಿರುತ್ತೇನೆ ಅವನನ್ನು ಬಂಧಿಸಿ ಇಲ್ಲಿಗೆ ಕರೆತಂದಾಗ ಈ ದೇವದಂಡದ ಮೂಲಕ ಆ ಸುದ್ದಿ ನನಗೆ ಮುಟ್ಟಿ ಒಡನೆಯೇ ನಾನಿಲ್ಲಿಗೆ ಬರುವೆ. ನಾನಿನ್ನು ಬರಲೇ'.

'ಒಂದ್ನಿಮಿಷ, ಸರೋಜಮ್ಮಾ, ಈಗ ನೀವು ಬರಬಹುದು' ಎಂದ ಶರಲೇಖ. ಆಕೆ ನೀಡಿದ ನೈವೇದ್ಯ ಸ್ವೀಕರಿಸಿ, ಇಂದ್ರದೇವ ಅದೃಶ್ಯನಾದ.

ನಮ್ಮೆಲ್ಲರಿಗೂ ಒಂದು ಬಿರುಗಾಳಿ ಬೀಸಿಹೋದ ಅನುಭವ. ಇದೆಲ್ಲಾ ಒಂದು ಕನಸೋ ಅಂತ ಸಂಶಯ ಬಂದರೂ, ಮ್ಯಾಂಟಲ್‌ಪೀಸ್ ಮೇಲಿದ್ದ ಆ ನುಣುಪಾದ ಕೋಲು ಆಗಿದ್ದಲ್ಲಾ ನನಸು ಎಂದು ಧೃಡಪಡಿಸುತ್ತಿತ್ತು. ಈ ಷಾಕ್‌ನಿಂದ ಮೊದಲು ಚೇತರಿಸಿಕೊಂಡವನು ಶರಲೇಖ.

'ಹೀಗೆ ಸುಮ್ಮನೆ ಕೂತರೆ ಕೂತೇ ಇರಬೇಕು. ಕೆಲಸದಲ್ಲಿ ತೊಡಗೋಣ' ಎನ್ನುತ್ತಾ ಶರಲೇಖ ಎದ್ದು ಹೊರಗೆ ಹೊರಟ. ಹೋಗುಕ್ಕೆ ಮುಂಚೆ ಆ ಕೋಲಿನತ್ತ ಒಮ್ಮೆ ದೃಷ್ಟಿ ಹಾಯಿಸಿದ್ದನ್ನು ನಾನು ಗಮನಿಸಿದೆ.

ಶರಲೇಖ ಒಮ್ಮೆ ತನ್ನ ಪತ್ತೇದಾರಿಕೆಯಲ್ಲಿ ಮುಳುಗಿದರೆ, ಅವನಿಗೆ ಹೊತ್ತು ಗೊತ್ತುಗಳ ಪರಿವೆಯೇ ಇರುವುದಿಲ್ಲ. ಮುಂದಿನ ಎರಡು ದಿನಗಳು ನನಗೆ ಅವನ ಭೇಟಿಯೇ ಆಗಲಿಲ್ಲ. ದೇವಲೋಕದಲ್ಲೂ ಟೆರರಿಸಂ ಎಂಬ ಸತ್ಯ ನನ್ನನ್ನು ಕಂಗಾಲಾಗಿಸಿತ್ತು. ಸರೋಜಮ್ಮ ದಿನಾ ಬೆಳಗ್ಗೆ ಆ ದೇವದಂಡಕ್ಕೆ ಪೂಜೆ ಸಲ್ಲಿಸುತ್ತಿದ್ದರು. ಎರಡನೆಯ ಸಂಜೆ ಸುಮಾರು ಎಂಟು ಘಂಟೆಯ ಹೊತ್ತಿಗೆ ಶರಲೇಖ ಅವಸರದಲ್ಲಿ ಬಂದು,

'ಇನ್ಸ್‌ಪೆಕ್ಟರ್ ಉಳ್ಳಾಗಡ್ಡಿ ಫೋನ್ ಮಾಡಿದ್ದ. ನಾವು ಅರ್ಜೆಂಟಾಗಿ ಮಲ್ಲೇಶ್ವರದ ಹದಿನೆಂಟನೇ ಕ್ರಾಸಿಗೆ ಹೋಗಬೇಕು. ಅವನು ಕಾಯ್ತಾ ಇರ್ತಾನೆ.' ಎಂದು ಹೇಳಿದ. ನಾನೂ ಏನಾದರೂ ಪ್ರಗತಿಗೋಸ್ಕರ ಕಾಯ್ತಾನೇ ಇದ್ದೆ. ಹಾಗಾಗಿ ಅವನೊಂದಿಗೆ ಉತ್ಸಾಹದಿಂದಲೇ ಓಡಿದೆ.

ಹದಿನೆಂಟನೆಯ ಕ್ರಾಸ್, ಮಾರ್ಗೋಸಾ ರಸ್ತೆಯ ಮೂಲೆಯಲ್ಲಿ, ಉಳ್ಳಾಗಡ್ಡಿ ಮಫ್ತಿಯಲ್ಲಿ ನಿಂತಿದ್ದ. ನಾವು ಅಲ್ಲಿಗೆ ಹೋದ ತಕ್ಷಣ

'ಅಲ್ಲಿ ಆಟೋ ಸ್ಟಾಂಡ್ ಇದೆಯಲ್ಲಾ ಅಲ್ಲಿ ನಿಂತಿರೋ ಮೂರನೇ ಆಟೋ ಕಡೆ ಮೆಲ್ಲಗೆ ನೋಡಿ.. ಅದರ ಚಾಲಕನೇ ನಮಗೆ ಬೇಕಾಗಿರೋ ಆಸಾಮಿ. ಶರಲೇಖ ನೀನು ಮುಂದಿನಿಂದ ಹೋಗಿ ಬ್ಲಾಕ್ ಮಾಡು, ನಾನೂ ವತ್ಸನ ಪಕ್ಕದಿಂದ ಅಟಾಕ್ ಮಾಡ್ತೇವೆ. ಈ ಅನಿರೀಕ್ಷಿತ ಧಾಳಿಗೆ ಪ್ರಾಣಿ ಸಿಕ್ಕಿಬೀಳೋದು ಖಂಡಿತ.' ಎಂದು ಪಿಸುಗುಟ್ಟಿದ. ಆ ಟ್ರಾಫಿಕ್ ಗಲಾಟೇಲಿ ಪಿಸುಗುಟ್ಟೋ ಅಗತ್ಯವಾದರೂ ಏನು? ಅಂತ ಅನ್ನಿಸಿದರೂ ಪೋಲೀಸಿನೋರಿಗೆ ತಮ್ಮ ಕೆಲಸ ಗೊತ್ತಿರಲ್ವೇ ಅಂದುಕೊಂಡು ಸುಮ್ಮನಾದೆ. ಮುಂದಾಗಿದ್ದು ನೋಡಿದರೆ, ಉಳ್ಳಾಗಡ್ಡಿಗೆ ತನ್ನ ಕೆಲಸ ಏನೇನೂ ಗೊತ್ತಿರಲಿಲ್ಲ ಎಂಬುದು ಮಂದಟ್ಟಾಯಿತು. ನಾವು ಮೂರನೇ ಆಟೋ ಹತ್ರ ಹೋಗ್ತಾ ಇದ್ದಹಾಗೆ, ಮಿಕ್ಕ ಆಟೋಗಳ ಡ್ರೈವರ್‌ಗಳು ನಮ್ಮನ್ನ ಸುತ್ತುವರಿದು, 'ಎಲ್ಲಿಗೆ? ಎಲ್ಲಿಗೆ?' ಅಂತ ಅಪಶಕುನ ನುಡಿಯಲು ಪ್ರಾರಂಭಿಸಿದರು. ಈ ಡ್ರೈವರುಗಳ ಗೊಂಚಲಿನಿಂದ ಬಿಡಿಸಿಕೊಳ್ಳುವುದರೊಳಗೆ ಆ ಮೂರನೆಯ ಆಟೋ ಡ್ರೈವರ್‌ಗೆ ಸುಳಿವು ಸಿಕ್ಕಿ, ಅವ ತನ್ನ ಆಟೋನ ಸ್ಟಾರ್ಟ್ ಮಾಡಿ ಭರ್ರನೆ ಅಲ್ಲಿಂದ ಮಾರ್ಗೋಸಾ ರಸ್ತೆಗೆ ತಿರುಗಿ ಪರಾರಿಯಾದ. ಉಳ್ಳಾಗಡ್ಡಿಗೆ ಇದೆಲ್ಲಾ ಮಾಮೂಲು ಅಂತ ಕಾಣುತ್ತೆ. ಸ್ವಲ್ಪವೂ ಗಾಬರಿಯಾಗದೇ, ತನ್ನ ರೇಡಿಯೋ ಫೋನಿನಲ್ಲಿ ಏನೋ ಮಾತಾಡಿದ. ಅನಂತರ,

'ಮಲ್ಲೇಶ್ವರದಲ್ಲಿ ಎಲ್ಲ ಕಡೆ ನಮ್ಮ ಜನರನ್ನ ನಿಲ್ಲಿಸಿದ್ದೇನೆ. ಅವರಿಗೆ ಆಟೋ ನಂಬರ್ ಕೊಟ್ಟಾಗಿದೆ.' ಅನ್ನುವಷ್ಟರಲ್ಲಿ ಅವನ ಫೋನ್ ರಿಂಗಾಯಿತು. ಅವನು ಫೋನಿನಲ್ಲಿ ಮಾತು ಕೇಳಿಸಿಕೊಳ್ಳುತ್ತಾ ನಮಗೆ ವೀಕ್ಷಕ ವಿವರಣೆ ಕೊಡಲು ಪ್ರಾರಂಭಿಸಿದ. 'ಈಗ ಅವನು ನಮ್ಮ ಪೋಲೀಸ್ ಠಾಣೆ ಪತ್ರ ಇದಾನೆ. ಓಹೋ, ಅಲ್ಲಿ ನಮ್ಮ ಪ್ಯಾದೆನ ನೋಡಿ, ನಾಲ್ಕನೇ ಮೇನ್ ಕಡೆ ತಿರುಗಿಸಿ ಬಿಟ್ಟ, ಎಂಟನೇ ಕ್ರಾಸಿನಲ್ಲಿ ಎಡಕ್ಕೆ, ಈಗ ಮಲ್ಲೇಶ್ವರಂ ರೇಲ್ವೇ ನಿಲ್ದಾಣದ ಮುಂದೆ. ಅಲ್ಲಿಂದ ನೇರವಾಗಿ ಹನ್ನೊಂದನೇ ಮೇನ್ ನಲ್ಲಿ ವೇಗವಾಗಿ ಹೊರಟಿದ್ದಾನಂತೆ.' ಎಂದು ಹೇಳಿ, ಫೋನ್‌ನ ಸ್ವಿಚ್‌ಆಫ್ ಮಾಡಿ ನಮ್ಮ ಕಡೆ ಒಂದು ಮಂದಹಾಸ ಬೀರಿದ.

'ಏನು? ನಗು ಏತಕ್ಕೆ?' ಎಂಬ ಶರಲೇಖನ ಪ್ರಶ್ನೆಗೆ, ಉಳ್ಳಾಗಡ್ಡಿ ನೇರ ಉತ್ತರ ಕೊಡಲಿಲ್ಲ.. 'ಬನ್ನಿ ಜೀಪು ಹತ್ತಿ ಅಲ್ಲೇ ತಿಳಿಯುತ್ತೆ' ಎಂದು ಹೇಳಿ ಜೀಪು ಸ್ಟಾರ್ಟ್‌ಮಾಡಿದ. ನಾವೂ ಅದರಲ್ಲಿ ಕುಳಿತೆವು. ಹನ್ನೊಂದನೇ ಮೇನ್‌ನಲ್ಲಿ, ಕಾನ್ವೆಂಟ್ ಮುಂದುಗಡೆ ಒಂದು ಆಟೋ ಪಲ್ಟಿ ಹೊಡೆದು ಬಿದ್ದಿತ್ತು. ಚಾಲಕನಿಗೆ ಅದೃಷ್ಟವಶಾತ್ ಏನೂ ಜಖಂ ಆಗಿರಲಿಲ್ಲ. ಪಕ್ಕದಲ್ಲಿ ಇಬ್ಬರು ಪೇದೆಗಳು ಅವನನ್ನು ಕಾಯುತ್ತಿದ್ದರು.

'ಅವನು ಹನ್ನೊಂದನೇ ಮೇನ್ ನಲ್ಲಿ ವೇಗವಾಗಿ ಹೊರಟ ಅಂತ ಕೇಳಿದಾಗಲೇ, ನಾನು ಆ ಅಂತ್ಯವನ್ನ ಊಹಿಸಿದೆ. ಈ ಕಾನ್ವೆಂಟ್ ಗೇಟ್ ಮುಂದೆ ಸ್ವಾತಂತ್ರ್ಯ ಪೂರ್ವದಲ್ಲಿ ಉದ್ಭವಿಸಿ, ಅನೂಚಾನವಾಗಿ ಬೆಳೆದು ಬಂದ ಈ ಬೃಹತ್ ಪಾಟ್ ಹೋಲ್, ಒಂದು ದಿನ ಗಿನ್ನಿಸ್ ಸೇರಿದರೂ ಆಶ್ಚರ್ಯವಿಲ್ಲ. ಅದರ ಮೇಲೆ ಅಷ್ಟುವೇಗದಲ್ಲಿ ತ್ರಿಚಕ್ರವಾಹನ ಓಡಿಸಿದರೆ ಪಲ್ಟಿ ಹೊಡೆಯದೇ ಇನ್ನೇನಾದೀತು. ಬನ್ನಿ, ನಿಮ್ಮ ಗಿರಾಕಿಯನ್ನ ವಿಚಾರಿಸಿಕೊಳ್ಳೋಣ.'

ಚಾಲಕನನ್ನೂ ಜೀಪಿನಲ್ಲಿ ಕೂರಿಸಿಕೊಂಡು ಮಲ್ಲೇಶ್ವರದ ಪೋಲೀಸ್ ಠಾಣೆಗೆ ಹೋದೆವು. ಮೊದಲು ಉಳ್ಳಾಗಡ್ಡಿ ಆ ಚಾಲಕನನ್ನ ಪ್ರಶ್ನಿಸಲು ಶುರುಮಾಡಿದ.

'ಏನು ನಿನ್ನ ಹೆಸರು?'

'ಮುತ್ಯಾಲಪ್ಪ'

'ಪೇಪರ್ಸ್ ಎಲ್ಲಿ?'

'ಇಗೋ, ಇಲ್ಲಿವೆ'

ಉಳ್ಳಾಗಡ್ಡಿ ಎಲ್ಲ ದಾಖಲೆಗಳನ್ನೂ ಪರಿಶೀಲಿಸಿದರು. ಎಲ್ಲ ಸರಿಯಾಗಿತ್ತು ಅಂತ ಕಾಣುತ್ತೆ.

'ಮತ್ತೆ ಯಾಕೆ ನೀನು ನಮ್ಮನ್ನ ಕಂಡ ತಕ್ಷಣ ಹಾಗೆ ಭರ್‍ರಂತ ಆಟೋ ಓಡಿಸಿಕೊಂಡು ಹೊರಟು ಹೋದೆ?'

'ನಿಮ್ಮ ಪಕ್ಕ ಇದಾರಲ್ಲಾ ಉದ್ದಕ್ಕೆ ತೆಳ್ಳಗಿರೋರು, ಅವರು ಟೆರರಿಸ್ಟ್ ತರಹ ಕಾಣಿಸಿದ್ರು. ಅವ್ರಿಂದ ತಪ್ಪಿಸಿಕೊಳ್ಳೋಣ ಅಂತ.....'

ಶರಲೇಖನಿಗೆ ಇನ್ನೊಂದು ಬಿರುದು ಅಂದುಕೊಂಡೆ. ಈಗ ಒಮ್ಮೆಲೇ ಶರಲೇಖ ಪ್ರಶ್ನೆ ಕೇಳಲು ಶುರು ಹಚ್ಚಿದ.

'ಮುತ್ಯಾಲಪ್ಪ ಸ್ವಲ್ಪ ಕಣ್ಣು ಮಿಟುಕಿಸ್ತೀರಾ?'

ಅವನಿಗೆ ಅರ್ಥವಾಗಲಿಲ್ಲವೆಂದು ಕಾಣುತ್ತೆ. ಸುಮ್ಮನೆ ಬಿಟ್ಟಕಣ್ಣು ಬಿಟ್ಟುಕೊಂಡು ಕೂತಿದ್ದ.

'ನಿಮಗೇ ಹೇಳಿದ್ದು. ಕಣ್ಣಿನ ರೆಪ್ಪೇನ ಸ್ವಲ್ಪ ಮುಚ್ಚಿ ತೆಗೀರಿ'

ಮುತ್ಯಾಲಪ್ಪನ ಮುಖದಲ್ಲಿ ಗಾಬರಿ ಕಾಣಿಸಿತು.

' ನನಗೆ ರೆಪ್ಪೆ ಮುಚ್ಚೋದಕ್ಕೆ ಆಗೋದಿಲ್ಲ. ಅದೊಂದು ತರಹ ಖಾಯಿಲೆ.'

'ಆದ್ರೆ ಆ ಖಾಯಿಲೆ ಇದ್ದೋರು ಡ್ರೈವಿಂಗ್ ಟೆಸ್ಟ್ ಪಾಸಾಗುಲ್ವಲ್ಲಾ . ನಿನಗೆ ಖಂಡಿತವಾಗಿ ಖಾಯಿಲೆ ಇಲ್ಲ ಮಾತಲಿ'

ಶರಲೇಖನ ಮಾತು ಕೇಳಿ ಚಾಲಕನ ಮುಖ ಬಿಳಿಚಿಕೊಂಡಿತು.

'ಉಳ್ಳಾಗಡ್ಡಿ, ಈತ ದೇವಲೋಕದೋನು. ಅಲ್ಲಿನೋರಿಗೆ ಕಣ್ಣಿನ ರೆಪ್ಪೆ ಮುಚ್ಚಲು ಆಗದು.' ಶರಲೇಖ ವಿವರಣೆ ನೀಡಿದ.

'ತಪ್ಪಾಯಿತು. ನನ್ನನ್ನ ಬಿಟ್ಟುಬಿಡಿ' ಮಾತಲಿ ಅಂಗಲಾಚಿದ.

'ಅದನ್ನೆಲ್ಲಾ ನಿಮ್ಮ ಯಜಮಾನರ ಹತ್ರ ಹೇಳ್ಕೊ. ಉಳ್ಳಾಗಡ್ಡಿ, ನಿಮ್ಮ ಜೀಪಿನಲ್ಲಿ ನಮ್ಮನ್ನೆಲ್ಲಾ ನಮ್ಮ ಫ್ಲಾಟಿಗೆ ತಲುಪಿಸಿಬಿಟ್ರೆ ತುಂಬಾ ಆಭಾರಿ' ಎಂದ ಶರಲೇಖ. ಜೀಪಿನಲ್ಲಿ ಹೋಗಿ ಮನೆ ಸೇರಿ, ಹಾಲಿನಲ್ಲಿ ಕುಳಿತುಕೊಳ್ಳುಕ್ಕಿಲ್ಲ, ಇಂದ್ರದೇವ ಪ್ರತ್ಯಕ್ಷನಾದ.

ಮಾತಲಿ ಇಂದ್ರದೇವರ ನಡುವಣ ಸಂಭಾಷಣೆ ದೇವಭಾಷೆಯಲ್ಲಿ ನಡೆದದ್ದರಿಂದ ಅದರ ವರದಿ ಇಲ್ಲಿ ನೀಡಲಾರೆ. ಒಟ್ಟಿನಲ್ಲಿ ಮಾತಲಿ ಇಂದ್ರನೊಡನೆ ಪುನಃ ದೇವಲೋಕಕ್ಕೆ ತೆರಳಲು ಒಪ್ಪಿದ್ದು ಇಂದ್ರದೇವನ ಮುಂದಿನ ಮಾತಿನಿಂದ ತಿಳಿಯಿತು.

'ಶರಲೇಖ ಅವರೇ, ನಿಮ್ಮ ಸಹಾಯಕ್ಕೆ ತುಂಬಾ ವಂದನೆಗಳು. ಮಾತಲಿಯೊಡನೆ ನಾನು ಹಿಂತಿರುಗುವ ಮೊದಲು ನನ್ನದೊಂದು ಪ್ರಶ್ನೆ. ಅರ್ಧಕೋಟಿಗೂ ಹೆಚ್ಚು ಜನಸಂಖ್ಯೆ ಇರುವ ಈ ಬೃಹತ್‌ನಗರಿಯಲ್ಲಿ ಈ ಮಾತಲಿಯನ್ನ ಹೇಗೆ ಹುಡುಕಿದಿರಿ ಸ್ವಲ್ಪ ತಿಳಿಸ್ತೀರಾ?'

ಶರಲೇಖನಿಗೆ ತನ್ನ ಕಸುಬುಗಾರಿಕೆಯ ಬಗ್ಗೆ ಸಹಜವಾಗಿಯೇ ಹೆಮ್ಮೆ. ಹಾಗಾಗಿ, ಯಾರಾದರೂ ಅವನ ಪತ್ತೇದಾರಿ ವಿಧಾನಗಳ ಬಗ್ಗೆ ಕೇಳಿದರೆ ಅವನಿಗೆ ಎಲ್ಲಿಲ್ಲದ ಉತ್ಸಾಹ.


'ಮೊನ್ನೆ ಸಂಜೆ ನೀವು ಅದೃಶ್ಯರಾಗಿ ಹೋದ ಮೇಲೆ ನೇರವಾಗಿ ಲಾಲ್‌ಬಾಗ್‌ಗೆ ಹೋಗಿ ಕಲ್ಲುಬೆಂಚೊಂದರ ಮೇಲೆ ಕುಳಿತು ಯೋಚಿಸಲಾರಂಭಿಸಿದೆ. ಮಾತಲಿ ಭೂಲೋಕಕ್ಕೆ ಬಂದರೆ ಯಾವ ವೃತ್ತಿ ಆರಿಸಿಕೊಳ್ಳಬಹುದು ಎಂದು ಪ್ರಶ್ನಿಸಿಕೊಂಡಾಗ, ಅವನ ಮೂಲ ವೃತ್ತಿ

ಸಾರಥಿ ಎಂಬುದು ನೆನಪಿಗೆ ಬಂತು. ಅದೇ ವ್ಯಕ್ತಿಯನ್ನೇ ಆತ ವಿಳಂಬವಿಲ್ಲದೇ ಅನುಸರಿಸಬೇಕಾದರೆ, ಆಟೋಚಾಲನೆಯೇ ಸುಲಭದ ಮಾರ್ಗ ಅಂತ ನಿರ್ಧರಿಸಿದೆ. ಆಮೇಲೆ ಇನ್ಸ್‌ಪೆಕ್ಟರ್ ಉಳ್ಳಾಗಡ್ಡಿ ಅವರ ಸಹಾಯ ಕೋರಿ, ಯಾರಾದರೂ ಆಟೋ ಚಾಲಕ ಅನುಮಾನಾಸ್ಪದ ರೀತಿಯಲ್ಲಿ ಓಡಾಡುತ್ತಿದ್ದರೆ ಅಂತಹ ವ್ಯಕ್ತಿಯ ಮೇಲೆ ನಿಗಾ ಇಡಿ ಅಂತ ಹೇಳಿದೆ. ಮಾತಲಿಯ ಚರಹೆಗಳ ಪಟ್ಟಿಯನ್ನೂ ಅವರಿಗೆ ನೀಡಿದೆ. ಇಂದು ಸಂಜೆ ಅವರು ಫೋನ್ ಮಾಡಿ, ತಾವು ನೋಡಿದ್ದ ಒಬ್ಬ ಚಾಲಕನ ನಡವಳಿಕೆ ಬಗ್ಗೆ ವಿವರಿಸಿದರು. ಈ ಚಾಲಕ ವಿಚಿತ್ರವಾಗಿ ಆಟೋ ನಡೆಸುತ್ತಿದ್ದನಂತೆ. ಎಲ್ಲಾ ಕೆಂಪು ದೀಪಗಳಲ್ಲೂ ಆಟೋ ನಿಲ್ಲಿಸುವುದು, ಎಡಗಡೆಯಿಂದ ಓವರ್‌ಟೇಕ್ ಮಾಡದಿರುವುದು ಹೀಗೆ ಯಾರೂ ಮಾಡದ ಕೆಲಸಗಳನ್ನು ಆತ ಮಾಡುತ್ತಿದ್ದದನ್ನು ಉಳ್ಳಾಗಡ್ಡಿಯ ಜನ ನೋಡಿದರಂತೆ. ಒಂದು ಸಲವಂತೂ ಒಂದು ದೊಡ್ಡ ಟ್ರಾಫಿಕ್‌ಜಾಮ್ ನಲ್ಲಿ ಈತ ರಸ್ತೆಯ ಎಡ ಲೇನಿನಲ್ಲೇ ಸಹನೆಯಿಂದ ಕಾಯುತ್ತಿದ್ದನೇ ಹೊರತು, ಮುಂದಿನಿಂದ ಬರುವ ವಾಹನ ಸಂಚಾರವನ್ನು ನಿಲ್ಲಿಸುವಂತೆ ಬಲಭಾಗದಿಂದ ಓವರ್‌ಟೇಕ್ ಮಾಡಲು ಯಾವ ಪ್ರಯತ್ನವನ್ನೂ ಮಾಡಲಿಲ್ಲವಂತೆ. ಆಗಲೇ ಉಳ್ಳಾಗಡ್ಡಿಯವರಿಗೆ ಈತ ಯಾರೋ ಹೊಸಬ. ಬೆಂಗಳೂರಿನ ಆಟೋ ಸಂಸ್ಕೃತಿ ಈತನಿಗೆ ಎಳ್ಳಷ್ಟೂ ಪರಿಚಯವಿಲ್ಲ, ಅನ್ನಿಸಿತಂತೆ. ಆಗಲೇ ಅವರು ನನಗೆ ಫೋನ್ ಮಾಡಿದ್ದು. ಇವನು ಕಣ್ಣು ಮಿಟುಕಿಸದಿರುವುದನ್ನು ಖಾತರಿ ಪಡಿಸಿಕೊಂಡ ಮೇಲೆ ಈತ ದೇವತೆಯೇ ಇರಬೇಕೆಂದು ನಿರ್ಧರಿಸಿದೆ. ಒಟ್ಟಿನಲ್ಲಿ ನಿಮ್ಮ ಕೆಲಸ ಆದದ್ದು ನನಗೆ ಸಂತೋಷ' ಅಂದ ಶರಲೇಖ.

'ನಮಗೆ ಸಹಾಯ ಮಾಡಿದವರಿಗೆ ಒಂದು ವರ ಕೊಡುವುದು ನಮ್ಮ ಸಂಪ್ರದಾಯ. ನಿಮಗೇನು ವರ ಬೇಕು?'

ಶರಲೇಖ ನನ್ನ ಕಡೆ ನೋಡಿದ. ನಾನು, 'ಇಂದ್ರದೇವ, ಇವತ್ತು ಸ್ವಲ್ಪ ಹುಷಾರು ತಪ್ಪಿದ್ದರೆ ಮಾತಲಿ ಹಾಸ್ಪಿಟಲ್ ಸೇರಬೇಕಾಗಿತ್ತು. ದಯವಿಟ್ಟು ಬೆಂಗಳೂರಿನಲ್ಲಿ ಪಾಟ್‌ಹೋಲ್‌ಗಳೇ ಇಲ್ಲದಂತೆ ವರವನ್ನು ಕರುಣಿಸಿ' ಅಂದೆ.

ಇಂದ್ರದೇವ ಮತ್ತು ಮಾತಲಿ ಇಬ್ಬರೂ ಒಟ್ಟಿಗೆ ನಗಲು ಪ್ರಾರಂಭಿಸಿದರು. ಎಷ್ಟೇ ಪ್ರಯತ್ನಿಸಿದರೂ ಅವರ ನಗು ಹೊಸಹೊಸದಾಗಿ ಉಕ್ಕುತ್ತಿತ್ತು. ನನಗೆ ಸ್ವಲ್ಪ ಮುಜುಗರವೇ ಆಯಿತು. ಕೊನೆಗೆ ಇಂದ್ರದೇವ 'ವತ್ಸನ ಅವರೇ ದಯವಿಟ್ಟು ಕ್ಷಮಿಸಿ. ನಿಮ್ಮನ್ನು ಅವಮಾನ ಮಾಡುವ ಉದ್ದೇಶ ನಮಗೆ ಖಂಡಿತ ಇಲ್ಲ, ನಮ್ಮ ನಗುವಿಗೆ ಕಾರಣ ತಿಳಿಸಿದರೆ ನಿಮಗೇ ಅರ್ಥವಾದೀತು. ಹಿಂದೆ ತ್ರೇತಾಯುಗದಲ್ಲಿ ಭುಜಬಲನೆಂಬೊಬ್ಬ ರಾಕ್ಷಸನಿದ್ದ. ಅಂದಿನ ಕಾಲದ ಎಲ್ಲ ರಾಕ್ಷಸರಂತೆ ಈತ ಸಹಾ ಪರಾಕ್ರಮಿ ಹಾಗೂ ದುಷ್ಟ ತಮ್ಮನ್ನು ಸದಾ ಗೋಳಿಡುಸುತ್ತಿದ್ದ ಈತನಿಂದ ರಕ್ಷಿಸುವಂತೆ ದೇವತೆಗಳು ಎಂದಿನಂತೆ ವಿಷ್ಣುವಿನ ಮೊರೆ ಹೊಕ್ಕರು. ವಿಷ್ಣು ಭುಜಬಲನನ್ನು ಕರೆದು, ಅವನಿಗೆ ಒಂದು ಷರತ್ತಿನ ಮೇಲೆ ಅಮೃತವನ್ನು



ಕೊಡುವುದಾಗಿ ಆಸೆ ತೋರಿಸಿದ. 'ಅಮೃತ ನನಗೆ ದೊರಕುವ ಹಾಗಿದ್ದರೆ ಯಾವ ಷರತ್ತಿಗಾದರೂ ಸಿದ್ಧ' ಅಂತ ಆ ರಾಕ್ಷಸ ಭಾಷೆಕೊಟ್ಟ

ವಿಷ್ಣು, 'ಭೂಲೋಕದ ಒಂದು ವಿಶಿಷ್ಟ ಪ್ರದೇಶದಲ್ಲಿ ಒಂದು ಪುಟ್ಟ ಅಮೃತ ಕಲಶವನ್ನು ನೆಲದಿಂದ ಒಂದೇ ಅಡಿ ಆಳದಲ್ಲಿ ಹುದುಗಿಟ್ಟಿರುವೆ. ನೆಲವನ್ನು ಬಗೆದು ಅದನ್ನ ಹುಡುಕಿದರೆ ಕಲಶ ನಿನ್ನದಾಗುತ್ತದೆ. ಅಲ್ಲಿನವರೆಗೂ ನೀನು ದೇವತೆಗಳನ್ನ ಪೀಡಿಸಬಾರದು' ಎಂದು ಆದೇಶ ನೀಡಿದ. ನಿಜ ಹೇಳಬೇಕೆಂದರೆ ವಿಷ್ಣು ಕಲಶವನ್ನು ಇಟ್ಟಿರಲೇ ಇಲ್ಲ. ಭುಜಬಲ ಇಂದಿಗೂ ಆ ಪ್ರದೇಶದಲ್ಲಿ ಕಂಡ ಕಂಡಲ್ಲೆಲ್ಲಾ ಒಂದಡಿ ಬಗೆದು ಸುಸ್ತಾಗುತ್ತಿದ್ದಾನೆ. ದೇವತೆಗಳು ಸುಭಿಕ್ಷದಿಂದಿದ್ದಾರೆ. ಭುಜಬಲನ ಕೆಲಸದಲ್ಲಿ ನಾನು ಮೂಗುತೂರಿಸಿದರೆ ವಿಷ್ಣು ನನ್ನನ್ನ ಸುಮ್ಮನೆ ಬಿಟ್ಟಾನೆಯೇ. ಅಂತ ನಮ್ಮಿಬ್ಬರಿಗೂ ನಗುಬಂತು. ಅಂದಹಾಗೆ ನಿಮ್ಮ ಮಾಗಡಿ ಕಂಪೇಗೌಡನಿಗೆ ಊರು ಕಟ್ಟುವುದಕ್ಕೆ ಬೇರೇ ಜಾಗ ಯಾವುದೂ ಸಿಗಲಿಲ್ಲವೇ. ಭುಜಬಲನ ಕ್ಷೇತ್ರವೇ ಬೇಕಾಯಿತೇ ಅವನಿಗೆ. ಆಯಿತು ನಾವಿನ್ನು ಬರುತ್ತೇವೆ' ಎಂದು ಹೇಳಿ ಇಂದ್ರದೇವ, ತಾನು ಬಿಟ್ಟಿದ್ದ ದೇವದಂಡವನ್ನು ತೆಗೆದುಕೊಂಡು ಮಾತಲಿಯೊಡನೆ ಅದೃಶ್ಯನಾದ. ಅಷ್ಟರಲ್ಲಿ ಫೋನ್ ರಿಂಗಾಯಿತು. ಶರಲೇಖ ರಿಸೀವರ್ ತೆಗೊಂಡು ಯಾರೊಂದಿಗೋ ಮಾತನಾಡಿದ. ಅನಂತರ ನನ್ನನ್ನು ಕುರಿತು, 'ಲಂಡನ್ನಿನಿಂದ ಸ್ಕಾಟ್ಲೆಂಡ್‌ಯಾರ್ಡಿನವರು ಲೈನಿನಲ್ಲಿದ್ದರು. ಯಾವುದೋ ಕ್ಲಿಷ್ಟವಾದ ಕೇಸಿನಲ್ಲಿ ಅವರಿಗೆ ನಮ್ಮ ನೆರವು ಬೇಕಾಗಿದೆಯಂತೆ. ಮುಂದಿನ ತಿಂಗಳು ಇಂಗ್ಲೆಂಡಿಗೆ ಹೋಗಲು ಅಣಿಯಾಗಬೇಕು' ಎಂದ. ಕೋಲೇಬಸವನಂತೆ ನಾನು ತಲೆದೂಗಿದೆ.

❖❖❖

ಒಂದು ಯಾನದ ಕತೆ

❖ ಶ್ರೀನಿವಾಸ ವೈದ್ಯ

ಇನ್ನೇನು ಹೊರಡುವ ಹೊತ್ತಾಗಿತ್ತು. ಪಾಯಿಝಾಮಾ ಸರಿಪಡಿಸಿಕೊಂಡು, ಜುಬ್ಬಾ ನೇವರಿಸುತ್ತ, ಅವರು ಕಳಿಸುವ ವಾಹನಕ್ಕಾಗಿ ಕಾಯುತ್ತ, ಅವತ್ತಿನ ಭಾಷಣವನ್ನು ಉರು ಹೊಡೆಯುತ್ತ, ಇತ್ತಿಂದತ್ತ ಅತ್ತಿಂದಿತ್ತ ಶತಪತ ಹಾಕತೊಡಗಿದ್ದೆ. ಭಾಷಣವೆಂದರೆ ಅದೇನು ಎಂದಿನಂದೇ ಪ್ರತಿಸಲದ ರಾಜ್ಯೋತ್ಸವದ ಭಾಷಣ. ಆದರೂ ಪ್ರತಿ ಸಲದಂತೆ "ಕಾವೇರಿಯಿಂದ ಮಾ ಗೋದಾವರಿವರಮಿರ್ದನಾಡು" ಮತ್ತೆ ಮತ್ತೆ ತಪ್ಪುತ್ತಿತ್ತು. "ತರಿಕೆರೆ ಏರಿಮೇಲೆ ಕರಿಕುರಿಮರಿ ಪರಪರ ಮೇಯುತ್ತಿತ್ತು" ಎಂಬಂತೆ, "ವರಿವರಮಿರ್ದ" ಒಮ್ಮೊಮ್ಮೆ "ಮರವೇರಿರ್ದ" ಇನ್ನೊಮ್ಮೆ "ಮರಿವರಮಿರ್ದ" ಹೀಗೆ ಏನೇನೋ ಆಗುತ್ತಿತ್ತು. ಅಲ್ಲದೇ ಈ 'ಮಾ' ಕಾವೇರಿಯ ಬಳಿಯೋ ಗೋದಾವರಿಯ ಬಳಿಯೋ ತಿಳಿಯದೇ ಗೊಂದಲಗೆಡುತ್ತಿದ್ದೆ. ಒದ್ದಾಡುತ್ತಿದ್ದೆ. ಅಷ್ಟರಲ್ಲಿ ಬಾಗಿಲು ಕರೆಗಂಟೆ ಬಾರಿಸಿತು. ವಾಹನವೇ ಬಂತೆಂದುಕೊಂಡು ಬಾಗಿಲು ತೆರೆದೆ. ಎದುರಿಗೆ ಆಚೆಮನೆಯ ಯಂಕತ್ತೆ, ನಮ್ಮ ಭಾಗಾದಿ ಒಂದು ಮಾಶಿದ ಸೀರೆಯುಟ್ಟು ತಲೆಕೆದರಿಕೊಂಡು ಮ್ಲಾನವದನೆಯಾಗಿ, ಕಣ್ಣಿಗೆ ಸೆರಗು ಒತ್ತಿಕೊಳ್ಳುತ್ತ, "ಏನಾಗಿತ್ತೋ.... ನಮಗೆಲ್ಲ ತಿಳಿಸಬಾರದೇನೋ?.... ಬಂಧು ಬಳಗ ಅಂತ ನಾವೆಲ್ಲ ಇರುವದ್ಯಾತಕ್ಕೋ" ಎನ್ನುತ್ತ ನನ್ನನ್ನು ತಬ್ಬಿಕೊಳ್ಳಲು ಬಂದವಳು, ಕರೆಗಂಟೆ ಕೇಳಿ ನನ್ನ ಹಿಂದೆಯೇ ಬಂದು ನಿಂತಿದ್ದ ನನ್ನ ಹೆಂಡತಿಯನ್ನೂ ಮಗರಾಯನನ್ನೂ ಕಂಡು, "ಅಯ್ಯSSS... ಮೂರೂ ಇಲ್ಲೇ ಅವ ಅಲ್ಲ... ಗುಂಡಕಲ್ಲಿನ್ಹಂಗ... ಸುಡ್ಲಿ" ಎಂದು ದುರ್ದಾನ ತೆಗೆದುಕೊಂಡವಳಂತೆ ಭಿರ್ರನೇ ಹೊರಳಿ ಹೋದಳು.

ನನ್ನ ಮಗರಾಯ "ವಾವ್... ಯಂಕಾಂಟೀ" ಎಂದು ಒಂದು ಆಶ್ಚರ್ಯಸೂಚಕ ಭುಜ ಕುಣಿತ ಕುಣಿಸಿ ತನ್ನ ಕೋಣೆಗೆ ಹೋದ.

ನನ್ನ ಹೆಂಡತಿ "ಮುಂಝಾನೆದ್ದು ಬಂದು ತನ್ನ ಸುಡಗಾಡ ಮಾರಿ ತೋರಸಲಿಕ್ಕೆ ಯಾರು ಹೇಳಿದ್ದರಂತೆ ಈ ಬೋಕಾಣಿಗೆ" ಎಂದು ಮುಬ್ಬುಗಂಟಿಕ್ಕುತ್ತ ತನ್ನ ಕೆಲಸಕ್ಕೆ ಒಳಗೆ ನಡೆದಳು.

ಇತ್ತ ನಾನು ಮತ್ತೆ ಜುಬ್ಬಾ ನೇವರಿಸುತ್ತ "ಕಾವೇರಿಯಿಂದ" ಪುರುಹಚ್ಚಿದೆ, ಅಷ್ಟರಲ್ಲಿ ಮತ್ತ ಕರೆಗಂಟೆ ಕಿರಿಕಿರಿ ಮಾಡಿತು. ಈ ಸಲ ಪಕ್ಕದ ಮನೆಯ ಮಲ್ಲಪ್ಪಗೌಡರ ಹೆಂಡತಿ ವನಜಾಕ್ಷಿ ಹಣೆಕಿಕ್ಕಿ ಅಂಜುತ್ತ ಅಳುಕುತ್ತ "ಏನಾಗಿತ್ತು..." ಎನ್ನುತ್ತ ಸೆರಗು ಕಣ್ಣಿಗೊತ್ತಿಕೊಳ್ಳುವ ಸಿದ್ಧತೆಯಲ್ಲಿದ್ದವಳನ್ನು ನಾನು "ಏನಾಗಿಲ್ಲಲ್ಲ... ಯಲ್ಲರೂ ಆರಾಮ ಇದ್ದೇವಿ..." ಎಂದು

ಸಾಗಹಾಕುತ್ತಿದ್ದಂತೆಯೇ ಇತ್ತ ಟೆಲಿಫೋನು ಬಿಟ್ಟೂ ಬಿಡದೇ ಶಂಖಾ ಹೊಡಕೊಳ್ಳಲಿಕ್ಕೆ ಹತ್ತಿತು.

''ಹಲೋ... ನಾ... ಹಿರೇಮ್ಠ...'' ಆಚೆಯ ದನಿ.

''ಗೊತ್ತಾತು...'' ಎಂದೆ.

''ಏನಾಗ್ಯೆತೋ?'' ಎಂದ ಗೆಳೆಯ ಹಿರೇಮಠ ಆತಂಕದಲ್ಲಿ

''ಯಾರಿಗೆ?'' ಎಂದೆ.

''ಯಾರಿಗೆ ಅಂತೀಯಲ್ಲೋ.... ನಿನ್ನ ಮನೀ ಮುಂದ ವ್ಯಾನ ನಿಂತೈತಲ್ಲ?'' ಎಂದ. ಬಹುಶಃ ಭಾಷಣಕ್ಕೆ ಕರೆದವರು ಕಾರಿನ ಬದಲಾಗಿ ವ್ಯಾನು ಕಳಿಸಿರಬೇಕೆಂದುಕೊಂಡು ನಾನು ಗೆಳೆತನದ ಚೇಷ್ಟೆಯಲಿ, ''ವ್ಯಾನ ಮನೀ ಮುಂದ ನಿಂದರಬಾರದಂತ ಯಾರು ಹೇಳ್ಯಾರ?'' ಎಂದೆ.

''ನೀ ಇನ್ನೂ ಬಾಕಲಾ ತಗದು ಹೊರಗ ಬಂದ ನೋಡೇ ಇಲ್ಲ ಕಾಣತೈತಿ. ವ್ಯಾನ ಅಂದರ ಅಂತಿಂತದ್ದಲ್ಲ ಆ್ಯಂಬುಲೆನ್ಸ.. ಆ್ಯಂಬುಲೆನ್ಸ...'' ಎಂದು ಹಿರೇಮಠ ಹೇಳುತ್ತಿದ್ದಂತೆಯೇ ನಾನು ಗಾಬರಿಯಾಗಿ ''ಹೌದs'' ಎನ್ನುತ್ತ ಟೆಲಿಫೋನು ಕುಕ್ಕಿ ಬಾಗಿಲು ತೆರೆದು ಹೊರಗೆ ಓಡಿದೆ.

ಹೊರಗೆ ಗೇಟು ಬಾಗಿಲಕ್ಕೆ ''ನೋ ಪಾರ್ಕಿಂಗ್'' ಎಂಬ ಏರಟೆಲ್‌ನವರ ಮೊಹರಟಾನೀ ಜಾಹೀರಾತಿನ ಫಲಕಕ್ಕೆ ತಾಗಿಯೇ, ಒಂದು ಬೃಹದಾಕಾರದ, ಅಮಂಗಳ, ಅಶುಭ ಮೋರೆಯ, ನೋಡಿದ ಕೂಡಲೇ ಎದಿ ಧಸಕ್ಕೆನ್ನುವಂತಹ, ಅಷಡ್ಡಾಳ, ಅವಲಕ್ಷಣದ ಆ್ಯಂಬುಲೆನ್ಸು ಉಲಟಾ ಪಲಟಾ ನಿಂತಿತ್ತು. ಅಂದರ ನಿಂತದ್ದು ಸರಿಯಾಗಿಯೇ ನಿಂತಿತ್ತು. ಆದರ ಅದರ ಮ್ಯಾಲ ಯಾಕೋ ''ಆ್ಯಂಬುಲೆನ್ಸ್'' ಅಂತ ಉಲಟಾ ಬರದಿದ್ದರು.

ನಾನು ಮನೆಯಿಂದ ಹೊರಗೆ ಬರುವದನ್ನೇ ಕಾಯುತ್ತಿದ್ದನೇನೋ ಎಂಬಂತೆ ನಾನು ಬಂದೊಡನೆಯೇ, ಆ್ಯಂಬುಲೆನ್ಸಿನಿಂದ ಒಬ್ಬ ಕರಿ ಧಡಿಯ ಯಮಧೂತ ಜಿಗಿದು ಬಂದು ನನ್ನ ಕೈಯಲ್ಲೊಂದು ಚೀಟಿ ಕೊಟ್ಟು, ಅಂತಹ ಕರಿ ಧಡಿಯ ಯಮದೂತರಿಗೆ ಮಾತ್ರ ಇರಬಹುದಾದ ಗೊಗ್ಗರ ದನಿಯಲ್ಲಿ ''ಇದು ನೀವೇನಾ ನೋಡಿ?'' ಎಂದ. ನೋಡಿದೆ. ಚೀಟಿಯಲ್ಲಿ ನನ್ನದೇ ಹೆಸರು ವಿಳಾಸ ಇತ್ತು. ನಾನು ಅಂಜುತ್ತ ಅಳುಕುತ್ತ ಯಮದೂತನಿಗೆ ''ಹೌದು ನಾನೇ'' ಎಂದು ತೊದಲಿದೆ.

''ಕರಕೊಂಡು ಬಾ ಎಂದು ಕಳ್ಸಿದಾರೆ'' ಎಂದು ಪಾಶ ಬೀಸಿದ ಯಮದೂತ.

''ಯಾ.... ಯಾ... ಯಾರು'' ಎಂದೆ ನಾನು ನಡುಗುತ್ತ.

''ಅದೇ ಇವತ್ತು ನಿಮ್ಮ ಬಾಷ್ನ ಆಯಿತೆಲ್ಲ... ಆ ಸ್ಕೂಲ ಮೇಡಂ ನಾಗಮ್ನೋರು'' ಎಂದ ದೂತ. ಅಷ್ಟರಲ್ಲಿ ಮತ್ತೆ ಮನೆಯಲ್ಲಿ ಟೆಲಿಫೋನು ಅಸಹನೆಯಿಂದ ಹೊಡಕೊಳ್ಳಲಿಕ್ಕೆ ಹತ್ತಿತು. ನಾನು ಓಡೋಡಿ ಬಂದು ಫೋನು ಎತ್ತಿಕೊಂಡೆ.

''ಹಲೋ ಸ್ಸಾರ್... ನಾನು ನಾಗಮ್ಮ... ನಾಗಮ್ಮ ಸ್ಸಾರ್... ಎಲ್.ಪಿ.ಟಿ.ಸ್ಕೂಲ ಹೆಡ್ಡು...

ನಿಮ್ಮ ರಾಜ್ಯೋತ್ಸವ ಭಾಷಣಾ.... ಅದೇ... ಅದೇ... ಸರ್, ಯಮಕನಗಟ್ಟೇಲಿ.... ಲೇಟ್ ಪಟೇಲ ತಿಮ್ಮಾರೆಡ್ಡಿ ಇಂಟರ್‌ನ್ಯಾಷನಲ್ ರೆಸಿಡೆನ್ಸಿಯಲ್ ಸ್ಕೂಲ್... ಸಾ... ಎಲ್.ಪಿ.ಟಿ.... ಇಂಟರ ನ್ಯಾಷನಲ್ಲು.... ಈಗ ಗೊತ್ತಾಯ್ತೆ ಸಾ... ಆ್ಯಂಬುಲೆನ್ಸ ಕಳಿಸಿದೀನಿ ಬೇಗ ಬಂದು ಬಿಡಿ ಸಾ...." ಎಂದರು ನಾಗಮ್ಮ.

"ಹಲೋ... ಬರ್ತೀನಮ್ಮಾ ಆದರೆ... ಆ್ಯಂಬುಲೆನ್ಸು?" ಎಂದೆ ಅಸಮಾಧಾನ ಸೂಚಿಸುತ್ತ.

"ಹಲೋ ಲೇಟಾಯಿತಲ್ಲ ಸಾ... ಅದಕ್ಕೇ ಟ್ರಾಫಿಕ್ಕಿನಲ್ಲಿ ಎಲ್ಲೂ ಸಿಕ್ಕಾಕ್ಕೊಳ್ಳಬಾರದೂಂತ... ಬೇಗ ಬರಲೀ ಅಂತ ಆ್ಯಂಬೂ...ಸರ್... ತಪ್ಪು ತಿಳೀಬೇಡಿ ಸಾ... ಆ್ಯಂಬುಲೆನ್ಸ್ ನಮ್ಮದೇ ಎಲ್.ಪಿ.ಟಿ. ಗ್ರೂಪ್‌ದು ಸಾ... ನಮ್ಮ ಚೇರಮನ್ ರೆಡ್ಡಿ ಇದ್ದಾರಲ್ಲ.. ಸ... ಅವರು ಬಳ್ಳಾರಿಯವರು... ಸ... ಹನ್ನೆರಡು ಮೈನಗಳಿವೆ ಸ‌ರ್... ಮೂರು ಹಾಯಸ್ಕೂಲು... ನಾಲ್ಕು ಕಾಲೇಜು, ಒಂದು ಮೆಡಿಕಲ್ಲು.. ಎರಡು ಇಂಜಿನಿರಿಂಗ... ಸಾ... ತುಂಬ ದೊಡ್ಡವರು ಸಾ... ಎರಡು ಹಾಸ್ಪಿಟಲ್‌ಗಳು... ಸಾ... ಅಷ್ಟೇ ಅಲ್ಲ ಸಾ.... ಬೆಂಗಳೂರು ಸುತ್ತ ಮುತ್ತ ನಾಲ್ಕು ಯಂಕಟರಮಣಸ್ವಾಮಿ... ಎರಡು ಸಿದ್ಧಿ ವಿನಾಯಕ ಹೀಗೆ ಒಟ್ಟು ಆರು ದೇವಸ್ಥಾನ ನಡೆಸ್ತಾ ಇದ್ದಾರೆ... ಸಾ... ಅದರಲ್ಲಿ ಮೂರು ಟೆಂಪಲ್‌ಗಳನ್ನ ಲೀಸ್ ಮೇಲೆ ಕೊಟ್ಟಿದ್ದಾರೆ... ಸಾ..." ನಾಗಮ್ಮ ತಮ್ಮ ಚೇರಮನ್ ಬಳ್ಳಾರಿಯ ಕುಬೇರನನ್ನು ಹೊಗಳಿದ್ದೇ ಹೊಗಳಿದ್ದು... ಮತ್ತೆ ಮತ್ತೆ ಕಾರ್ಯಕ್ರಮಕ್ಕೆ ಈಗಾಗಲೇ ಲೇಟ ಆಗಿದೆಯೆಂದೂ, ಟ್ರಾಫಿಕ್ಕಿನಲ್ಲಿ ಎಲ್ಲೂ ನಿಲ್ಲದೇ ಬೇಗ ಬರಲೆಂದು ಆ್ಯಂಬು-ಕಳಿಸಿದ್ದಾಗಿಯೂ, ತಪ್ಪು ತಿಳಿಯಬಾರದೆಂದೂ ಗೋಗರೆಯುತ್ತಿದ್ದರು.

ಇತ್ತ ಇಷ್ಟೆಲ್ಲ ನಡೆದಾಗ ನನ್ನ ಹೆಂಡತಿ ಸ್ನಾನಕ್ಕಿಳಿದಿದ್ದಳೆಂದು ತೋರುತ್ತೆ. ಮಗರಾಯ ಎಲ್ಲೋ ನಾಪತ್ತೆಯಾಗಿದ್ದ. ಹಾಗಾಗಿ ನಾನು ಮನೆಯವರ ನಿರೋಪ ಕೂಡ ತೆಗೆದುಕೊಳ್ಳದೇ ಆ್ಯಂಬುಲೆನ್ಸ್‌ನತ್ತ ನಡೆದೆ. ಚಾಲಕನ ಪಕ್ಕದಲ್ಲಿ ಕೂಡುವೆನೆಂದು ಮುಂದೆ ಹೋಗುತ್ತಿದ್ದಂತೆಯೇ ಯಮದೂತ ಓಡೋಡುತ್ತ ಬಂದು "ಸಾ... ಇಲ್ಲಿಯೇ ಬಂದುಬಿಡಿ ಹಿಂದೆ ಯಾರೂ ಇಲ್ಲದಿದ್ದರೆ ಪೋಲೀಸರಿಗೆ ಡೌಟು ಸಾ... ಹಿಂದೇ ಬಂದುಬಿಡಿ...." ಎನ್ನುತ್ತ ಹಿಂದಿನ ಬಾಗಿಲು ತೆಗೆದು ನನ್ನನ್ನು ಒಳಗೆ ತಳ್ಳಿ ಬಾಗಿಲು ಜಡಿದು ತಾನು ಡ್ರೈವರ್ ಪಕ್ಕದಲ್ಲಿ ಜಿಗಿದು ಕೂತು "ರೈಟ್" ಹೇಳಿದ.

ನಾನು ಹೊರಟೆ.

ಆ್ಯಂಬುಲೆನ್ಸಿನ ಗಂಟೆ ಹೊಡೆದುಕೊಳ್ಳತೊಡಗಿತ್ತು. ವೇಗ ಪಡೆದುಕೊಳ್ಳತೊಡಗಿತು. ಆ್ಯಂಬುಲೆನ್ಸಿನ ಹಿಂದಿನ ಮೆತ್ತೆ ಬೆಂಚಿನಲ್ಲಿ ಟಿಂಕ್ಚರ್ ಅಯೋಡಿನ್, ಫಿನಾಯಿಲ್, ಡೆಟ್ಟಾಲ್ ಹಾಗೂ ಸವದತ್ತಿ ಯಲ್ಲಮ್ಮನ ಗುಡ್ಡದ ಬಸ್‌ಸ್ಟ್ಯಾಂಡಿನ ಕಕ್ಕಸಗಳ ಮಧುರ ಸುವಾಸನೆಯನ್ನು ಆಘ್ರಾಣಿಸುತ್ತ ನಾನು ಹೊರಟೆ.

ಆ್ಯಂಬುಲೆನ್ಸಿನ ಹಿಂದಿನ ಗಾಜಿನಲ್ಲಿ ನಮ್ಮ ಮನೆಯ ಗೇಟಿನ ಸುತ್ತ ಅಕ್ಕಪಕ್ಕದವರು ನಿಂತು, ಅಷ್ಟೊತ್ತಿಗೆ ಗಾಬರಿಯಾಗಿ ಹೊರಗೆ ಬಂದಿದ್ದ ನನ್ನ ಹೆಂಡತಿಯನ್ನೂ

ಮಗರಾಯನನ್ನೂ ಸಂತೈಸುತ್ತಿದ್ದ ಕರುಣಾಜನಕ ದೃಶ್ಯವನ್ನು ನೋಡಿ, ಯಾಕೋ ಮನಸ್ಸಿಗೆ ತುಸು ನೆಮ್ಮದಿಯೆನಿಸಿತು!

ನಾನು ಹೊರಟಿದ್ದೆ.

ಢಣ ಢಣ ಗಂಟೆ... ಓಟ, ಓಟ ಗಂಟೆ.... ಢಣ ಢಣ ಗಂಟೆ.... ಓಟ, ನಾನು ಹೊರಟಿದ್ದೆ. ಮುಂದೆ ಮುಂದೆ ಹತ್ತಾರು ರಾಕ್ಷಸಗಾತ್ರದ ವಾಹನಗಳು, ದ್ವಿಚಕ್ರಿಗಳು, ಮಾರುತಿಗಳು ಅತಿ ಗೌರವದಿಂದ ಭಯ ಭಕ್ತಿಯಿಂದ ನನಗೆ ದಾರಿ ಮಾಡಿಕೊಡುತ್ತಿದ್ದವು. ಪೋಲೀಸರು ಶೀಳ್ಳೆ ಊದುತ್ತ ಇತರೇ ಜೀವನ್ಮುಖೀ ವಾಹನಗಳನ್ನು ಆಚೀಚೆ ಚದುರಿಸುತ್ತ ನನಗೆ ದಾರಿ ಮಾಡಿಕೊಡುತ್ತಿದ್ದರು. ದಾರಿ ಬಿಡ್ತಾ ಬಿಡ್ತಾ ಕೆಲ ಕೆಲವು ದ್ವಿಚಕ್ರಿ ಚಾಲಕರು ಗೋಣುಚಾಚಿ ಆ್ಯಂಬುಲೆನ್ಸಿನ ಒಳಗೆ ಹಣಿಕಿಕ್ಕಿ ಕರುಣೆಯಿಂದ ಲೊಚಗುಡುತ್ತಿದ್ದರು.

ನಾನು ಹೊರಟಿದ್ದೆ.

ಅಷ್ಟರಲ್ಲಿ ನನ್ನ ಮೊಬೈಲು ಕಿರಿಗುಟ್ಟಿ, ನನ್ನ ಹೆಂಡತಿ ''ಏನ್ರೀ ಇದು? ಯಾವದೋ ಸ್ಕೂಲಿಗೆ ಭಾಷಣಕ್ಕೆ ಹೋಗ್ತೀನಿ ಅಂದವರು ಈಗ ಹೇಳದs ಕೇಳದs ಆ್ಯಂಬುಲೆನ್ಸಿನಾಗ ಹೊಂಟೀರೆಲ್ಲರೀ...? ಹಂತಾದ್ದೇನಾಗೇದ ನಿಮಗ?... ನಿನ್ನೆ ರಾತ್ರಿ ಅನ್ನ ಹಂಜಕ್ಕಿ ಆಗಿತ್ತು... ಹುಳಿ ಹಳಸಿತ್ತು ಖರೆ! ಅಷ್ಟಕ್ಕsss ಆ್ಯಂಬುಲೆನ್ಸಿನ್ಯಾಗ ಹೋಗೋ ಹಂತಾದ್ದು ಏನಾತ್ರೀsss'' ಎಂದು ಬಿಕ್ಕುತ್ತ ದುಃಖಿಸುತ್ತಲೇ ನನ್ನನ್ನು ದಬಾಯಿಸತೊಡಗಿದಳು. ಪಾಪ! ನಾನು ಅವಳಿಗೆ ನನ್ನ ಪರಿಸ್ಥಿತಿಯನ್ನು ವಿವರಿಸತೊಡಗಿದೆ. ಅವಳು ಇನ್ನಷ್ಟು ಗಾಬರಿಯಾಗಿ ''ಏನೂ... ಏನಂದ್ರೀ... ಏನೂ ಕೇಳಸವಲ್ಲದು... ಬರೇ ಘಂಟೆ... ಘಂಟೀ...'' ಎಂದು ಆಲವತ್ತುಕೊಂಡಳು.

ಹೌದು! ಬರೇ ಘಂಟೇ.... ಘಂಟೇ...! ಯಾಕಂದರ ನಾನು ಹೊರಟಿದ್ದೆ.

ಆ್ಯಂಬುಲೆನ್ಸ್ ವೇಗ ಪಡೆದುಕೊಳ್ಳತೊಡಗಿತ್ತು. ಮುಂದಿನ ವಾಹನ ದಟ್ಟಣೆಯೆಲ್ಲ ಯಂತ್ರವತ್ತಾಗಿ ಇಬ್ಭಾಗವಾಗತೊಡಗಿತ್ತು. ಮೋಸಸ್‌ನಿಗೋ ಇನ್ನಾರೋ ಕ್ರೈಸ್ತ ಸಂತನಿಗೆ ಸಮುದ್ರ ದಾರಿ ಬಿಟ್ಟಂತೆ! ರಸ್ತೆ ತೆರೆದುಕೊಳ್ಳತೊಡಗಿತ್ತು. ನಮ್ಮ ಆ್ಯಂಬು ಕೆಂಪು ದೀಪವನ್ನು ಧಿಕ್ಕರಿಸಿ, ಬೈಸಿಕಲ್ ಹುಡುಗರನ್ನು ಹೆದರಿಸುತ್ತ, ತರಕಾರಿ ಗಾಡಿಗಳನ್ನು ದಿಕ್ಕು ತಪ್ಪಿಸುತ್ತ, ದ್ವಿಚಕ್ರಿಯ ಯಃಕಶ್ಚಿತ್ ಹೆಣ್ಣುಗಂಡುಗಳಿಗೆ ಬೈ ಬೈ ಹೇಳುತ್ತ, ಇಂಡಿಕಾ ಮಾರುತಿ ಹೊಂಡಾಗಳನ್ನು ಅಣಕಿಸುತ್ತ ಕೆ.ಎಸ್.ಆರ್.ಟಿ.ಸಿ. ರಾಕ್ಷಸರನ್ನು ಹಿಮ್ಮೆಟ್ಟಿಸುತ್ತ, ಹುಚ್ಚು ವಾಯುವೇಗದಲ್ಲಿ ಹಾರುತ್ತಿತ್ತು.

ಇದ್ದಕ್ಕಿದ್ದಂತೆ ಏನಾಯಿತೋ ಏನೋ, ಆ್ಯಂಬುಲೆನ್ಸಿನ ವೇಗ ಕಡಿಮೆಯಾಗುತ್ತ ಆಗುತ್ತ ಕೊನೆಗೆ ನಿಂತೂ ಬಿಟ್ಟಿತು.

ಯಮದೂತ ''ಥೂ... ಬಡ್ಡೀ ಮಗಂದು... ಪೆಟ್ರೋಲು'' ಎನ್ನುತ್ತ ತನ್ನ ಬಾಗಿಲು ತೆಗೆದು ಟಣ್ಣಂತ ಜಿಗಿದು, ತನ್ನ ಬಳಿಯ ಕ್ಯಾನಿನಿಂದ ಆ್ಯಂಬುವಿಗೆ ಪೆಟ್ರೋಲು ತುಂಬತೊಡಗಿದ. ಘಂಟೆ ನಿಂತಿತ್ತು. ನಾನು ಸ್ವಲ್ಪ ಕುತೂಹಲದಿಂದ ಪಕ್ಕದ ಕಿಡಕಿ ಸರಿಸಿ

ಹೊರಗೆ ಹಣಿಕಿಕ್ಕುತ್ತಿದ್ದಂತೆ, ಬೀದಿಯ ಆಚೆ ಬದಿಯಿಂದ ಒಬ್ಬ ಪೋಲೀಸ ಪೇದೆ ನಮ್ಮ ಬಳಿಯೇ ಧಾವಿಸಿ ಬರುತ್ತಿದ್ದ. ಇತ್ತ ದೂರದಿಂದ ಪೋಲೀಸನನ್ನು ಕಂಡ ಕೂಡಲೇ ಯಮದೂತ ನನಗೆ; "ಸ್ಸಾ... ನೀವು ಮಲಗಿಬಿಡಿ ಸ್ಸಾ... ಪೋಲೀಸರಿಗೆ ಡೌಟು ಬಂದ್ಬಿಟ್ರೆ ಪ್ರಾಬ್ಲಮ್ ಆಗಿಬಿಡತ್ತೆ ಸ್ಸಾ.... ಜೋರು ಮಾಡುತ್ತ ನನ್ನನ್ನು ಮಲಗಿಸಿ, "ಸ್ಸಾ.... ಹಾಗೇ ಈ ಕಡೆ ಬಿದ್ದಿದೆ ನೋಡಿ ಆ ಚಾದರ... ಅದೇ ಸಾ... ಆ ಚಾದರಾ ಹೊದ್ದುಕೊಂಡುಬಿಡಿ ಸಾ .. ಪ್ಲೀಸ್... ನಿಮಗೆ ತಿಳಿಯಾಕಿಲ್ಲ ಸಾ... ನಮ್ಮ ಕಷ್ಟ.. ಚಾದರಾ ಹೊದ್ದುಕೊಳ್ಳಿ ಸಾ...." ಎಂದು ಅಂಗಲಾಚತೊಡಗಿದ.

ನಾನು ಮಲಗಿದೆನೇನೋ ಸರಿ. ಆದರೆ ಚಾದರಽಽಽ.... "ಛೇ... ಯಾರದಪ್ಪಾ - ಈ ಚಾದರಾ" ಎಂದು ಅಸಹ್ಯ ಪಟ್ಟುಕೊಳ್ಳುತ್ತ ದನಿ ಎಳೆಯುತ್ತಿದ್ದಂತೆಯೇ ಯಮದೂತ ನನ್ನನ್ನು ಆವರಿಸುತ್ತ "ಸ್ಸಾ ಪೋಲೀಸಪ್ಪ ಬಂದೇಬಿಟ್ಟ ಸ್ಸಾ... ಚಾದರಾ ನಮ್ಮದೇ ಸಾ... ಎಲ್.ಪಿ.ಟಿ. ನರ್ಸಿಂಗ್ ಹೋಮ್‌ದು ಸಾ... ಬೆಳಿಗ್ಗೆ ಒಂದು ಸೀರಿಯಸ್ ಕೇಸಿಗೆ ಹೊದಿಸಿದ್ದು.. ಅದು ಹೋತು ಸ್ಸಾ... ಚಾದರಾ ಉಳೀತು... ಈಗ ಪ್ಲೀಸ್ ಹೊದ್ಕೊಳ್ಳಿ..." ಎನ್ನುತ್ತ ತಾನೇ ಅರ್ಧ ಒಳಗೆ ನುಗ್ಗಿ, ಆ ಹೋದ ಕೇಸಿನ ಚಾದರವನ್ನು ನನಗೆ ಪೂರ್ತಿ ಹೊದ್ದಿಸಿ; ಅಷ್ಟೊತ್ತಿಗೆ ಆ್ಯಂಬುಲೆನ್ಸಿನ ಬಳಿ ಬಂದು ಇನ್ನೇನು ಒಳಗೆ ಹಣಿಕಿಕ್ಕಲಿದ್ದ ಪೋಲೀಸನನ್ನು ಎದುರುಗೊಂಡು;

"ಪೆಟ್ರೋಲು ಕೈಕೊಟ್ಟುಬಿಡ್ತು ಯಣ್ಣೋ" ಎಂದ.

"ಥೋ.... ನಿಮ ನಿಮ... ಸೋಂಬೇರಿ ಮುಂಡೇವೆ... ಅದನ್ನೆಲ್ಲ ಮೊದಲೇ ನೋಡಿಕೋಬಾರದೇನ್ರೋ... ಆ್ಯಂಬುಲೆನ್ಸ ಇರೋದು ಯಾತಕ್ಕೆ... ಎಮರ್ಜೆನ್ಸಿಗೆ ತಾನೇ? ಇಂಗೆ... ಪೆಟ್ರೋಲ್ ಇಲ್ಲಾ... ಆಯಲ್ ತೀರ್‍ರೈತೆ ಅಂದ್ರೆ ಯೆಂಗೆ?" ಎನ್ನುತ್ತ ಒಳಗೆ ಹಣಿಕಿಕ್ಕಿ, ಚಾದರದಿಂದ ಹೊರಚಾಚಿ ಪಿಳಿ ಪಿಳಿ ಕಣ್ಣು ಬಿಡುತ್ತಿದ್ದ ನನ್ನ ಹೆದರಿ ಹುಳಿತಿಟ್ಟ ಮುಖ ನೋಡಿ, "ಚೆ... ಚೆ... ಚೆ... ಪಾಪ... ಹಾರ್ಟೋ... ಕಿಡ್ನಿನೋ... ಈಗೋ ಇನ್ನೊಂದು ಗಳಿಗೆಗೋ ಅನ್ನೋ ಅಂಗೆ ಆಯಿತೆ ಪೇಶಂಟು... ಬೇಗ ತಗೊಂಡು ಹೋಗು... ಊಂ..." ಎನ್ನುತ್ತ ಯಮದೂತನ ಬಳಿ ಹತ್ತು ರೂಪಾಯಿ ಕಿತ್ತುಕೊಂಡು ನಮ್ಮನ್ನು ಹೋಗಲು ಬಿಟ್ಟ ಪೋಲೀಸ.

ಮತ್ತೆ ಘಂಟೆ ವೇಗ... ಕೆಂಪು ಸಿಗ್ನಲ್ ಕ್ಯಾರೇ ಅನ್ನದೇ, ಹಸಿರು ಸಿಗ್ನಲ್‌ಗೆ ನೀನಿದ್ದರೆಷ್ಟು ಬಿಟ್ಟರೆಷ್ಟು ಅನ್ನುತ್ತ, ಎಲ್.ಪಿ.ಟಿ. ಇಂಟರ್‌ನ್ಯಾಷನಲ್ ತಲುಪಿದೆವು. ಹೆಡ್‌ಮಿಸ್ಟ್ರೆಸ್ ನಾಗಮ್ಮ ಹಾಗೂ ಇನ್ನೊಂದಿಬ್ಬರು ಆ್ಯಂಬುಲೆನ್ಸಿನ ಹಿಂಭಾಗಕ್ಕೆ ಧಾವಿಸಿ ನನ್ನನ್ನು ಹೂ ಇಳಿಸಿದಂತೆ ಇಳಿಸಿಕೊಂಡರು ಪುಣ್ಯಕ್ಕೆ ಸ್ಟ್ರೆಚರ್ ತಂದಿರಲಿಲ್ಲ.

"ಕ್ಷಮಿಸಿ ಸ್ಸಾ... ಏನೂ ತೊಂದರೆಯಾಗಿಲ್ಲ ತಾನೇ?" ಎಂದು ಕುಶಲ ವಿಚಾರಿಸಿದರು ನಾಗಮ್ಮ.

"ಛೇ... ಛೇ...ತೊಂದರೆ ಎಲ್ಲಿ ಬಂತು... ಸುಖವಾಗಿ ಮಲಗಿ ಬಂದೆನಮ್ಮ.... ಮಲಗಿ ಬಂದೆ" ಎಂದು ಕೈಕಾಲು ನೀವಿಕೊಂಡೆ.

ಸರಿ ಇಲ್ಲಿಗೆ ಈ ಕತೆ ಮುಗಿಯಿತು. ಕಾರ್ಯಕ್ರಮ ಆತು. "ಕಾವೇರಿಯಿಂದ... ತರಿಕೆರೆ ವರ್ಗ" ನನ್ನ ಭಾಷಣಾನೂ ಆತು. ನನಗ ಹೂವಿನ ಹಾರಾ ಹಾಕಿದರು. ಯಲ್ಲಾ ಸೌಭಾಗ್ಯನೂ ಆತು ಖರೆ, ಆದರೆ ಈ ಕತೆ ನನ್ನ ಯಾನದ್ದು, ಭಾಷಣದ್ದಲ್ಲ. ಅದಕ್ಕೇ ಇಷ್ಟಕ್ಕೇ ಮುಗಿಸುತ್ತೇನೆ. ಅಷ್ಟಲ್ಲದೇ ಮುಂದೆ ಹೇಳಲಿಕ್ಕೇನಿದೆ? ಕಾರ್ಯಕ್ರಮ ಮುಗಿದ ಮೇಲೆ ಎಲ್ಲರೂ ನನಗೆ ಕೈಮುಗಿದು ಹೋದರು. ನಾಗಮ್ಮ ನನ್ನನ್ನು ಎಲ್.ಪಿ.ಟಿ. ಇಂಟರ್‌ನ್ಯಾಷನಲ್ ವಿಶಾಲ ಮೈದಾನದ ಗೇಟಿನ ಬಳಿ ಬೀಳ್ಕೊಟ್ಟು ಸೆಕ್ರೆಟರಿ ಸುಬ್ಬಣ್ಣನಿಗೆ ನನ್ನನ್ನು ಮನೆಗೆ ಕಳಿಸಲು ಒಂದು ವಾಹನದ ವ್ಯವಸ್ಥೆ ಮಾಡಲು ಹೇಳಿ ಕೈಮುಗಿದು ಹೋದರು. ಸೆಕ್ರೆಟರಿ ಸುಬ್ಬಣ್ಣ ತಿಪ್ಪಣ್ಣನಿಗೆ ಹೇಳಿ ಕೈಮುಗಿದು ಹೋದ. ತಿಪ್ಪಣ್ಣ ಅಪ್ಪಣ್ಣನಿಗೆ ಹೇಳಿ ಕೈಮುಗಿದು ಹೋದ. ಅಪ್ಪಣ್ಣ ಕಪ್ಪಣ್ಣನಿಗೆ ಹೇಳಿ ಕೈಮುಗಿದು ಹೋದ. ಕಪ್ಪಣ್ಣ ಕರುಣೆಯಿಂದ ನನ್ನ ಕಡೆಗೆ ನೋಡುತ್ತ ಕೈಮುಗಿಯದೇ ಹೋಗಿಬಿಟ್ಟ. ಎಷ್ಟೋ ಹೊತ್ತು ಒಬ್ಬನೇ ಕಾಯ್ದೆ. ಕೊನೆಗೆ ವಾಚ್‌ಮನ್ ಗುರ್ಖಾ ಕೈಯಲ್ಲಿಯ ದೊಡ್ಡ ಬೀಗದ ಗೊಂಚಲು ಝುಳಪಿಸುತ್ತ ಬಂದು "ಸಾಬ್ ಗೇಟ್ ಬಂದ್ ಕರನೇ ಕಾ..." ಎಂದು ನನಗೆ ಶಿಸ್ತಿನಿಂದ ಸಲಾಮು ಹೊಡೆದ. ಅವನಿಗೆ ಎರಡುರೂಪಾಯಿ ಕೊಟ್ಟು ಬೀದಿಗೆ ಬಿದ್ದೆ.

ಕೊನೆಗೆ ಅವರಿವರನ್ನು ಕೇಳಿ ಬಸ್ ಹಿಡಿದು, ಮನೆಯಿಂದ ಒಂದು ಮೈಲು ದೂರದ ಸ್ಟಾಪಿನಲ್ಲಿ ಇಳಿದು, ಬಾಯಾರಿ ಬಸವಳಿದು ಕೈಯಲ್ಲೊಂದು ಭಾಷಣದ ಹಾರ ಹಿಡಿದು ಮನೆ ತಲುಪಿದೆ.

ಮನೆಯ ಗೇಟಿನ ಬಳಿ ಮತ್ತೆ ಅಕ್ಕಪಕ್ಕದವರೆಲ್ಲ ನನ್ನೆಡೆಗೆ ಕನಿಕರದಿಂದ ನೋಡುತ್ತ ನಿಂತಿದ್ದರು. ನನ್ನ ಹೆಂಡತಿ ಮಂಜುಗಣ್ಣಿನಿಂದ ನನ್ನನ್ನು ನೇವರಿಸುತ್ತಿದ್ದಳು. ಮಗ ಮೊಬೈಲ್‌ನಲ್ಲಿ ಏನೋ ಮಾತಾಡುತ್ತಿದ್ದ. ಪಕ್ಕದ ಮನೆಯ ಮಲ್ಲಪ್ಪ ಗೌಡರು ನನ್ನ ಬಳಿ ಧಾವಿಸಿ ಬಂದು "ಸಾರ್... ಏನಿದು?... ಆ್ಯಂಬುಲೆನ್ಸಿನಲ್ಲಿ ಹೋಗಿದ್ರೀ... ಈ ಹಾರ ತಂದಿರಾ.... ಅಂತಹುದೇನಾದರೂ ಆಗಿದ್ದಿದ್ದರೆ ನಾವು ತರತಿದ್ದೇವಲ್ಲಾ... ಸಾರ್... ನೆರೆ ಹೊರೆ ಅಂತ ಇರೋದ್ಯಾಕೇ....." ಎಂದರು.

❖❖❖

ಆಟ

ಅಪ್ಪ ಕೋಣೆಯಲ್ಲಿ ಕುಳಿತಿದ್ದಾನೆ
ಎಣಿಸುತ್ತಾ ಗರಿಗರಿ ನೋಟು
ಅಮ್ಮ ಇದ್ದಾಳೆ ಟಿ.ವಿ.ಮುಂದೆ
ಕೈಯಲ್ಲೊಂದು ರಿಮೋಟು
ಮಗ ಆಡುವನು ಗೋಡೆಯ ಜೊತೆಗೆ
ಪ್ಲಾಸ್ಟಿಕ್ ಬಾಲು, ಬ್ಯಾಟು

- ಎಚ್. ಡುಂಡಿರಾಜ್

ಉಕ್ತಿ ಚಾಟೋಕ್ತಿ

❖ ಎನ್. ರಾಮನಾಥ್

ಸಮ್ಮಿಶ್ರ : ಆಗ ತಬ್ಬುಗೆ ಈಗ ದಬ್ಬುಗೆ ಸರಿಯೇ? - ವಿ.ಕ.ದ ತಲೆಬರಹ

ಮಂಚ ಕಿರಿದು ಮದುವೆ ಹೊಸದು ದಂಪತಿಗಳಿಗೆ ಹಿರಿಹಿರಿ
ಸಂಚು ಬೆಳೆದು ಮನವು ಮುರಿಯೆ ಸತಿಪತಿಯರಿಗೆ ಕಿರಿಕಿರಿ

★★★

ಬಿಷಪ್ ಅಂತ್ಯಕ್ರಿಯೆ ; ವೇದ, ಕುರಾನ್ ಪಠಣ - ಸುದ್ದಿ

ಮಾನವ ಧರ್ಮಕೆ ಇದಕಿಂ ಮಿಗಿಲಿನ ದೃಷ್ಟಾಂತವು ಸಿಗುವುದು ವಿರಳ
ಮನದಲಿ ಹುದುಗಿಹ ಜಾತಿಯ ರೀತಿಯ ಎಸೆಯಲು ಈಪರಿ ಸರಿ ಸರಳ

★★★

ಪಶುಪಾಲನಾ ಇಲಾಖೆಯಲ್ಲಿ ಭ್ರಷ್ಟಾಚಾರ : ದೂರು - ಸುದ್ದಿ

ಸುದ್ದಿಯ ಕೇಳಿದ ಪಶುಗಳು ಬಹಳವೆ ನೊಂದವು ಅತ್ತವು ಕೇಳಣ್ಣ
ರದ್ದಿಯ ತಿನ್ನುವ ನಾವ್ಗಳೆ ವಾಸಿಯು ಎನ್ನುತ ನುಡಿದವು ತಿಳಿಯಣ್ಣ

★★★

ಹಂಪೆ ಈಗ ಕಸದ ತಿಪ್ಪೆ - ಸುದ್ದಿ

ಹಂಪೆಯು ಅನ್ಯರ ಮನವನು ಸೆಳೆದರು ಕೊಂಪೆಯೆ ಆಗಿಹುದಕಟಕಟ
ತಿಪ್ಪೆಯು ಆಗಲು ನಾವೇ ಕಾರಣ ತಲುಪೆವು ಎಂದಿಗು ಶುಚಿಯ ತಟ

★★★

ಕರುಣಾನಿಧಿಯಿಂದ ಶ್ರೀರಾಮ ನಿಂದೆ - ಸುದ್ದಿ

ಕರುಣಾನಿಧಿಯಿಂ ನಡವಳಿಕೆ ಕುರಿತು ಶ್ರೀರಾಮನಿಗೇ ಸರ್ಟಿಫಿಕೇಟ್
ಗರತಿಗೆ ಗರತಿಯು ಎನ್ನುತ ಕುಂಟಣಗಿತ್ತಿಯು ಪೇಳುವ ಪರಿ ಇದು ಥೇಟ್!

★★★

ಕಾರ್ಪೊರೇಷನ್ ಕಾಂಪ್ಲೆಕ್ಸ್‌ನಲ್ಲಿ ಸಾರಿಗೆ ಅದಾಲತ್ - ಸುದ್ದಿ

ಸಾರಿಗೇಕೆ ಅದಾಲತ್ತು ಪಲ್ಯ ಚಟ್ನಿ ಮಜ್ಜಿಗೆಮಳಿಗೇಕೆ ಇಲ್ಲವೆಂದ್ರು ಭಟ್ಟರು
ಸಾರ್‌ಗೆ ಮಾತ್ರ ಇರಲು ಅದಾಲತ್ತು ಮೋಸ ಸ್ತ್ರೀಗೆ ಎಂದು ಕನಲಿದರ್ವನಿತೆಯರು

★★★

ಕೈತುಂಬಾ ಸಂಪಾದಿಸುವ ಸಾಫ್ಟ್‌ವೇರಿಗರಿಗಿಂತಾ ಜೈಲಿನ ಖೈದಿಗಳೇ ಒಳ್ಳೆಯ ಊಟ ಮಾಡುತ್ತಾರೆ - ಸುದ್ದಿ


ಒಳಿತಂ ದಿನವುಂ ಬಿಡುತಾ ಬದುಕಂ ಮುದದಿಂ ಸವಿಪಾ ಖಳಮಂದಿಗೆ ಎಂದಿಗು ಸಂತಸವೇ
ಖಳರೊಳ್ ಖಳ ಮಂತ್ರಿಯು ತಿನ್ನುವ ರೀತಿಯೆ ತಿನ್ನಲು ಆವ ನಿಯತ್ತಿನ ವ್ಯಕ್ತಿಗು ಸಂಭವವೇ?

★★★

ರಾಜಾಕಾಲುವೆ ಮೇಲೆ ಕಟ್ಟಡ ಕಟ್ಟಲು ನಕ್ಷೆ ಮಂಜೂರು ಮಾಡಿದ ಅಭಿಯಂತರರ ವಿರುದ್ಧ ಕ್ರಮ - ಸುದ್ದಿ

ಬಾಲವು ಎಂದಿಗು ಸುಲಭವು ಪಿಡಿಯಲು ದೇಪವು ಮುಷ್ಠಿಗೆ ಮಿಗಿಲೆಂದೂ
ತಲೆಯೋ ಮಂತ್ರಿ ಕುತಂತ್ರದ ಜನಗಳು ಶಿಕ್ಷಾತೀತರೆ ಎಂದೆಂದೂ.

❖❖❖



ಮಗಳಿಗೆ ಒಂದು ಪತ್ರ

❖ ಹಾ.ರಾ.

ಪ್ರೀತಿಯ ಅಪರಂಜಿಗೆ,

ನಿನ್ನ ತಾಯಿ ಕೊರ‍್ಡವಂಜಿಯ ಆಶೀರ್ವಾದಗಳು. 'ಹ್ಯಾಪಿ ಬರ್ತ್‌ಡೇ ಟು ಯು'. ಊರು ಹೋಗು, ಕಾಡು ಬಾ ಎಂದು ಕರೆದಾಗ, ಅಮ್ಮ ಸ್ವಾತಂತ್ರ್ಯ ಬಯಸಿ ಕಾಡಿಗೆ ಹೊರಟು ಹೋದಳು, ಎಂದು ನಿನ್ನ ಯೋಗಕ್ಷೇಮವನ್ನು ವಿಚಾರಿಸುವ ಹತ್ತಿರದ ಹಿತೈಷಿಗಳಿಗೆ ಹೇಳುತ್ತ ಆಗಾಗ್ಗೆ ನನ್ನನ್ನು ಜ್ಞಾಪಿಸಿಕೊಳ್ಳುತ್ತೀಯ ಎಂಬ ಸಂಗತಿ ನನಗೆ ಹೇಗೋ ಗೊತ್ತಾಯ್ತು. ತಾಯಿಯಂತೆ ಮಗಳಲ್ಲವೆ? ದೂರದಲ್ಲಿದ್ದರೇನಂತೆ, ನಿನ್ನ ಮೇಲಿನ ಪ್ರೀತಿ ವಿಶ್ವಾಸ ಏನೂ ಕಡಿಮೆಯಾಗಿಲ್ಲ. ಇಷ್ಟಕ್ಕೂ ನಾನು ಈಗ ಕಾಡಿನಲ್ಲಿ ಸೀತಾಮಾತೆಯಂತೆ ಅಶೋಕ ವೃಕ್ಷದ ಕೆಳಗೆ ಕೂತು ಹಿಂದಿನ ಹೊನ್ನು ನುಡಿಗಳನ್ನು ಮೆಲ್ಲುತ್ತ ಕಾಲಹಾಕುತ್ತಿಲ್ಲ. ಕರ್ಮ ಬಂಧನದಿಂದ ಮುಕ್ತಳಾಗಬೇಕೆಂದು ನಾನು ಇಲ್ಲಿಗೆ ಬಂದಿದ್ದು. ಆದರೆ ಅದು ಅಸಾಧ್ಯ ಎಂದು ಗೊತ್ತಾಯಿತು. ಅಶೋಕ ವೃಕ್ಷದ ಕೆಳಗೆ ನಡೆದ ಒಂದು ಶೋಕ ಸಂಗತಿಯನ್ನು ನಿನಗೆ ಹೇಳಬೇಕೆಂದೆನಿಸುತ್ತಿದೆ! ವೃಕ್ಷದ ಕೊಂಬೆಗಳನ್ನು ಕಡಿಯಲು ಒಬ್ಬ ಮಂಗನಂಥ ಮನುಷ್ಯ ಬಂದು ಕೊಂಬೆಯನ್ನು ಕಡಿದು ಕಾಲಮೇಲೆ ಬೀಳಿಸಿಕೊಂಡು ಕುಂಟನಾದ. ನಾನು ಊರಿನಲ್ಲಿದ್ದಾಗಲೇ ಇಂತಹ ನೋಟವನ್ನು ಊಹಿಸಿಕೊಂಡು ಕಣಿ ಹೇಳಿದ್ದೆ. 'ಮೈಮರೆತಮಾದ'ನ ವ್ಯಂಗ್ಯ ಚಿತ್ರವನ್ನೂ ನಿನಗೆ ತೋರಿಸಿದ್ದೆ. ಜ್ಞಾಪಿಸಿಕೋ, ಆಮೇಲೆ ಅವನನ್ನು ಶಾಲೆಗೆ ಸೇರಿಸಿ ಪಾಠ ಹೇಳಿಕೊಟ್ಟ ಮೇಲೆ ಬುದ್ಧಿ ಬಂತು, ಪರಿಸರ ಜ್ಞಾನ ಉಂಟಾಯಿತು ಎಂದು ಊರಿನ ಜನ ಕೊಂಡಾಡಿದರಂತೆ. ಆಮೇಲೆ ಏನಾಯಿತು ಗೊತ್ತೆ? ಒಂದು ದಿನ ಗರಗಸ, ಮಚ್ಚು, ಕೊಡಲಿ ಸಮೇತ ಗ್ಯಾಂಗ್ ಕಟ್ಟಿಕೊಂಡು ಒಬ್ಬ ಬಂದು ಮರದ ಬುಡವನ್ನು ಗರಗಸದಲ್ಲಿ ಕುಯ್ದು ಉಳಿದಿದ್ದ ಕೊಂಬೆಗಳನ್ನೆಲ್ಲಾ ಕಡಿದು ಇಡೀ ಮರವನ್ನು ಲಾರಿಯಲ್ಲಿ ಹಾಕಿಕೊಂಡು ಹೊರಟುಹೋದ. ಅವನೆ ಮೈಮರೆತ ಮಾದ ಎಂದು ಆಮೇಲೆ ಗೊತ್ತಾಯಿತು! ನಾಡು ಈಗ ಪ್ರಗತಿ ಪಥದಲ್ಲಿ ಮುನ್ನಡೆಯುತ್ತಿದೆ ಅಂತ ಅವನು ನಿಮ್ಮೂರಿನಲ್ಲಿ ಭಾಷಣ ಮಾಡುತ್ತಿದ್ದಾನಂತೆ. ನಿನಗೆ ಅವ ಸಿಕ್ಕರೆ ಅವನೊಂದಿಗೆ ಒಂದು ಸಂದರ್ಶನ ಮಾಡು!

ಈಗಂತೂ ಕಾಡು ನಕ್ಸಲರ ಬೀಡಾಗಿದೆ. ಅದೆಷ್ಟು ಜನ ಪೋಲೀಸರು, ಪತ್ರಕರ್ತರು ರಾಜಕಾರಣಿಗಳು, ಭೂಗಳ್ಳರು, ಫ್ಯಾಕ್ಟರಿ ಮಾಲೀಕರು, ಬಿಲ್ಡರುಗಳು, ಗಣಿಗಾರರು, ಪರಿಸರ

ಪ್ರೇಮಿಗಳು, ವನ್ಯಮೃಗ ರಕ್ಷಕರು, ಮಿಲಿಟರಿ, ಬಾರ್ಡರ್‌ನ ಸೆಕ್ಯೂರಿಟಿದಳದವರು, ನೀಲಿನಕ್ಷೆಗಳನ್ನು ಹಿಡಿದು ಕೊಂಡು ಜೀಪುಗಳಲ್ಲಿ ಇಲ್ಲಿ ಓಡಾಡುತ್ತಾರೆಗೊತ್ತೆ! ನಾನು ಅವರನ್ನೆಲ್ಲ ನೋಡುತ್ತ ಮೈಮರೆತ ಮಾದನನ್ನು ನೆನೆಸಿಕೊಂಡು ನಗುತ್ತ ಕಾಲಹಾಕುತ್ತೇನೆ. ಅವರಿಗೂ ಕುಹ ಕಿಡಿಗಳನ್ನೂ, ಅಣಕುಗಳನ್ನೂ ಹೇಳಿ ನಗಿಸುತ್ತೇನೆ. ನಕ್ಸಲೈಟರು ಅದನ್ನೆಲ್ಲ ಕೇಳಿ ಕನ್ನಡಿಯಲ್ಲಿ ಮುಖ ನೋಡಿಕೊಂಡು ನಗುತ್ತ ಕೂರುತ್ತಾರೆ. ಪೋಲೀಸರು ಅವರನ್ನು ಹಿಡಿದು ಕೊಂಡು ಹೋಗಿ ಸರ್ಕಾರದಿಂದ ಬಹುಮಾನಗಿಟ್ಟಿಸುತ್ತಾರೆ. ಇವರ ಭಯದಿಂದ ಇಲ್ಲಿ ಗಿಡಗಳು ಅಷ್ಟೋ ಇಷ್ಟೋ ಇನ್ನೂ ಉಳಿದುಕೊಂಡಿವೆ. ಜಿಂಕೆಗಳೂ ಅಷ್ಟೇ! ಎಲ್ಲಿದ್ದರೇನು ದೇಶಸೇವೆಮಾಡುವುದಕ್ಕೆ?

ಇತ್ತೀಚೆಗೆ ನನ್ನ ಗಮನಕ್ಕೆ ಬಂದ ಒಂದು ಸಂಗತಿ ತುಂಬಾ ವಿಚಿತ್ರ. ಇಲ್ಲಿಯ ಪಶುಪಕ್ಷಿಗಳು, ಕ್ರೂರಪ್ರಾಣಿಗಳೂ ಕೂಡ ನನ್ನ ಕಥೆಗಳನ್ನು ಕೇಳಿ ನಗಲು ಪ್ರಾರಂಭಿಸಿವೆ. ನಗುವ ಸ್ವಭಾವವನ್ನು ಮನುಷ್ಯನಿಗೆ ಮಾತ್ರ ದೇವರು ಅನುಗ್ರಹಿಸಿದ್ದಾನೆ. ಮನುಷ್ಯರಿಗೂ ಪ್ರಾಣಿಗಳಿಗೂ ಇರುವ ವ್ಯತ್ಯಾಸವೆಂದರೆ ಇದೊಂದೆ ಎಂದು ಪ್ರಾಣಿಶಾಸ್ತ್ರಜ್ಞರು ಹೇಳುತ್ತಿದ್ದರಲ್ಲ! ಆದರೆ ಇದು ಸುಳ್ಳೆ – ಎಂದೆನಿಸಿ ನನಗೆ ಆಶ್ಚರ್ಯವಾಯಿತು. ನಾಡಿನ ಜನಗಳನ್ನು ನೋಡಿ ಇವು ನಗಲಾರಂಭಿಸಿವೆ ಎಂಬ ಅನುಮಾನ ನನ್ನನ್ನು ಕಾಡಲಾರಂಭಿಸಿತು. ಯಾಕೆಂದರೆ ನಾಡಿನಜನಗಳಿಗೆ ಹಾಸ್ಯದ ಪುಸ್ತಕ ಕೊಟ್ಟು ಓದುತ್ತಾ ನಗಿ ಎಂದರೆ ಅವರು ಅದನ್ನು ಓದುವುದೇ ಇಲ್ಲ, ಕಪಾಟಿನಲ್ಲಿಟ್ಟು ಬೀಗಹಾಕಿ ಟಿ ವಿ ಮುಂದೆ ಕೂತುಬಿಡುತ್ತಾರೆ, ಮೊಬೈಲ್‌ನ್ನು ಕಿವಿಗೆ ತಾಕಿಸಿಕೊಂಡು, ಬಾಯಲ್ಲಿ ಸಿಗರೇಟ್ ಸೇದುತ್ತ! ಹೀಗಾಗಿ ಅಂತರಂಗದಲ್ಲೂ ನಗುವಿಲ್ಲ! ಮೊಗದಮೇಲೂ ನಗುವಿಲ್ಲ! ಯಾಕೆ ಹೀಗೆ? ಮನುಷ್ಯನ ಒಳಮನಸ್ಸು ನಗಬೇಕು. ಆ ನಗು ಮೊಗದಲ್ಲಿ ಮಿಂಚಬೇಕು. ಅಂತಹ ಸ್ವಾಭಾವಿಕ ನಗುವಿನಿಂದ ಬಾಳು ಹಗುರಾಗಬೇಕು. ಸ್ವಾಭಾವಿಕವಾದ ಕಾರಣದಿಂದ ನಗೆ ಮಿಂಚಿನಂತೆ ಹೊಳೆಯಬೇಕು! ಹೀಗೆ ನಾನು ಹಿಂದೆ ಹೇಳುತ್ತಿದ್ದೆ. ಅಂತಹ ನಗು ಬದುಕನ್ನು ಎದುರಿಸಲು ಸಹಾಯಕವಾಗುತ್ತಿತ್ತು. ಈಗ ನಿಮ್ಮೂರಿನಲ್ಲಿ 'ಲಾಫಿಂಗ್ ಕ್ಲಬ್ಬು'ಗಳು ಇದೆಯಂತಲ್ಲ, ಡ್ರಿಲ್ ಮಾಸ್ಟರು ಶಿಳ್ಳೆ ಊದಿ 'ನಗಿ' ಎಂದು ಕಿರುಚುತ್ತಾನಂತೆ, ಎಲ್ಲರೂ ಬಾಯಿಂದ ಕೆಟ್ಟ ಸ್ವರಗಳನ್ನು ಹೊರಸೂಸಿ 'ಸ್ಟಾಪ್' ಎಂದಾಗ ತಕ್ಷಣ ಬಾಯಿ ಮುಚ್ಚಿಕೊಂಡು ಬಿಡುತ್ತಾರಂತೆ! ನಕ್ಕೆವು ಎಂದು ಕೊಳ್ಳುತ್ತಾರಂತೆ – ಇಲ್ಲಿಗೆ ಬಂದಿದ್ದ ಫ್ಯಾಕ್ಟರಿ ಮಾಲೀಕನೊಬ್ಬ ಹೀಗೆ ಹೇಳಿದ. ಅಯ್ಯೋ ಪಾಪ ಎನ್ನಿಸಿತು ನನಗೆ. ನನ್ನ ಕಾಲದಲ್ಲಿ ಟೈಮ್ ಟೇಬಲ್ ಪ್ರಕಾರ ಜನಗಳು ನಗುವುದನ್ನು ಅಭ್ಯಾಸಮಾಡುತ್ತಿರಲಿಲ್ಲ, ಏನನ್ನಾದರೂ ಓದಿದಾಗ, ಓದಿದ್ದು ಲೇಟಾಗಾದ್ರೂ ಅರ್ಥವಾದಾಗ ಮಾತುಮಾತು ಮಥಿಸಿ ಮನಸ್ಸು ತಿಳಿಯಾಗಿ ನಕ್ಕರೆ ಆನಗು ಮಿಂಚುತ್ತಿತ್ತು ತುಟಿಯಂಚುಗಳಲ್ಲಿ! ಅರಿತು ನಗುವ ಕಲೆಗಾರಿಕೆಯನ್ನೂ ಅಭ್ಯಾಸಮಾಡಿಕೊಳ್ಳುತ್ತಿದ್ದರು. ಅಂತಹ ಅರಿವಿನ ನಗೆಯನ್ನು ಹಂಚುತ್ತ ಹೋದಾಗ ಆಗಲೂ ಕೆಲವರು ಹಿತೈಷಿಗಳು 'ನಮಗೆ ನಗುವೇ ಬರುತ್ತಿಲ್ಲ ಇತ್ತಿಂದೀಚೆಗೆ' ಎಂದು ರಾಗ ಎಳೆಯುತ್ತಿದ್ದರು, ಅದಕ್ಕೂ ಹಿಂದಿನ ಹಳೆಕಾಲದ ನಗೆ ಬುಗ್ಗೆಗಳನ್ನು ಜ್ಞಾಪಿಸಿಕೊಂಡು. ಇದಕ್ಕೆ ಕಾರಣ ನಾನು ನಗುವನ್ನು

ಮಾರ್ಮಿಕವಾಗಿ ಅಂತರ್ ಮುಖಿಯನ್ನಾಗಿ ಮಾಡುವ ಸಾಹಸದಲ್ಲಿ ತೊಡಗಿದರು. ಈ ಪ್ರಯತ್ನದಲ್ಲಿ ನಾನು ಸಫಲತೆಯನ್ನು ಪಡೆದೆ. ಆಹೊತ್ತಿಗೆ ನನಗೆ ವೈರಾಗ್ಯಬಂದು ಬಡಿಯಿತು! ಬಂಧನಗಳನ್ನು ಕಳಚಿಕೊಂಡು ಸ್ವಾತಂತ್ರ್ಯವನ್ನು ಸವಿಯಬೇಕೆಂಬ ಹುಚ್ಚುಹಿಡಿಯಿತು. ತಿಳಿಹಾಸ್ಯದಿಂದ ಆಧ್ಯಾತ್ಮಿಕ ಲೋಕವನ್ನು ಪ್ರವೇಶಿಸಬಹುದೆಂಬ ಸತ್ಯವನ್ನು ಕಠಿಣ ಹೃದಯಿಗಳಿಗೂ ಹೇಳಿದೆ. ನಗೆ ಮದ್ದಿನಿಂದ ಒಳಮನಸ್ಸಿಗೆ ಸ್ವಲ್ಪ ನೆಮ್ಮದಿ ಸಿಕ್ಕಿತು. ಈ ಚಿಕಿತ್ಸಾ ಕ್ರಮವನ್ನು ನಿನಗೂ ಅಷ್ಟೋ ಇಷ್ಟೋ ಹೇಳಿಕೊಡುತ್ತಲೇ ಬಂದೆ. ನೀನೂ ಸಹ ಸಂಪ್ರದಾಯವನ್ನು ಉಳಿಸಿಕೊಂಡು ನಗು ಮುಖವನ್ನು ತಿಂಗಳ ಬೆಳಕಿನಲ್ಲಿ ಬೆಳಗಿಸುತ್ತಿರುವುದು ನನಗೆ ಹೆಮ್ಮೆಯ ವಿಷಯ!

ಹಾಗೆ ನೋಡಿದರೆ ನನ್ನ ಕಾಲಕ್ಕಿಂತ ನಿನ್ನ ಕಾಲವೇ ಚೆನ್ನ ಎನಿಸುತ್ತದೆ ನನಗೆ. ನನ್ನ ಕಾಲದಲ್ಲಿ ಏನಿತ್ತು, ಯುದ್ಧ- ರೇಷನ್ನು- ಡಿಪೋ- ಫ್ಯಾಮಿಲಿ ಪ್ಲಾನಿಂಗು- ಡಿ.ಎ, ಮೆಲುಕು ಹಾಕೋಕೆ ಒಂದಿಷ್ಟು ದೀಕ್ಷಿತರ ಪಕೋಡ- ಮಾಲಕ್ಷ್ಮಮ್ಮನಸ್ಯಾವಿಗೆ, ಈಗ ನೋಡು ಎಂತೆಂಥ ಸರ್ಕಾರಗಳು, ಎಷ್ಟೊಂದು ಜನ ಮಂತ್ರಿಗಳು- ಪಕ್ಷಾಂತರ, ಲಕ್ಷಾಂತರಗಳು- ಅಪವಿತ್ರ ಮೈತ್ರಿಗಳು ಅಂದರೆ ಮೇಲೆ ಚತ್ರಿ, ಕೈಯಲ್ಲಿ ಕತ್ರಿ- ಪ್ರತಿಯೊಂದು, ಮಿತ್ರ ಅಂದರ ಬರಕೆ - ಹಂಗ್ ಪಾರ್ಲಿಮೆಂಟ್, ಒಳಗೆ ಇಂಗುತಿಂದ ಕಪಿಗಳು. ಅಂತೂ ಸುಣ್ಣ ಬಣ್ಣ ಬಳಿದು ಚಿತ್ರ ಬಿಡಿಸುವುದಕ್ಕೆ ನಿನಗೆ ಸೊಗಸಾದ ಕ್ಯಾನ್‌ವಾಸ್ ಸಿಕ್ಕಿದೆ. (ನಿಷ್) ಕಾಮಕರ್ಮಯೋಗ, ಪ್ರಚಾರಪ್ರಯೋಗ, ಧರ್ಮದರ್ಶನ, ಪರಸ್ಥಳ ವಾಸ್ತವ್ಯ ಭ್ರೂಣ ಹರಣ, ಅಧಿಕಾರ ಹಸ್ತಾಂತರಕ್ಕೆ ಉಳಿದಿರುವ ದಿನಗಳ ಎಣಿಕೆ, 'ಮಕ್‌ಮಲ್ ಟೋಪಿ'. ಇಂದು 100ನೇ ಪ್ರಯೋಗ ಇವೆಲ್ಲ ನಿನ್ನ ಕಾಲದ ತಿಳಿನಗೆಯ ಕಾರಂಜಿಗಳು!.

ಕಾಲಕ್ಕೆ-ಸನ್ನಿವೇಶಕ್ಕೆ ತಕ್ಕ ಹಾಗೆ ಹಾಸ್ಯವೂ ಚೂಪಾಗುತ್ತ ಹೋಗುತ್ತದೆ. ಕಾಲಸರಿದಂತೆಲ್ಲ ಸಮಾಜ ಮತ್ತು ಸರ್ಕಾರದ ಧೋರಣೆಗಳು ಜನಸಾಗರದಲ್ಲಿ ನಗೆಯ ಅಲೆಗಳನ್ನು ಎಬ್ಬಿಸದೆ ಇದ್ದೀತೆ. ವಿಕೃತ ಅಟ್ಟಹಾಸಗಳೇ ಮೆರೆಯುತ್ತಿರುವಾಗ ನಗುವಿಗೇನು ಬರ ನಿನಗೆ. ಕಂಪ್ಯೂಟರ್ ಮುಂದೆ ಕೂತು ಮೌಸ್ ಆಡಿಸುತ್ತಿದ್ದರೆ ಎಲ್ಲಾ ನೈಸಾಗಿಯೇ ಕಾಣಿಸುತ್ತದೆಯಂತೆ. ಐಸ್‌ಪೈಸ್ ಆಟ ಆಡಿದ್ದೆ, ಈ ನೈಸ್‌ನೈಸ್ ಆಟ ನನಗೆ ಗೊತ್ತೇ ಇರಲಿಲ್ಲ! ನೀನು ಅದೃಷ್ಟಶಾಲಿನಿ! ಮುಳ್ಳಿನ ಹೂಗೊಂಚಲನ್ನು ಮುಡಿದಿದ್ದೀಯ, ಭೇಷ್! ಬಳೆ ಬಿಚ್ಚೋಲೆಯಲ್ಲೇ ಇಂಟರ್‌ನೆಟ್‌ಗೆ ಪ್ರವೇಶಿಸಿದ್ದೀಯ. ಅದಕ್ಕೆ ITBT ಗಳು ನಿನ್ನನ್ನು ದೂರ ಇಡಲು ಪ್ರಯತ್ನಿಸುತ್ತಿವೆ. ಆದರೆ ಅದಕ್ಕೆ ನಾಡಿನ ಸವಾಲೆ ಆಗಿರುವೆ ನೀನು. ವೈಜ್ಞಾನಿಕ ಜಗತ್ತಿನಲ್ಲಿ ಇದು 'ಕೌಂಟ್ ಡೌನ್' ಕಾಲ. ಆಟಂಬಾಂಬ್ ಸಿಡಿಸುವುದಕ್ಕೆ ಎಲ್ಲಾ ದೇಶಗಳೂ ಅಣುರಣ ಮಾಡುತ್ತಿರುವಾಗ ಶಿವಕಾಶಿ ಆನೆ ಪಟಾಕಿಗೆ ಯಾರು ಬೆದರುತ್ತಾರೆ. 'ನ್ಯೂಕ್ಲಿಯರ್ ಡೀಲ್ ಅನ್ ಕ್ಲಿಯರ್'' ಎನ್ನುತ್ತಾರೆ. ಎಡ ಪಂಥದವರು ಅಂದರೆ ಬಲ ಇಲ್ಲದವರು. 'ಅದರ್‌ವೈಸ್ ವಾರ್' ಎನ್ನುತ್ತಾರೆ ಬಲ ಪಕ್ಷದವರು ಅಂದರೆ ಎಡ ಸ್ವಾಧೀನ ಇಲ್ಲದವರು! ಇದನ್ನೆಲ್ಲ ನಾನು ರೇಡಿಯೋ ಮಿರ್ಚಿಯಲ್ಲಿ ಕೇಳಿದೆ, ಬೊಂಬೆ ಆಡಿಸುತ್ತ! ನೀನೂ ದನಿಗೂಡಿಸಬಹುದು: ಹಂಗ್‌ಪಾರ್ಲಿಮೆಂಟಿಗೇಕೆ, ಅಮೆರಿಕದ ಹಂಗು ಅಂತ! ಈ

ಅಪಾಂತರವಲ್ಲಿ ಅಟಂ ಬಾಂಬ್ ಎಲ್ಲಿ ಸಿಡಿದು ಬಿಡುತ್ತದೋ ಎಂಬ ಆತಂಕ ಜನಗಳಿಗೆ. ಇದು ವೈಜ್ಞಾನಿಕ ಪ್ರಗತಿಯ ಅಣಕು ನಿನ್ನ ಕಾಲಕ್ಕೆ!

ಮಗಳೆ ನಿನಗೂ 25 ತುಂಬಿತು. ಷಹರಿನ ಜನಗಳ ಮಧ್ಯೆ ಬಾಳುವವಳು ನೀನು. ಅಂದ ಮೇಲೆ ನಿನಗೂ ಆಸೆ ಅತೃಪ್ತಿ ಇಲ್ಲದೆ ಇಲ್ಲ. ನಿನಗೆ ಒಂದೆರಡು ಬುದ್ಧಿ ಮಾತು ಹೇಳುವುದು ತಾಯಿಯಾದವಳ ಕರ್ತವ್ಯ ಎಂದು ಭಾವಿಸುತ್ತೇನೆ. ಅಪ್ಪಟ 24 ಕ್ಯಾರೆಟ್ ಗುಣ ನಿನ್ನದು. ಆಡಿಸೋಕೆ ನಿನ್ನ ಕಂಕಳಿಗೂ ಒಂದು ಮಿಸಿಲಿಯಂಥ ಬೊಂಬೆ ಬ್ಯಾಡವೆ? ಎಂದೆನಿಸುವುದು ಸಹಜ. ಆದರೆ ಬೆಳೆಯುತ್ತಿರುವ ನಿನ್ನ ಬಳಗ ಕಂಡು ಸಂತೋಷ ಪಡುತ್ತಿದ್ದೇವೆ. ಆದರೂ ಆತಂಕ ಹೋಗಿಲ್ಲ. ಈಗ ಎಲ್ಲೆಲ್ಲೂ ಕ್ರೂರ ಪತಿಗಳ ಕೂಟ. ಅವರಲ್ಲಿ ಕೆಲವರು ಕ್ರೂರಪತಿಗಳೂ ಹೌದು. ವಿಚ್ಛೇದನ ಬಯಸಿ, ಅದೆಷ್ಟು ಜನ ನಿನ್ನ ಅಕ್ಕತಂಗಿಯರು ಕೋರ್ಟ್ ಮೆಟ್ಟಿಲುಗಳ ಮೇಲೆ ಕೂತು 'ಕೌಂಟ್‌ಡೌನ್' ಎಣಿಸುತ್ತಿದ್ದಾರೆ ಎಂಬ ಸುದ್ದಿಗಳನ್ನು ಭೂಗಳ್ಳರ ಜತೆ ಇಲ್ಲಿಗೆ ಬರುವ ಲಾಯರಿಂದ ನಾನು ತಿಳಿದುಕೊಳ್ಳುತ್ತೇನೆ. ಆ ವಿಚಿತ್ರಗಳನ್ನು ಕೇಳಿದರೆ ನೀನು ಹೀಗಿರುವುದೇ ಲೇಸೆಂದು ಮನಸ್ಸಿಗೆ ಶಾಂತಿ ತಂದು ಕೊಂಡೆ. ಮೆಟ್ರೋ ಸಿಟಿಯ ಮೆಟ್ರೋಮೋನಿಯಲ್ ಕಥೆಗಳನ್ನು ನಿನ್ನಿಂದ ತಿಳಿದು ಕೊಳ್ಳುವ ಆಸೆ ನನಗೆ. ಹೊಸ ಕಾಲದ ವಿನೋದಗಳಿಗೆ ಈಗ ಏನೂ ಕಡಿಮೆ ಇಲ್ಲ. ಅಂತಹ ಹೆಂಗಳೆಯರ ಮನದಲ್ಲಿ ನಗುವನ್ನು ಮೂಡಿಸಿ ಅವರು ಕಷ್ಟಗಳನ್ನು ಮರೆಯೋ ಹಾಗೆ ಮಾಡಿದರೆ ಆಗ ನನ್ನ ಬಾಳಿಗೂ ಮುಕ್ತಿ. ಆಗ ರಾಷ್ಟ್ರಾಧ್ಯಕ್ಷರು ನಿನಗೆ ಚಿನ್ನದ ಪ್ರಶಸ್ತಿಯನ್ನು ಕೊಟ್ಟೇ ಕೊಡುತ್ತಾರೆ. ಆದಿನ ಬರಲಿ ಎಂದು ಹಾರೈಸುತ್ತೇನೆ. ನಿನಗೂ ಪ್ರತಿಭಾ ಪುರಸ್ಕಾರ.

ಆಧುನಿಕ ಅಪರಾಧ ತನಿಖಾಶಾಸ್ತ್ರದಲ್ಲಿ ಸುಪ್ತ ಮನಸ್ಸಿನಲ್ಲಿ ಹುದುಗಿರುವ ಅರ ಬೆರಕಲು ಆಶೋತ್ತರಗಳನ್ನೂ, ಪಾಪ ಪ್ರಜ್ಞೆಯನ್ನೂ ಅರಿಯಲು ವ್ಯಕ್ತಿಗಳನ್ನು ಮಂಪರು ಪರೀಕ್ಷೆಗೆ ಒಳಪಡಿಸುವ ಸಾಧನಗಳನ್ನು ಉಪಯೋಗಿಸುತ್ತಾರಂತಲ್ಲ ನಿನಗೆ ಅದರ ಅವಶ್ಯಕತೆ ಇಲ್ಲ. ಹುಟ್ಟಿನಿಂದಲೇ ನಿನಗೆ ಬಂದಿರುವ 'ವಕ್ರ ದೃಷ್ಟಿ' ಯೊಂದೇ ಸಾಕು ವ್ಯಕ್ತಿಗಳನ್ನೂ ಘಟನೆಗಳನ್ನೂ 'ಸ್ಕ್ಯಾನ್' ಮಾಡಿ ಒಳಗುಟ್ಟನ್ನು ಹೊರಗೆಡುವುದಕ್ಕೆ, ಅರಿವು ಮೂಡಿಸಿ ನಾಡು-ಸಮಾಜ ನಗುವಂತೆ ಮಾಡುವುದಕ್ಕೆ! ಆಗಮಾತ್ರ ನಿನ್ನ 'ಐಡೆಂಟಿಟಿ' ಉಳಿಯುವುದು! ನಿನ್ನ ಸಾಹಸಕ್ಕೆ ಶುಭಕೋರುತ್ತೇನೆ.


ಈಗಲೂ ನಿನ್ನ ಮನಸ್ಸನ್ನು ಕಾಡುತ್ತಿರುವ ಪ್ರಶ್ನೆ ನನಗೆ ಗೊತ್ತು. ಜನಾಭಿಪ್ರಾಯ ತಿಳಿಯುವ ಕುತೂಹಲ. ಅದೆಲ್ಲ ಶುದ್ಧ ಸಿನಿಮೀಯ! ಬೋರ್ಡ್ ನೋಡಿ ಬಡವ ಕೆಟ್ಟ ಅಂತಾಗುತ್ತದೆ ಅಷ್ಟೇ! ತಿಳಿದೂ ತಿಳಿದೂ ಈ ಪ್ರಶ್ನೆಗೆ ನಾನೇ ಸಮಾಧಾನ ಹೇಳುತ್ತೇನೆ ಕೇಳು. ಅಂದು ಮೈಸೂರ ಕನ್ನಡಿಗ ಅಂದಿದ್ದೇನು? ''ನೀನು ಮನೇಲಿದ್ದಿದ್ದೇ ತಿಳೀಲಿಲ್ಲವಲ್ಲೇ ಕೊರವಂಜಿ'' ಎಂದು ತಾನೆ ಮೈಮುರಿದ, ಆಕಳಿಸಿದ, ಈಗಿನ್ನೇನು. ''25 ವರ್ಷದಿಂದ ಇಲ್ಲೇ ಇದ್ದೀಯ ಅಪರಂಜಿ, ನೀನು ಒಂದು ಚುನಾವಣೆಗೂ ನಿಲ್ಲಲೇ ಇಲ್ಲ. ವೋಟುಕೇಳೋಕೆ ಬರಲೇ ಇಲ್ಲ, ನಿನಿದ್ದೀಯ ಅಂತ ನನಗೆ ಹೇಗೆ ಗೊತ್ತಾಗಬೇಕು-ಬಿಡು'' ಎಂದಾನು ಸುವರ್ಣ ಕರ್ನಾಟಕದ ಕನ್ನಡಿಗ! ಆದರೆ, ಚಿಂತೆ ಮಾಡಬೇಕಾದ ವಿಷಯವೇ ಅಲ್ಲ ಇದು.

ನಾಡಿನಲ್ಲಿ ಬರೀ ರಾಜಕಾರಣಿಗಳು, ಟೆರರಿಸ್ಟುಗಳು ಮಾತ್ರ ಇಲ್ಲ. ಸೂಕ್ಷ್ಮ ನಗೆಯನ್ನು ಅವರು ಅರ್ಥಮಾಡಿಕೊಳ್ಳದೆ ಹೋಗಬಹುದು. ಆದರೆ ಒಂದಲ್ಲ ಒಂದಿನ ನಿನ್ನ ನಗು ಅವರನ್ನು ತಟ್ಟೇತಟ್ಟುತ್ತದೆ! ಆಗ ಇದರಲ್ಲೇನೋ ಇದೆ, ಒಳ ಅರ್ಥ ಇದೆ ಎಂಬ ಅರಿವು ಮೂಡುತ್ತದೆ ಅವರಿಗೆ. ನಿನ್ನನ್ನು ಓಲೈಸಿ ಕುಣಿಸುವ ಜನ ಇದ್ದೇ ಇದ್ದಾರೆ. ನಿನ್ನ ಬೆಳ್ಳಿ ಹಬ್ಬ ಅವರಿಗೆ ಸಂತಸತಂದೇ ತರುತ್ತದೆ. ನನ್ನ ಕೈಲಿ ಆಗದೆ ಇದ್ದದನ್ನು ನೀನು ಮಾಡಿತೋರಿಸುತ್ತಿದ್ದೀಯ. ಇದಕ್ಕಿಂತಲೂ ಹೆಮ್ಮೆಪಡುವ ವಿಚಾರ ಯಾವುದಿದೆ. ನಿನ್ನ ಮೊಗದಲ್ಲಿ ತಿಳಿನಗೆಯ ಕಾರಂಜಿ ಸದಾ ಚಿಮ್ಮುತ್ತಿರಲಿ.

ಇಂತು ನಿನ್ನ ಶ್ರೇಯೋಭಿಲಾಷಿ

ಕೊರವಂಜಿ

❖❖❖



ಅಭಿನಂದನೆಗಳೊಂದಿಗೆ



ಅಪರಂಜಿಯ ಅಭಿಮಾನಿ

With Best Compliments from

Moksha Digital Software Pvt. Ltd.

(Software Development, Dealers in LG Computers)

Ph: 9900261312

No. 21, 13th Main, Malleswaram,

Bangalore - 560 055

ಐನೋರಿಗೆ ಐವತ್ತು ತುಂಬ್ತು

✧ ಮಣಿ

''ನಮಸ್ಕಾರಾ ಸಾ. ಯೇನ್ಸಾ? - ಯಾಕ್ಸಾ ನೆನ್ನೆ ಪಂಕ್ಸನ್‌ಗೆ ಬರ್ಲಿಲ್ಲ?''

''ಯಾವ ಫಂಕ್ಷನ್ನು ತಮ್ಮಣ್ಣಾ?''

''ಅದೇಸಾ - ನಮ್ ಸಾಯಿತಿ ಸುಬ್ಬಣ್ಣೋರ ಸುವರ್ಣಮೋತ್ಸವ. ಅವ್ರು ಕತೆ ಬರೆಯೋಕೆ ಸುರುಮಾಡಿ ಐವತ್ತು ವರ್ಸ ತುಂಬ್ತಲ್ಲ ಆ ಪಂಕ್ಸನ್ನು.''

''ಇಲ್ಲ ತಮ್ಮಣ್ಣ ಅಕಸ್ಮಾತ್ ಯಾರೋ ಬಂಧುಗಳು ಬಂದ್ಬಿಟ್ರು - ಬರೋಕಾಗಿಲ್ಲ. ಹೋಗ್ಲಿ ಫಂಕ್ಷನ್ ಹೇಗಾಯ್ತಪ್ಪಾ?''

''ಬಲೇ ಗ್ರಾಂಡಾಗಿತ್ತು ಸಾ - ಊವು-ಲೈಟು-ಅಲಂಕಾರ-ಮೈಕು-ಆಡು-ಐಕಾಸಾಗಿತ್ತು ಸಾ. ನಮ್ಮೈನೋರ್ನ ನೋಡ್ಬೇಕಾಗಿತ್ತು - ಮೈಸೂರು ಜರಿ ಪೇಟ - ನೆರಿಗೆ ಆಕಿರೋ ಗರಿ ಗರಿ ಸರಿಗೆ ಪಂಚೆ - ಕರಿ ವುಲ್ಲಿಕೋಟು - ಪಕ್ಕಾದ್ಗೆ ಅಮ್ಮಾವ್ರು - ರೇಸ್ಮೆ ಸೀರೆ - ಅಣೆ ತುಂಬ ಕುಂಕ್ಮ - ಮೈಗೆಲ್ಲಾ ಅರಿಸ್ನ - ಕೈತುಂಬ ಬಳೆ - ತಲೆತುಂಬ ಊವು - ತಳತಳಾಂತಿದ್ರು - ಪಳಪಳಾಂತಿದ್ರು - ಗಮಗಮಂತಿದ್ರು. ದೃಸ್ಟಿವೊಡಿಯೋ ಅಂಗಿದ್ರು - ವೂಟಾನೂ ಅಸ್ಟೇ ಸಾ - ಮದ್ವೆ ಊಟ ಯಿದ್ದಂಗಿತ್ತು - ಸಕತ್ತಾಗಿತ್ತು.''

''ಹೋಗ್ಲಿ ಬಿಡು ತಮ್ಮಣ್ಣ - ಸಂತೋಷ''

''ನೆನ್ನೆ ಬಲೆ ಬಿಸಿಯಾಗಿದ್ರು ಸಾ - ಮಾತಾಡ್ಸಾಕಾಗ್ಲಿಲ್ಲ - ಯೀವತ್ತು ಸಾಯಂಕಾಲ ಅಂಗೇವೋಗಿ ಬರಾನ.''

''ಹಾಗೇ ಆಗ್ಲಿ.''

ತಮ್ಮಣ್ಣ ಸಾಯಂಕಾಲ ಆರುಗಂಟೆಗೆ ಬಂದ. ಸ್ವಲ್ಪ ಹೂವು-ಹಣ್ಣು-ಒಂದು ಉಡುಗೊರೆಯೊಂದಿಗೆ ಅವರ ಮನೆಗೆ ಹೋದ್ವಿ.

ಸಾಹಿತಿ ಸುಬ್ಬಣ್ಣೋರು ನೆಟ್ ಬನೀನು - ಪಂಚೆಧಾರಿಗಳಾಗಿ ಏನೋ ಯೋಚಿಸ್ತಾ ವರಾಂಡದಲ್ಲಿ ಕುಂತಿದ್ರು -

''ನಮಸ್ಕಾರ''

''ನಮಸ್ಕಾರ ಬನ್ನಿ - ಬಾಪ್ಪ ತಮ್ಮಣ್ಣ ಕೂತ್ಕೊಳ್ಳಿ. ಏನ್ ಸಮಾಚಾರ? ಹೇಗಿದ್ದೀರ?

''ಚೆನ್ನಾಗಿದ್ದೀವಿ ಸಾರ್. ನೆನ್ನೆ ಬರೋಕಾಗ್ಲಿಲ್ಲ ದಯವಿಟ್ಟು ಕ್ಷಮಿಸಬೇಕು - ಕಾರಣ ತಿಳಿಸಿದೆ.

''ಪರವಾಗಿಲ್ಲ ಬಿಡಿ - ಅನಿವಾರ್ಯವಿದ್ದಾಗ ಏನ್ಮಾಡೋಕಾಗುತ್ತೆ?''

''ಕಾರ್ಯಕ್ರಮ ಬಹಳ ಸೊಗಸಾಗಿತ್ತಂತೆ - ಬಹಳ ಸಂತೋಷವಾಯ್ತು.''

''ನೋಡಿ - ನಿಜ ಹೇಳ್ಬೇಕೂಂದ್ರೆ - ನನ್ಗೆ ಇಷ್ಟವೇ ಇರ್ಲಿಲ್ಲ. ಸ್ನೇಹಿತರು - ಅಭಿಮಾನಿಗಳ ಬಲವಂತಕ್ಕೆ ಒಪ್ಕೊಳ್ಬೇಕಾಯ್ತು.''

''ಇರ್ಲೀ ಸಾರ್ - ಎಂತೆಂತಹ ಲೇಖನಗಳನ್ನು ಬರೆದಿದ್ದೀರ - ಎಂತೆಂತಹ ಕೃತಿಗಳನ್ನು ರಚಿಸಿದ್ದೀರ - ಐವತ್ತು ವರ್ಷಗಳ ಸಾಹಿತ್ಯ ಸೇವೆ.''

''ಅಯ್ಯೋ ಸುಮ್ನೆ ಐವತ್ತಾದ್ರೆ ಏನಾಯ್ತು? ಸಾಧನೆ ಏನು? ಫಲಿತಾಂಶ ಏನು - ಸೂಕ್ಷ್ಮವಾಗಿ ನೋಡಿದ್ರೆ ಏನೂ ಆಗಿಲ್ಲ, ಆಗಬೇಕಾದ್ದು ಬೇಕಾದಷ್ಟಿದೆ. ಸುಬ್ಬಣ್ಣೋರಿಗೆ ಐವತ್ತಾಯ್ತು. ಸುವರ್ಣಮಹೋತ್ಸವ ಆಯ್ತು- ಅಷ್ಟೆ.''

ಅಷ್ಟರಲ್ಲಿ -

ಮೊದಲನೇ ರೂಮಿನಲ್ಲಿ ಟಿ.ವಿ. ಆನ್, ಕೂಗಾಟ - ಹೊಡೆದಾಟ - ಬಡಿದಾಟ, ಛೀತ್ಕಾರ, ಸುಬ್ಬಣ್ಣೋರು ಒಂದು ವಿಧವಾಗಿ ನಕ್ಕರು. ಏನಿಲ್ಲ - ಅದು ಟಿ.ವಿ. ಧಾರಾವಾಹಿ. ''ಪಾಳಾಪೋಗುಟ್ಟುಂ'' - ಅಂತ. ಅಂದ್ರೆ ''ಹಾಳಾಗ್ಹೋಗ್ಲಿ'' ಅಂತ. ಇದು 765ನೇ ಕಂತು.

''ಅಂದ್ರೆ ಎರಡು ವರ್ಷಗಳಲ್ಲಿ ಏನಾದ್ರೂ ಹಾಳಾಗ್ಹೋಗಿದ್ಯಾ ಸಾರ್?''

''ಓಹೋ! ಹೋಗ್ದೇ ಏನು? ಅಣ್ಣ ತಮ್ಮಂದಿರ ಮಕ್ಕಳ ಎರಡು ಕುಟುಂಬಗಳಲ್ಲಿ ಅಸೂಯೆ - ರೋಷ - ದ್ವೇಷ - ಜಿದ್ದು. ರೈಟ್ ಒಂದೂ ಇಲ್ಲ - ಎಲ್ಲ ರಾಂಗೇ. ರಾಂಗು-ಸಾಂಗು-ಗ್ಯಾಂಗು-ಲಾಂಗು-ಮಚ್ಚು-ಚಚ್ಚು-ಕೊಚ್ಚು-ಸರಿ-ಅವರು-ಅವರ ಹೆಂಡತಿ ಮಕ್ಕಳು ಎಲ್ಲಾ ಹಾಳಾಗ್ಹೋಗಿದ್ದಾರೆ. ಈಗ ಅವರ ಮೊಮ್ಮಕ್ಕಳು ಹಾಳಾಗ್ಹೋಗೋದ್ರಲ್ಲಿದ್ದಾರೆ. ಅವೆಲ್ಲಾ ಹಾಳಾಗ್ಹೋಗ್ಲಿ - ಮುಖ್ಯವಾಗಿ ಹಾಳಾಗ್ಹೋಗಿದ್ದು ಎರಡು:

''ಯಾವುದ್ದಸಾ ಅದು?''

''ಅಮೂಲ್ಯವಾದ ಸಮಯ - ಅಮೂಲ್ಯವಾದ ನಮ್ಮ ತಲೆ.''

ಅಷ್ಟರಲ್ಲಿ -

ಮೊದಲನೇ ರೂಮಿನ ಟಿ.ವಿ. ಆಫ್ - ಎರಡನೇ ರೂಮಿನ ಟಿ.ವಿ. ಆನ್. ಜೋರಾಗಿ ಅಳೋಧ್ವನಿ - ಗಂಡಸರು - ಹೆಂಗಸರು - ಮಕ್ಕಳು ಎಲ್ಲಾ ಗೊಳೋ ಅಂತ ಅಳ್ತಿದ್ದಾರೆ.

ಸುಬ್ಬಣ್ಣೋರು ನಕ್ಕರು - ಅದೇ ನಗೆ.

''ನೋಡಿ - ಇದು ಇನ್ನೊಂದು ಧಾರಾವಾಹಿ - ''ಅತ್ತ ಚಂಪಿನ ಕೋಡಲು'' ಅಂತ. ಅಂದ್ರೆ ''ಅತ್ತೆ ಸಾಯಿಸಿದ ಸೊಸೆ'' ಅಂತ. ಇದು 650 ಕಂತು ದಾಟಿದೆ.

ಅಂದ್ರೇ... ಒಂದೂ ಮುಕ್ಕಾಲು ವರ್ಷದಲ್ಲಿ ಎಷ್ಟು ಮಂದು ಸೊಸೇರೂ...?''

''ಓಹೋ! ಸಾಕಷ್ಟು ಮಂದಿ ಸತ್ತಿದ್ದಾರೆ. ಅತ್ತೆಯರೂ ಸತ್ತಿದ್ದಾರೆ - ಸೊಸೆಯರೂ ಅತ್ತೆಯರಾಗಿ ಅವರ ಸೊಸೆಯರನ್ನು ಸಾಯಿಸಿದ್ದಾರೆ. ಈಗ ನಾಲ್ಕನೆ ತಲೆಮಾರಿನ ಪುಟ್ಟ ಮಕ್ಕಳು ಅತ್ತೆ-ಸೊಸೆಯರಾಗಲು ಕಾಯುತ್ತಿದ್ದಾರೆ.''

ಇದರ ಮುಕ್ತಾಯವನ್ನು ನಾವು ನೋಡ್ತೇವೆಯೇ?''

''ಓಹೊ! ಅವ್ರು ಸಾಯೋವರ್ಗ್ಗೂ ನಾವು ಬದುಕಿದ್ರೆ. ಅಂದ್ರೆ - ಇದ್ರಲ್ಲಿ ಕತ್ತಿ-ಚಾಕು-ಚೂರಿ ಇಲ್ಲ - ಬರೀ ಗೋಳು - ಎಲ್ರೂ ಅಳೋರೇ. ಅರ್ಧ ಗಂಟೇಲಿ ಅರ್ಧ ಬಕೆಟ್ ಕಣ್ಣೀರು.''

''ಅಂಗಾದ್ರೆ ಯೆಸ್ಟು ಕರ್ಚೀಪು ಬೇಕುಸಾ?''

''ಕರ್ಚಿಫೇನು? ಬೆಡ್‌ಷೀಟೇ ಬೇಕು. ನೋಡಿ - ಮೊದಲನೆ ರೂಮು ದೊಡ್ಡ ಮಗನದು - ದೊಡ್ಡ ಸೊಸೆಯ ಊರು ಧರ್ಮಪುರಿ - ಎರಡನೆ ರೂಮು ಚಿಕ್ಕ ಮಗನದು - ಚಿಕ್ಕ ಸೊಸೆಯ ಊರು ಧರ್ಮಾವರಂ.

ಅಷ್ಟರಲ್ಲಿ ದ್ವಿತೀಯ ಪುತ್ರ ಬಂದ.

''ಅಣ್ಣ - ನಿಮ್‌ಫ್ರೆಂಡ್ ಶ್ಯಾಮಣ್ಣೋರು ಮಾರ್ನಿಂಗ್ ಮೀಟಾಗಿದ್ರಣ್ಣ. ಅವರ ಪೈಕಿ ಯಾರೋ ಆಸ್ಪಿಟಲ್‌ಗೆ ಅಡ್ಮಿಟ್ ಆಗಿದ್ರಂತೆ - ಫಂಕ್ಷನ್‌ಗೆ ಬರೋಕಾಗಿಲ್ವಂತೆ - ಎಕ್ಸೂಸ್ ಮಾಡ್ಬೇಕಂತೆ - ನಿನ್ಗೆ ಇನ್‌ಫಾರಂ ಮಾಡು ಅಂದು - ಓ.ಕೆ. ನೋ ಪ್ರಾಬ್ಲಂ ಇನ್‌ಫಾರಂ ಮಾಡ್ತೀನಿ ಅಂತ ಹೇಳ್ದೆ'' ಎಂದು ಹೇಳಿ ಸರ್ರನೆ ಹೊರಟ.

''ನೋಡಿ - ಇವನು ನನ್ನ ಎರಡನೆ ಮಗ ಫಾರಿನ್ ರಿಟರ್ನ್ಡ್'' - ಅಂದ್ರು ಕನ್ನಡ ಸಾಹಿತಿಗಳು.

''ಹೌದಾ? ಯೂಕೇನೋ? ಯೂಯಸ್ಸೇನೋ ಸಾರ್?'' ಅಂದೆ.

''ಎರಡೂ ಅಲ್ಲ - ಇಲ್ಲೇ ಲೋಕಲ್ ಫಾರಿನ್ನು.''

''ಲೋಕಲ್ ಫಾರಿನ್ನು! - ಇದೇನ್ಸಾ?''

''ಇವೆಯಲ್ಲಾ ಕಾಕ್ಸ್‌ಟೌನು - ಫ್ರೇಜರ್ ಟೌನು - ಮರ್ಫಿಟೌನು. ಪ್ರತಿದಿನ ಆಫೀಸು ಮುಗಿದ್ಮೇಲೆ ಅಲ್ಲೆಲ್ಲಾ ಸುತ್ಕೊಂಡೇ ಮನೆಗೆ ಬರೋದು ಇವ್ನ.''

''ಅಷ್ಟರಲ್ಲಿ - ಮೊದಲನೆ ರೂಮಿನಲ್ಲಿ ಒಂದು ಹಾಡು ''ಚೆಯ್ಯಿ ಚೆಯ್ಯಿ-ಚೆಯ್ಯಿ-ಚೆಯ್ಯಿ''

''ನೋಡಿ ಅವನು ನನ್ನ ಮೊದಲನೆ ಮಗ - ರಾಷ್ಟ್ರಭಾಷಾ ಪ್ರೇಮಿ'' ಅಂದ್ರು ಸುಬ್ಬಣ್ಣೋರು.

ಅವರ ಮಾತಿನ ಧಾಟಿಯಲ್ಲೇ ಅವರ ಮನೋಸ್ಥಿತಿ ಅರ್ಥವಾಯ್ತು.

ಏನೇ ಆಗ್ಲಿ ಸಾರ್ - ಐವತ್ತು ವರ್ಷಗಳ ಶ್ರಮ ಈಗ್ಲಾದ್ರೂ ಒಂದು ಬೆಲೆ ಬಂತಲ್ಲಾ ಅಂದೆ.

''ಐವತ್ತು ವರ್ಸ ಬರ್ಯೋಽದೊಂದ್ರೆ ಯೇನು ಸುಮ್ನೇನಾಸಾ? ನರಸೋತಮ್ಮ ಪೊಲ್ಬಿರ್ಯೋಽದು - ಲಕ್ಷ್ಮಮ್ಮ ಯೆಲ್ಲಿ ಪೊಲ್ಲಪ್ಪೆ? ಯಿಸ್ಟಾದ್ರೂ ಆಗ್ಲಿ ಬುಡಿ ಸಂತೋಸ'' ಅಂದ ತಮ್ಮಣ್ಣ.

ತಮ್ಮಣ್ಣ ಒಂದೇ ಮಾತಿನಲ್ಲಿ ಸಾಹಿತಿಯ ಹಣೆ ಬರಹವನ್ನು ಹೇಳ್ಬಿಟ್ಟ.

''ನೋಡಿ - ಎಷ್ಟು ವರ್ಷ ಕಳೆದಿದ್ದೀವಿ ಅನ್ನೋದಲ್ಲ ಎಷ್ಟು ಬೆಳೆದಿದ್ದೀವಿ ಅನ್ನೋದು ಮುಖ್ಯ. ಇಷ್ಟು ವರ್ಷ ಆಗಿದೆ ಅನ್ನೋದಲ್ಲ - ಎಷ್ಟು ಹರ್ಷ ಆಗಿದೆ ಅನ್ನೋದು ಮುಖ್ಯ - ನಮ್ಮ ಭಾಷಣಗಳು - ಉಪದೇಶಗಳು ಎಷ್ಟು ವಿಪುಲವಾಗಿವೆ ಅನ್ನೋದಲ್ಲ - ಎಷ್ಟು ಸುಫಲವಾಗಿವೆ ಅನ್ನೋದು ಮುಖ್ಯ. ಬರೀ ಬೋಧನೆಗಳಲ್ಲ - ಸಾಧನೆಗಳು ಇರಬೇಕು - ಬರೀ ಆದರ್ಶಗಳಲ್ಲ - ಅನುಷ್ಠಾನಗಳೂ ಇರಬೇಕು - ಕೇವಲ ನುಡಿಯೇ ಅಲ್ಲ'' ನಡೆಯೂ ಬೇಕು ''ಈ ದೃಷ್ಟಿಯಲ್ಲಿ ನೋಡಿದಾಗ ಬಹಳ ದುಃಖವಾಗುತ್ತೆ. ಈವತ್ತು ಕನ್ನಡಕ್ಕೆ ಕನ್ನಡದ ನೆಲದಲ್ಲೇ ನೆಲೆ ಇಲ್ಲ.''

ಅವರ ಮನೆಯಾಕೆ ಎರಡು ತಟ್ಟೆಗಳಲ್ಲಿ ನುಚ್ಚಿನುಂಡೆ - ಘಮಘಮ ತುಪ್ಪ - ಗೊಜ್ಜು ಅವಲಕ್ಕಿ ತಂದಿಟ್ಟರು.

ಇದೆಲ್ಲಾ ಏನ್ಸಾರ್?''

''ಪರವಾಗಿಲ್ಲ ತಗೊಳ್ಳಿ - ಇದು ನಮ್ಮಾಕೆ ಸ್ಪೆಷಾಲಿಟಿ'' ಉಪಹಾರವಾಯ್ತು - ಬಿಸಿ ಬಿಸಿ ಸ್ಟ್ರಾಂಗ್ ಕಾಫಿ ಆಯ್ತು. ಸಾಹಿತಿಗಳಿಗೆ ಹೂವು-ಹಣ್ಣು-ಉಡುಗೊರೆ ಸಮರ್ಪಿಸಿ. ಶುಭಾಶಯಗಳನ್ನು ಸಲ್ಲಿಸಿ - ನಮಸ್ಕರಿಸಿ ಅವರಿಂದ ಬೀಳ್ಕೊಂಡು ಅಲ್ಲಿಂದ ಹೊರಟ್ವಿ.

''ನೋಡಿದ್ರ್ಯಾಸಾ? - ಕನ್ನಡಕ್ಕೆ - ಕನ್ನಡ್ದ ನೆಲ್ದಾಗೇ ನೆಲೆ ಯಿಲ್ಲಾಂದ್ರು - ಕನ್ನಡ್ದ ಮನೆಯಾಗೈತಾಸಾ?'' ಅಂದ ತಮ್ಮಣ್ಣ.

''ಇಲ್ಲ ತಮ್ಮಣ್ಣ ನಿಜ - ಆದ್ರೂ ಶುದ್ಧ ಕನ್ನಡ ದಂಪತಿ - ಶುದ್ಧ ಕನ್ನಡ ತಿಂಡಿ - ನೋಡಿದ ಹಾಗಾಯ್ತು - ಸಂತೋಷವಾಯ್ತು.

''ಸತ್ಯಸಾ - ನಿಮ್ಮಾತು.''

''ಹೂಂ - ಏನೋ ನೊಂದ ಜೀವಿ - ಶ್ರಮಜೀವಿ - ಅಂತೂ ಆಯ್ತಲ್ಲ ಸಂಭ್ರಮದ ಐವತ್ತು'' ಅಂದೆ.

''ಯೇನ್ಸಾ ಪ್ರಯೋಜ್ನ? ಅವ್ರಿಗಾಗ್ಲೇ ಯಂಬತ್ತು'' ಅಂದ ತಮ್ಮಣ್ಣ.

''ಐವತ್ತು - ಎಂಭತ್ತುಗಳ ವಿಷಯ ಮಾತ್ನಾಡ್ತಾ ಗಡಿಯಾರ ನೋಡಿದೆ - ಆಗಿತ್ತು ಒಂಭತ್ತು.

ಇಬ್ಬರೂ ಮನೆ ಕಡೆ ಹೊರಟ್ವಿ.

✧✧✧

ನಮ್ಮ ಪುಟಾಣಿ ಕಂದಮ್ಮಗಳಿಗೆ ಎಬಿಸಿಡಿ ಕಲಿಸುತ್ತಾರಂತೆ...

❖ ವಿಕ್ರಮ ಕವಲಿ

ನಿಮ್ಮ ಈ ಅಂಕಣದಲ್ಲಿ ಮೇಲ್ಕಂಡ ತಲೆಬರಹವನ್ನು ಹೊತ್ತ ಲೇಖನ ನನ್ನ ಕಣ್ಣಿಗೆ ಬಿತ್ತು. ಬರಹಗಾರರು ಸರಕಾರದ ಈ ಯೋಜನೆಯ ಪರವಾಗಿ ಇರುವಂತೆ ಕಾಣಲಿಲ್ಲ. ಕಾರಣ ಏನು? ನೀವೆಲ್ಲ ಸರಕಾರದ ಸೂತ್ರದಾರರಾದ ನಮ್ಮ ಶಾಸಕರ ಕಳಕಳಿಯನ್ನು ಅರ್ಥಮಾಡಿಕೊಂಡೇ ಇಲ್ಲ. ''ಇವರೆಲ್ಲ ಚುನಾವಣೆಗಳ ಸಮಯದಲ್ಲಿ ಏನೇನೋ ವಾಗ್ದಾನ ಮಾಡುತ್ತಾರೆ, ಆನಂತರ ಅವರಿಗೆ ಅದರ ನೆನಪೇ ಇರುವದಿಲ್ಲ'' ಎಂದು ಆಡಿಕೊಳ್ಳುವುದೇ ಮೂಲವಾಗಿಬಿಟ್ಟಿದೆ. ನಿಮ್ಮ ಈ ತಪ್ಪು ತಿಳುವಳಿಕೆಗೆ ನಿಮ್ಮ ಇಂಗ್ಲೀಷ್ ಜ್ಞಾನ ಕಡಿಮೆ ಮಟ್ಟದಲ್ಲಿರುವುದೇ ಕಾರಣ ಎಂಬುದು ನಿಮಗೆ ಗೊತ್ತಿಲ್ಲ.

ಈಗ ನೋಡಿ ನೀವೆಲ್ಲ ಚುನಾವಣಾ ಸಮಯದಲ್ಲಿ, ನಿಮ್ಮ ಆತ್ಮಸಾಕ್ಷಿ ಹೇಳಿದಂತೆ, ಬೇರೆ ಬೇರೆ ಪಾರ್ಟಿ ಅಭ್ಯರ್ಥಿಗಳಿಗೆ ಮತ ಹಾಕುತ್ತೀರಿ. ಅಭ್ಯರ್ಥಿಗಳು ನಮ್ಮ ಪಾರ್ಟೀಗೆ ವೋಟು ಕೊಟ್ಟರೆ ನಿಮಗೆ ನಾವು 'Stable Government' ಕೊಡುತ್ತೇವೆ ಎಂದು ಪ್ರಚಾರ ಮಾಡಿದರು. ಅದನ್ನು ನೀವು ಮನಸ್ಸಿನ ಮೇಲೆ ತೆಗೆದುಕೊಳ್ಳದೆ ನಿಮಗೆ ಸರಿ ಕಂಡವರಿಗೆ ಮತ ನೀಡಿದಿರಿ. ಯಾವುದೇ ಪಕ್ಷಕ್ಕೆ ಸ್ಪಷ್ಟ ಬಹುಮತ ಬರಲಿಲ್ಲ. ಆಗ ಏನಾಗ ಬೇಕಾಯಿತೋ ಅದು ಆಯಿತು! ಕುದುರೆ ವ್ಯಾಪಾರ ನಡೆಯಿತು. ಕುದುರೆ ವ್ಯಾಪಾರ 'ಕುದುರಿ'ದ ಮೇಲೆ ರಾಜ್ಯಪಾಲರ ಎದುರಿಗೆ 'ತಲೆಗಣನೆ'ಯ ಪರೇಡ್ ಮಾಡಿಸಿ, ಸರಕಾರ ರಚಿಸಿದರು. ಅದರಲ್ಲಿ ತಾವು ತಂದ ತಮ್ಮ 'ಹೊಸ ಸರಕ'ನ್ನು ಲಾಯದಲ್ಲಿ ನಿಲ್ಲಿಸುವಂತೆ ಸಾಲು ಸಾಲಾಗಿ ನಿಲ್ಲಿಸಿದರು. 'ಲಾಯದ ಆಡಳಿತ' ಅಥವಾ 'ಲಾಯದ ಸರಕಾರ' ಎಂಬುವದೇ ಇಂಗ್ಲೀಷಿನಲ್ಲಿ "Stable - Government' ಎಂದು ಆಯಿತು. ಒಂದು ಶಬ್ದಕ್ಕೆ ಹಲವಾರು ಅರ್ಥಗಳಿರುವುದನ್ನು ತಿಳಿಯದೇ ನೀವು ಸರಕಾರವನ್ನು ದೂಷಿಸಿದಿರಿ! ಅದಕ್ಕೆಂದೇ ಈಗ ನಿಮಗೆಲ್ಲ ಸರಿಯಾದ ಇಂಗ್ಲೀಷ್ ಕಲಿಸಲು ಇಷ್ಟು ಕಳಕಳಿ!!

ಇನ್ನೂ ಒಂದು ಉದಾಹರಣೆಯನ್ನು ಕೊಡುತ್ತೇನೆ. ನಮ್ಮ ಆಫೀಸರುಗಳು ವರ್ಗಾವಣೆಯಾಗಿ ಒಂದು ಸ್ಥಾನದಿಂದ ಇನ್ನೊಂದು ಸ್ಥಾನಕ್ಕೆ ಹೋಗುತ್ತಾರಷ್ಟೇ. ಹಾಗೆ ಹೋಗುವಾಗ ಅವರಿಗೆ ಸೂಟ್‌ಕೇಸ್‌ನ ಅಗತ್ಯ ಬೀಳುತ್ತದೆ ಎಂಬುದು ಎಲ್ಲರಿಗೂ ತಿಳಿದ

ವಿಷಯ. ಈಗಿನ ದಿನಗಳಲ್ಲಿ ಒಮ್ಮೊಮ್ಮೆ 'ಅವರಿಗೆ ಇಷ್ಟವಾದ ಜಾಗೆ'ಗೆ, ಅಂದರೆ ಮೇಲಿನ ಜಾಗೆ ಆಗಿರಬಹುದು ಅಥವಾ ಇದೇ ಲೆವೆಲ್ಲಿನಲ್ಲಿ 'ಹೆಚ್ಚು ಆಕರ್ಷಣೆಯುಳ್ಳ' ಜಾಗೆ ಆಗಿರಬಹುದು, ವರ್ಗಾವಣೆ ಆಗಬೇಕಾದರೆ ವರ್ಗದ ಪ್ರಕ್ರಿಯೆ ನಡೆಯುವ ಮುನ್ನವೇ ಸೂಟ್‌ಕೇಸ್ ತನ್ನ ಒಂದು ಮಹತ್ತರ ಭೂಮಿಕೆಯನ್ನು ನಿಭಾಯಿಸಬೇಕಾಗುತ್ತದೆ. ಜಾಗೆಯ ಆಕರ್ಷಣೆಗೆ ಅನುಗುಣವಾಗಿ ಸೂಟ್ ಕೇಸ್‌ನ ಸೈಜು ನಿಗದಿಯಾಗುತ್ತದೆ. ಹೊಸ ಜಾಗೆಯಲ್ಲಿ ಅಧಿಕಾರ ವಹಿಸಿಕೊಂಡ ಬಳಿಕ ಅಲ್ಲಿ ಇವರ ಕಾರ್ಯಾರಂಭ ಆಗುತ್ತದೆ! ಸ್ವಲ್ಪ ಸಮಯ ಕಳೆದ ಮೇಲೆ ಒಂದು ಬೃಹತ್ ಸ್ಟೇಡಿಯಂ ಅಥವಾ ಕಟ್ಟಡಗಳ ಸಂಕೀರ್ಣವನ್ನು ನಿರ್ಮಿಸುತ್ತಾರೆ. ತಮ್ಮ ಈ ಸಾಧನೆಯ ಉದ್ಘಾಟನಾ ಸಮಾರಂಭಕ್ಕೆ ಶಾಸಕರೊಬ್ಬರನ್ನು ಭಾಷಣ ಮಾಡಲಿಕ್ಕೆ ಕರೆಯುತ್ತಾರೆ. ಮಾನ್ಯ ಶಾಸಕರು ಇವರನ್ನು ಬಾಯಿತುಂಬಾ ಹೊಗಳಬೇಕು. 'ಇಷ್ಟೊಂದು ದೊಡ್ಡ ಗಾತ್ರದ ಈ ಯೋಜನೆ ಕಾರ್ಯರೂಪಕ್ಕೆ ಬರುವದರಲ್ಲಿ ಈ ನಮ್ಮ ಸಾಹೇಬರು ಬಹಳಷ್ಟು ಇಂಟರೆಸ್ಟ್ ತಗೊಂಡಿದಾರೆ...' ಎಂದೆಲ್ಲ ಹೇಳುತ್ತಾರೆ. ಅವರ ಆ ಮಾತಿನಲ್ಲಿ ಒಂದು ಸೂಚ್ಯವಾದ ಸತ್ಯಾಂಶ ಅಡಗಿರುತ್ತದೆ. ಈ ನಿರ್ಮಾಣ ಕಾರ್ಯದಲ್ಲಿ ಅವರು ಬರುವಾಗ ಸೂಟ್‌ಕೇಸ್‌ನಲ್ಲಿ ಏನು ತಂದಿದ್ದರೋ ಅದಕ್ಕೆ 'ಬಡ್ಡಿ'ಯ ರೂಪದಲ್ಲಿ ಸಂದಾಯವಾಗಿರುವುದನ್ನು ಸೂಚ್ಯವಾಗಿ ಹೇಳಿರುತ್ತಾರೆ. ಆದರೆ ನಮ್ಮ ಇಂಗ್ಲಿಷ್ ಜ್ಞಾನ ಅದನ್ನು ಗ್ರಹಿಸಲಾಗದಷ್ಟು ಸೀಮಿತವಾಗಿರುತ್ತದೆಯಲ್ಲ!! (ಸರಕಾರೀ ನಿಯಮಾವಳಿಗಳಲ್ಲಿ 'ಬರುವಾಗ ಒಂದು ಸೂಟ್ ಕೇಸ್‌ನೊಂದಿಗೆ ಬಂದಿದ್ದರೆ ಆಗ ಜಾಗ ಖಾಲಿ ಮಾಡುವಾಗ ಕನಿಷ್ಠಪಕ್ಷ ಎರಡು ಅದೇ ಸೈಜಿನ ಸೂಟ್ ಕೇಸ್‌ಗಳೊಂದಿಗೆ ಹೊರಬೀಳಬೇಕು' ಎಂಬುದು ಒಂದು ಅಲಿಖಿತ ನಿಯಮ ಹೀಗಿರುವಾಗ 'ಇಂಟರೆಸ್ಟ್' ತೆಗೆದುಕೊಳ್ಳದೆ ಇರುವದಕ್ಕೆ ಹೇಗೆ ಸಾಧ್ಯ!)

ಇನ್ನು ಕೆಲವು ಸುಸಜ್ಜಿತ ಸರಕಾರಿ ಆಸ್ಪತ್ರೆ, ರಿಸರ್ಚ್ ಸೆಂಟರ್ ಮುಂತಾದ ಕಡೆಗಳಲ್ಲಿ ಬಹಳ ಬೆಲೆಬಾಳುವ ಅತ್ಯಾಧುನಿಕ ಯಂತ್ರಗಳು, ಉಪಕರಣಗಳು ಕೊಳ್ಳಲ್ಪಡುತ್ತವೆ. ಅವುಗಳಿಗಾಗಿ ಒಂದು ಸ್ಥಳ ನಿಗದಿ ಮಾಡಲ್ಪಟ್ಟು, ಅಲ್ಲಿಯೇ ಅವು ಬಂದ ಸ್ಥಿತಿಯಲ್ಲಿಯೇ ಧೂಳು ತಿನ್ನುತ್ತ ಕುಳಿತುಕೊಂಡಿರುತ್ತವೆ. ಕಡತದಲ್ಲಿ ನೋಡಿದರೆ ಮೇಲಧಿಕಾರಿಯವರು "they are properly commissioned' ಎಂದು ಷರಾ ಬರೆದು, ಬಿಲ್ಲಿನ ಹಣವನ್ನು ಪಾವತಿ ಮಾಡಿರುವದು ಕಂಡುಬರುತ್ತದೆ. ಇಲ್ಲಿ ನೀವು ಕಮಿಷನ್ ಎನ್ನುವ ಶಬ್ದವನ್ನು ಕ್ರಿಯಾಪದ ಎಂದು ಗ್ರಹಿಸುತ್ತೀರಿ. ಅದು ನಾಮಪದವೂ ಆಗಿರಬಾರದೇಕೆ ಎಂಬ ವಿಚಾರ ನಿಮ್ಮ ತಲೆಯಲ್ಲಿ ಬರುವುದೇ ಇಲ್ಲ. ವಾಸ್ತವದಲ್ಲಿ ಅದು ನಾಮ ('ಸರಕಾರಕ್ಕೆ ನಾಮ') ಪದ.

ಹುಡುಕುತ್ತ ಹೋದರೆ ಇಂತಹ ಉದಾಹರಣೆಗಳು ಬೇಕಾದಷ್ಟು ಸಿಗುತ್ತವೆ. ಅದಕ್ಕೆಂದೇ ನಿಮ್ಮ ಇಂಗ್ಲಿಷ್ ಜ್ಞಾನವನ್ನು ಇಂದಿನ ಮಟ್ಟಕ್ಕೆ ಏರಿಸುವದು ಅಗತ್ಯಗಳಲ್ಲೊಂದಾಗಿದೆ.

ಇಂಗ್ಲಿಷಿನಲ್ಲಿ ನಾನೊಂದು ಪುಟಾಣಿ ತುಣುಕನ್ನು ಓದಿದ್ದೆ. ಇಂಗ್ಲೆಂಡಿನಲ್ಲಿಯ ಒಂದು ಚರ್ಚಿನ ಧರ್ಮಗುರು ಒಬ್ಬನಿಗೆ ಧರ್ಮದಲ್ಲಿ ಭಕ್ತಿ ಇರುವಂತೆ ನಟಿಸುವ ಕೆಲವು

ತುಂಟರು ವೈನ್ ಬಾಟಲ್ ಒಂದನ್ನು ಕಾಣಿಕೆಯಾಗಿ ಕೊಡುತ್ತಾರೆ. ಧರ್ಮಗುರುವಿಗೂ ಸಂತೋಷವೇ! ಅದನ್ನು ಸ್ವೀಕರಿಸುತ್ತಾನೆ. 'ಥ್ಯಾಂಕ್ಸ್' ಎನ್ನುತ್ತಾನೆ. 'ನಿಮ್ಮ ಥ್ಯಾಂಕ್ಸ್ ಈಗ ಬೇಡ. ನಾಳೆ ವೇದಿಕೆಯ ಮೇಲೆ ಪ್ರವಚನ ಮಾಡುತ್ತ ನಿಂತಾಗ ಅದರ ಉಲ್ಲೇಖವಾಗಬೇಕೆಂದು ನಮ್ಮ ಅಭಿಲಾಷೆ' ಎನ್ನುತ್ತಾರೆ. ಧರ್ಮಗುರು ಒಪ್ಪಿಕೊಳ್ಳುತ್ತಾನೆ.

ಮರುದಿನ ಪ್ರವಚನಕ್ಕೆ ನಿಂತಾಗ I am very thankful to my friends who offered fruit juice to me yesterday; I appreciate very much the spirit in which the fruit juice was given.' ಎಂದು ಹೇಳುತ್ತಾನೆ. ದೀಕ್ಷೆ ಪಡೆಯುವಾಗ ತನಗೆ ನೀಡಿದ 'ಸತ್ಯಂ ವದ, ಧರ್ಮಂ ಚರ' ಎಂಬ ಆದೇಶಕ್ಕೆ ಎಳ್ಳಷ್ಟೂ ಚ್ಯುತಿ ಬಾರದಂತೆ ನಡೆದುಕೊಳ್ಳುತ್ತಾನೆ. ಅದಕ್ಕೆ ಏನು ಕಾರಣ? ಅವನಿಗಿದ್ದ ಇಂಗ್ಲಿಷ್ ಭಾಷೆಯ ಮೇಲೆ ಪ್ರಭುತ್ವವೇ ಅಲ್ಲವೇ! ಅವನ ಶಾಲೆಯಲ್ಲಿ ಮೊದಲನೆಯ ತರಗತಿಯಿಂದಲೇ ಇಂಗ್ಲಿಷ್ ಕಲಿಸುತ್ತಿದ್ದರು.

ಈ ಮಟ್ಟದಲ್ಲಿ ಇಂಗ್ಲಿಷ್ ಜ್ಞಾನ ಪಡೆಯಬೇಕಾದರೆ ಶಾಲೆಗೆ ಕಾಲಿಡುತ್ತಲೂ ಆ ಭಾಷೆಯನ್ನು ಕಲಿಸಬೇಕು. ಅದು ಇಂದಿನ ಜಗತ್ತಿಗೆ, ಇಂದಿನ ಪರಿಸರಕ್ಕೆ ಹೊಂದುವ ತರಹ ಇರಬೇಕು,

ಓಬೀರಾಯನ ಪಠ್ಯಕ್ರಮವನ್ನು ಬದಲಿಸಬೇಕು. ಇಂದಿನ ನಮ್ಮ ಪುಢಾರಿಗಳಿಗಾಗಿ ಹೊಸ ಕಲಿಕೆಯ ಕ್ರಮ ಹೀಗಿರಬೇಕು:

A for autocracy
B for bribery,
C for corruption,
D for double crossing,
E for egotism,
F fir favouritism,
G for groupsim, gol maal, gulum.... ಎಂದು ಸಾಗಬೇಕು ಅಕ್ಷರಮಾಲೆ.

✧✧✧



ಹಾಸ್ಯದುಬ್ಬರ ನಿಯಂತ್ರಣ!

❖ ಕೃಷ್ಣ ಸುಬ್ಬರಾವ್

ಒಂದು ದೇಶದ ಆರ್ಥಿಕ ಆರೋಗ್ಯದ ಮಾಪನ ಮಾಡುವುದು ಹಣದುಬ್ಬರದ ಏರಿಳಿತ ಹಣದುಬ್ಬರ ಹೆಚ್ಚಾಯಿತೆಂದರೆ ಅದನ್ನು ಕೆಳಗಿಳಿಸಲು ವಿತ್ತ ಮಂತ್ರಿಯವರು, ರಿಸರ್ವ್ ಬ್ಯಾಂಕ್ ವರಿಷ್ಠಾಧಿಕಾರಿಗಳು ಹರಸಾಹಸ ಮಾಡುತ್ತಿರುತ್ತಾರೆ. ಆದರೆ ಇತ್ತೀಚೆಗೆ ಕರ್ನಾಟಕದಲ್ಲಿ ನಡೆದ ಸಮೀಕ್ಷೆ ಪ್ರಕಾರ ಹಾಸ್ಯದುಬ್ಬರ 7.8 ಕ್ಕೆ ಏರಿರುವುದು ಆತಂಕಕಾರಿಯಾಗಿದೆ. ಅದು ಅಪಾಯಕಾರಿಯೆಂದು ಹಾಸ್ಯತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಆಗಾಗ್ಗೆ ಎಲ್ಲಾ ಮೂಲೆ ಮೂಲೆಗಳಲ್ಲಿ ನಡೆಯುವ ಹಾಸ್ಯದ ಹಬ್ಬಗಳಲ್ಲಿ ಜನಸಾಗರ ಹುಚ್ಚುಹುಚ್ಚಾಗಿ ನಗುವುದನ್ನು ಅತ್ಯಂತ ಆಧುನಿಕ ಯಂತ್ರಗಳಿಂದ ಗೌಪ್ಯವಾಗಿ ಸೆರೆಹಿಡಿದಿದ್ದಾರೆ. ನಿಮಿಷಕ್ಕೆ 60 ಕ್ಕಿಂತ ಹೆಚ್ಚು ಸಲ ನಕ್ಕಿರುವುದು ಅದರಲ್ಲೂ ಕೇಳಿದ್ದ ಜೋಕನ್ನು ಕೇಳಿ ನಕ್ಕಿದ್ದು ವಿಸ್ಮಯವಾಗಿದೆ. ಹಾಸ್ಯ ಆರೋಗ್ಯಕ್ಕೆ ಎಂದು ಹೀಗೆ ಮಾಡುತ್ತಿರಬಹುದೆಂಬ ಗುಮಾನಿ ಇದೆ. ಈ ನಗುವಿನ ಅಲೆಯಲ್ಲಿ ಸುತ್ತಮುತ್ತಲೂ ಓಡಾಡುವ ವಾಹನಗಳ ಹಾರನ್ ಕೇಳಿಸದೆ ಅನೇಕ ಅವಘಡಗಳು ಆಗಿವೆಯೆಂದು. ಆಸ್ಪತ್ರೆಗಳಲ್ಲಿ ತುರ್ತುಘಟಕಗಳಲ್ಲಿ ಇರಬೇಕಾದ ವೈದ್ಯರು ಕೂಡ ಹಾಸ್ಯಮೇಳದಲ್ಲಿ ಭಾಗವಹಿಸಿದ್ದರಿಂದ, ಅನೇಕರ ಪ್ರಾಣ ರಕ್ಷಿಸಲಾಗದೆ ಇದ್ದುದನ್ನು ಪೋಲಿಸರು ದಾಖಲಿಸಿದ್ದಾರೆ. ಇದರಿಂದಾಗಿ ಇನ್ನುಮುಂದೆ ವಾಹನಗಳ ದಟ್ಟಸಂಚಾರ ಇರುವ ಸ್ಥಳಗಳಲ್ಲಿ ಕನಿಷ್ಟ 2 ಕಿಲೋಮೀಟರ್ ಒಳಗೆ ಹಾಸ್ಯ ಕಾರ್ಯಕ್ರಮಗಳನ್ನು ನಿಷೇಧಿಸುವ ಬಗ್ಗೆ ಸರ್ಕಾರ ಗಂಭೀರಚಿಂತನೆ ಮಾಡುತ್ತಿದೆ. ಹಾಸ್ಯ ಕಾರ್ಯಕ್ರಮ ಮತ್ತು ಅದರಿಂದಾಗುವ ವಿನಾಶಕಾರಿ ಪರಿಣಾಮಗಳ ಬಗ್ಗೆ ಉನ್ನತಮಟ್ಟದ ಸಮಿತಿ ರಚನೆಯಾಗಿದೆ. ಹಾಸ್ಯದುಬ್ಬರದ ನಿಯಂತ್ರಣಕ್ಕೆ ವಿಶೇಷ ಘಟಕ ಸ್ಥಾಪನೆ ಯಾಗಬೇಕೆಂಬ ಮುಖ್ಯಮಂತ್ರಿಗಳ ಕಛೇರಿಯಿಂದ ತುರ್ತು ಸಂದೇಶ ಹೊರಬಂದಿದೆ. ಆದರೆ ಸಮ್ಮಿಶ್ರ ಸರ್ಕಾರದ ಇನ್ನೊಂದು ಪಕ್ಷ ಉಪಮುಖ್ಯಮಂತ್ರಿಗಳ ಮೂಲಕ ಅದಕ್ಕೆ ತಡೆ ಒಡ್ಡಿದೆ ಎಂಬ ವದಂತಿ ಬಂದಿದೆ. ಎಷ್ಟೋ ಸಮಸ್ಯೆಗಳ ಮಧ್ಯೆ ಈಗ ಹಾಸ್ಯ ಸಮ್ಮಿಶ್ರ ಸರ್ಕಾರದ ಎರಡು ಪಕ್ಷಗಳ ನಡುವೆ ಒಡಕು ಹುಟ್ಟಿಸುವ ಸಾಧ್ಯತೆಯಿದೆ.

ಹಾಸ್ಯದುಬ್ಬರ ನೆರೆ ರಾಜ್ಯಕ್ಕೆ ಅಂದರೆ ತಮಿಳುನಾಡು ಕೇರಳ ಹಾಗೂ ಆಂಧ್ರಕ್ಕೆ ಹರಡದಿರಲು ಗಡಿಪ್ರದೇಶದಲ್ಲಿ ಕಟ್ಟೆಚ್ಚರ ವಹಿಸಲಾಗಿದೆ. ಹಾಸ್ಯಭಾಷಣಕಾರರ ನಡೆನುಡಿಗಳ ಬಗ್ಗೆ ತೀವ್ರ ನಿಗ ಇಡಲಾಗಿದೆ. ವಲಸೆ ಹೋಗುವವರಿಗೆ ಖಡ್ಡಾಯವಾಗಿ Anti - ಹಾಸ್ಯ ಇಂಜೆಕ್ಷನ್ ಕೊಟ್ಟು ಪರನಾಡಿನೊಳಕ್ಕೆ ಪ್ರವೇಶ ಕಲ್ಪಿಸಲಾಗುತ್ತಿದೆ.

ಹಾಸ್ಯದುಬ್ಬರ ಯಾವ ಯಾವ ರೀತಿ ನಿಯಂತ್ರಣ ಮಾಡಬೇಕೆಂದು ಸಮಾಲೋಚನೆ ನಡೆಯುತ್ತಿದೆ. ಇದರ ಬಗ್ಗೆ ಸಾರ್ವಜನಿಕ ಚರ್ಚೆ ನಡೆಸುವ ಧೈರ್ಯ ಅಥವಾ ಎದೆಗಾರಿಕೆ ಸರ್ಕಾರಕ್ಕೆ ಇಲ್ಲ ಏಕೆಂದರೆ ಹಾಸ್ಯದ ಬಗ್ಗೆ ಚರ್ಚೆ ಎಂದರೆ ನಗೋದಕ್ಕೆ ಶುರುಮಾಡುವಷ್ಟು ಜನ ನಗೆಗೀಳಿಗೆ ಒಗ್ಗಿಹೋಗಿದ್ದಾರೆ. ನಗೆ ಪೀಳಿಗೆಯವರು. ಆದ್ದರಿಂದ ಓದುಗರು ತಮಗೆ ಕೆಳಕಂಡ ಸಲಹೆಗಳು ಒಪ್ಪಿಗೆಯಾದಲ್ಲಿ '0' ತಪ್ಪಿದಲ್ಲಿ 'ತ' ಅಂತ 333ಕ್ಕೆ ಎಸ್.ಎಂ.ಎಸ್ ಮಾಡಬೇಕು.

ಸಲಹೆಗಳು

1) ಹಾಸ್ಯದ (ಮಾರು)ಕಟ್ಟೆಯಲ್ಲಿ ಕೃತಕ ಸುಗ್ಗಿ ಸೃಷ್ಟಿಸಿ ದುರ್ಲಾಭ ಪಡೆಯುವವರ, ಸಮಾಜ ಘಾತುಕ ವ್ಯಕ್ತಿಗಳ ವಿರುದ್ಧ ಮೌನ ಪ್ರತಿಭಟನೆ (ಅವರು ನಗಿಸುವ ಪ್ರಯತ್ನದಲ್ಲಿದ್ದಾಗ) ಮಾಡುವುದು.

2) ನಗಿಸುವುದಕ್ಕೆ ಸಮಯವನ್ನು ನಿಗದಿಪಡಿಸಿ ಅದು ಮೀರದಂತೆ ಸಂಘಟಕರ ಮೇಲೆ ಒತ್ತಡತರುವುದು. ಹತ್ತು ಹದಿನೈದು ನಿಮಿಷದ ಮೇಲೆ ನಗಿಸುವ ಪ್ರಯತ್ನ ಕೈ ಬಿಡದಿದ್ದರೆ ಆಟೋಮ್ಯಾಟಿಕ್ ಆಗಿ ಮೈಕ್‌ಗಳು ನಿಶಬ್ಧವಾಗುವುದು ಅದಕ್ಕೂ ಬಗ್ಗದಿದ್ದರೆ, ದೀಪ ಆರಿಹೋಗುವ ವ್ಯವಸ್ಥೆ ಅಥವಾ ವೇದಿಕೆ ತಿರುಗುವಂತಹ ಏರ್ಪಾಡು ಮಾಡಿ ಮುಂದೆ ಮಾತನಾಡುವವರು ಮೈಕ್ ಮುಂದಕ್ಕೆ ಬರುವಂತಹದ್ದು.

3) ರುಚಿರುಚಿಕರವಾದ ತಿಂಡಿ ತಿನಿಸುಗಳ ಮಾರಾಟವನ್ನು ಹಾಸ್ಯ ಕಾರ್ಯಕ್ರಮಗಳಲ್ಲಿ ನಿಷೇಧಿಸಿದರೆ ಸಾಕಷ್ಟು ಪ್ರಮಾಣದಲ್ಲಿ ಹಾಸ್ಯದುಬ್ಬರವನ್ನು ತಡೆಗಟ್ಟಬಹುದು.

4) ಹಾಸ್ಯಭಾಷಣ ಮಾಡುವವರು ಕೊನೆಪಕ್ಷ ಐದುದಿನಗಳ ಹಿಂದೆ ಹೇಳಿದ ಜೋಕ್‌ಗಳನ್ನು ಪುನರ್ ಉಚ್ಚರಿಸಬಾರದೆಂದರೆ ಸಾಕಷ್ಟು ನಿಯಂತ್ರಣ ಸಾಧ್ಯ.

5) ಭಾಷಣಕಾರರು ತಮ್ಮ ಮಾತಿನಲ್ಲಿ ಕಡೇಪಕ್ಷ ಒಂದು ಪರ್ಸೆಂಟ್ ಸ್ವಂತದ್ದಾಗಿರಬೇಕು ಅಥವಾ ಆ ರೀತಿ ನಂಬುವಂತದ್ಧಾಗಿರಬೇಕು.

6) ಕೆಲವು ಪೆಟ್ ಜೋಕ್‌ಗಳ ಪೇಟೆಂಟ್ ಮಾಡುವುದು ಅದನ್ನು ಬೇರೆಯವರು ಉಪಯೋಗಿಸಿದರೆ ಕೋರ್ಟಿನಲ್ಲಿ ಕೇಸ್ ಹಾಕುವ ವ್ಯವಸ್ಥೆ ಇದ್ದರೆ ಹಾಸ್ಯದುಬ್ಬರ ಸಾಕಷ್ಟು ಇಳಿಯುತ್ತದೆ.

7) ಸಭೆಯಲ್ಲಿ ನೆರದಿರುವ ಪೈಕಿ ಶೇಕಡ 10ರಷ್ಟು ಜನ ಆಕಳಿಸಿದರೆ ಅಥವಾ ಶೇಕಡ 25ರಷ್ಟು ಜನ ಜಾಗ ಖಾಲಿ ಮಾಡಿದರೆ ಅಥವಾ ಶೇಕಡ 60ರಷ್ಟು ಪ್ರೇಕ್ಷಕರು ಫುಡ್ ಸ್ಟಾಲ್‌ನಲ್ಲಿದ್ದರೆ (Food Stall) ಹಾಸ್ಯ ಕಾರ್ಯಕ್ರಮವನ್ನು ತಕ್ಷಣ ಬರಖಾಸ್ತುಮಾಡುವುದು.

8) ಹಾಸ್ಯದ ಕಾರ್ಯಕ್ರಮಗಳಿಗೆ ತೆರಿಗೆ ವಿಧಿಸಿದರೆ ಅಷ್ಟು ಅನುಕೂಲವಾಗುವುದಿಲ್ಲ ಏಕೆಂದರೆ ಅದನ್ನು ಭರಿಸಲು ರಾಕ್ಷಸ ಪ್ರಾಯೋಜಕರು (ದೊಡ್ಡವರೆಂಬ ಅರ್ಥದಲ್ಲಿ) ಇರುತ್ತಾರೆ. ಆದ್ದರಿಂದ ನಕ್ಕವರಿಂದಲೇ ಸ್ಥಳದಲ್ಲೇ ನಗದು ಕರ (Tax)


ವಸೂಲಿಮಾಡುವಂತದ್ದು. ಕಿವಿ ಕೇಳಿಸದವರಿಗೆ ರಿಯಾಯಿತಿ ಕೊಡುವುದು. ಕಾರಣ ಅವರು ನಕ್ಕಿದಕ್ಕೂ ಭಾಷಣದಲ್ಲಿ ಬಂದ 'ಹಾಸ್ಯಧಾರೆ'ಗೂ ಯಾವ ರೀತಿಯಲ್ಲಿಯೂ ಸಂಬಂಧವಿರುವುದಿಲ್ಲ. ಹಾಗೆ ನಕ್ಕವರು -clubನ ಸದಸ್ಯರಾಗಿದ್ದಲ್ಲಿ ಶೇಕಡ 80ರಷ್ಟು ರಿಯಾಯಿತಿ. ಆದರೆ ಸದಸ್ಯತ್ವದ ಅಸಲಿ ಪ್ರಮಾಣಪತ್ರ ತೋರಿಸಿದರೆ ಮಾತ್ರ ರಿಯಾಯಿತಿ ತೋರುವುದು ಹಾಗೂ ಅಂತಹವರಿಗೆ ಪ್ರತ್ಯೇಕವಾದ ತೆರಿಗೆ – ನಕ್ಕಿದ್ದಕ್ಕೆ ಮತ್ತು ಕ್ಲಬ್ ಮೆಂಬರ್ ಆಗಿದ್ದಕ್ಕೆ (ಎರಡೂ ರೀತಿ) ತೆರಿಗೆ ಹಾಕಬೇಕು. ಚಪ್ಪಾಳೆ ಹೊಡೆದಿದ್ದರೆ ಅದಕ್ಕೆ ಪ್ರತ್ಯೇಕವಾದ ತೆರಿಗೆ ವಿಧಿಸುವುದು.

9) ಮೊಬೈಲ್‌ನಲ್ಲಿ ಸಂಚರಿಸುವ ಜೋಕ್‌ಗಳಿಗೆ ಹೊಸ ತೆರಿಗೆ ಹಾಕಲು ಚಿದಂಬರಂಗೆ ಆಗ್ರಹ ಮಾಡುವುದು.

10) ಪತ್ರಿಕೆ, ಮ್ಯಾಗಜೀನ್‌ನಲ್ಲಿ ಪ್ರಕಟವಾಗುವ ಜೋಕ್ ಪೇಜುಗಳಿಗೆ ಉಪಯೋಗಿಸುವ ನ್ಯೂಸ್‌ಪ್ರಿಂಟ್‌ಗೆ ಹೆಚ್ಚಿನ ದರ ವಿಧಿಸುವುದು.

ಹಾಸ್ಯದ ನಿಯಂತ್ರಣಕ್ಕಾಗಿ ವಸೂಲಿಮಾಡಲಾದ ತೆರಿಗೆ ಹಣದಿಂದ ಹಾಸ್ಯದಿಂದ ಉದ್ಭವವಾದ ಕಾಯಿಲೆಯಿಂದ ನರಳುವ ರೋಗಿಗಳಿಗೆ ಆರ್ಥಿಕ ಸಹಾಯಮಾಡುವ ಪ್ರಯತ್ನದ ಭರವಸೆ ಸರ್ಕಾರದಿಂದ ಬರಬೇಕು!

❖❖❖



ಕನ್ನಡ ಸಾಹಿತ್ಯದಲ್ಲಿ ಹಾಸ್ಯಶೀಲತೆ

❖ ಅ.ರಾ. ಮಿತ್ರ

ಹಾಸ್ಯ ಪ್ರಜ್ಞೆ ನಮ್ಮಲ್ಲಿ ಬೆಳೆಯಬೇಕಾದ ಒಂದು ವಸ್ತು. ನಾ. ಕಸ್ತೂರಿಯವರು 'ಎಳೆಗರುಂ ಎತ್ತಾಗದೇ?' ಎಂಬ ಸೋಮೇಶ್ವರ ಶತಕದ ಒಂದು ಸಾಲನ್ನು 'ಎಳೆ ಕುರುಂ ಹುಣ್ಣಾಗದೇ?' ಎಂದು ತಿರುಚಿದ್ದಾರೆ. ಅಂದರೆ ನಗೆ ವ್ಯಾಧಿ ಕೂಡ ನಾವು ಮನಸ್ಸು ಮಾಡಿದರೆ ಬೆಳೆಯುತ್ತದೆ ಎಂದಂತಾಯಿತು. 'ಅದ್ದಂ ಮೀದಿ ಪೆಸರಗಿಂಜಂ' ಎಂಬ ಮಾತಿದೆ ತೆಲುಗಿನಲ್ಲಿ. ಅಂದರೆ ಕನ್ನಡಿಯ ಮೇಲೆ ಹೆಸರು ಕಾಳಿಟ್ಟರೆ ಜಾರುತ್ತದಂತೆ! ಹಾಗೆಯೇ ಹಾಸ್ಯ ಪ್ರಜ್ಞೆ ಇದ್ದರೆ ನಮ್ಮ ದ್ವೇಷಬುದ್ಧಿ ಜಾರುತ್ತದಂತೆ!

ಪ್ರಬಂಧಕಾರರು ಬಳಕೆಯ ಶಬ್ದಗಳನ್ನು ಹೊಸಶಬ್ದಗಳಿಗೆ ತಿರುಗಿಸಿಬಿಡುತ್ತಾರೆ. ಪಂಪ ಶಬ್ದ ಕೆಲವರಿಗೆ ಸೆಂಟ್ರಿಫ್ಯೂಗಲ್ ಪಂಪಾ? ಎಂದು ಕೇಳುವಂತೆ ಮಾಡಿತಂತೆ! ರಾಗಗಳ ಹೆಸರು ನಿಮಗೆ ಗೊತ್ತು. ಆದರೆ ಆ ರಾಗಗಳಿಗೆ ಅಪಚಾರವಾಗುವಂತೆ ಹಾಡುತ್ತಿದ್ದರೆ ಅದು ಕೀರವಾಣಿ, ಹಿಂಸಧ್ವನಿ, ಕರಕರ ಪ್ರಿಯ, ಎಳೆದೆಳೆದು ಆಲಾಪಿಸಿದರೆ ಕಂತುವರಾಳಿ, ಮುಖಾಮುರಿ. ವಾತಾವರಣ ಕೆಟ್ಟಿದ್ದರೆ ಅದು ಹಾಸ್ಯಗಾರರ ಬರಹದಲ್ಲಿ 'ನಾತಾವರಣ' ಆಗುತ್ತದೆ. ಧನಸ್ತಾಪ, ಕೊಳೇಬರ, ಜ್ವರದೃತು, ಅಕ್ರಮಾದಿತ್ಯ, ಒಣಮಾಲಿ, ಮು'ಖಾರ'ವಿಂದ, ಭೋಗೋರತೆ, ಕುತೂ'ಹಲಿ', ಕಸಾನುಭವ, ಕವಿತಿಲಕ (=ಕಾವ್ಯಕ್ಕೆ ತಿಲ=ಎಳ್ಳು ಕ=ನೀರು ಬಿಡುವವನು!) ಇವೆಲ್ಲ ಎಂ.ಎಚ್. ಕೃಷ್ಣಯ್ಯನವರು ಹೇಳುವಂತೆ 'ಅಕ್ಷರ ಚೆಲ್ಲಾಟ'ಗಳು. ಶಾಖಾಯ ಶೀತಾಯ, ಹೆತ್ತ worryಗೆ ಹೆಗ್ಗಣ ಮುದ್ದು ಕೊರವಣಿಗೆ, ಬಾಯಕ, ಕೂಗಿದರು ದನಿಕೇಳಲಿಲ್ಲವೆ ನರ-ಹರಿಯೆ? ಇತ್ಯಾದಿ. ವೇಣುಗೋಪಾಲ ಸೊರಬ, ನಾ. ಕಸ್ತೂರಿ ಮೊದಲಾದವರ ಅನರ್ಥಕೋಶಗಳು ಇಂಥ ಸಾವಿರಾರು ಶಬ್ದಗಳನ್ನು ಟಂಕಿಸಿವೆ. ಭಾಷಣಕಾರರು ಪಂಜಾಬಿನ 'ಅಕಾಲಿ'ಗಳು ಎಂದು ಹೇಳುವಾಗ ಅವರಿಗೆ ಸಮಯಪ್ರಜ್ಞೆ ಇಲ್ಲ ಎಂಬರ್ಥ ತಂದಿದ್ದಾರೆ. 'ನೊಬೆಲ್' ಪಾರಿತೋಷಕವನ್ನು ಭಾಷಣಕಾರರೆಲ್ಲ ಬಯಸುತ್ತಾರೆ. ಆದರೂ ಅಧ್ಯಕ್ಷರು ಬೆಲ್ ಬಾರಿಸುವುದನ್ನು ನಿಲ್ಲಿಸಿಲ್ಲ. ಕವಿತೆಯನ್ನು 'ನೀನು ಶಬ್ದಗಳಲ್ಲಿ ಏಕೆ ಅವಿತೆ?' ಎಂದು ವೈ.ಎನ್.ಕೆ ಕೇಳಿರುವುದು ಎಷ್ಟು ಮಾರ್ಮಿಕವಾಗಿದೆ! ಕುವೆಂಪು ಅವರ ಬೊಮ್ಮನ ಹಳ್ಳಿಯ ಕಿಂದರಿ ಜೋಗಿ ಪದ್ಯದಲ್ಲಂತೂ ಶಬ್ದಗಳ ನಾನಾವತಾರಗಳನ್ನು ಕಂಡು ಹೆಮ್ಮೆಯೆನಿಸುತ್ತದೆ. ರಾವಣನು ಧನುಸ್ಸನ್ನು ಎತ್ತಲು ಬಂದಾಗ ಬಿಲ್ಲನ್ನು ಸುಮೇರು ಭಾರದಿಂದ ಸೆಟೆದು ನಿಲ್ಲು

ಎಂದು ಬೇಡಿಕೊಂಡ ಅದೇ ಸೀತೆ, ರಾಮನು ಧನುಸ್ಸನ್ನು ಎತ್ತಲು ಬಂದಾಗ 'ಹಗುರಾಗು ಗರಿಯಂತೆ, ಬಾಗು ಬಳ್ಳಿಯ ತೆರದಿ, ಮುರಿದು ಬೀಳ್' ಎಂದು ಬೇಡಿಕೊಂಡ ಪ್ರಸಂಗವನ್ನು ಕುವೆಂಪು 'ನಿಂದಾಸ್ತುತಿಗಳೆಲ್ಲಂ ಸಮಯವರ್ತಿಗಳಲ್ತೆ?' ಎಂದು ಗುರುತಿಸುತ್ತಾರೆ. ಸಂಸ್ಕೃತದಲ್ಲಿಯೂ ರಾವಣನು ಸೀತಾಸ್ವಯಂವರಕ್ಕೆ ಬಂದ ಘಟನೆಯ ಪ್ರಸ್ತಾಪವಿದೆ. ಜ್ಯೋತಿಷ್ಯ ಬಲ್ಲವನು ಆತ. ಮೊದಲು ಕನ್ಯೆಯನ್ನು ತೋರಿಸಿ ಅಂದನಂತೆ. ಪುರೋಹಿತ ಶತಾನಂದರು ಮೊದಲು ಧನುಸ್ಸನ್ನು ಎತ್ತು-ಮೊದಲು ಧನುಸ್ಸು ಆ ಮೇಲೆ ಕನ್ಯೆ ಎಂದರೆ ರಾವಣ ತನ್ನ ಜ್ಯೋತಿಷ್ಯಜ್ಞಾನ ಪ್ರದರ್ಶಿಸಿ:

'ಪಂಚಾಂಗದಲ್ಲಿ ಬೇಕಾದರೆ ನೋಡಿ. ಕನ್ಯಾ ಬಂದ ನಂತರವೇ ಧನಸ್ಸು' ಎಂದನಂತೆ. ಅದಕ್ಕೆ ಶತಾನಂದರು ನಿನ್ನದು 'ನ-ಕ್ಷತ್ರ ಬುದ್ಧಿ' ಎಂದು ಶಬ್ದದಲ್ಲೇ ಆಟವಾಡಿದರು. ಅಂದರೆ ಕ್ಷತ್ರ ಬುದ್ಧಿ. ಅಂದರೆ ಕ್ಷಾತ್ರ ತೇಜಸ್ಸು ನಿನಗಿಲ್ಲ ಎಂದರಂತೆ! ನಮ್ಮ ಗುರುಗಳೊಬ್ಬರು 'ಉಮಾಕುಮಾರ' ಶಬ್ದದ ಎಲ್ಲ ಅಕ್ಷರಗಳನ್ನು ಅರ್ಥ ಇರುವಂತೆ ಬಳಸುತ್ತಿದ್ದರು.

ಉಮಾ ಕುಮಾರ = ವಿನಾಯಕ

ಮಾ ಕುಮಾರ = ಬ್ರಹ್ಮ

ಕುಮಾರ = ಷಣ್ಮುಖ

ಮಾರ = ಮನ್ಮಥ

ರ = ಅಗ್ನಿ

ಈ ಚಮತ್ಕಾರಗಳನ್ನು ಸಮಗ್ರವಾಗಿ ಬಳಸಿಕೊಂಡು ಒಂದು ಹೊಸ ಅರ್ಥಪ್ರಪಂಚ ಸೃಷ್ಟಿಸಿದವರೆಂದರೆ ಜಾನಪದ ಗಾದೆಕಾರರು. ನಮ್ಮ ಭಾಷೆ ತನ್ನ ಎಲ್ಲ ಮಗ್ಗುಲುಗಳನ್ನು ತೋರಿಸಿರುವುದು ಗಾದೆಗಳಲ್ಲಿ. ಹಾಸ್ಯ ಇದರ ಮಾರ್ಗ. ಆದರೆ ಅದು ಪ್ರವೇಶಿಸುವುದು ಭಾವ ಜಗತ್ತನ್ನು. ಈ ಗಾದೆಗಳಲ್ಲಿ ಮುಖ್ಯವಾಗಿ ಗಮನಿಸಬೇಕಾದದ್ದು ಶಬ್ದ ಚಮತ್ಕಾರ, ಪ್ರಾಸವೈಭವ, ದೇಶೀಯ ಉಪಮಾ ಸಂಪತ್ತು, ಹ್ರಸ್ವತೆ, ಹಾಸ್ಯಪ್ರಿಯತೆ, ವ್ಯಂಗ್ಯ, ಆಪ್ತತೆ, ನುಡಿಕೌಶಲ ಮತ್ತು ಮುಕ್ತ ಚಿಂತನ ಪದ್ಧತಿ. ಈಗ ಜಾನಪದೀಯವಾಗಿರುವ ನಮ್ಮ ದೇಶೀ ಸಂಪತ್ತನ್ನು ಹೊರಚೆಲ್ಲುವ ರೀತಿಯಲ್ಲಿರುವ ಈ ಗಾದೆಗಳನ್ನು ತುಂಬ ಸೂಕ್ಷ್ಮವಾಗಿ ಗಮನಿಸಿದರೆ ಅಕ್ಷರ ಪಲ್ಲಟ, ಆದ್ಯಂತ ಪಲ್ಲಟ, ಮಧ್ಯಾಂತ ಪದ ವ್ಯತ್ಯಾಸ (ಒಬ್ಬ ಬೆಟ್ಟಕ್ಕೆ ಎಳೆದ, ಒಬ್ಬ ನೀರಿಗೆ ಎಳೆದ)

ಸ್ಥಿರಪದ ಮಧ್ಯವ್ಯತ್ಯಾಸ (ಮಾಘ ಓದಿ ಮಗ ಕೆಟ್ಟ)

ಅನುಪ್ರಾಸ (ಕತ್ತೆ ಹಿಂದಿರಬೇಡ, ಎತ್ತಿನ ಮುಂದಿರಬೇಡ)

ಅನ್ಯೋನ್ಯಾವಲಂಬಿ (ಸವತಿ ಸಣ್ಣಾಕ್ಕಲ್ಲ, ಭಾಗಾದಿ ಬಡಿವ್ಯಲ್ಲ..)

ವಡಿ, ಪ್ರಾಸ, ಶಬ್ದಭಂಗಿ ಮೊದಲಾದ ಎಲ್ಲ ನುಡಿಗುಣಿತಗಳು ಯಥೇಚ್ಛವಾಗಿ ಕಾಣುತ್ತವೆ.

ಕೆಲವು ಉದಾಹರಣೆಗಳನ್ನು ಗಮನಿಸಿ:

ಗಣಿಕೆ ಹೋಗದ ಬಾಯಲ್ಲಿ ಒನಕೆ ತುರುಗಿದರಂತೆ!

ಮಂಡಕ್ಕಿ ಉಂಡಮಗ ಮದ್ದಾನೆ ತರುಬಿದ.

ಅತ್ತೆ ಅಳಿಯಗೆ ಮರುಳು, ಕತ್ತೆ ಕರಿಕೆಗೆ ಮರುಳು.

ಇವನ ರೂಪ ಅಪರೂಪ, ಹಚ್ಚಿಧಾಂಗ ಚಂದ್ರದೀಪ.

ಅತ್ತೆ ಇಲ್ಲದೋಳು ಚಿತ್ತರಿ, ಮಾವ ಇಲ್ಲದೋಳು ಮದನಾರಿ,

ಗಂಡ ಇಲ್ಲದೋಳು ದಂಡಿಗ ಬಜಾರಿ!

ತಿಪ್ಪ್ಯಾಗೆ ತುಪ್ಪ ಮುಚ್ಚಿಟ್ಟು ತುಡುಗೀಲೇ ತಿಂತಾಳ.

ರಾಜಾವಳಿ ಸೀರಿ ತಂದ. ಸುದ್ದ ಮಾಡಿ ಸೂಳೆಗೆ ಕೊಟ್ಟ.

ಎಲೆರಮಣಿ ನಿನ್ನ ಮುಖವೆಲ್ಲ ಸಗಣಿ.

ಕೊತ್ತಿ ಕೊಂದ ಪಾಪ ತಿತ್ತಿ (=ತಿರುಪತಿ) ಹೊಕ್ಕರೂ ಬಿಡದು.

ಕೋಣನ್ನ ಕೇಳಿ ಗದ್ದೆ ಉಳ್ತಾರಾ.

ಇಡ್ಲಿ ಒಡಿಯೋಕೆ ಕೊಡ್ಲಿ ಕೇಳಿದರಂತೆ!

ಈಗ ನೀವು ಪರದೇಶವಾಸಿಗಳಾದರೂ ಕನ್ನಡ ಪ್ರೇಮ ಬಿಟ್ಟಿಲ್ಲತಾನೆ! ಇದಕ್ಕೆ ಎರಡು ಗಾದೆಗಳಿವೆ.

1.'ಹೆಗ್ಗಣ ಪರದೇಶಕ್ಕೆ ಹೋದರೆ ನೆಲಕೆರೆಯುವುದನ್ನು ಬಿಟ್ಟೀತೆ?'

2.'ಪತ್ತದಿರು ಗೆದ್ದಲೇ ಅಂದರೆ ನನ್ನ ಕೆಲಸವೇ ಅದು' ಎಂದಿತಂತೆ!

ಗಂಡನ ಬಗ್ಗೆ ಒಬ್ಬಳು ಗಾದೆ ಕಟ್ಟಿರೋದು ನೋಡಿ:

ಕುಟುಕಲು ಮಳೆ ಬೇಡ, ಲೊಟಕಲು ಗಂಡ ಬೇಡ

ಹುರಿಯೋದಕ್ಕೆ ಹೆಂಚಿಲ್ಲ, ಹುಕ್ಕೇರಿತನಕ ಪಂಜು ಹಿಡಿಸ್ತೀನಿ ಅಂದನಂತೆ!

ಸಹವಾಸದ ಫಲ ಏನು ಗೊತ್ತೆ? ಒಬ್ಬ ವಚನಕಾರ ಹೇಳುವಂತೆ:

'ಲೋಹದ ಸಂಗದಿಂದ ಅಗ್ನಿ ಬಡಿವಡೆದಂತೆ'

ಜ್ಯೋತಿಷ್ಯದ ಬಗೆಗೆ ಉಗ್ರ ವಿಮರ್ಶೆ ಬೇಕೆ? ಹಾಗಾದರೆ ಈ ಗಾದೆ ನೋಡಿ:

'ಜೋಯಿಸರ ಮಗಳು ಹಸೆಯ ಮೇಲೇ ರಂಡೆಯಾದಳು'.

ಲೋಭಿಗಳೆಂದರೆ ಯಾರು ಗೊತ್ತೆ?

'ಇರುವೆ ಕಾಲಿಗೆ ಉರುಲು ಹಾಕುವವರು'.

ತುಂಬ ಅಭಿನಯ ಮಾಡುವವರನ್ನು ಆಡಿಕೊಳ್ಳಲು ಈ ಗಾದೆ:

'ವಾಲಾಡಿ ವಾಲಾಡಿ ವಾಲೆ ಕಳಕೊಂಡ್ಳು'

'ಬೆಳಗಾನ ರಾಮಾಯಣ ಕೇಳಿ ಬೆಳಗಾಗೆದ್ದು ಬಾಲ ಇದ್ದದ್ದು ರಾಮನಿಗೋ ಹನುಮಂತನಿಗೋ?- ಅಂದ್ರಂತೆ!'

ಜಗಳವಾಡುವ ಸ್ವಭಾವವನ್ನು ತಪ್ಪಿಸಲು ಹೋದರೆ ಏನಾಗುತ್ತೆ ನೋಡಿ:

'ಜಗಳವಿಲ್ಲದೆ ಜಾವಗಲ್ಲು ಸಂತೆಗೆ ಹೋಗ್ತೀನಿ, ನೆರೆಮನೆ ಮುಂಡೇರಾ ಮೂಟೆ ಹೊರಿಸಿ' ಅಂದಳಂತೆ ತರಕಾರಿಯವಳು!

ಒಬ್ಬ ಹತ್ತಿರ ಬಂದು ಹೇಳಿದನಂತೆ:

'ಹಸಿವಿಲ್ಲದ ಮದ್ದುಕೊಟ್ಟೇನು, ಅಶನವ ನೀಡು!'

'ಬೆಟ್ಟ ಒಡೆಯೋ ಉಳಿ ಬೆಟ್ಟು ಗಾತ್ರ ಅಷ್ಟೇ!'

ಸುಮಾರು 9ನೆಯ ಶತಮಾನದ್ದೆಂದು ಹೇಳಲಾಗಿರುವ 'ವಡ್ಡಾರಾಧನೆ' ಎಂಬ ಹಳಗನ್ನಡ ಗದ್ಯಗ್ರಂಥದಲ್ಲಿ ಚಾಣಕ್ಯ-ಚಂದ್ರಭುಕ್ತರ ಕಥೆಯಿದೆ. ಜಾನಪದರು ಚಾಣಕ್ಯನನ್ನು ಹೇಗೆ ಕಾಣುತ್ತಾರೆಂಬ ಬಗೆಗೂ ಇಲ್ಲಿ ನಂದರ ಕಥೆ ಚಾಣಕ್ಯ ಚಂದ್ರಗುಪ್ತರ ಕಥೆ ಸ್ವಲ್ಪ ಬದಲಾವಣೆಗಳನ್ನು ಕಂಡಿದೆ. ಈ ಕಥೆಯಲ್ಲಿ ಚಾಣಕ್ಯನು ಚಂದ್ರಭುಕ್ತನೊಂದಿಗೆ ಸೇನಾಸಮೇತನಾಗಿ ನಂದರ ಮಹಾಪದ್ಮನ ಮೇಲೆ ಧಾಳಿ ಮಾಡಿ ಪ್ರತಿ ಸಲವೂ ಸೋತು ನಿರಾಶೆಯಿಂದ ಹಿಂದಿರುಗುತ್ತಿದ್ದ. ಹಾಗೆ ಒಮ್ಮೆ ಸೋತಾಗ ಚಂದ್ರಭುಕ್ತನನ್ನು ಊರಿಗೆ ಕಳಿಸಿ ರಾತ್ರಿ ಪಾಟಲಿಪುರಕ್ಕೆ ಬಂದ. ರಾತ್ರಿ ನೇಕಾರರ ಮನೆಯೊಂದಕ್ಕೆ ಹೋಗಿ ಅಜ್ಜಿ ಬಡಿಸಿದ ಊಟ ಮಾಡಲು ಸಿದ್ಧನಾದ. ಆಕೆ ಕಂಚಿನ ತಟ್ಟೆಯಿಟ್ಟು ಬಿಸಿಬಿಸಿ ಗಂಜಿ ಬಡಿಸಿದಳಂತೆ. ತುಂಬ ಹಸಿದಿದ್ದ ಚಾಣಕ್ಯನು ಗಬಗಬನೆ ತಿನ್ನಲು ಹೋಗಿ ಕೈ-ಬಾಯಿಗಳನ್ನು ಸುಟ್ಟುಕೊಂಡ. ಅವನ ಒದ್ದಾಟವನ್ನು ಕಂಡು ಆ ಅಜ್ಜಿ ಹೇಳಿದ ಮಾತು ಇದು; ಅದನ್ನು ಮೂಲಗದ್ಯದಲ್ಲೇ ಹೇಳುತ್ತೇನೆ.

'ಈ ಲೋಕದೊಳ್ ಮೂವರ್ ಮೂರ್ಖರಂ ಕಂಡೆನ್' ಎಂದಳು.

ಆಗ ಚಾಣಕ್ಯನು 'ಅವರ್ ಆರ್ ಅಬ್ಬಾ?' ಎಂದು ಕೇಳಿದ.

ಆಕೆಯೆಂದಳ್: ನೀನುಂ, ನಂದನುಂ, ಚಾಣಾಕ್ಯನುಂ

ಚಾಣಕ್ಯ: ಆನ್ (=ನಾನು) ಎಂತು ಮೂರ್ಖಂ?

ಅಜ್ಜಿ: ಮಗನೆ, ಬುದ್ಧಿಯೊಡೆಯೊನ್ ಬಿಸಿಯಂಬಲಿಯಂ ಕಂಚಿನ ಕಡೆಯೊಳ್ ಕಿರಿಕಿರಿದನೆ ಆಱಿಸುತ್ತಂ ಉಣ್ಗುಂ. ನೀನ್ ಅಂತು ಉಣಲ್ ಅರಿಯದುದರಿಂ ಮೂರ್ಖನ್(ಮಗನೇ, ಬುದ್ಧಿ ಉಳ್ಳವನು ಬಿಸಿ ಅಂಬಲಿಯನ್ನು ತಟ್ಟೆಯ ಒಂದು ಭಾಗದಲ್ಲಿ ಆರಿಸಿ ಆರಿಸಿ ಕುಡಿಯುತ್ತಾನೆ. ಆ ಬುದ್ಧಿ ಇಲ್ಲದ ನೀನು ಮೂರ್ಖ...)

ಚಾಣಕ್ಯ: ಹಾಗಾದರೆ ಆ ನಂದ, ಮಹಾಪದ್ಮನೂ ಮೂರ್ಖ ಎನ್ನುತ್ತೀಯಲ್ಲ ಅಜ್ಜಿ ಅವರು ಹೇಗೆ ಮೂರ್ಖರು?

ಅಜ್ಜಿ: ಆತಂ ತನ್ನ ಕೊಟ್ಟದಾನಮಂ ಕುಡದುದರಿಂ ಪಗೆಗೊಂಡು ಪೋಪನಂ ತನ್ನಾರ್ಪಂದೆ ಕೊಲ್ಲದುದರಿಂದಂ ಮೂರ್ಖಂ (ಅಂದರೆ ನಂದನು ತಾನು ಕೊಟ್ಟ ದಾನವನ್ನು ಹಿಂದಕ್ಕೆ ಕಿತ್ತುಕೊಂಡು ಚಾಣಕ್ಯನನ್ನು ಓಡಿಸಿದಾಗ ಚಾಣಕ್ಯನು ದ್ವೇಷದಿಂದ ಆ ಜಾಗದಿಂದ ಹೋಗಿದ್ದ. ಹಾಗೆ ದ್ವೇಷದಿಂದ ಹೋದವನನ್ನು ಸಮರ್ಥರಾಜನಾದ ನಂದ, ಮಹಾಪದ್ಮ ಆಗಲೇ ಕೊಲ್ಲಿಸಬೇಕಾಗಿತ್ತು. ಹಾಗೆ ಕೊಲ್ಲದೆ ಬಿಟ್ಟುದರಿಂದ ಆ ನಂದನೂ ಮೂರ್ಖ!)

ಮೂರನೆಯದಾಗಿ ಚಾಣಕ್ಯನು ಹೇಗೆ ಮೂರ್ಖ ಎಂದು ಅಜ್ಜಿಯನ್ನು ಕೇಳಿದ. ಅವಳಿಗೆ ಇವನೇ ಚಾಣಕ್ಯ ಎಂದು ಗೊತ್ತಿಲ್ಲದಿರುವುದೇ ಇಲ್ಲಿಯ ಸ್ವಾರಸ್ಯ. ಆಗ ಅಜ್ಜಿ ಹೇಳುತ್ತಾಳೆ. ಚಾಣಾಕ್ಯಂ ತನ್ನ ಮುಳಿಸನೆ ನೋಳ್ಕುಂ, ಕಜ್ಜಮನ್ ಅರಿಯಂ ಮೂಲಮಂತ್ರಮನೊಡೆಯನುಂ ಕ್ಷತ್ರಿಯನುಮಲ್ಲಂ. ಪೃಥ್ವೀಶ್ವರರೊಡನೆ ಕಾದಲ್ ಬರ್ಕುಮೇ? ಆತಂಗೆ ಬುದ್ಧಿಯುಳ್ಳೊಡೆ ತನ್ನ ಪಗೆವನ ನಾಡಂ ಕಿಡಿಸುವುದು, ಪ್ರತಿಪಕ್ಷಮಂ ತನಗೆ ಮಾಡುವುದು, ಸಾಮಂತ ಮಹಾಸಾಮಂತರ್ಕಳ್ಗಂ ದ್ರವ್ಯಮಂ ಕೊಟ್ಟು ಭೇದಿಸುವುದು, ತತ್ ಸಂಬಂಧಿಗಳಂ ಪ್ರತಿಪಕ್ಷದಿಂದಂ ಕಿಡಿಸುವುದು ಇಂತು ಮಾಡಿದೊಡೆ ನೃಪತಿಯೊರ್ವನೆ ಉಳಿಗುಂ. ಆಗಳ್ ತನ್ನ ಬಗೆದ ಕಾರ್ಯ ಸಿದ್ಧಿಯಕ್ಕುಂ. (ಚಾಣಕ್ಯನಿಗೆ ತನ್ನ ಕೋಪ ಮಾತ್ರ ಮುಖ್ಯ. ಆದರೆ ತನ್ನ ಕಾರ್ಯ ಹೇಗೆ ಸಾಧಿಸಿಕೊಳ್ಳಬೇಕೆಂಬುದು ಗೊತ್ತಿಲ್ಲ. ಅಲ್ಲದೆ ಅವನಲ್ಲಿ ಮೂಲಬಲ ಇಲ್ಲ, ಅವನು ಕ್ಷತ್ರಿಯನೂ ಅಲ್ಲ, ಆದರೂ ಕಾದಾಡಲು ಸುಮ್ಮನೆ ಬರುತ್ತಿದ್ದಾನೆ. ಅವನಿಗೆ ಬುದ್ಧಿ ಇದ್ದಿದ್ದರೆ ಮೊದಲು ಶತ್ರುವಿನ ರಾಜ್ಯವನ್ನು ಹಾಳುಮಾಡುವ ಬಗೆಗೆ ಯೋಚಿಸುತ್ತಿದ್ದ, ನಂದನ ವಿರೋಧಿಗಳನ್ನು ತನ್ನ ಆಪ್ತರನ್ನಾಗಿ ಮಾಡಿಕೊಳ್ಳುತ್ತಿದ್ದ, ಸಾಮಂತ, ಮಹಾಸಾಮಂತರುಗಳಿಗೆಲ್ಲ ಹಣವನ್ನು ಕೊಟ್ಟು ಭೇದೋಪಾಯ ಮಾಡುತ್ತಿದ್ದ, ನಂದನ ಸಂಬಂಧಿಕರನ್ನೆಲ್ಲ ಆ ವಿರೋಧಿಗಳ ಸಹಾಯದಿಂದ ಕೆಡಿಸುತ್ತಿದ್ದ. ಆಗ ನಂದ ಒಬ್ಬನೇ ಉಳಿಯುತ್ತಿದ್ದ. ಆಗ ಚಾಣಕ್ಯನು ಆ ನಂದನನ್ನು ಕೊಲ್ಲುತ್ತಿದ್ದ.....)

ಈ ಪ್ರಸಂಗದಲ್ಲಿ ರಾಜನೀತಿಯ ಸೂತ್ರಗಳನ್ನು ಬರೆದ ಚಾಣಕ್ಯನಿಗೆ ಒಬ್ಬಳು ಅಡುಗೂಳ ಅಜ್ಜಿ ಸಲಹೆಗಳನ್ನು ಕೊಡುವಷ್ಟು ದೊಡ್ಡವಳಾಗಿ ಬೆಳೆದಿದ್ದಾಳೆ. ಇದೇ ಹಾಸ್ಯ ಪ್ರಸಂಗ.

ಆಧುನಿಕ ಸಾಹಿತೀಗಣದಲ್ಲಿ ತುಂಬ ಗಂಭೀರ ಚಿಂತಕರು ಕೂಡ ಹಾಸ್ಯಪ್ರಜ್ಞೆ ಉಳ್ಳವರಾಗಿದ್ದಾರೆ. ದಿವಂಗತ ಪೂರ್ಣಚಂದ್ರ ತೇಜಸ್ವಿ ಇಂಥವರಲ್ಲಿ ಒಬ್ಬರು. ಹಾಸ್ಯವೆಂದು ಪಟ್ಟಿ ಮಾಡುವ ಗೋಜಿಗೆ ಹೋಗದೆ ತಮ್ಮ ಕೃತಿಯ ಗರ್ಭದಲ್ಲಿ ಹಾಸ್ಯವನ್ನು ಚಿಮ್ಮಿಸಿದ್ದಾರೆ. ನಾ ಕಂಡ ಕಲಾವಿದರು ಎಂಬ ಸಂಗೀತಗಾರರ ನೆನಪಿನ ಪುಸ್ತಕದಲ್ಲಿ ಮೈಸೂರು ವಾಸುದೇವಚಾರ್ಯರು ನಗೆ ಪ್ರಸಂಗಗಳನ್ನು ಚಿಮ್ಮಿಸಿರುವ ರೀತಿ ಅನನ್ಯವಾದದ್ದು. ಶ್ರೀರಂಗರ 'ನನ್ನ ನಾಟ್ಯ ನೆನಪುಗಳು' ಕೃತಿಯ ಒಂದು ಘಟನೆ ನಾನು ಹೇಳಲೇಬೇಕು. ರೈಲಿನಲ್ಲಿ ಪ್ರಯಾಣ ಮಾಡುವಾಗ ಮುಂದಿನ ಡಬ್ಬಿಯಲ್ಲಿ ಕುಳಿತಿದ್ದ ಸುಂದರಿಯೊಬ್ಬಳ ಅಲಂಕೃತ ಕೈಗಳ ಸೌಂದರ್ಯ ಕಂಡು ಮೆಚ್ಚಿದ ಶ್ರೀರಂಗರು ಮುಂದಿನ ಸ್ಟೇಷನ್‌ನಲ್ಲಿ ಆಕೆಯ ರೂಪವನ್ನು ಕಾಣಬೇಕೆಂದು ಸಂಕಲ್ಪ ಮಾಡಿ ಹಾಗೆ ಮುಖದರ್ಶನ ಮಾಡಿ ತುಂಬ ನಿರಾಶೆಯಿಂದ ಹಿಂದಕ್ಕೆ ಬಂದ ಪ್ರಸಂಗ ಅದು. ಕನ್ನಡದಲ್ಲಿ ನಾಟಕವೇ ಇಲ್ಲ ಎಂದು ಕೊರಗಿದ ಚುರಮರಿ ಶೇಷಗಿರಿರಾಯರು ಶಾಕುಂತಲಾ ನಾಟಕವನ್ನು ಕನ್ನಡಕ್ಕೆ ಅನುವಾದ ಮಾಡಲು ಇಳಿವಯಸ್ಸಿನಲ್ಲಿ ತೀರ್ಮಾನಿಸಿದರಂತೆ. ಆಗ ಹೇಳುವ ಮಾತು ನೋಡಿ:

ಮುದಿ ಬಂದಟ್ಟುವುದೆನ್ನ ಮರಣಂ ಯಾವಾಗಲೋ ಎಂದು
ಶಿಕ್ಕಿದ ಶಬ್ದಂಗಳ ನಿಟ್ಟು ಗೈದೆ ನಾನೀ ಕೃತ್ಯಮಂ....

ಗುಬ್ಬಿ ವೀರಣ್ಣನವರ ನಾಟಕಗಳೆಂದರೆ ಊರೂರಿಂದ ಜನ ಗಾಡಿಕಟ್ಟಿಕೊಂಡು ಬರುತ್ತಿದ್ದರಂತೆ. ಗರೂಡ ಸದಾಶಿವರಾಯರೂ ಒಂದು ನಾಟಕ ಕಂಪೆನಿ ಮಾಲೀಕರು. ಅದ್ಭುತ ನಟರು. ಆದರೆ ಆಕಸ್ಮಿಕವಾಗಿ ಇಬ್ಬರೂ ಒಂದೇ ಊರಿನಲ್ಲಿ ಒಂದೇ ಸಮಯದಲ್ಲಿ ನಾಟಕಪ್ರದರ್ಶನ ಮಾಡಬೇಕಾಗಿ ಬಂತು. ಗರುಡರು ನಷ್ಟ ಅನುಭವಿಸಿದ್ದನ್ನು ಎಚ್.ಕೆ. ರಂಗನಾಥರು ಹೇಳುವ ರೀತಿ ನೋಡಿ:

ಗುಬ್ಬಿ ಬಂದು ಗರುಡನನ್ನು ಹಾರಿಸಿಕೊಂಡು ಹೋಯಿತು!

ಹಾಸ್ಯಕಾರರಿಗೆ ತಮ್ಮ ವಿಚಾರಗಳನ್ನು ಜನರಿಗೆ ತೀಕ್ಷ್ಣವಾಗಿ ಮುಟ್ಟಿಸಬೇಕು ಎಂಬ ಪ್ರಜ್ಞೆ ಇರುವುದರಿಂದ ಒಮ್ಮೊಮ್ಮೆ ಅವರ ಭಾಷೆ ಒರಟಾಗಿರುತ್ತದೆ. 'ಷಾಪಸಂದ್' ಟಾಂಗವನ್ನು ಕುರಿತ ಲಲಿತ ಪ್ರಬಂಧದಲ್ಲಿ ಆನಂದರು ನವ್ಯಕವಿಗಳನ್ನು ಲೇವಡಿ ಮಾಡಿರುವುದನ್ನು ಉದಾಹರಣೆಯಾಗಿ ಗಮನಿಸಬಹುದು. ಹಾಗೆಯೇ ನವ್ಯಕವಿ ಅಡಿಗರಿಂದ ಪ್ರಭಾವಿತರಾದ ನಂತರ ಅ.ರಾ.ಸೇ. ಬರೆದ 'ಸೆಂಟಿಮೆಂಟಾಲಿಟಿಯ ಒಂಟಿಕೊಪ್ಪಲಿನಾಚೆ....' ಎಂದು ಆರಂಭವಾಗುವ ಪದ್ಯವನ್ನು ಗಮನಿಸಬೇಕು.

ರಾಜರತ್ನಂ ಹೇಳುತ್ತಾರೆ:

ನಯ ನುಡಿಯಬೇಕೆ ಈ ಮೃಗಗಣಕ್ಕೆ
ಬಳಸುವರೆ ರೇಷ್ಮೆ ನೂಲ-ಹೊಲಿಯಲಿಕೆ ಗೋಣಿಚೀಲ

ಗೋಪಾಲಕೃಷ್ಣ ಅಡಿಗರ 'ರಾಕ್ಷಸರು' ಎಂಬ ಲಲಿತ ಪ್ರಬಂಧ ಈ ಬಗೆಯ ಭಾಷೆಯ ಬಳಕೆಯಲ್ಲಿ ಅಗ್ರಗಣ್ಯವೆನಿಸಿದೆ.

ಹನಿಗವನಗಳು ಎಂಬ ಪ್ರಕಾರವೊಂದು ಕನ್ನಡದಲ್ಲಿ ತುಂಬ ಜನಪ್ರಿಯ ಹಾಸ್ಯಶಾಖೆಯಾಗಿದೆ. ಇದು ಗಾತ್ರದಲ್ಲಿ ಪುಟ್ಟದೆಂದು ಟೀಕಿಸಬೇಡಿ ಎಂದು ಎಚ್ಚರಿಸ್ತುವ ಸಿ.ಪಿ.ಕೆ ಅವರು

ಹೇಳಬೇಡಿ ಕೇವಲ ಇದು ಹಕ್ಕಿ
ವಿಮಾನಗಳೂ ಉರುಳಿ ಬೀಳುತ್ತವೆ
ಇದು ಹೊಡೆದರೆ ಢಿಕ್ಕಿ!
ಎಂದು ಹೇಳಿದ್ದಾರೆ.
ಗಂಡ ಸತ್ತರೆ ಹೆಂಡತಿ ಆಗುವಳು ವಿಧವೆ
ಹೆಂಡತಿ ಸತ್ತರೆ ಗಂಡ ಆಗುವನು....ಮದುವೆ

ಎಂಬ ಮಾತಿನಲ್ಲಿ ಡುಂಡಿರಾಜ್ ಗಂಡು-ಹೆಣ್ಣುಗಳ ಸಾಮಾಜಿಕ ಧೋರಣೆಯನ್ನು ಸಮರ್ಪಕವಾಗಿ ವಿಡಂಬಿಸಿದ್ದಾರೆ.

ಅಕಬರ ಅಲಿ ಮತಾಚಾರದ ಮೌಢ್ಯಗಳನ್ನು ಕೆಣಕಿರುವ ಬಗೆ ನೋಡಿ:

ಮಾತು ಎತ್ತಿದರೆ
ಮತ ಸಂಸ್ಕೃತಿ ರಕ್ಷಕ ತಾನೆನ್ನುವ ಮುಠ್ಠಾಳ

ಹೊರಗೆ ಬಸಪ್ಪ ಒಳಗೆ ವಿಷಪ್ಪ

ಜಾತಿಗಳಲಿ ಹಚ್ಚುವ ಜಗಳ!

ಎನ್. ಪ್ರಹ್ಲಾದರಾಯರು 'ಅಮಲಿನ ವಚನಗಳು' ಎಂಬ ಒಂದು ಹನಿಗವನ ಸಂಕಲನ ತಂದಿದ್ದಾರೆ. ನಿಘಂಟುಗಳಲ್ಲಿ ಕೂಡ 'ಜಿನ್ ಆದಮೇಲೆ ಜಿನ ಬರುತ್ತಾನೆ' ಎನ್ನುವ ಕುಡುಕನ ದೃಷ್ಟಿಕೋನವನ್ನು ಆಧ್ಯಾತ್ಮದ ನೆಲೆಗೂ ವಿಸ್ತರಿಸಿದ್ದಾರೆ. ಕುವೆಂಪು ಅವರ ಧ್ರಾಂ ಧ್ರೀಂ ಧ್ರೂಂ ಕವಿತೆ ಬೇಂದ್ರೆಯವರ 'ಹುಬ್ಬಳ್ಳಿಯಾವಾ', ಪುತಿನ ಅವರ ಗಣೇಶ ದರ್ಶನ, ದಿನಕರ ದೇಸಾಯರ ಚುಟುಕಗಳು, ಎಸ್.ವಿ. ಪರಮೇಶ್ವರ ಭಟ್ಟರ ಇಂದ್ರಚಾಪ ಮತ್ತು ಚಂದ್ರವೀಧಿ ಎಂಬ ಕವನ ಸಂಕಲನಗಳು, ಜಿ.ಎಸ್. ಶಿವರುದ್ರಪ್ಪನವರ 'ಗೊರಕೆ', ಚನ್ನವೀರ ಕಣವಿಯವರ 'ಲಾಗ', ನಾ. ಕಸ್ತೂರಿಯವರ ಮತ್ತು ರಾಶಿಯವರ ಅಣಕವಾಡುಗಳು, ಬೀ.Chi.ಯವರ ತಿಂಮಿಕ್ಷನರಿ, ಎಚ್.ಎಸ್. ಬಿಳಿಗಿರಿಯವರ ಚೇಷ್ಟೆಯ ಪದ್ಯಗಳು ಅಸಂಖ್ಯಾತ ಕವಿಗಳು ಮೆರೆಸಿರುವ ಹಾಸ್ಯ ಲಾಸ್ಯ ಮರೆಯುವಂಥವಲ್ಲ.

ಕೆ.ಎಸ್. ನರಸಿಂಹ ಸ್ವಾಮಿಯವರ 'ಸಂಧ್ಯಾರಾಗ' ಒಬ್ಬ ಹೊಸದಾಗಿ ನಿವೃತ್ತನಾದ ಸರಕಾರಿ ಅಧಿಕಾರಿಯ ಆಲಾಪ. ಅವನು ಮೂವತ್ತು ವರುಷ 'ಕುದುರೆ'ಯ ಮೇಲೆ ಮೆರೆದವನು. ಕುದುರೆ ಇಲ್ಲಿ ಅಧಿಕಾರಕ್ಕೆ ಸಂಕೇತವಾಗಿ ಬಂದಿರುವುದನ್ನು ಗಮನಿಸಿ. ಹೆಂಡತಿ ಮತ್ತು ವಿದೇಶದಲ್ಲಿ ಕಲಿಯುತ್ತಿರುವ ಮಗ ಇದೇ ಅವನ ಸಂಸಾರ. ಅವನು ಮನೆಯೂ ಒಂದು ಬಗೆಯಲ್ಲಿ ಕಚೇರಿಯೇ ಆಗಿತ್ತು. ಅಡುಗೆಯವನು ಇದ್ದುದರಿಂದ ಹೆಂಡತಿ ಅವನ ಮುಂದೆ ಸುಳಿಯಲು ಅವಕಾಶವಿಲ್ಲ. ಜವಾನ ಮತ್ತು ಡವಾಲಿ ಪೇದೆ ಇದ್ದುದರಿಂದ ಅವಳು ಆಚೆಗೂ ಬರುತ್ತಿರಲಿಲ್ಲ. ಒಬ್ಬ ಟೈಪಿಸ್ಟ್, ಬರುವವರಿಗಾಗಿ ಕುರ್ಚಿಗಳು, ಒಂದು ಟೆಲಿಫೋನ್ ಇವೇ ಅವನ ಪರಿಕರ. ಇಂದು ಆತ ನಿವೃತ್ತಿ ಪಡೆಯಲಿದ್ದಾನೆ. ಈ ಮಧ್ಯೆ ಸರಕಾರದವರು ತಾವು ಕೊಟ್ಟಿದ್ದ ಕುರ್ಚಿ, ಟೇಬಲ್, ಟೆಲಿಫೋನ್ ಎಲ್ಲ ತೆಗೆದುಕೊಂಡು ಹೋಗಿದ್ದಾರೆ. ಅಡುಗೆಯವ, ಜವಾನ, ಪರ್ಸನಲ್ ಅಸಿಸ್ಟೆಂಟ್ ಎಲ್ಲ ಹೊರಟು ಹೋಗಿದ್ದಾರೆ. ಬೀಳ್ಕೊಡಿಗೆ ಸಮಾರಂಭ ಮುಗಿಸಿಕೊಂಡು ಆ ಅಧಿಕಾರಿ ಮನೆಗೆ ಹಿಂದಿರುಗಿದ್ದಾನೆ. ಆಶ್ಚರ್ಯ ಎಂದರೆ ಹೆಂಡತಿಯೇ ಗೇಟಿನ ಬಳಿ ನಿಂತಿದ್ದಾಳೆ ಅವಳ ಕೈಯಲ್ಲಿ ಒಂದು ಪೋಸ್ಟ್ ಕಾರ್ಡು! 'ಎರಡನೆಯ ಅಂಚೆ'ಯಲ್ಲಿ ಬಂದದ್ದು. 'ಎರಡನೆಯ ಅಂಚೆ' ಒಂದು ಧ್ವನಿ ಪೂರ್ಣ ಪ್ರತಿಮೆ. ನಮಗೆ ಮೊದಲ ಅಂಚೆಯಲ್ಲಿ ಏನೂ ಬರುವುದಿಲ್ಲ. ಮರುಟಪಾಲಿನಲ್ಲೇ ಬರುತ್ತವೆ ಎಂದರೆ ಎಲ್ಲಾ ತಡ ಎಂದರ್ಥ! ಹೆಂಡತಿಯ ಜೊತೆ ಊಟಿಗೆ ಹೋಗುವ ಆಸೆಯಿಂದ ಅವನು ಕೋಣೆ ಕಾಯ್ದಿರಿಸುವಂತೆ, ಕಾರಿಗೆ ಏರ್ಪಾಡು ಮಾಡುವಂತೆ ತನ್ನ ಪಿ.ಎ.ಗೆ ಹೇಳಿದ್ದ. ಆ ಬಗ್ಗೆ ಬಂದಿರುವ ವಿವರಣ ಪತ್ರ ಅದು-ಆ ಸೆಕೆಂಡ್ ಪೋಸ್ಟ್! ಆ ಪಿ.ಎ. ಈಗ ಇನ್ನೊಬ್ಬರಿಗೆ ಪಿ.ಎ. ಅಲ್ಲವೆ? ಹಿಂದಿನ ಅಧಿಕಾರ ಹೋದ ಮೇಲೆ ತಾನು ಹಲ್ಲು ಕಿತ್ತ ಹಾವು ಎಂಬ ಯೋಚನೆ ಎರಡನೇ ಅಂಚೆಯಲ್ಲಿ ಅಂದರೆ ನಿವೃತ್ತನಾದ ಮೇಲೆ ಅಧಿಕಾರಿಗೆ ಬರುತ್ತದೆ. ನಿಂತ ಕಡೆಯೇ ಹೆಂಡತಿಯ ಮುಖವನ್ನು ಮಿಕಮಿಕನೆ ನೋಡುತ್ತಾನೆ. ಅವಳು

ತುಂಬ ರೂಪವಂತೆ ಎಂಬುದು ಈಗ ಅಂದರೆ ಎರಡನೇ ಅಂಚೆಯಲ್ಲಿ ಅಂದರೆ ಮದುವೆಯಾದ ಮೂವತ್ತು ವರ್ಷಗಳ ನಂತರ ಅವನಿಗೆ ಹೊಳೆಯುತ್ತದೆ.

ನೀನಿಷ್ಟು ಚೆಲುವೆ ಎನ್ನುವುದು ನನಗೆ ತಿಳಿದದ್ದಿಂದು

ಈ ಭಾವ ಎರಡನೆಯ ಅಂಚೆಯಲಿ ಬಂದದ್ದಕ್ಕೆ ಧನ್ಯವಾದಗಳು...! ಎನ್ನುತ್ತಾನೆ. ಹೋಗಲಿ ಮುಂದೆ ವಿದೇಶದಲ್ಲಿರುವ ಮಗ ಬರಲಿ. ಅವನಿಗೆ ಮದುವೆಯಾಗಲಿ, ಮಗ ಕಾರು ಕೊಳ್ಳಲಿ ಆಗ ಊಟಿಗೆ ಹೋಗೋಣ ಎನ್ನುತ್ತಾನೆ. ಆದರೆ ಸ್ವಲ್ಪ ಜಾಗ್ರತೆವಹಿಸಿ ಕಾರು ಬಂದರೆ, ಸೊಸೆಯೇ ಬಂದು ಕಾರು ಬಾಗಿಲು ತೆರೆದು ಒಳಗೆ ಬನ್ನಿ ಎಂದರೆ ಆಗ ಹೋಗೋಣ ಎಂದು ಎರಡನೇ ಅಂಚೆಯಲ್ಲಿ ತಿದ್ದಿಕೊಳ್ಳುತ್ತಾನೆ.

ಅಧಿಕಾರದಲ್ಲಿದ್ದಾಗ ನಾವು ಮನೆಯವರ ಹಿತ, ಸೌಂದರ್ಯ ಪ್ರಜ್ಞೆ, ನಿಧಾನ ತೀರ್ಮಾನ ಶಕ್ತಿ ಬರುತ್ತದೆನ್ನುವುದೇ ಸಮಾಧಾನದ ಸಂಗತಿ ಅಲ್ಲವೆ!

ಹಾಸ್ಯ ಸಾಹಿತಿಯಾಗಲು ವ್ಯಂಗ್ಯ, ಅಣಕ, ಕಟಕಿ, ಹದಿರುನುಡಿ ಶ್ಲೇಷಾತ್ಮಕ ಚಿಂತನ ಕ್ರಮಗಳ ಜೊತೆಗೆ ವಾಗ್ ವಿಜೃಂಭಣೆಯನ್ನು ಉತ್ಸವ ಮೂರ್ತಿಯಾಗಿ ಮಾಡಿಕೊಳ್ಳಬಲ್ಲ ವಾಗ್ಮಿತೆ ಇರಬೇಕು. ಪ್ರಸಿದ್ಧ ಪತ್ರಿಕೆಗಳ ಸಂಪಾದಕೀಯ ಶೀರ್ಷಿಕೆಗಳಲ್ಲಿ ಮೂರನೆಯ ಕೆಳ ಶೀರ್ಷಿಕೆ ಸಾಮಾನ್ಯವಾಗಿ ಹಾಸ್ಯ ವ್ಯಂಗ್ಯಗಳಿಂದ ಇಡಿಕಿರಿದಿರುತ್ತದೆ. 'ಮೂರನೆಯ ಕಣ್ಣು' ಎನ್ನಬಹುದಾದ ಈ ಬರಹಗಳ ಶೈಲಿಯನ್ನು ನಮ್ಮ ಹಾಸ್ಯ ಜೀವಿಗಳು ಗಮನಿಸಬೇಕು. ಹಾಸ್ಯದ ತೆಳು ವಾಗ್ಧೋರಣೆಯ ನೆಪದಲ್ಲಿ ಅವರು ಜನತೆಯ ಪ್ರಜ್ಞಾನಾಡಿಯನ್ನು ಹೇಗೆ ಮಿಡಿಯುತ್ತಾರೆಂಬುದನ್ನು ನೋಡಬೇಕು. ಕಾಮು, ಬ್ರೆಕ್ಟ್ ಮೊದಲಾದವರ ನಾಟಕಗಳಲ್ಲಿ ಹಾಸ್ಯ ಪ್ರಕರಣಗಳು ಯಾವ ಗಂಭೀರ ನೆಲೆಯನ್ನು ತಲಪುತ್ತವೆ ಎಂಬುದನ್ನು ಪರಿಶೀಲಿಸಬೇಕು. ನಮ್ಮ ಹಾಸ್ಯ ಬರಹಗಾರರು ಬರಿಯ ಒಣಗದ್ಯ ರಚನೆ ಮಾಡುವುದರಲ್ಲಿ ನಿರತರಾಗಿಲ್ಲ ಎಂದು ಸಮಾಧಾನ ಪಡಬೇಕು.

ಬದುಕಿನ ಮಹಲಿನಲ್ಲಿ ಕಿಟಕಿ ಬಾಗಿಲು ಗವಾಕ್ಷಿ ಮೊದಲಾದ ಎಲ್ಲ ಕಡೆಗಳಲ್ಲಿ ಹಾಸ್ಯದ ಗಾಳಿ ಬರುವಂತಹ ವಾಸ್ತುವನ್ನು ನಾನು ಬಯಸುತ್ತೇನೆ. ಅಡ್ಡ ಗಾಳಿಯಿಲ್ಲದ ಯಾವ ಮನೆಯೂ ಆರೋಗ್ಯಕರವಲ್ಲ. ಕೇವಲ ಹಲ್ಲು ಕಿರಿಸುವ ಬರಹ ಹಾಸ್ಯ ಬರಹವಾದಿತೇ ಹೊರತು ಹಾಸ್ಯ ಸಾಹಿತ್ಯವಾಗುವುದಿಲ್ಲ. ತುಂಬ ಅಧ್ಯಯನಶೀಲನಾದ ವ್ಯಕ್ತಿ, ಬದುಕಿನ ವಿಷಾದ, ಕರುಣೆ, ಅಸಹನೆ, ಗತ್ತು ಗಮ್ಮತ್ತುಗಳ ಬೇರಿಗೆ ಇಳಿಯಬಲ್ಲ ಒಳನೋಟ ಉಳ್ಳ ವ್ಯಕ್ತಿ, ಸಮಾಜದ ಗತಿಶೀಲತೆಯೊಂದಿಗೆ ಹೆಜ್ಜೆ ಹಾಕಬಲ್ಲ ವ್ಯಕ್ತಿ ತನ್ನ ಹಾಸ್ಯ ಮುಖದ ಬರಹಗಳಲ್ಲಿ ಸಾಹಿತ್ಯದ ಸಂಪನ್ನತೆ ಧ್ವನಿಗಾರಿಕೆಗಳನ್ನು ಕಾಣಿಸಲು ಸಮರ್ಥನಾಗುತ್ತಾನೆ. ಅಂತರಂಗದಲ್ಲಿ ರಸಸ್ಥಿತಿಗೆ ಏರದ ವ್ಯಕ್ತಿ ಹಾಸ್ಯ ನಿರ್ಮಾಣದಲ್ಲಿ ತೊಡಗುವ ಏಕತಾನತೆ ಯಿಂದ ಮೊದಲು ಪಾರಾಗಬೇಕು. ಕಾವ್ಯ, ನಾಟಕ ಮೊದಲಾದ ಸೃಜನಶೀಲ ರಂಗಗಳಲ್ಲೆಲ್ಲ ಹೊಕ್ಕುಬಳಸನ್ನು ಸ್ಥಾಪಿಸಿಕೊಳ್ಳಬೇಕು. ಜನ ಉದ್ಧರಿಸಿ ಮೆಚ್ಚಬಲ್ಲ ಹರಳುಗಟ್ಟಿದ ಭಾವಗಳನ್ನು ಮೆರೆಸಬೇಕು.

ಹಾಸ್ಯದಲ್ಲಿ ಸ್ಫೋಟಗೊಳಿಸುವ ಗುಣ ಇರಬೇಕು ಎಂದು ಎಲ್ಲರೂ ಹೇಳುತ್ತಾರಷ್ಟೆ ಒಂದೆಳೆಯ ಹಾಸ್ಯಪ್ರಿಯರು ದೀಪಾವಳಿ ಕಾರ್ಯಕ್ರಮ ಮಾಡುತ್ತ ಮನೋರಂಜನೆಯ ಮದ್ದಿನ ಸ್ಫೋಟಗಳನ್ನು ಮಾಡುತ್ತಾರೆ. ಇವು ಸ್ಫೋಟಿಸಿ ಒಂದೆರಡುಗಳಿಗೆ ವೈಭವದಿಂದ ಮೆರೆದು ಬೆಳಕನ್ನು ಚಿಮ್ಮಿಸುತ್ತದೆ ನಿಜ. ಆದರೆ ಆ ಮೇಲೆ ಕಗ್ಗತ್ತಲೆ.

ಹಲವೆಳೆಯ ಹಾಸ್ಯದ ಸ್ಫೋಟ ಬೇರೆ ಬಗೆಯದು. ಸಿಡಿಮದ್ದು ಇರಿಸಿ ಸ್ಫೋಟಿಸಿದಾಗ ಬಂಡೆ ಸಿಡಿದು ಚಪ್ಪಡಿಕಲ್ಲಾಗಿ ಮನೆ ಕಟ್ಟುವ ಕೆಲಸಕ್ಕೆ ಬರುತ್ತದೆ. ಸ್ಫೋಟವೊಂದೇ ಅದರ ಉದ್ದೇಶವಲ್ಲ. ಬೇರೆ ಬೇರೆ ವಿಚಾರದ ಕಟ್ಟಡಗಳಿಗೆ ಕಲ್ಲೊದಗಿಸುವ ಕೆಲಸವನ್ನು ಈ ಬಗೆಯ ಬರಹಗಳು ಮಾಡುತ್ತದೆ. ಹೊಸ ಸಂವಾದಗಳಿಗೆ ನಮ್ಮನ್ನು ಪರಿಚಯಿಸುತ್ತವೆ.


ಮೂರನೆಯ ಬಗೆಯ ಹಾಸ್ಯ ಸ್ಫೋಟ ನಮ್ಮನ್ನು ಬೆಚ್ಚಿ ಬೀಳಿಸುವ ಬಗೆಯದು, ನಮ್ಮ ಅನುಭವ ಕೋಶವನ್ನು ವಿಸ್ತರಿಸುವಂಥದು. ನಾವು ಈ ದಿಕ್ಕಿನಲ್ಲಿ ಯೋಚನೆಯನ್ನೇ ಮಾಡಿರಲಿಲ್ಲವಲ್ಲ ಎನ್ನುವಷ್ಟು ಗಾಢವಾಗಿ ನಮ್ಮನ್ನು ಕಲಕುವಂಥದು. ಎ.ಎನ್. ಮೂರ್ತಿರಾಯರ 'ಕ್ಲೀಷಾ ಪ್ರವೀಣನ ಸಾಕ್ಷ್ಯ' ಮತ್ತು 'ದಿವಾನಖಾನೆಯ ಅಂದ ಚೆಂದ' ಈ ಬಗೆಯವು. ಮೊದಲನೆಯದರಲ್ಲಿ ಮೂರ್ತಿರಾಯರು ನಮ್ಮ ಸಭ್ಯ ಸಾರ್ವಜನಿಕ ಜೀವನದ ಅಲಂಕಾರಿಕ ಭಾಷೆಯ ಪೊಳ್ಳನ್ನು ಬಯಲು ಮಾಡುತ್ತಾರೆ. ಅದರ ಜೊತೆಗೇ ನವೋದಯ ರಮ್ಯ ಸಂಪ್ರದಾಯದ ಸಾಹಿತ್ಯದ ಅಲಂಕಾರಿಕ ಮುಖವನ್ನು ತುಂಟುತನದ ದೃಷ್ಟಿಯಿಂದ ವಿಮರ್ಶಿಸುತ್ತಾರೆ. ಹಾಗೆಯೇ ಎರಡನೆಯ ಪ್ರಬಂಧ ಮನೆಯ ಅಲಂಕಾರವನ್ನು ಹೆಚ್ಚಿಸುವ ಗೃಹ ಸೌಂದರ್ಯದ ವಿಷಯವನ್ನು ಲಘು ಹಾಸ್ಯದಿಂದ ನಿರೂಪಿಸುತ್ತಾ ಸಾಗಿ ಇದ್ದಕ್ಕಿದ್ದಂತೆ ಸೌಂದರ್ಯ ಮೀಮಾಂಸೆಯ ತಾತ್ವಿಕ ನೆಲೆಗಳಿಗೆ ನಮ್ಮನ್ನು ಕರೆದೊಯ್ಯುತ್ತದೆ. ಅಡಿಗರು, ಬೇಂದ್ರೆ, ಕುವೆಂಪು ಕಾವ್ಯದಲ್ಲಿ ಮಾಡಿದುದನ್ನು ಮೂರ್ತಿರಾಯರ ಪ್ರಬಂಧಗಳು ಗದ್ಯದಲ್ಲಿ ಮಾಡುತ್ತವೆ.

ನಮ್ಮ ಹಾಸ್ಯ ಬರವಣಿಗೆಗೆ ಈ ಬಗೆಯ ಸಂಕೀರ್ಣತೆ ಬರಬೇಡವೆ? ನಮ್ಮ ಕಿರಿಯರನ್ನು ಈ ದಿಕ್ಕಿನಲ್ಲಿ ಪ್ರೋತ್ಸಾಹಿಸಬೇಡವೆ?

'ನಿನ್ನ ಗದ್ದೆಗೆ ನೀರು ಬಿಡುವ ನಾಲೆಗಳೆಲ್ಲ ಬಂದು, ಬೇಕಾದದ್ದು ಬೆಳೆದುಕೋ ಬಂಧು' ಎಂದು ಅಡಿಗರು ಇಂದಿನ ರಾಜಕೀಯ ನೇತಾರರ ಮನೋಧರ್ಮ, ಹಿರಿಯರು ಕಿರಿಯರನ್ನು ನಡೆಸಿಕೊಳ್ಳುವ ರೀತಿ ಇವುಗಳನ್ನೆಲ್ಲ ಲೇವಡಿ ಮಾಡಿದ್ದಾರೆ. ಆದುದರಿಂದ ಇಂದಿನ ಯುವ ಪೀಳಿಗೆಯವರು ಹಿರಿಯರನ್ನು ನಂಬದೆ ತಾವೇ ಕೊಳವೆ ಬಾವಿ ತೋಡಿಕೊಂಡು ತಮ್ಮ ಗದ್ದೆಗೆ ನೀರು ಹಾಯಿಸಿಕೊಳ್ಳುವ, ಸಮೃದ್ಧ ಬೆಳೆ ತೆಗೆಯುವ ಸಂಕಲ್ಪ ಮಾಡಬೇಕು.

❖❖❖

ಅಭಿನಂದನೆಗಳೊಂದಿಗೆ



ಅಪರಂಜಿಯ ಅಭಿಮಾನಿ

ಕಾಯಿಲೆ ಬೀಳುವುದು-ಅದರಲ್ಲೂ ಪ್ರಯೋಜನ

❖ ಪ್ರೊ॥ ಜಿ. ವೆಂಕಟಸುಬ್ಬಯ್ಯ

"ಕಲಿಕಾಲದ ನರರು ಸುರರಿಗಿಂತ ಬಲ್ಲಿದರು" ಎಂದು ಸಿದ್ಧರಾಮ ಹೇಳಿ ಅನೇಕ ಶತಮಾನಗಳಾದುವು. ಅದರ ಸತ್ಯ ಈಗೀಗ ನಮಗೆ ಗೋಚರವಾಗುತ್ತ ಇದೆ. ಪ್ರಕೃತಿದತ್ತವಾದ ಸಕಲ ಶಕ್ತಿ ಜ್ಞಾನ ಸೌಭಾಗ್ಯಗಳನ್ನೂ ನಾವು ನಮ್ಮ ಪ್ರಯೋಜನಕ್ಕೆ ಒಗ್ಗಿಸಿಕೊಳ್ಳಬೇಕು; ಅಳವಡಿಸಿಕೊಳ್ಳಬೇಕು. ಇದೇ ನಿಜವಾದ ಮಾನವತೆ. ತಿಳಿಯದ ಜನ 'ಇದರಲ್ಲೇನೂ ಪ್ರಯೋಜನವಿಲ್ಲ' ಎಂದು 'ಬಿಸಾಕಿ'ದ ವಸ್ತುವಿನಲ್ಲಿ ತಿಳಿದವನು ಪ್ರಯೋಜನ ಹುಡುಕುತ್ತಾನೆ. ಕೆಲವು ದಿನಗಳ ಹಿಂದೆ ಜಪಾನೀಯರು ಕೆಲವರು ನಮ್ಮ ದೇಶಕ್ಕೆ ಬಂದಿದ್ದರು. ಪೇಟೆ ಬೀದಿಯಲ್ಲಿ ಹುಡುಗರು ಕಬ್ಬು ಕೊಂಡು, ತಿಂದು ಉಗುಳಿದ ಆ ಸಿಪ್ಪೆಯನ್ನೇ ಅವರು ಆರಿಸಿ, ಅದನ್ನು ಹೀಗೆ ಹಾಗೆ ಹೊಸೆದು ಮುಖ ಮೂತಿ ಮಾಡಿ, ರಂಗುರಾಗ ಬಳಿದು ಒಂದು ಬೊಂಬೆ ಮಾಡಿದರು. ಸಿಪ್ಪೆ ಉಗುಳಿದವರೇ ಆ ಬೊಂಬೆಯನ್ನು ನಾಲ್ಕಾಣೆಗೆ ಕೊಂಡು ಮನೆಗೆ ತಂದರು. ಕಬ್ಬಿಗಿಂತ ಬೊಂಬೆಗೆ ಬೆಲೆ ಹೆಚ್ಚಾಯಿತು. ಹೀಗೆ ಎಲ್ಲದರಲ್ಲಿಯೂ ಪ್ರಯೋಜನ ಕಾಣುವ, ಪಡೆಯುವ ಮನಸ್ಸು ಬೇಕು.

ಲೋಕದ ಕಣ್ಣಿಗೆ ಈ ಸತ್ಯ ಬೇಗ ಹೊಳೆಯುವುದಿಲ್ಲ. ನಾವು ಅಪ್ರಯೋಜಕ ಎನ್ನುವ ಎಷ್ಟು ಪದಾರ್ಥಗಳಲ್ಲಿ, ಎಷ್ಟು ವಿಷಯಗಳಲ್ಲಿ ಉಪಯೋಗ ಕಂಡು ಬರುತ್ತದೆ ನೋಡಿ. ಜನರನ್ನು ಬಯ್ಯಬೇಕಾದರೆ 'ಕತ್ತೆ' ಎನ್ನುತ್ತೇವೆ. ಭಾರ ಹೊರುವುದಕ್ಕೆ ಕತ್ತೆಯಂತಹ ಪ್ರಾಣಿ ಯಾವುದಿದೆ. ಮನುಷ್ಯನ ಉಪಾಯ ಯಾವುದೂ ಅದಕ್ಕೆ ತಿಳಿಯುವುದಿಲ್ಲ. ನಮ್ಮ ಮನೆಯ ಪಕ್ಕದಲ್ಲಿ ಒಬ್ಬ ಅಗಸನ ಅಂಗಡಿ ಇದೆ. ಅವನು ಕತ್ತೆಯನ್ನು ನಿಲ್ಲಿಸಿ ಎಷ್ಟು ಬಟ್ಟೆಗಳಿವೆಯೋ ಅವನ್ನೆಲ್ಲಾ ಹೇರಿ ಆಮೇಲೆ ಒಂದು ದೊಡ್ಡ ಕಲ್ಲು ಚಪ್ಪಡಿಯನ್ನೂ ಬೆನ್ನಮೇಲೆ ಹೊರಿಸುತ್ತಾನೆ. ಕತ್ತೆಯ ಬೆನ್ನು ಮುರಿಯುವಂತೆ ಆಗುತ್ತದೆ. ಸ್ವಲ್ಪ ಹೊತ್ತಾದಮೇಲೆ ಅಗಸ ಆ ಕಲ್ಲನ್ನು ಮಾತ್ರ ಕೆಳಕ್ಕೆ ಕೆಡವಿಬಿಡುತ್ತಾನೆ. ಕತ್ತೆ ತನ್ನ ಭಾರವೆಲ್ಲ ಕೆಳಗೆ ಬಿದ್ದಿತೆಂದುಕೊಂಡು ಆನಂದದಿಂದ ಮುಂದೆ ಹೋಗುತ್ತದೆ. ಪಾಪ ಅದು ಮೋಸವನ್ನೇ ಅರಿಯದು. ಕೆಲಸಕ್ಕೆ ಮಾತ್ರ ಕತ್ತೆ; ಬಯ್ಯುವುದಕ್ಕೆ ಅದರ ಹೆಸರು. ಬಾಯಿಬಿಡದೆ ಹೇರಿದ ಭಾರದ ಗೌರವವನ್ನೆಲ್ಲಾ ಹೊರುವ

ಈ ಮೂಕಪ್ರಾಣಿ ಒಂದು ತಪಸ್ವಿ. ಅದರ ತಪಸ್ಸು ಬಹುಬೇಗ ಸಿದ್ಧಿಸುತ್ತದೆ. ಭಾರ ಹೊರಿಸುವ ಅಗಸರವನಿಗೆ ಸ್ವರ್ಗ ಸಿಕ್ಕುತ್ತದೆಯೋ ಇಲ್ಲವೋ ಕತ್ತೆಗಂತೂ ಮುಂದಿನ ಜನ್ಮವಿಲ್ಲ ಮೋಕ್ಷಕ್ಕಿಂತ ಕಡಮೆಯಾದ ಸ್ಥಾನ ಅದಕ್ಕೆ ಇಲ್ಲವೇ ಇಲ್ಲ. ಮೋಕ್ಷದಲ್ಲಿ ಸುಖವಿದೆಯೋ ಕಷ್ಟವಿದೆಯೋ ಯಾರಿಗೆ ಗೊತ್ತು? ಏನಿದ್ದರೂ ಅದನ್ನು ಹೊರುವ ಶಕ್ತಿ ಕತ್ತೆಗಿದೆ. ಆದುದರಿಂದ ಕತ್ತೆಗೆ ಮೋಕ್ಷ.

ಕಾಯಿಲೆ ಬೀಳುವುದಕ್ಕೂ ಕತ್ತೆಗೂ ಏನು ಸಂಬಂಧ ಎಂದು ನೀವು ಕೇಳಬಹುದು. ಎರಡು ಪದಗಳೂ ಒಂದೇ ಅಕ್ಷರದಿಂದ ಪ್ರಾರಂಭವಾಗುವುದಿಲ್ಲವೇ? ಕಾಗುಣಿತದ ಪ್ರಕಾರ ಮೊದಲು ಕತ್ತೆ ಆಮೇಲೆ ಕಾಯಿಲೆ. 'ಕ ಕಾ ಕಿ ಕೀ' ಅಲ್ಲವೆ? ಸಂಬಂಧ ಹುಡುಕಲು ಹೊರಟರೆ ಇನ್ನೂ ಅನೇಕ ಕಂಡು ಬಂದಾವು, ಕಾಲಹರಣವೇಕೆ?

ಕಾಯಿಲೆ ಬೀಳುವುದು, ಕಾಯಿಲೆ ಬರುವುದು ಇನ್ನೆರಡು ಬೇರೆಬೇರೆ. ಕಾಯಿಲೆ ಬರುವುದು ಎಂದರೆ ನಿಜವಾಗಿಯೂ ಅಸ್ವಸ್ಥವಾಗಿರುವುದು, ರೋಗ ಅಂಟುವುದು. ಕಾಯಿಲೆ ಬೀಳುವುದು ಎಂದರೆ ಕಾಯಿಲೆ ಬಂದಂತೆ ನಟಿಸುವುದು. ಇವೆರಡರಿಂದಲೂ ಪ್ರಯೋಜನವಿದೆ. ಕಾಯಿಲೆ ಬರುವುದರಿಂದ ಏನೇನು ಪ್ರಯೋಜನವಿದೆ ಎಂದು ಒಬ್ಬ ಹಿರಿಯ ಸಾಹಿತಿಗಳು ಒಂದು ಪ್ರಬಂಧವನ್ನೇ ರಚಿಸಿದ್ದಾರೆ. ಹುಟ್ಟಿದಾಗಲೇ ಒಡಹುಟ್ಟಿ ಜೊತೆಯಲ್ಲಿಯೇ ಬೆಳೆದ ಕಾಯಿಲೆಯ ಸ್ನೇಹವನ್ನೂ, ಅದರಿಂದ ಸಾವಿನ ಭಯ ತಪ್ಪುವುದನ್ನೂ, ಕಾಯಿಲೆ ಬಂದಾಗ, ಸ್ನೇಹಿತರಿಂದಲೂ ನೆಂಟರಿಂದಲೂ ಪಡೆವ ಉಪಚಾರವನ್ನೂ, ಅದರಿಂದ ಕಾವ್ಯರಚನೆಗೆ ಆಗುವ ಸಹಾಯವನ್ನೂ, ಸಂಸಾರ ತಾಪತ್ರಯ ತಪ್ಪಿಹೋಗುವುದನ್ನೂ ವಿವರಿಸಿ ಕೊನೆಗೆ "ನಿಮಗೆ ತುಂಬ ಬೇಸರವಾದಾಗ, ನಾಲ್ಕು ದಿನದ ಆದರ ಆರೈಕೆಯ ಬಯಕೆ ಬಂದಾಗ, ಮನೆಯಲ್ಲಿನ ಅಂತಃಕಲಹಗಳು ಹೆಚ್ಚುತ್ತಿವೆಯೆಂದು ತಿಳಿದಾಗ ದುಡಿತದಿಂದ ಕೆಲವು ದಿನ ವಿಶ್ರಾಂತಿ ಬೇಕೆನ್ನಿಸಿದಾಗ, ಮಾತ್ರ ಖಾಲಿ ಮಾಡದೆ ನೀವು ಕಾಯಿಲೆ ಮಲಗಿಕೊಂಡು ನೋಡಿ- ಅವುಗಳ ಮಹೋಪಕಾರಗಳೆಂಥವೆಂಬುದು ನಿಮ್ಮ ಅನುಭವಕ್ಕೆ ಬರುವುದು" ಎಂದು ಉಪದೇಶಿಸಿದ್ದಾರೆ. ಸ್ವಾನುಭವಜನ್ಯವಾದ ಇಂತಹ ಜ್ಞಾನದಾನಕ್ಕೆ ನಾವು ಕೃತಜ್ಞರಾಗಿ, ಕಾಯಿಲೆ ಬೀಳುವುದರಿಂದ ಆಗುವ ಪ್ರಯೋಜನಗಳ ಕಡೆಗೆ ತಿರುಗೋಣ.

ನಮಗೆ ಕಾಯಿಲೆ ಬಂದಾಗ ನಾವು ಅವಕ್ಕೆ ತಕ್ಕ ಚಿಕಿತ್ಸೆಪಡೆದು ಮತ್ತೆ ಆರೋಗ್ಯವಾಗಿ ಬಿಡುತ್ತೇವೆ. ವೈದ್ಯರ ಬಳಿಗೆ ಹೋಗುವುದು, ಔಷಧಿ ತರುವುದು, ಅದನ್ನು ಹೊತ್ತಿಗೆ ಗೊತ್ತಿಗೆ ಸೇವಿಸುವುದು, ಮಾತ್ರೆಗಳನ್ನು ನುಂಗುವುದು, ಅಥವಾ ಉಗುಳುವುದು? ಇವೆಲ್ಲ ಆಗಲೇಬೇಕು. ಕಾಯಿಲೆ ಬೀಳುವುದರಲ್ಲಿ ಹಾಗಲ್ಲ, ಇದೊಂದು ಆಟ, ಆವುಟ ಬೇಕಾದರೂ ಹೇಳಬಹುದು. ಕಾಯಿಲೆ ಬರದಿದ್ದರೂ ಬಂದಿದೆ ಎಂದು ಹೇಳುವುದು, ಇದೊಂದು ಕಲೆ. ಇದು ಅಭ್ಯಾಸದಿಂದ ಮಾತ್ರ ಲಭಿಸುತ್ತದೆ. ಕೆಲವು ಸಲ ಗುರುಮುಖೇನ ಉಪದೇಶವಾಗುತ್ತದೆ. ಹಾಗೆಬಂದ ಕಲೆ ಯಶಸ್ವಿಯಾಗಿ ಎಲ್ಲರ ಮನ್ನಣೆ ಗೌರವಗಳಿಗೆ

ಪಾತ್ರವಾಗುತ್ತದೆ. ಕೆಲವು ಸಲ ಗುರುಗಳಿಲ್ಲದಿದ್ದರೂ ಸನ್ನಿವೇಶಬಲದಿಂದ ಇದು ತಾನಾಗಿಯೇ ವ್ಯಕ್ತಿಯಲ್ಲಿ ವ್ಯಕ್ತವಾಗುತ್ತದೆ.

ನನ್ನ ಸ್ನೇಹಿತನೊಬ್ಬನು ಒಂದು ಹೈಸ್ಕೂಲಿನಲ್ಲಿ ಉಪಾಧ್ಯಾಯನಾಗಿದ್ದಾನೆ. ಅಲ್ಲಿನ ಮುಖ್ಯೋಪಾಧ್ಯಾಯರಿಗೆ ಒಂದು ದರ್ಪ. ರಜ ತೆಗೆದುಕೊಳ್ಳುವುದಕ್ಕೆ ಕಾರಣ ಸರಿಯಾಗಿದೆಯೋ ಇಲ್ಲವೋ ಪರಿಶೀಲಿಸಬೇಕು. "ನಮ್ಮ ಮಾವನವರು ಬಂದಿದ್ದಾರೆ, ಯಾವುದೋ ಕನ್ಯಾಪರೀಕ್ಷೆಯಾಗಬೇಕು, ದಯವಿಟ್ಟು ರಜಾ ಕೊಡಿ" ಎಂದು ಬರೆದರೆ ಅವರು ಉಪಾಧ್ಯಾಯರನ್ನು ಕರೆಸಿ, "ಕನ್ಯಾಪರೀಕ್ಷೆಗೆ ನೀವೇಕೆ ಹೋಗಬೇಕು? ನಿಮ್ಮ ಹೆಂಡತಿ ತಪ್ಪು ಭಾವಿಸುವುದಿಲ್ಲವೇ? ಇನ್ನಾರನ್ನಾದರೂ ಕಳುಹಿಸಿ, ಕಾಯಿಲೆ ಬಂದಾಗ ಮಾತ್ರ ರಜ ತೆಗೆದುಕೊಳ್ಳಿ, ಇರುವುದು ಹದಿನೈದೇ ದಿನಗಳಲ್ಲವೇ?" ಎಂದು ಸ್ನೇಹಿತರಂತೆಯೇ ಮಾತಾಡುತ್ತಿದ್ದರು. ಕೊನೆಗೆ "ನನಗೆ ಆಮಶಂಕೆಯಾಗಿದೆ ರಜ ಕೊಡಿ" ಎಂದು ರಜ ಮಂಜೂರು ಮಾಡಿಸಿಕೊಂಡ ಆ ಉಪಾಧ್ಯಾಯ. ಅಂದಿನಿಂದ ಈಚೆಗೆ ಆ ಶಾಲೆಯಲ್ಲಿ ಯಾರಿಗೆ ರಜ ಬೇಕಾದರೂ ಅವರು ಕಾಯಿಲೆ ಬೀಳುತ್ತಾರೆ. ಅವರವರಿಗೆ ಬೇಕಾದ ಕಾಯಿಲೆಯನ್ನು ಒದಗಿಸಿಕೊಳ್ಳುತ್ತಾರೆ. ನೋಡಿದವರು ದೂರ ಹೋಗಬಾರದು, ಮನೆಯವರು ಹೆದರಬಾರದು, ತನಗೂ ಅಸಹ್ಯವಾಗಬಾರದು ಅಂತಹ ಕಾಯಿಲೆಗಳು. ತಲೆನೋವು ಹೊಟ್ಟೆನೋವು, ಮೂಗುನೋವು ಇತ್ಯಾದಿ. ನ್ಯಾಯವಾಗಿ ನೋಡಿದರೆ ಇವೆಲ್ಲಾ ಒಂದು ಬಗೆಯ 'ಮೂಗುನೋವು'ಗಳೇ, ಯಾವ ವೈದ್ಯನ ಪರೀಕ್ಷೆಗೂ ದಕ್ಕುವುದಿಲ್ಲ, ಯಾವ ಔಷಧಿಗೂ ತಗ್ಗುವುದಿಲ್ಲ. ಇಂತಿಂತಹ ಕಾಯಿಲೆಗೆ ಇಷ್ಟಿಷ್ಟೇ ದಿನ ಎಂದು ರೋಗಿಗಳೇ ಕಾಯಿಲೆಯ ವ್ಯಾಪ್ತಿಯನ್ನು ಮುಂಚೆಯೇ ನಿಶ್ಚಯಿಸಿ ಬಿಡುತ್ತಾರೆ. ಅವರ ರಜಕ್ಕೂ ಕಾಯಿಲೆ ಇರುವ ಕಾಲಕ್ಕೂ ಏನಾದರೂ ಹೊಂದಿಕೆ ಇದ್ದರೆ ಅದು ಕೇವಲ ಆಕಸ್ಮಿಕ. ಇದರಿಂದ ಎರಡು ಪ್ರಯೋಜನ. ಉಪಾಧ್ಯಾಯರಿಗೆ ರಜ ದೊರಕಿತು. ಮುಖ್ಯೋಪಾಧ್ಯಾರಿಗೆ ಕಾಯಿಲೆಗೆ ಮಾತ್ರ ರಜ ಕೊಟ್ಟೆನೆಂಬ ತೃಪ್ತಿಯುಂಟಾಯಿತು. ಬಹುಶಃ ಎಲ್ಲ ಕಛೇರಿಗಳಲ್ಲಿಯೂ ಹೀಗೆಯೇ ಏನೋ! ಇದು ಮನೆಯ ಹೊರಗಡೆಯ ಅನುಭವ. ಮನೆಯ ಒಳಗಡೆ ಕಾಯಿಲೆ ಬೀಳುವುದು ಯಾವ ಸಮಯದಲ್ಲಾದರೂ ಒದಗಬಹುದು. ನಿಮ್ಮ ಮನೆಗೆ ನಿಮಗೆ ಬೇಡದ ಜನ ಬಂದು ಕುಳಿತರು ಅನ್ನಿ. ನಾಲ್ಕಾರು ದಿನಗಳಾದರೂ ಹೊರಡುವ ಸೂಚನೆ ಕಾಣುವುದಿಲ್ಲ ಎನ್ನಿ. ಆಗ ನೀವು ಕಾಯಿಲೆ ಬೀಳಬಹುದು. ಅವರು ತಿಳಿದುಕೊಂಡು ಹೊರಟರೆ ಸಮ. ಹಾಗಲ್ಲದೆ ಅವರು ನಿಮ್ಮ ಕಾಯಿಲೆ ಸರಿಯಾಗಿ ವಾಸಿಯಾಗುವ ತನಕ ಉಪಚಾರ ಮಾಡುವ ತನಕ ಕುಳಿತರೆ ಏನುಗತಿ? ಆಗ ನಿಮ್ಮ ಮನೆಯವರೂ ಕಾಯಿಲೆ ಬೀಳಬಹುದು. ಅಡಿಗೆ ಮಾಡುವ ಕಷ್ಟಬಂದೊದಗುತ್ತದೆ. ಬಂದವರಲ್ಲಿ ಒಬ್ಬ ನಳ ಮಹಾರಾಯ ಆಧುನಿಕ ಅವತಾರವಾಗಿದ್ದು ಅಡಿಗೆ ಮನೆಗೇ ನುಗ್ಗಿ ನಳಪಾಕವನ್ನು ಇಳಿಸಲು ಮುಂದೆ ಬಂದರೆ ಗತಿ ಏನು? ಕಷ್ಟಸರಿ. ನಿಮ್ಮ ವೈದ್ಯರೊಡನೆ ಸಮಾಲೋಚನೆ ಮಾಡಿದಂತೆ ಮಾಡಿ ಹವಾ ಬದಲಾವಣೆಗೆ ಬೇರೆ ಊರಿಗೆ ಹೋಗುವ ಸೂಚನೆ ಕೊಡಿ. ಏನು ಮಾಡುತ್ತಾರೆ ನೋಡೋಣ. ನೀವು ಬೇರೆ ಊರಿಗೆ ಹೋದಾಗ ನಿಮ್ಮ ಮನೆಯನ್ನು

ಕಾಯುವ ಭಾರವನ್ನು ಅವರೇ ಹೊತ್ತುಬಿಟ್ಟರೆ ನಿಮ್ಮ ಉಪಾಯ ಹಳ್ಳಕ್ಕೆ ಬಿತ್ತು. ಆಗಲೂ ಹೆದರಬಾರದು. ಮತ್ತೆ ಈ ಕಲ್ಪನಾರಾಜ್ಯದ ವೈದ್ಯನೊಡನೆ ಸಮಾಲೋಚನೆ ಮಾಡಿ ನಿಮಗೆ ಬಂದಿರುವ ಕಾಯಿಲೆ 'ವಿಷಮ ಶೀತಜ್ವರ'ವೆಂದೋ, 'ವಾಂತಿಭೇದಿ ಇರುವುದರಿಂದ ಕಾಲರಾ ಇರಬಹುದು'ದು ಎಂದೋ, 'ಈ ಹಾಳು ಪ್ಲೇಗು ನಮ್ಮ ಮನೆಗೆ ಏಕೆ ಬಂತು' ಎಂದೋ ಹೇಳಿಬಿಡಿ. ನಿಮ್ಮ ಮನೆಯಲ್ಲಿ ಅವರು ನಿಂತರೆ ಕೇಳಿ. ಆಮೇಲೆ ಅವರ ಜೊತೆಯಲ್ಲಿಯೇ ಬಂದ ಪ್ಲೇಗೂ ಹೊರಟು ಹೋಗುತ್ತದೆ.

ಈ ಸಲದ ದಸರಾ ಮಹೋತ್ಸವಕ್ಕೆ ನನ್ನ ನೆಂಟನೊಬ್ಬ ನಾಲ್ಕು ಜನ ಸ್ನೇಹಿತರೊಡನೆ ಹೊರಟ, ದಾವಣಗೆರೆಯಿಂದ ಮೈಸೂರಿಗೆ. ಜನಜಂಗುಳಿಯಲ್ಲಿ ಏನೂ ತಿಳಿಯಲಿಲ್ಲ, ರೈಲು ಬಂದು ನಿಂತಿತು. ಜನ ನುಗ್ಗಿದರು. ಇವನ ಪ್ರಯತ್ನವಿಲ್ಲದೆ ಇವನೂ ಯಾವುದೋ ಡಬ್ಬಿಯೊಳಗೆ ಹೋದಹಾಗಾಯಿತು. ನಾಲ್ಕು ಜನ ಸ್ನೇಹಿತರೂ ಹೇಗೋ ನುಗ್ಗಿ ನಿಂತರು. ನಿಂತರು ಎನ್ನುವುದಕ್ಕಿಂತ ಇದ್ದರು ಎನ್ನುವುದು ಸರಿ. ಹೇಗಿದ್ದರೋ ಯಾರು ಬಲ್ಲರು. ಅಂತೂ ಇದ್ದರು. ರೈಲು ಮುಂದೆ ಹೊರಟಿತು. ಈ ಕುಶಾಗ್ರಬುದ್ಧಿಗೆ ಇದ್ದಕ್ಕಿದ್ದಂತೆಯೇ ಸ್ಫೂರ್ತಿ ಬಂದಿತು. ಆಯಾಸದಿಂದ ಮೂರ್ಛೆ ಹೋದಂತೆ ಮಾಡಿದ. ಮಿಕ್ಕವರು ಗಾಳಿ ಬೀಸಲು ಮೊದಲುಮಾಡಿದರು. ಸ್ವಲ್ಪ ಜಾಗವಾಯಿತು. ಈತನನ್ನು ಮಲಗಿಸಿ ಸುತ್ತ ಸ್ನೇಹಿತರು ಕುಳಿತರು. ಏನೋ ಪಾಪ ಎಂದು ಎಲ್ಲರೂ ದಾರಿ ಮಾಡಿಕೊಟ್ಟು ಕುತೂಹಲದಿಂದ ನೋಡುತ್ತಿದ್ದರು. ಇದ್ದಕ್ಕಿದ್ದಂತೆಯೇ ಒಬ್ಬ ಸ್ನೇಹಿತ ಅಳುವುದಕ್ಕೆ ಮೊದಲುಮಾಡಿದ. ಎಷ್ಟೋ ಕಷ್ಟದಿಂದ ಅಳುವನ್ನು ಇತರರು ತಡೆಯುತ್ತಿರುವುದು ಪ್ರಯಾಣಿಕರ ಗುಂಪಿಗೆ ಗೊತ್ತಾಯಿತು. ಎಲ್ಲರ ಕುತೂಹಲ ಕೆರಳಿತು. ಯಾರೋ ಒಬ್ಬರು ಕಾರಣವೇನೆಂದು ಬಲವಂತವಾಗಿ ಕೇಳಿದಾಗ ಇನ್ನಿಬ್ಬರೂ ಗಟ್ಟಿಯಾಗಿ ಅತ್ತು ಬಿಟ್ಟರು. ಕೊನೆಗೆ, ಒಬ್ಬ ಅಧಿಕಾರಿಯಂತಿದ್ದವನು ಮುಂದೆ ನುಗ್ಗಿ "ಏನು, ಏನಾಗಿದೆ" ಎಂದು ಉತ್ತರಕ್ಕಾಗಿ ಕಾದ. ಆಗ ನಾಲ್ಕನೆಯವನು ಹೃದಯದ ಅಂತರಾಳದಿಂದ ಬಂದ ದುಃಖವನ್ನು ಅತಿಕಷ್ಟದಿಂದ ತಡೆದು ಹೇಳಿದ "ಈತನಿಗೆ ಕಂಕುಳಿನಲ್ಲಿ ಗೆಡ್ಡೆ ಎದ್ದಿದೆ. ಪ್ಲೇಗಂತೆ, ಬೆಂಗಳೂರಿಗೆ ಹೋಗುತ್ತಿದ್ದೇವೆ" ಎಂದು. ಹೀಗೆ ಹೇಳುವ ಹೊತ್ತಿಗೂ ಒಂದು ಸ್ಟೇಷನ್ ಸಿಕ್ಕುವ ಹೊತ್ತಿಗೂ ಸರಿಹೋಯಿತು. ದಾವಣಗೆರೆಯ ಜನ, ಈರುಳ್ಳಿಯ ಮೂಟೆಯನ್ನುಬಿಚ್ಚಿ ಸುರಿದಾಗ ಗೆಡ್ಡೆಗಳೆಲ್ಲ ಕೆಳಗುರುಳುವಂತೆ ಪ್ರಯಾಣಿಕರೆಲ್ಲ "ಸತ್ತೆವೋ ಬದುಕಿದೆವೋ" ಎಂದು ಧಮುಕಿ ಬದುಕಿಕೊಂಡರು. ಗಾಡಿ ಖಾಲಿ. ನಾಲ್ಕು ಜನ ಮಾತ್ರ ಯಾವ ಸ್ಟೇಷನ್ ಬಂದರೂ ಪ್ಲೇಗಿನ ಸುದ್ದಿ ಹರಡಿ ಈ ಡಬ್ಬಿಗೆ ಯಾರೂ ಸುಳಿಯಲಿಲ್ಲ. ಮೈಸೂರು ಬಂತು, ಈ ಕಾಯಿಲೆ ತಾನಾಗಿಯೇ ಮಾಯವಾಯಿತು.

ಹಿಂದಿನ ಕಾಲದಲ್ಲಿ ಇಂಗ್ಲೆಂಡ್ ದೇಶದಲ್ಲಿ ಒಂದು ಪದ್ಧತಿ ಇದ್ದಿತಂತೆ. ಏನೋ ಮಂಕು ಬಡಿದವನಂತೆ ಮರುಳುಹಿಡಿದವನಂತೆ ಗಾಳಿಯೊಡನೆ ಮಾತಾಡುವವನಂತೆ ಇರುವುದು ಘನತೆ ವಿದ್ವತ್ತುಗಳ ಲಾಂಛನವೆಂದು ತಿಳಿದಿದ್ದರಂತೆ. "ನನ್ನ ಮನೆಗೆ ಊಟಕ್ಕೆ ಬರುತ್ತೀಯಾ" ಎಂದು ಆಹ್ವಾನ ಕೊಟ್ಟರೆ, "ನಾನು ಕುಳಿತು ಚಿಂತಾಮಗ್ನನಾಗಿರುವುದಕ್ಕೆ ನಿಮ್ಮ ಮನೆಯಲ್ಲಿ

ಬೇರೆ ಸ್ಥಳವಿದೆಯೇ? ಎಂದು ಕೇಳುತ್ತಾ ಇದ್ದರಂತೆ. Every man In His Humour ಎನ್ನುವ ನಾಟಕದಲ್ಲಿ ಈ ಸಂಪ್ರದಾಯದ ವಿಡಂಬನೆ ಇದೆ. ಏಕೆ Milton ಮಹಾಕವಿಯೇ ಹೇಳಲಿಲ್ಲವೇ.

"These Pleasures, melancholy give And I with thee will choose to live ಇದೂ ಕೂಡ ಕಾಯಿಲೆ ಬೀಳುವುದರ ಒಂದು ಸೂಕ್ಷ್ಮ ರೂಪ.

ಹಿಂದೆ ಫ್ರಾನ್ಸ್ ದೇಶದಲ್ಲಿ ಸ್ತ್ರೀಯರು ಎಷ್ಟು ಸಲ ಮೂರ್ಛೆ ಬಿದ್ದರೆ ಅವರ ಸೌಕುಮಾರ್ಯ ಸೌಂದರ್ಯಗಳಿಗೆ ಅಷ್ಟು ಮೆರಗು ಬರುತ್ತಿದ್ದಿತಂತೆ. ಇದನ್ನು ಕಂಡು ಅನೇಕ 'ಗಡವ' ಸ್ತ್ರೀಯರೂ, ಮೂರ್ಛೆ ಬೀಳಲು ಪ್ರಯತ್ನಿಸಿ ಅವರ ಸಹಾಯಕ್ಕೆ ಹೋದ ಪುರುಷರಿಗೆ ಗಾಯಗಳಾದ ಪ್ರಸಂಗಗಳೂ ಇವೆ.

ನಮ್ಮ ದೇಶಕ್ಕೆ ತಾನೇ ಇದು ಹೊಸದೇನು? ಕಾಯಿಲೆಯ ಬದಲು ಕೋಪ ಬರಿಸಿಕೊಳ್ಳುತ್ತಿದ್ದರು ಅಷ್ಟೆ. ರಾಜಾಧಿರಾಜರ ಅಂತಃಪುರಗಳಲ್ಲಿ, ಕೋಪಾಗಾರವೆಂಬ ಒಂದು ಸೌಧವೇ ಇರುತ್ತಿದ್ದಿತಂತೆ. ಕೋಪದ ವಿವಿಧ ಪ್ರಾಕಾರಗಳನ್ನು ಅರಿತ, ಉಪದೇಶಿಸುವ, ಸಖಿಯರಿಗೆ ಅಲ್ಲಿ ಆಶ್ರಯ ಸಿಕ್ಕುತ್ತಿದ್ದಿತ್ತಂತೆ. ರಾಮಾಯಣವನ್ನೇ ತೆಗೆದುಕೊಳ್ಳಿ. ಕೈಕೆ ತನ್ನ ಕಾರ್ಯಸಾಧನೆಗೆ ಹೂಡಿದ ಉಪಾಯವಾವುದು?

ಮೊಗಲ ಚಕ್ರವರ್ತಿಗಳ ಕಥೆಗಳನ್ನು ಓದಿದರೆ ಚಕ್ರವರ್ತಿನಿಯರು ಅಥವಾ ಪ್ರೇಯಸಿಯರು ತಮ್ಮ ಕಾರ್ಯಸಾಧನೆಗಾಗಿ ಕಾಯಿಲೆ ಬೀಳುತ್ತಿದ್ದ ಪ್ರಸಂಗಗಳು ಎಷ್ಟೋ ಕಂಡುಬರುತ್ತವೆ. ಮೊಗಲ ರಾಣಿಯರೇಕೆ ನಮ್ಮ ಜನ ಸಾಮಾನ್ಯರ ಮನೆಗಳಲ್ಲಿರುವ ರಾಣಿಯರನ್ನೇ, ತೆಗೆದುಕೊಳ್ಳಿ. ಅವರೂ ಕೂಡ ತಮ್ಮ ಯಾವುದೋ ಪ್ರಯೋಜನವನ್ನು ಪಡೆಯಲು ಕಾಯಿಲೆ ಬೀಳುತ್ತಾರಲ್ಲವೆ? ನಮ್ಮ ಚಿಕ್ಕಮ್ಮ ಒಬ್ಬರಿದ್ದಾರೆ. ಅವರಿಗೆ ಕೈಗೆ ಹಣಬೇಕಾದರೆ ನಮ್ಮ ಚಿಕ್ಕಪ್ಪನನ್ನು ಕೇಳುವುದೇ ಇಲ್ಲ? ಅವರಿಗೆ ಯಾವುದೋ ಕಾಯಿಲೆ ಬಂದ ಹಾಗಾಗುತ್ತದೆ. ಚಿಕ್ಕಪ್ಪನವರ ಹಸ್ತದಿಂದ ಬಂದ ಇಷ್ಟೋ ಅಷ್ಟೋ ರೂಪಾಯಿಗಳಿಂದ ರೋಗ ವಾಸಿಯಾಗುತ್ತದೆ. ಈಚೀಚೆಗೆ ಚಿಕ್ಕಪ್ಪನವರಿಗೂ ಇದು ಗೊತ್ತಾಗಿಬಿಟ್ಟಿದೆ. ಹುಡುಗರು ಯಾರಾದರೂ ಬಂದು ''ಚಿಕ್ಕಪ್ಪ ಚಿಕ್ಕಮ್ಮನಿಗೆ ಜ್ವರ ಬಂದಿದೆಯಂತೆ'' ಅಂದರೆ, ನಮ್ಮ ಚಿಕ್ಕಪ್ಪ ''ಓಹೋ, ಹಾಗೇನು? ಎಷ್ಟು ರೂಪಾಯಿನ ಜ್ವರ ಕೇಳು'' ಎಂದು ಹೇಳುತ್ತಾರೆ. ಜ್ವರದ ವಿವರಣೆ ದೊರೆತ ತರುವಾಯ ಅಷ್ಟು ಹಣ ಸಂದಾಯವಾಗಿ ಹೋಗುತ್ತದೆ. ಇದು ರಾಜಾರೋಷವಾಗಿ ಕಾಯಿಲೆ ಬೀಳುವ ಸ್ವಭಾವ.

ಕೆಲವು ಸಲ ನಮಗೆ ಯಾರ ಸಹವಾಸವೂ ಬೇಡದೆ ಏಕಾಂತವಾಸವಾಗಬಹುದು. ಅದೊಂದು ಸೊಗಸಾದ ಸುಖ. ಅನುಭವಿಸಿದವರಿಗೇ ಗೊತ್ತು ಅದರ ಸವಿ.

ಕವಿ Marvell ಹೇಳಿರುವಂತೆ.

Two paradises it were in one

To live in paradise alone

ಉದ್ಯಾನವಲ್ಲಿ ಕುಳಿತು ಸುತ್ತಣ ಸೌಂದರ್ಯದಲ್ಲಿ ಲೀನನಾಗಿ ಕನಸಿನ ರಾಜ್ಯದಲ್ಲಿ ಹಾರಾಡಬೇಕಾದರೆ

ಕವಿ ಮತ್ತೊಬ್ಬನು ಹೇಳಿದಂತೆ,

Annihilating all that is made

To a green thought in a green shade

ಸುಖ ಪಡಬೇಕಾದರೆ ಈ ಏಕಾಂತತೆ ಅತ್ಯಗತ್ಯ. ಅಂತಹ ಸಮಯದಲ್ಲಿ ಜನರನ್ನು ದೂರ ಕಳುಹಿಸಬೇಕಾದರೆ ನೀವು ಕಾಯಿಲೆ ಬೀಳುಬಹುದು.

ಕವಿಗಳೂ ನಾಟಕಕಾರರೂ ತಲೆನೋವು ಮೂಗು ನೋವುಗಳನ್ನು ನಾಟಕದಲ್ಲಿ ವಸ್ತು ಸಂವಿಧಾನದ ಅಂಗವಾಗಿ ಉಪಯೋಗಿಸಿಬಿಟ್ಟಿದ್ದಾರೆ. ಸ್ವಪ್ನವಾಸವದತ್ತದಲ್ಲಿ ಗರ್ಭಾಂಕದಲ್ಲಿ ಬರುವ ರಸಸ್ಥಾನ ಸಾಧ್ಯವಾಗಿರುವುದು ಈ ತಲೆನೋವಿನ ದೆಸೆಯಿಂದ. ಮಾಳವಿಕಾಗ್ನಿಮಿತ್ರದಲ್ಲಿ ಹಾವು ಕಚ್ಚುವುದೆಂಬ ಉಪಾಯದಿಂದ ಮಾಳವಿಕೆಯ ಬಂಧವಿಮೋಚನೆ ಸಾಧ್ಯವಾಗಿದೆ. ರತ್ನಾವಳಿಯಲ್ಲಿ ಕಪಿಯನ್ನು ಕಂಡು ಮಗುವೊಂದು ಹೆದರಿ ಅಳುತ್ತಿರುವುದು ಸಂವಿಧಾನ ಚಾತುರ್ಯ. ಹೀಗೆ ಎಷ್ಟೋ ಕವಿಗಳು ಇದನ್ನು ನಾಟಕದಲ್ಲಿ ಉಪಯೋಗಿಸಿದರೆ ನಾವು ಜೀವನದಲ್ಲಿ ಏಕೆ ಇದರಿಂದ ಪ್ರಯೋಜನ ಪಡೆಯಬಾರದು.

ನ್ಯಾಯವಾಗಿ ನೋಡಿದರೆ ಇದು ಒಂದು ಮುಖ್ಯವಾದ ಉಪಾಯ, ಉಪಾಯಗಳು ನಾಲ್ಕು ಮಾತ್ರ ಎಂದು ಹೇಳಿ ಸಾಮ, ದಾನ, ಭೇದ, ದಂಡಗಳೊಡನೆ ರೋಗವನ್ನು ಸೇರಿಸದಿರುವುದು ಅನ್ಯಾಯ. ಪಂಚೋಪಾಯಗಳಲ್ಲಿ ರೋಗೋಪಾಯ ಎಲ್ಲಕ್ಕಿಂತ ಮುಖ್ಯವಾದುದು. ಯಾವುದೂ ಸಾಧಿಸದಿರುವುದನ್ನು ಇದು ಸಾಧಿಸಬಲ್ಲದು.

ಹುಚ್ಚು ಹಿಡಿದಿದೆ ಎಂದು ನಟಿಸುತ್ತಾ ಮಹಾಕಾರ್ಯ ಮಾಡಿದ ಜನರ ಕಥೆ ಕೇಳಿಲ್ಲವೆ? Junius Brutus ಎಂಬಾತ ಹುಚ್ಚನೆಂದುಕೊಂಡು ಎಲ್ಲರೂ ಆತನನ್ನು ಹಾಸ್ಯ ಮಾಡುತ್ತಿದ್ದಾಗ, ಆಂತರ್ಯದಲ್ಲಿಯೇ Tarquin ಪ್ರಭುಗಳನ್ನೇ ಕೆಳಗುರುಳಿಸಿದನು. ಹೀಗೆಯೇ ಇನ್ನೂ ಅನೇಕ ಮಹಾಕಾರ್ಯಗಳಿಗೆ ಕಾಯಿಲೆಗಳು ಸಾಧನವಾಗಿವೆ.

ಕಾಯಿಲೆ ಬೀಳುವವರು ಎಚ್ಚರಿಕೆಯಿಂದಿರಬೇಕು. ಯಾವ ಸೂಕ್ಷ್ಮದಲ್ಲಿಯೂ ಈ ನಟನೆಯ ಸುಳುವು ಗೊತ್ತಾಗಬಾರದು. ಗೊತ್ತಾದರೆ ಅವಮಾನ, ಕಾರ್ಯ ಹಾನಿ, ಯೂರೋಪಿನಲ್ಲಿ ಒಂದು ನಂಬಿಕೆಯಿದೆ. ಮಾಟಗಾತಿಯರು ಯಾವ ರೂಪವನ್ನು ಬೇಕಾದರೂ ಧರಿಸುವುದು ಸಾಧ್ಯವಂತೆ. ಪ್ರಾಣಿರೂಪವನ್ನು ಧರಿಸಿದರೆ ಅವರಿಗೆ ಬಾಲಮಾತ್ರ ಇರುವುದಿಲ್ಲವಂತೆ. ಹೀಗೆ ಬಾಲವಿಲ್ಲದ ಬೆಕ್ಕು, ಬಾಲವಿಲ್ಲದ ಹೆಗ್ಗಣ, ಕಪಿ ಆಗಬಹುದು. ಆದರೆ ಈ ರೂಪಗಳಲ್ಲಿ ತಮ್ಮಲ್ಲಿಲ್ಲದ ಬಾಲವನ್ನು ಅವರು ಮುಚ್ಚಿಡುತ್ತಾರೆ. ಹಾಗೆಯೇ ಕಾಯಿಲೇ ಬೀಳುವವರು ಅವರ ಗುಟ್ಟನ್ನು ಬಿಟ್ಟುಕೊಡಬಾರದು. ಆಗ ಮಾತ್ರ ಪ್ರಯೋಜನ, ಗೆಲವು.

ಆದರೆ ಒಂದು ಎಚ್ಚರಿಕೆಯನ್ನು ಮಾತ್ರ ಕೊಡಬೇಕು. ಯುವಕರು ಯುವತಿಯರ

ಪ್ರೇಮಾನುರಾಗಗಳಿಗೆ ಪ್ರಯತ್ನ ಪಡುತ್ತಿರುವಾಗ ಮಾತ್ರ ಈ ಉಪಾಯವನ್ನು ಪ್ರಯೋಗಿಸಬಾರದು. ಅಲ್ಲಿ ಇದು ಅಪಾಯಕರ. ಕವಿಯು ಹೇಳುವಂತೆ.

"Will, if looking well cannot

move her,


Looking ill prevail?"

ಕಷ್ಟ ಕಷ್ಟ ಆಗಮಾತ್ರ ನೀವು ಜಾಗರೂಕತೆಯಿಂದಿರಬೇಕು. ಈ ಸಾಧನ ನಿಮಗಲ್ಲ, ಖಂಡಿತ ನಿಮಗಲ್ಲ, ನನಗೆ ಇನ್ನೊಂದು ಅನುಮಾನ ಬರುತ್ತಾ ಇದೆ. ಕಾಯಿಲೆ ಬೀಳುವುದರಿಂದ ಇಷ್ಟೊಂದು ಪ್ರಯೋಜನ ವಿದೆಯೆಂದು ಎಲ್ಲರೂ ಇದನ್ನೇ ಪ್ರಯೋಗಿಸಲು ಮೊದಲು ಮಾಡಿದರೆ ಗತಿಯೇನು? ಗತಿಯೇನು?

ಓಹೋ, ಮರೆತೆ, ಆಗ ಆರೋಗ್ಯ ಬೀಳುವುದು ಎಂಬ ಹೊಸ ಸಾಧನವನ್ನು ಹೂಡಬೇಕಾಗಬಹುದು. ನೆನಪಿರಲಿ.

❖❖❖

ರಾಮ ಸೇತು - ಕಾಲ್ಪನಿಕ ಪುರಾಣ ?



ಕೃಪೆ- ಶೇಖರ್ ಗುರೇರ

ನನ್ನ ಹಾಡು ನನ್ನದು......

❖ ಎಚ್.ಗೋಪಾಲಕೃಷ್ಣ

...... ಹುಟ್ಟಿದ ಎರಡು ದಿವಸ ನಾನು ಕಣ್ಣೇ ಬಿಡಲಿಲ್ಲವಂತೆ. ಮಗು ಕುರುಡಾಗಿ ಹುಟ್ಟಿದೆಯೇ ಅಂತ ಮನೇಲಿ ಅಜ್ಜಿ ವರಾತ ತೆಗೆದಳಂತೆ. ಸರಿ ಡಾಕ್ಟರನ್ನ ಕರೆಸಿದರು. ಡಾಕ್ಟರು ಚಿಮುಟದಿಂದ ಕಣ್ಣು ರೆಪ್ಪೆ ತೆಗೆದನಂತೆ,ಲೈಟೂ ಬಿಟ್ಟನಂತೆ.ಅಮ್ಮಾ ಮಗು ಕುರುಡು ಅಂತ ನನಗೆ ಅನ್ನಿಸುತ್ತಿಲ್ಲ.ಆದರೂ ನಿಮ್ಮ ಸಂಶಯ ಸರಿಪಡಿಸ್ಕೋಬೇಕು ಸ್ಪೆಷಲಿಸ್ಟ್ ಹತ್ತಿರ ಹೋಗಿ ಬೇಕಾದರೆ ಬರಕೊಡ್ತೀನಿ ಅಂತ ಅಂದನಂತೆ. ಸರಿ ಸ್ಪೆಷಲಿಸ್ಟ್ ಹತ್ತಿರಾನೂ ಹೊತ್ತುಕೊಂಡು ಹೋದರಂತೆ.

ಹೊತ್ತಿಕೊಂಡು ಯಾಕೆ ಅಂದರೆ ನಾನು ಹುಟ್ಟಿದಾಗ ಹದಿನಾರು ಪೌಂಡ್ ಇದ್ದೆನಂತೆ. ಹದಿನಾರು ಪೌಂಡು ಇರೋ ಮಗೂನ ಎತ್ತಿಕೊಳ್ಳಕ್ಕೆ ಆಗುತ್ಯೇ? ಅದಕ್ಕೇ ಹೊತ್ತುಕೊಂಡು ಹೋದರು. ಕಣ್ಣು ಸ್ಪೆಷಲಿಸ್ಟ್ ಎರಡು ದಿವಸ ಅಬ್ಸರ್ವ್ ಮಾಡಿದನಂತೆ. ತಾಯೀ ಮಗೂಗೆ ಕಣ್ಣು ಸರಿಯಾಗೇ ಇದೆ, ಆದರೆ ಹೊಸದಾಗಿ ಪ್ರಪಂಚಕ್ಕೆ ಬಂದಿದೆ ನೋಡೀ ಅದಕ್ಕೋಸ್ಕರ ಹೊಸಾ ಪರಿಸರಕ್ಕೆ ಹೊಂದಿಕೊಳ್ಳೋದಿಕ್ಕೆ ಅದಕ್ಕೆ ಕೆಲವು ಸಮಯ ಬೇಕು-ಇನ್ನೂ ಎರಡುವಾರ ನೋಡೋಣಾ. ಅಷ್ಟರಲ್ಲಿ ಅದು ಕಣ್ಣು ಬಿಡದೇ ಹೋದರೆ ಅದೇನು ಮಾಡಬೇಕೋ ಅದನ್ನ ಮಾಡಿದರೆ ಆಗುತ್ತೆ ಅಂತ ಅಂದನಂತೆ.

ಹೀಗೆ ಹುಟ್ತಾಲೇ ಸಮಸ್ಯೆ ಸಮೇತ ಹುಟ್ಟಿದೋನು ನಾನು ಅಂತ ಅಮ್ಮ ಅವಾಗವಾಗ ಕತೆ ಬಿಡ್ತಾಳೆ! ಎರಡುವಾರ ಕಳೀತು, ಇನ್ನೂ ಮಗು ಕಣ್ಣೇ ಬಿಟ್ಟಿಲ್ಲ ಅಂತ ಚಿಂತೆ ಜ್ಯಾಸ್ತಿ ಆಯಿತಂತೆ. ಸೂಪರ್ ಸ್ಪೆಷಲಿಸ್ಟ್ ಹತ್ತಿರ ಹೋಗ್ಬಿಡಿ, ಸಣ್ಣಪುಟ್ಟ ಡಾಕ್ಟರನ್ನ ನಂಬಿದರೆ ಮಗು ಕಣ್ಣು ಹೋಗೇ ಬಿಡುತ್ತೆ ಅಂತ ಆಚೆಮನೆ ಅಚ್ಚಮ್ಮಜ್ಜಿ ಐಡಿಯಾ ಕೊಟ್ಟರಂತೆ. ಸರಿ ಅಂತ ಟ್ಯಾಕ್ಸಿ ಮಾಡಿದರು. ಅದರೊಳಗೆ ನನ್ನನ್ನ ಹೊತ್ತು ಹಾಕಿದರು, ಹಿಂದುಗಡೆ ಸೀಟಿನಲ್ಲಿ ಅಮ್ಮ, ನಾನು: ಮುಂದುಗಡೆ ಸೀಟಿನಲ್ಲಿ ಅಪ್ಪ ಟ್ಯಾಕ್ಸಿ ಡ್ರೈವರು. ಟ್ಯಾಕ್ಸಿ ಹೊರಡ್ತು. ಮುಂದೆ ಟ್ಯಾಕ್ಸಿ ಹೋಗ್ತಾ ಇದೆ.

ಅಪ್ಪ ಟ್ಯಾಕ್ಸಿ ಡ್ರೈವರ್ ಜತೆ ಉರ್ದೂನಲ್ಲಿ ಮಾತು ಕತೆ ಆಡ್ತಿದಾರೆ. ಇಬ್ಬರೂ ಮಾತಿನಲ್ಲಿ ಮೈ ಮರೆತಿದ್ದರಂತೆ. ಹಿಂದುಗಡೆಯಿಂದ ಒಂದು ಲಾರಿ ಬಂದು ನಾವು ಕೂತಿದ್ದ ಟ್ಯಾಕ್ಸೀಗೆ ಗುಮ್ಮಿದನಂತೆ. ಅಪ್ಪಂಗೆ ಮುಂದುಗಡೆ ಮಣಿಗಂಟು ಫ್ರಾಕ್ಚರು, ಹಿಂದುಗಡೆ ಅಮ್ಮನಿಗೆ ಹಣೇ ಮೇಲೆ ಬೋರು ಆಯಿತಂತೆ. ಮಗೂಗೆ ಏನಾಗಿದೆ ಅಂತ ಎಷ್ಟೋ ಹೊತ್ತಾದ ಮೇಲೆ ನೆನಪಿಗೆ

ಬಂದು ನನ್ನ ಹತ್ತಿರ ತಿರುಗಿದರಂತೆ. ಅಮ್ಮ ಈ ಪ್ರಸಂಗ ವರ್ಣಿಸುವುದನ್ನ ಅದೆಷ್ಟು ಸಾವಿರ ಸಲ ಕೇಳಿದೀನೋ ನನಗೆ ಲೆಕ್ಕ ತಪ್ಪಿಹೋಗಿದೆ. ಪ್ರತಿಸಲವೂ ಅವಳು ವರ್ಣಿಸಿದ ಕೆಲವು ಪದಗಳು ನನ್ನ ಮನಸ್ಸಿನಲ್ಲಿ ಈಗಲೂ ಅಚ್ಚಳಿಯದೇ ಹಾಗೇ ನಿಂತಿದೆ. ವರ್ಣನೆಯ ಅಂಚಿಗೆ ಬಂದಾಗ ಅಮ್ಮ ಹೇಳುತ್ತಿದ್ದಳು-ಬೆಳ್ಳಿ ಬಟ್ಟಲಿನಲ್ಲಿ ಕರೀ ದ್ರಾಕ್ಷಿ ಇಟ್ಟಹಾಗೆ ನಾನು ಕಣ್ಣು ಬಿಟ್ಟುಕೊಂಡು ಪಿಳ ಪಿಳ ಅಂತ ನೋಡ್ತಾ ಇದ್ದೆನಂತೆ, ಸಧ್ಯ ನಿನಗೇನೂ ಆಗಿರಲಿಲ್ಲ! ಅಂತ ಖುಷಿ ಪಟ್ಟಿದ್ದಳು.

ಇದು ನನ್ನ ಕಣ್ಣಿಗೆ ಸಂಬಂಧ ಪಟ್ಟ ಕಥೆಯಾದರೆ ನನ್ನ ಹಾಡಿಗೆ ಸಂಬಂಧ ಪಟ್ಟಹಾಗೆ ದೊಡ್ಡ ಕತೆಯೇ ಇದೆ. ನನಗೆ ಒಂದು ವರ್ಷವಾದರೂ ಗಂಟಲಿಂದ ಧ್ವನಿ ಹೊರಟಿರಲಿಲ್ಲವಂತೆ. ಕಣ್ಣಿನ ಅನುಭವವಾಗಿತ್ತಲ್ಲಾ ಅದರಿಂದ ಈಗಿನ ಕಾಲದ ಮಕ್ಕಳು ನೋಡೋಣಾ ಅಂತ ಕಾದರಂತೆ.ಆರು ತಿಂಗಳಾಯಿತು, ಏಳಾಯಿತು, ಎಂಟಾಯಿತು, ಒಂಬತ್ತೂ ಆಯಿತು ಮಗು ಅತ್ತರೂ ಶಬ್ದ ಇಲ್ಲ ಏನಪ್ಪಾ ಗತಿ ಅಂತ ಅನಿಸಿತಂತೆ.

ಇದರ ಜತೆಗೆ ನಮ್ಮ ಫ್ಯಾಮಿಲಿ ವೆಲ್ ವಿಷರು ಅಚ್ಚಮ್ಮಜ್ಜಿ ನಿಮ್ಮ ವಂಶದಲ್ಲಿ ಯಾರೂ ಮೂಗರಾಗಿಲ್ಲ, ಅದರಿಂದ ಮಗು ಮೂಕಲ್ಲ, ಅದಕ್ಕೆಚೆನ್ನಾಗೇ ಕಿವಿ ಕೇಳುತ್ತೆ ಗಿಲಕಿ ಆಡಿಸಿದರೆ, ಚಿಲ್ರೆ ಝಣ ಝಣ ಅನಿಸಿದರೆ ಅದು ಹೇಗೆ ಕಿವಿ ಅಗಲಿಸುತ್ತೆ ನೋಡೀ ಅಂತ ಹೇಳುತ್ತಿದ್ದಳಂತೆ. ಅಚ್ಚಮ್ಮಜ್ಜಿ ಹೇಳಿದೆ ಅಂತ ನಮ್ಮ ಅಪ್ಪ ಅಮ್ಮಾನೂ ಒಂದು ವರ್ಷದವರೆಗೆ ಕಾದರು. ಮಗು ಮೂಕವಾಗೇ ಹುಟ್ಟಿದೆ ಅಂತ ಇವರಿಗೆ ದಿವಸಕ್ಕೆ ನೂರುಸಲ ಅನಿಸೋದಿಕ್ಕೆ ಶುರುವಾದ ಮೇಲೆ ಬೇರೆ ದಾರಿ ಇಲ್ಲದೇ ಡಾಕ್ಟರ ಹತ್ತಿರಕ್ಕೆ ನನ್ನನ್ನ ಈಸಲವೂ ಹೊತ್ತುಕೊಂಡೇ ಹೋದರಂತೆ. ಒಂದು ವರ್ಷದಲ್ಲಿ ನನ್ನ ತೂಕ ನಲವತ್ತು ಪೌಂಡು ಆಗಿತ್ತಂತೆ! ಡಾಕ್ಟರ ಹತ್ತಿರ ಹೋಗಿ ನನ್ನ ವಿಷಯ ಹೇಳಿದರಂತೆ. ದಪ್ಪನೆ ಕನ್ನಡಕದ ಡಾಕ್ಟರು ಇವರು ಹೇಳಿದ್ದನ್ನೆಲ್ಲಾ ಕೇಳಿಸಿಕೊಂಡರಂತೆ. ಮಗೂನ ಅಲ್ಲಿ ಮಲಗಿಸಿ ಅಂತ ತೊಟ್ಟಿಲು ತೋರಿಸಿದರಂತೆ. ಅಯ್ಯೋ ಇದಕ್ಕೆ ತೊಟ್ಟಿಲು ಎಲ್ಲಿ ಸಾಕಾಗುತ್ತೆ ಮಂಚದ ಮೇಲೆ ಮಲಗಿಸಿ ಅಂದರಂತೆ. ಹಾಳಾದೋನು ಮಗೂಗೆ ಕಣ್ಣು ಹಾಕ್ತಾ ಇದಾನೆ ಅಂತ ಬೈದುಕೊಂಡೇ ಮಂಚದ ಮೇಲೆ ಮಲಗಿಸಿದರಂತೆ

ಮಗು ಹೆಸರು ಏನೂಂದಿರಿ ಅಮ್ಮಾ? ಅಂತ ಕೇಳಿದರು. ಅಮ್ಮ ನಾಚಿಕೆಯಿಂದ ನನ್ನ ಹೆಸರು ಮೆಲ್ಲಗೆ ಗೊಣಗಿದರು. ಏನಮ್ಮಾ ಹೆಸರು ಗಟ್ಟಿಯಾಗಿ ಹೇಳೀ ಅಂತ ದಪ್ಪನೆ ಕನ್ನಡಕದ ಡಾಕ್ಟರು ಸಿಡುಕಿದ. ಹತ್ತಿರವೇ ನಿಂತಿದ್ದ ಅಪ್ಪಾ ಕಿಷ್ಣ ಅಂತ ಅಂದನಂತೆ. ಸೋಡಾ ಬಾಟಲಿ ಡಾಕ್ಟರು ಕಿಸಕ್ ಅಂತ ನಕ್ಕನಂತೆ. ಕಿಷ್ಣ ಹ ಹ್ಹ, ಕಿಷ್ಣ ಹ ಹ್ಹ, ಕಿಷ್ಣ ಹ ಹ್ಹ ಅಂದನಂತೆ-ನಾಲ್ಕೈದು ಸಲ. ಭೀಮಸೇನ ಅಂತ ಹೆಸರು ಇಟ್ಟಿದ್ದರೆ ಸರಿಹೋಗ್ತಿತ್ತು ಅಂತ ಮತ್ತೆ ಕಿಸ ಕಿಸ ನಕ್ಕನಂತೆ. ಅಪ್ಪನಿಗೂ ನಗು ಬಂತು, ಪಕ್ಕಕ್ಕೆ ತಿರುಗಿಕೊಂಡು ಅಮ್ಮನಿಗೆ ಕಾಣದ ಹಾಗೆ ನಕ್ಕನಂತೆ. ಅಮ್ಮನಿಗೆ ಸಂಕಟ, ನಾಲ್ಕು ತಟ್ಟಬೇಕು ಅಪ್ಪನಿಗೆ ಅನಿಸಿತಂತೆ. ಆದರೆ ಸಂಕಟದಲ್ಲಿ, ಡಾಕ್ಟರ ಎದುರಿನಲ್ಲಿ ನಾಲ್ಕು ತಟ್ಟಲು ಸಾಧ್ಯವೇ? ನಾಲ್ಕು ತಟ್ಟಲು ಆಗುತ್ಯೇ? ಅಪ್ಪನ್ನ ಡಾಕ್ಟರನ್ನ ದುರದುರ ನೋಡಿದಳಂತೆ. ಡಾಕ್ಟರು ನನ್ನ ಹೊಟ್ಟೆ ಬಡಿದನಂತೆ, ಗಂಟಲು ಅಗಲಿಸಿ ನೋಡಿದನಂತೆ ಅಂಗಾಲ ಮೇಲೆ ಕಿರಿಕಿರಿ ಅಂತ ಕೆರೆದನಂತೆ. ಮಗು ಮುಲಮುಲ ಮಾಡಿ

ಕಾಲು ಹಿಂದೆ ತಗೊಳ್ತು. ಆಕ್ಟೀವ್ ಆಗಿದೆ ಅಂತ ಡಾಕ್ಟರು ಗೊಣಗಿದ. ಬಾಯಿ ಅಗಲಿಸಿ ನಾಲಗೆ ಎಳೆದನಂತೆ. ಎಲ್ಲಾ ಸರಿಯಾಗೇ ಇದೆಯಲ್ಲಾ ಅಂತ ಗೊಣಗುತ್ತಾ ಏನೋ ಮರೀ ನಿನ್ನ ಹೆಸರು ಅಂತ ಅಂದನಂತೆ, ಅಂದೋನು ಗಲ್ಲ ಜಿಗುಟಿ ಆ ಕಡೆ ತಿರುಗಿದನಂತೆ.

ಮಂಚದ ತುಂಬಾ ಮಲಗಿದ್ದ ಮಗು ಡಾಕ್ಟರನ್ನ ಕಣ್ಣಂಚಿನಲ್ಲಿ ನೋಡಿತಂತೆ - ಭೀಮಚೇನಾ ಅಂತ ಅರಚಿತಂತೆ! ಡಾಕ್ಟರು ಬೆಚ್ಚಿ ದೂರ ಹಾರಿದನಂತೆ. ಡಾಕ್ಟರ ದಪ್ಪನೆ ಸೋಡಾ ಬಾಟಲಿ ಕನ್ನಡಕ ಮೂಗಿನಿಂದ ಜಾರಿ ಕೆಳಗೆ ಬಿದ್ದು ಒಡೆಯಿತಂತೆ. ಅವರು ತಟ್ಟಾಡುತ್ತಿರಬೇಕಾದರೆ ಅಪ್ಪ ಅಮ್ಮ ಇಬ್ಬರೂ ನನ್ನನ್ನು ಹೊತ್ತುಕೊಂಡು ಖುಷಿಯಿಂದ ಡ್ಯಾನ್ಸ್ ಮಾಡಿಕೊಂಡು ಆಚೆ ಬಂದರಂತೆ..... ಅಪ್ಪನಿಗೆ ಅವತ್ತು ರಾತ್ರಿ ಬೀಳಬೇಕಿದ್ದ ತಪರಾಕಿ ತಪ್ಪಿತಂತೆ!

ಇದು ನಾನು ಮಾತು ಕಲಿತದ್ದು ಅಂತ ಆದರೆ ನಾನು ಹಾಡು ಕಲಿತದ್ದು ಬೇರೆಯದೇ ಸಂಗತಿ. ನಾನು ಓದೋ ಕಾಲದಲ್ಲಿ ನರ್ಸರಿ, ಪ್ರಿನರ್ಸರಿ, ಎಲ್ಕೇಜಿ, ಯೂಕೇಜೀ ಇವೆಲ್ಲಾ ಇರ್ಲಿಲ್ಲ ಗೊತ್ತು ತಾನೇ? ಸೀದಾ ಒಂದನೇ ಕ್ಲಾಸಿಗೆ ಸರ್ಕಾರೀ ಸ್ಕೂಲಿಗೆ ಹಾಕೋರು. ಮನೇಲೇ ಸ್ತೋತ್ರ ಗೀತ್ರ ಹೇಳಿಕೊಟ್ಟಿರೋರು. ನಮ್ಮಜ್ಜಿ ನನಗೆ ದಾಸರ ಪದ ಹೇಳಿಕೊಟ್ಟಳೇನೋ ತಿಳೀದು, ಅವಳು ದೇವರನಾಮ ಹೇಳ್ಕೋಬೇಕಾದರೆ ನಾನೂ ಹೇಳ್ತಾ ಇದ್ದೆ. ಹೀಗೇನೇ ನಾನು ಪವಡಿಸು ಪರಮಾತ್ಮನೇ,ಮೆಲ್ಲ ಮೆಲ್ಲನೇ ಬಂದಾನೇ ಗೋಪಮ್ಮಾ ಕೇಳೇ ನಿಲ್ಲಾದೇ ಗಲ್ಲಕೆ ಮುದ್ದಾ ಕೊಟ್ಟು ಓಡೀ ಪೋದನೇ,ಯಾರೇ ರಂಗನಾ ಹಾಡೆಲ್ಲಾ ಕಲ್ತಿದ್ದು ಮೂರನೇ ಕ್ಲಾಸಿಗೆ ಬಂದನಾ? ಮೂರನೇ ಕ್ಲಾಸಿನಲ್ಲಿ ಯಾವುದೋ ಫಂಕ್ಷನ್ನು ಮೈಕಿನ ಮುಂದೆ ಹಾಡು ಬಾರೋ ಅಂತ ಮೇಷ್ಟ್ರು ಕೂಗಿದರು ಅಂತ ಹಾಡು ಹೇಳಲು ನಿಂತೆ. ಮೊದಲನೇ ಪದ ಹೇಳೋದಿಕ್ಕಿಲ್ಲಾ ಹುಡುಗ್ರೆಲ್ಲಾ ಹೋ ಅಂತ ಅರಚಿಬಿಟ್ಟರು-ಅದ್ಯಾರೋ ಕೋತಿ ನನ್ಮಗ ಜತೇಗೆ ನಾಲ್ಕು ಜನ ಹುಡುಗ್ರನ್ನ ಸೇರಿಸ್ಕೊಂಡು ಕತ್ತೆಅರಚಿದ ಹಾಗೇನೇ ಅರಚಿಬಿಟ್ಟ, ಕತ್ತೆ ರಾಗ, ಕತ್ತೆ ರಾಗ, ಕತ್ತೆ ರಾಗ, ಕತ್ತೆ ರಾಗ ಅಂತ ಖೋರಸ್ಸಿನಲ್ಲಿ ಎಲ್ಲಾ ಮುಂಡೇವೂ ಬಡಿದುಕೊಂಡುಬಿಟ್ಟವು. ಮೇಷ್ಟ್ರು ಬಂದು ನನ್ನ ಕೈನಿಂದ ಮೈಕು ಕಿತ್ಕೊಂಡು ಸಾಕು ಹೋಗು ಅಂತ ಕಳಿಸಿಬಿಟ್ಟ.

ಇದು ನಾನು ಮೊದಲು ಮೈಕು ಹಿಡಿದ ಪ್ರಸಂಗ...ಹೈಸ್ಕೂಲಿಗೆ ಬಂದಾಗಲೂ ಈ ಪ್ರಸಂಗ ನನ್ನ ತಲೆಯಲ್ಲಿ ಆಳವಾಗಿ ಕೂತುಬಿಟ್ಟಿತ್ತು. ಹೈಸ್ಕೂಲಿನಲ್ಲಿ ಸ್ಟೇಜನ್ನ ಎರಡು ಸಲ ಹತ್ತಿದ್ದೆ. ಅದೇನು ನನ್ನ ಹಾಳು ಅದೃಷ್ಟವೋ ಏನೋ, ಎರಡೂ ಸಲ ಮೈಕು ಕೆಟ್ಟು ಕೂತುಬಿಡಬೇಕೇ? ಮೈಕು ಕೆಡ್ತು ಅಂತಲೇನೂ ನಾನು ತೆಪ್ಪಗೆ ಕೂಡಲಿಲ್ಲ! ಭಕ್ತಿ ಎಲ್ಲವನ್ನೂ ಬಿಟ್ಟು ಎರಡು ಸಿನಿಮಾ ಹಾಡು ಹೇಳೇಬಿಟ್ಟೆ. ಇಷ್ಟು ಹೊತ್ತಿಗೆ ಅಮ್ಮನ ದೇವರನಾಮದಿಂದ ಫಿಲ್ಮ್ ಸಾಂಗ್ಸ್‌ಗೆ ಹಾರಿದ್ದೆ. ನಿನ್ನ ಹಾಡು ಕೇಳಿ ಅರ್ಧಹುಡುಗ್ರು ಕಡಿಮೆಯಾದ್ರು ಅಂತ ನಮ್ಮ ಹೆಡ್ ಮೇಷ್ಟ್ರು ಆಮೇಲೆ ಬೈದ. ಅಷ್ಟು ಜನದ ಪುಳಿಯೋಗರೆ ಮೊಸರನ್ನ ಮಿಗ್ಸಿದೀನಿ ನಿಮಗೆ ಅಂತ ಸಮಾಧಾನ ಪಡ್ಸಿದ್ದೆ.

ಇನ್ನ ಕಾಲೇಜಿಗೆ ಬಂದನಾ? ಅಲ್ಲಿ ಕಟ್‌ತ್ರೋಟ್ ಕಾಂಪಿಟಿಷನ್ನು-ಮೈಕಿನ ಮುಂದೆ ಬಂದು ನಿಂತು ಹಾಡು ಹೇಳೋದಿಕ್ಕೆ. ದಪ್ಪಕ್ಕಿದ್ದೆನಲ್ಲಾ ಎಲ್ಲರನ್ನೂ ದೂರ ನೂಕಿಬಿಟ್ಟು ನಾನೇ

ಹಾಡು ಹೇಳ್ತಾ ಇದ್ದೋನು. ಅರಸನ ಅಂಕೆ ದೆವ್ವದ ಕಾಟವಿಲ್ಲದೇ ನಾನು ಹಾಡಿದ್ದು ಅಂದರೆ ನನ್ನ ಕಾಲೇಜಿನ ದಿನಗಳಲ್ಲೇ... ಕಾಲೇಜು ಮುಗೀತು ಕೆಲಸಕ್ಕೂ ಸೇರಿದೆ... ಮದುವೇನೂ ಆಯಿತು... ಮದುವೆ ಆದಮೇಲೆ ಮಕ್ಕಳು ಆಗೂಲ್ಲವೇ? ಅದೂನೂ ಆಯಿತು.

ಮಗೂಗೆ ಮೊದಲನೇದಿವಸ ಜೋಗುಳ ಹಾಡೋಕ್ಕೆ ಅಂತ ತೊಟ್ಟಿಲ ಹತ್ತಿರಕ್ಕೆ ಹೋದೆ. ತೂಗಿರೇ ಅಂತ ಮೊದಲ ಪದ ಹೇಳ್ತಿದ್ದ ಹಾಗೇನೇ ಮಗು- ಅದೇ ಪುಟ್ಟಿ-ಖಿಠಾರ್ ಅಂತ ಕಿರುಚಿಕೊಂಡು ಬಿಟ್ಟು. ನಮ್ಮತ್ತೆ ಅದೆಲ್ಲಿತ್ತೋ ದೆವ್ವ, ಓಡಿಬಂದಳು ಇನ್ಮೇಲೆ ನೀವು ತೊಟ್ಟಿಲ ಹತ್ತಿರ ಬರಕೂಡದು ಅಳಿಯಂದಿರೇ,ಆಕಸ್ಮಾತ್ ಬಂದರೂ ಹಾಡು ಗೀಡು ಹೇಳಬಾರದು ಅಳಿಯಂದಿರೇ, ಅಳಿಯಂದಿರೇ, ಪ್ಲೀಸ್ ಅಂತ ಹೇಳೋದೇ?......

ನಗೋ ಅಂತ ಸಂಗತಿ ಅಲ್ರಯ್ಯಾ ಇದು... (ಹಾಗೆ ನೋಡಿದರೆ ನಾವು ನಕ್ಕಿರಲಿಲ್ಲ,ಬರೇ ಕೆಮ್ಮಿದ್ದೆವು-ನಗು ತಡೆಯುವ ಪ್ರಯತ್ನದಲ್ಲಿ.. ಇದು ಹತ್ತನೇ ಸಲವೋ ಹನ್ನೆರಡನೇ ಸಲವೋ ಪಕ್ಕೆ ಸಡಲಿಸಿಕೊಂಡಿದ್ದು.....)

ಮನೆ ಕಟ್ಟಿದ್ದೆ, ಸಂಸಾರ ಹೂಡಿದೆವು. ಆಗಾಗ ನನಗೆ ಹಾಡೋ ಖುಷಿ. ಮನೇಲಿ ಕೂತು ಹಾಡು ಶುರು ಮಾಡಿದೆನೋ ಇಲ್ಲವೋ ಪಕ್ಕದಮನೇಲಿ ಒಂದು ತಮಿಳರ ಹೆಂಗಸು ಇತ್ತು. ಅದು ಇವಳನ್ನ ಯಾಕೆ ನಿಮ್ಮೆಜಮಾನ್ರು ಅಳ್ತಿದಾರೆ ಅಂತ ಕೇಳೋದಂತೆ! ಇವಳು ಬಂದು ನನಗೆ ಇದನ್ನ ಹೇಳೋದೂ ಐದಾರು ಸಲ ಹೀಗಾದ ಮೇಲೆ ಇನ್ಮೇಲೆ ಹಾಡು ಹೇಳೋಲ್ಲಾ ಅಂತ ಪ್ರಮಾಣ ಮಾಡಿ ಅಂತ ಮಾಡಿಸಿಕೊಂಡುಬಿಟ್ಟಳು ಕಣ್ರಯ್ಯಾ....

ಹಾಡುಹೇಳೋಲ್ಲಾ ಅಂತ ಪ್ರಮಾಣ ಮಾಡಿದೆನಾ ಅವತ್ತಿಂದ ಓಪನ್ನಾಗಿ ನಾನು ಹಾಡು ಹೇಳಿಲ್ಲ,ಆದರೆ ಬಚ್ಚಲು ಮನೆ ಸೇರಿದ ಅಂದರೆ ನನ್ನನ್ನ ನಾನೇ ಮರೆತು ಹಾಡು ಹೇಳ್ತೀನ್ರಯ್ಯಾ.....

ಬಾಯಿ ಹಾಡು ಇಲ್ಲದಿದ್ದರೇನಂತೆ ವಾದ್ಯ ಕಲೀಬಹುದಲ್ಲಾ ಅಂತ ನಾನು ಪೀಯೂಷೀ ಓದಬೇಕಾದರೇನೇ ಅನಿಸಿತ್ತು. ಆವಾಗ ಅಂದರೆ ನಾನು ಓದೋ ಕಾಲದಲ್ಲಿ ಇನ್ನೂರು ರೂಪಾಯಿ ಕೊಟ್ಟರೆ ಒಂದು ಬುಲ್ ಬುಲ್ ತರಂಗ್ ಅನ್ನೋ ವಾದ್ಯ ಸಿಕ್ತಾ ಇತ್ರಯ್ಯಾ. ಅಪ್ಪನ ಜೇಬಿಂದ ಒಂದು ಸಲ ಇನ್ನೂರು ಹಾರಿಸಿ ಒಂದು ಬುಲ್ ಬುಲ್ ತರಂಗ್ ತಂದೆ. ಅದರ ಜತೇಗೆ ಒಂದು ಪುಸ್ತಕಾನೂ ಕೊಟ್ಟಿದ್ದ ಅಂಗಡಿಯವನು -ಅದನ್ನ ಕಲಿಯೋದು ಹೇಗೇ ಅಂತ.ಬುಲ್ ಬುಲ್ ತರಂಗ್ ಎದುರಿಗೆ ಇಟ್ಕೊಳ್ಳೋದೂ ಅದರ ಗುಂಡಿ ಒತ್ತುತ್ತಾ ಕೂಡೋದೂ ಹೀಗೆ ಒಂದು ಆರು ತಿಂಗಳು ಅಭ್ಯಾಸ ಮಾಡಿದೆ. ಅಭ್ಯಾಸ ಮಾಡಬೇಕಾದರೆ ಅಪ್ಪ ಅಮ್ಮ ಮನೇಲಿ ಇರದೇ ಇರೋ ಸಮಯ ನೋಡ್ಕೋತಿದ್ದೆ. ಚೆನ್ನಾಗಿ ಕಲ್ತಿದೀನಿ ಅಂತ ಧೈರ್ಯ ಬಂತೋ ? ಅಪ್ಪ ಅಮ್ಮ ಮನೇಲಿರಬೇಕಾದರೆ ಒಂದು ದಿನ ಬೆಳಗಿನ ಜಾವ ಅದನ್ನ ಎದುರಿಗೆ ಇಟ್ಟುಕೊಂಡು ನುಡಿಸೋಕ್ಕೆ ಕೂತೆ. ಕೊಯ ಕೊಂಯ ಶಬ್ದ ಇಡೀ ಮನೇನ ಆವರಿಸಿಬಿಟ್ಟಿತ್ತು. ಅಪ್ಪ ಅಮ್ಮ ಘಾಬರಿಯಿಂದ ನನ್ನ ರೂಮಿಗೆ ಓಡಿಬಂದರು ಬಾಗಿಲು ಮುರಿದರು ಅಂತ ಆಮೇಲೆ ತಿಳೀತು. ನನ್ನ ಅವತಾರ ನೋಡಿದರು ಅದೇ ಘಾಬರಿಯಲ್ಲಿ ಎದುರಿಗೆ ಕುಳಿತರು. ಒಂದು ಹಾಡು ನುಡಿಸಿದೆ-ಇದು ಯಾವ ಹಾಡು ಹೇಳಪ್ಪಾ

ನೋಡೋಣಾ ಅಂದೆ. ಅಪ್ಪ ಕಣ್ಣು ಕಣ್ಣು ಬಿಟ್ಟ. ಇನ್ನೊಂದು ಹಾಡು ನುಡಿಸಿದೆ ಅಮ್ಮಾ ಇದು ಯಾವದು? ಅಂದೆ. ಅಪ್ಪ ಅಮ್ಮ ಇಬ್ಬರೂ ಮುಖ ಮುಖ ನೋಡಿಕೊಂಡರು.ಎಲ್ಲಾನೂ ಒಂದೇ ಥರಹ ಶಬ್ದ ಬರುತ್ತೆ. ಒಂದು ಕೆಲಸ ಮಾಡು ಅಂದರು. ಏನೂ ಅಂದೆ. ಪೀಯೂಷೀನಲ್ಲಿ ಎರಡನೇ ಸಲ ಫೇಲಾಗಿದೀಯಾ. ಮೊದಲು ಅದನ್ನ ಪ್ಯಾಸು ಮಾಡಿಕೋ ಆಮೇಲೆ ಇದು ಕಲೀಮಿಂತಿ ಅಂತ ಹೇಳಿ ಬುಲ್ ಬುಲ್ ತರಂಗ್ ಅನ್ನ ನನ್ನಿಂದ ಕಸಿದುಕೊಂಡು ಹೋದರು. ಅಪ್ಪ ಅದನ್ನ ಹಳೇ ಕಬ್ಬಿಣದವನಿಗೆ ಫ್ರೀ ಕೊಟ್ಟ ಅಂತ ಅಮ್ಮ ಎಷ್ಟೋ ದಿವಸ ಆದಮೇಲೆ ನನಗೆ ಹೇಳಿದಳು. ಪೀಯೂಷೀ ಫೇಲಾಗಿದ್ದೀ ಬೆಳಗಿನ ಜಾವ ಆ ಹಾಳು ಶಬ್ದ ಕೇಳಿ ನೀನೆಲ್ಲೋ ಫ್ಯಾನಿಗೆ ನೇತುಹಾಕ್ಕೊಂಡಿದ್ದೀ ಅಂತ ಹೆದರಿಕೆಯಾಗಿತ್ತು ಅದಕ್ಕೇ ಘಾಬರಿಯಿಂದ ಅವತ್ತು ಓಡಿಬಂದಿದ್ದು ಅಂತ ಆಮೇಲೆ ಎಷ್ಟೋ ದಿವಸದ ನಂತರ ಅಮ್ಮ ವಿವರಣೆ ಕೊಟ್ಟಿದ್ದಳು.....

ಇನ್ನ ನಿಮಗೆ ನಾನು ಪಿಟೀಲು ಹೇಗೆ ಕಲಿತೆ ಅಂತ ವಿವರಿಸಲೇಬೇಕು...... ಅಂತ ಚಿಕ್ಕಪ್ಪ ಶುರು ಮಾಡಿದ.

ಟೀವೀನಲ್ಲಿ ನನ್ನ ಹಾಡು ನನ್ನದು ಅಂತ ಬರುತ್ತಲ್ಲಾ ಅದನ್ನು ನೋಡುತ್ತಾ ಕೂತಿದ್ದೆವು. ಚಿಕ್ಕಪ್ಪನಿಗೆ ಇದೇ ಸಮಯದಲ್ಲೇನೆ ಅವನ ಪೂರ್ವ ಜನ್ಮದ ನೆನಪುಗಳು ಕೊಚ್ಚಿಕೊಂಡು ಬಂದು ಬಿಡುತ್ತೆ. ಆ ನೆನಪುಗಳನ್ನೋ ತುಂಬಾ ತಮಾಷೆಯಾಗಿ ನೀವು ಮೈಮರೆತು ಕೇಳಬೇಕು ಹಾಗೆ ಹೇಳೋದರಲ್ಲಿ ಆತ ನಿಷ್ಣಾತ. ಅದರಿಂದ ಚಿಕ್ಕಪ್ಪ ಯಾವಾಗಲೇ ಮಾತು ಆರಂಭಿಸಲಿ ನಾವು ಯಾರೂ ಅಡ್ಡ ಬಾಯಿ ಹಾಕೋಲ್ಲಾ. ಸುಮ್ನನೆ ಕೇಳ್ತಾ ನಗು ಒತ್ತರಿಸಿಕೊಂಡು ಕೂತಿರ್ತೀವಿ. ನಮ್ಮ ಚಿಕ್ಕಮ್ಮನಿಗೆ ಚಿಕ್ಕಪ್ಪ ಹೀಗೆ ಜನನ್ನ ಸುತ್ತಲೂ ಸೇರಿಸಿಕೊಂಡು ಅಟ್ರಾಕ್ಟ್ ಮಾಡೋದು ಒಂದು ಥರಾ ಹೊಟ್ಟೆಕಿಚ್ಚು. ಶುರುವಾಯಿತಾ ಬುರುಡೆ ಅಂತ ಸಿಡುಕಿ ಚಿಕ್ಕಪ್ಪನನ್ನ ದರದರ ಎಳೆದುಕೊಂಡು ಹೋಗಿಬಿಡ್ತಾಳೆ. ಚಿಕ್ಕಪ್ಪ ಜೋಕರ್ ತರಹ ಎಲ್ಲರನ್ನೂ ನಗಿಸ್ತಾನೆ ಅಂತ ಕೋಪ ಕಣೋ ಅವಳಿಗೆ ಅಂತ ನಮ್ಮಮ್ಮ ಹೇಳಿದರೂ ಚಿಕ್ಕಪ್ಪನಷ್ಟು ವಾಚಾಳಿತನ ಚಿಕ್ಕಮ್ಮನಲ್ಲಿ ಇಲ್ಲ ಅದೇ ಹೊಟ್ಟೆಉರಿ ಅಂತ ನಮ್ಮ ಭಾವನೆ.

ಪಿಟೀಲು ಹೇಗೆ ಕಲಿತೆ ಅಲ್ಲ ಕಲಿಯೋಕ್ಕೆ ಶುರು ಮಾಡಿದೆ ಗೊತ್ತಾ? ನನ್ನ ಕಲೀಗು ಒಬ್ಬ ನಾಗರಾಜ ಅಂತ ಇದ್ದ.....

ಬುರುಡೆ ಇನ್ನೂ ಮುಗೀಲಿಲ್ಲವಾ....? ಅನ್ನುವ ಸಿಡಿಲ ಧ್ವನಿ ರೂಮಿನಿಂದ ಕೇಳಿಸಿತು. ಮರುಕ್ಷಣವೇ ರೂಮಿನ ಬಾಗಿಲು ತೆರೆದು ಕೊಂಡಿತು.ಚಿಕ್ಕಮ್ಮ ಬಿರುಗಾಳಿಯ ಹಾಗೆ ಆಚೆ ಬಂದಳು-ಚಿಕ್ಕಪ್ಪನನ್ನ ದರದರ ದೂಡಿಕೊಂಡು ಕರೆದುಕೊಂಡು ರೂಮು ಸೇರಿಬಿಟ್ಟಳು.....

ಚಿಕ್ಕಪ್ಪ ಪಿಟೀಲು ಕಲಿತದ್ದು, ಹಾರ್ಮೋನಿಯಂ ಕಲಿತದ್ದು, ಗಿಟಾರ್ ಕಲಿತದ್ದು ಮೊದಲಾದ ಹಲವಾರು ಪ್ರಸಂಗಗಳನ್ನು ತಮಗೆ ಇನ್ನೊಂದು ಸಲ ವಿಷದವಾಗಿ ವಿವರಿಸಲೇ?

❖❖❖

ವಿದ್ಯಮಾನಗಳು

❖ ಕು.ಕ.

ಈಗಾಗಲೇ 24 ಇಂಟು 12 ತಿಂಗಳು ಮುಗಿಸಿರುವ 'ಅಪರಂಜಿ' ಇಪ್ಪತ್ತೈದನೆಯ ಹುಟ್ಟುಹಬ್ಬದ ಸಂತಸ. 'ಅಪರಂಜಿ' ಹುಟ್ಟಿದ ಆ ಕಾಲ ಹೇಗಿತ್ತು? ಚೂರು ಹಿಂದೆ ನೋಡೋಣ. ಆಗ ಇನ್ನೂ ಇಂದಿರಾ ಇದ್ದರು. ರಾಜೀವ್ ನಮ್ಮನ್ನು ಇಪ್ಪತ್ತೊಂದನೆಯ ಶತಮಾನಕ್ಕೆ ಕೊಂಡೊಯ್ಯುವುದು ಹೇಗೆ ಎಂದು ಚಿಂತಿಸುತ್ತಿದ್ದರು. ಬ್ಲ್ಯೂಸ್ಟಾರ್ ಬೋಫೋರ್ಸ್ ಇನ್ನೂ ದೂರದಲ್ಲಿದ್ದವು. ವಾಜಪೇಯಿಯವರೂ ಇದ್ದರು. ಆದರೆ ಅವರ ಪಕ್ಷದ ಅಭ್ಯರ್ಥಿಗಳೆಲ್ಲಾ ಡಿಪಾಸಿಟ್ ಕಳೆದುಕೊಳ್ಳುತ್ತಿದ್ದರು. ಹರದನಹಳ್ಳಿ ಯಜಮಾನರೂ ಇದ್ದರು. ಆದರೆ ಭಗವಂತನ ದಯೆ, ಅವರ ಮಕ್ಕಳ ಸೊಸೆಯಂದಿರ 'ಖ್ಯಾತಿ' ಹರದನಹಳ್ಳಿ ಬಿಟ್ಟು ಇನ್ನೂ ಹೊರಗೆ ಬಂದಿರಲಿಲ್ಲ.

ಆಗ ಬೆಂಗಳೂರಿನಲ್ಲಿ ಎಲೆಕ್ಟ್ರಾನಿಕ್ ಸಿಟಿ, ಡಾಲರ್ ಕಾಲೋನಿಗಳು ಇರಲಿಲ್ಲ. ಆದರೆ ಜಯನಗರ ಮಲ್ಲೇಶ್ವರಗಳಿದ್ದವು. ಇಲ್ಲಿನ ಕೆಲವರ ಹತ್ತಿರ ಕಾರುಗಳೂ ಇದ್ದವು. ಆದರೆ ನಿರಂತರ ಟ್ರಾಫಿಕ್ ಜ್ಯಾಂ ಇರಲಿಲ್ಲ. ಮಲ್ಲೇಶ್ವರದ ಹತ್ತಿರವೇ ಮಹಮಡನ್ ಬ್ಲಾಕೂ ಇತ್ತು. ಆದರೆ ಅಲ್ಲಿಯ ಚಿಕ್ಕ ಚಿಕ್ಕ ಹುಡುಗಿಯರು ಬುರ್ಕಾ ಹಾಕಿಕೊಂಡು ಓಡಾಡುತ್ತಿಲಿಲ್ಲ. ಆಗ ತಾನೇ ಬೆಂಗಳೂರಿಗೆ ದೂರದರ್ಶನ ಬಂದಿತ್ತು. ಆದರೆ ದೈನಂದಿನ ಇರಲಿ, ಹದಿಮೂರು ಎಪಿಸೋಡ್ ಸೀರಿಯಲ್ಲುಗಳೂ ಇನ್ನೂ ಹುಟ್ಟಿರಲಿಲ್ಲ. ಆಗ ಟೆಲಿಫೋನ್ ಇತ್ತು ಮೊಬೈಲ್ ಬಿಡಿ, ಎಸ್‌ಟಿಡಿಯೂ ಇರಲಿಲ್ಲ. ಆಗ 'ಸುಧಾ' ಇತ್ತು ಅದರಲ್ಲಿ 'ಸುಖೀಭವ' ಇರಲಿಲ್ಲ. ಈ ಕಾಲು ಶತಮಾನದಲ್ಲಿ ಎಷ್ಟೋ ಬದಲಾಗಿದೆ. ಹಾಗೆಯೇ ಎಷ್ಟೊಂದು ಇದ್ದ ಹಾಗೇ ಇದೆ! ಆಗಲೂ ಈಗಿನಂತೆಯೇ ಬೆಂಗಳೂರಿನ ಹಿರಿಯರು ಈ ಊರಲ್ಲೂ ಇಷ್ಟೊಂದು ಸೆಖೆಯೇ ಎಂದು ವರ್ಷ ವರ್ಷ ಗೊಣಗಿಕೊಳ್ಳುತ್ತಿದ್ದರು. ಕಛೇರಿಗಳಲ್ಲಿ ಆಗಲೂ ಲಂಚವಿತ್ತು. ಈಗಲೂ ಇದೆ. ಆಗಲೂ ಈಗಿನಂತೆಯೇ ಭಾಗಲ್ಪುರದಲ್ಲಿ ಅಪರಾಧಿಗಳ ಕಣ್ಣು ಕೀಳುತ್ತಿದ್ದರು.

ಕ್ಷಮಿಸಿ 'ಅಪರಂಜಿ'ಗೆ ನಿನ್ನ ಭವಿಷ್ಯ ಬಂಗಾರವಾಗಲಿ ಎಂದು ಹೇಳಲು ಹೊರಟು ನನ್ನ ಭೂತಕಾಲಕ್ಕೆ ಹೋಗುತಿದೀನಿ. ನನಗೆ ಆರವತ್ತರ ನಂತರದ ರೋಗ ನೋಡಿ. 'ಅಪರಂಜಿ' ದೀರ್ಘ ಕಾಲ ಬಾಳಲಿ, ನನ್ನಂತಹವರಿಗೆ ಬರುವ ಇಂತಹ ರೋಗಗಳಿಗೆ ಎಂದೂ ತುತ್ತಾಗದೇ ತಾತ ಹೇಳುತ್ತಿದ್ದಂತೆ ಸದಾ ಆಗ ತಾನೇ ಚಿಗುಳಿ ತಿಂದ ವಯಸ್ಸಿನಲ್ಲಿಯೇ ಉಳಿಯಲಿ.

★★★

ಸೆಪ್ಟೆಂಬರ್ ಅಪರಂಜಿಯ ಶೇಖರ್ ಗುರೇರ ಕಾರ್ಟೂನಿನಲ್ಲಿ ಮಮೋಸಿಂಗರು 1-2-3 ಎಂದು ಮುಂದಕ್ಕೆ ಎಣಿಸುತ್ತಿದ್ದರೆ ಕರಾಟ್ 4-3-2 ಎಂದು ಹಿಂದಕ್ಕೆ ಉಲ್ಟಾ ಗಿನತಿ ಮಾಡುತ್ತಿದ್ದಾರೆ. ಮೇಲಕ್ಕೋ ಕೆಳಕ್ಕೋ ದಿನ ಗಣನೆ ಶುರುವಾಗಿದೆ ಅನ್ನೋದು ನಿಜ. ಇಷ್ಟರಲ್ಲೇ ಡೈವರ್ಸ್ ಪೇಪರ್ ಫೈಲ್ ಮಾಡಿರೋರಂತೆ. ಆದರೆ ಗುಜರಾತಿನ ಮೋದಿ ಭಯ. ಡಿಸಂಬರಿನಲ್ಲಿ ಮೋದಿ ಸೋತರೆ ಕಾಂಗ್ರೆಸಿನಿಂದ ವಾಮದಳಕ್ಕೆ ನೀನೇಕೋ ನಿನ್ನ ಹಂಗ್ಯಾಕೋ ಎಂದು ಸೋಡಾ ಚೀಟಿ. ಮೋದಿ ಗೆದ್ದರೆ ಮತ್ತೆ ಹಳೇ ಗಂಡನ ಪಾದವೇ ಗತಿ ಎಂದು ರಾಜಿ.

★★★

ಆಗ ಅಯೋಧ್ಯೆಯಲ್ಲಿ ರಾಮಮಂದಿರ ಕಟ್ಟಲು ತಂದ ಇಟ್ಟಿಗೆಗಳು, ಉತ್ತರ ರಾಜ್ಯಗಳಲ್ಲಿ ಕಾಂಗ್ರೆಸಿನ ಸಮಾಧಿ ಕಟ್ಟಿದವು. ಈಗ ರಾಮ ಸೇತುವಿನ ಮರಳು ಇನ್ನಷ್ಟು ರಾಜ್ಯಗಳಲ್ಲಿ ಕಾಂಗ್ರೆಸನ್ನು ಹುಗಿದು ಹಾಕುತ್ತದೆಯೇ? ಅಂದು ಸುಪ್ರೀಂ ಕೋರ್ಟಿಗೆ - "ರಾಮ? ಓ ಅವನೋ, ಯಾರೋ ಬರೆದ ಯಾವುದೋ ಕಥೆಯ ಒಂದು ಕಾಲ್ಪನಿಕ ಪಾತ್ರ" ಎಂದು ಸರ್ಕಾರದಿಂದ ಕೋರ್ಟಿಗೆ ಅಫಿಡವಿಟ್. ಇವತ್ತು ಅದೇ ಸರ್ಕಾರದ ಮಂದಿಯಿಂದ "ರಾಮ ಮಹಾಪುರುಷ, ಅವನೇ ನಮ್ಮ ಸಂಸ್ಕೃತಿ ಅವನೇ ನಮ್ಮ ನಾಗರಿಕತೆ ಅವನ ರಾಜ್ಯವನ್ನೇ ನಾವು ಕಟ್ಟುತ್ತಿರುವುದು" ಎನ್ನುವ ರಿವೈಸ್ಡ್ ಹೇಳಿಕೆ. ಮೊದಲು ಹೇಳಿದ್ದು ತಪ್ಪಾಯಿತು 'ಶಾತಂಪಾಪಂ' ಎಂದು ಹೇಳಿಕೊಂಡು ಕಪಾಳಕ್ಕೆ ತಾವೇ ಹೊಡೆದು ಕೊಂಡು ಪ್ರಾಯಶ್ಚಿತ್ತ ಬೇಡಿಕೆ. ಇದನ್ನೇಲ್ಲಾ ನೋಡಿದರೆ ಕಾಂಗ್ರೆಸಿಗರಿಗೆ (ಇನ್‌ಕ್ಲೂಡಿಂಗ್ ಸೋನಿಯಾ) ರಾಮನ ಭಯ ಕಾಡುತ್ತಿರುವಂತಿದೆ.

★★★

ಅಮೆರಿಕಾದಲ್ಲಿ ಈಗ ಅಲೆಕ್ಸ್ ಹೆಸರಿನ ಒಂದು ಅಸಾಧ್ಯ ಪ್ರತಿಭೆಯ ಅಕಾಲ ಮರಣಕ್ಕಾಗಿ ಶೋಕ. ಈ ಪ್ರಾಡಿಜಿ ಅಲೆಕ್ಸ್ ಸಾಹಿತ್ಯ ಕಲೆ ಸಿನಿಮಾ ಟೀವಿ ಸ್ಟಾರ್ ಅಲ್ಲ, ರಾಜಕಾರಣಿಯಂತೂ ಅಲ್ಲವೇ ಅಲ್ಲ. ಅಲೆಕ್ಸ್ ಬೂದಿ ಬಣ್ಣದ ಆಫ್ರಿಕನ್ ಗಿಣಿ. ಅಲೆಕ್ಸ್ ಸಾಕುತಾಯಿಯ ಸತತ ಪಾಠಗಳಿಂದ ಐದು ವರ್ಷದ ಮಗುವಿನ ಇಂಟೆಲಿಜೆನ್ಸ್-ಬುದ್ದಿಮತ್ತೆ ಗಳಿಸಿದ್ದಾನೆ. ಇದು ಅವರೇಜ್ ಅಮೆರಿಕನ್ ಪ್ರೆಸಿಡೆಂಟ್ ಐಕ್ಯೂ ಸಮಾನ ಎಂದು ಅಲ್ಲಿನ ಜನರ ನಂಬಿಕೆ! 150 ಪದಗಳನ್ನು ಕಲಿತಿರುವ ಅಲೆಕ್ಸ್ ಎರಡು ವರ್ಷದ ಮಗುವಿನಷ್ಟೇ ಸಮರ್ಥವಾಗಿ ಮಾತನಾಡುತ್ತಿದ್ದನಂತೆ. ಆದರೆ ದೊಡ್ಡವನಾದ ಮೇಲೂ ಒಂದೊಂದು ಬಾರಿ ಈ ಅಲೆಕ್ಸ್ ಚಿಕ್ಕಮಕ್ಕಳ ಹಾಗೆಯೇ ರಚ್ಚೆ ಟ್ಯಾನ್‌ಟ್ರಂ- ಮಾಡುತ್ತಿದ್ದನಂತೆ. ಮಾನವರು ಸೇರಿ ಪ್ರಾಣಿಸಂಕುಲಗಳಲ್ಲೂ ಕಲಿಕೆ ಹೇಗೆ ನಡೆಯುತ್ತದೆ ಎಂದು ಅರ್ಥ ಮಾಡಿಕೊಳ್ಳುವ ಸಂಶೋಧನೆಗಳಿಗೆ ಅಲೆಕ್ಸ್ ಅದ್ಭುತ ರೀತಿಯಲ್ಲಿ ಸಹಾಯಮಾಡಿದ್ದನಂತೆ. ಸಾಧಾರಣವಾಗಿ 50 ವರ್ಷಗಳು ಬದುಕಿರಬೇಕಾಗಿದ್ದ ಅಲೆಕ್ಸ್ ಮೂವತ್ತಕ್ಕೆ ಮರಣ ಹೊಂದಿರುವುದರಿಂದ ಅಲ್ಲಿನ ವಿಜ್ಞಾನಿಗಳಿಗೆ ದುಃಖ. ಅವನ ಸಾಕುತಾಯಿಯ ವೆಬ್ ಸೈಟಿಗೆ ಶ್ರದ್ಧಾಂಜಲಿಗಳ ಪ್ರವಾಹವೇ ಹರಿದು ಬರುತ್ತಿದೆಯಂತೆ.

❖❖❖

ಭವಿಷ್ಯದ ಸುತ್ತಾ ಮುತ್ತಾ

❖ ಬಾಗೂರು ಚಂದ್ರು

ಎಲ್ಲರಿಗೂ ವರ್ಷಕ್ಕೊಂದು ಹುಟ್ಟಿದ ದಿನವಾದರೆ ನನಗೆ ಮಾತ್ರ ಮೂರು ಹುಟ್ಟಿದ ದಿನಗಳು. ಒಂದು, ನಮ್ಮಮ್ಮನಿಗೆ ಜ್ಞಾಪಕವಿದ್ದ ಯುಗಾದಿ ಹಿಂದಿನ ದಿನ. ಎರಡನೆಯದು ನಮ್ಮಪ್ಪ ಆರು ತಿಂಗಳಿಗೋ ವರ್ಷಕ್ಕೊ ನಮ್ಮ ಮನೆಗೆ ಬರುತ್ತಿದ್ದ ನಮ್ಮ ಮನೆ ಜೋಯಿಸರು ಕಮ್ ಹೋರರತ್ನರಿಂದ ಬರೆಸಿಟ್ಟಿರುವ ಜಾತಕದಲ್ಲಿರುವ ಚೈತ್ರ ಬಹುಳದ ಒಂದು ದಿನ. ಮೂರನೆಯದು ನನ್ನನ್ನು ಶಾಲೆಗೆ ಸೇರಿಸಿದ ನಮ್ಮಣ್ಣ ಹೆಡ್ ಮೇಸ್ಟರಿಗೆ ಕೊಟ್ಟಿರುವ ಜೂನ್ ತಿಂಗಳ ಒಂದು ತಾರೀಕು. ನಾನು ಹುಟ್ಟಿದ್ದು ಮನೆ ತುಂಬಾ ಮಕ್ಕಳುಗಳಿರುತ್ತಿದ್ದ, ಹ್ಯಾಪಿ ಬರ್ತ್‌ಡೆ ಟು ಯು, ಗಿಫ್ಟ್, ರಿಟರ್ನ್ ಗಿಫ್ಟ್, ಇಂತಹ ಮಾತುಗಳನ್ನು ಜನ ಇನ್ನೂ ಕೇಳಿಲ್ಲದ ದಿನಗಳಲ್ಲಿ. ಈ ತರಹದ ಮೂರು ಹುಟ್ಟಿದ ದಿನಗಳಿಂದ ನಮ್ಮ ಮನೆಯವರಿಗೆ ಯಾವುದೇ ಹೆಚ್ಚಿನ ಖರ್ಚೂ ಇರಲಿಲ್ಲ ಬರ್ತ್‌ಡೆ ಬಾಯ್‌ಗೆ ವಿಶೇಷ ಆದಾಯವೂ ಇರಲಿಲ್ಲ.

ಪ್ರಾಥಮಿಕ ಶಾಲೆಯಲ್ಲಿದ್ದಾಗ ನನಗೆ ಈ ಟ್ರಿಪಲ್ ಬರ್ತ್‌ಡೆಗಳ ವಿಚಾರವೇ ಗೊತ್ತಿರಲಿಲ್ಲ. ಆದರೆ ಹೈಸ್ಕೂಲಿಗೆ ಬಂದು ನಾನು ಪೇಪರ್‌ಗಳು ಓದುಕ್ಕೆ ಶುರುಮಾಡಿದ ಮೇಲೆ ಹುಟ್ಟಿದ ದಿನದಲ್ಲಿದ್ದ ಈ ಗೊಂದಲ ತಿಳಿಯಿತು. ನಿಮಗೇ ಗೊತ್ತಲ್ಲ ಯಾವುದೇ ದಿನಪತ್ರಿಕೆ, ವಾರಪತ್ರಿಕೆ, ಮಾಸಪತ್ರಿಕೆ ಅಥವಾ ಯುಗಾದಿ ದೀಪಾವಳಿ ವಿಶೇಷಾಂಕಗಳಲ್ಲಿ ಎಲ್ಲರೂ ಮೊದಲು ಓದುವುದು ಭವಿಷ್ಯದ ಕಾಲಂ ಅಂತ. ಪೇಪರಿನಲ್ಲಿ ನನ್ನ ಭವಿಷ್ಯ ಓದಿಕೊಳ್ಳಲು ನನ್ನ ರಾಶಿ ಗೊತ್ತಿರಬೇಕು. ನನ್ನ ಮೂರು ಬರ್ತ್‌ಡೆಗಳೂ ಬೇರೆ ಬೇರೆ ಮೂರು ರಾಶಿಗಳಿಗೆ ಸೇರಿದ್ದವು. ಇದರಿಂದ ಅನುಕೂಲವೇ ಆಯಿತು ಎನ್ನಿ. ಮೂರೂ ರಾಶಿಗಳ ಭವಿಷ್ಯಗಳಲ್ಲಿ ಯಾವುದು ಹೆಚ್ಚು ಚೆನ್ನ ಅನ್ನಿಸುತ್ತದೋ ಅದನ್ನು ಆರಿಸಿಕೊಳ್ಳುವ ಪ್ರಿವಿಲೇಜ್, ವಿಶೇಷ ಸವಲತ್ತು. ಇದರಿಂದಲೋ ಏನೋ ನನಗೆ ಪತ್ರಿಕೆಗಳಲ್ಲಿನ ಭವಿಷ್ಯಗಳಲ್ಲಿ ನಂಬಿಕೆಯಿಲ್ಲ, ಆದರೂ ಮೊದಲಿನಿಂದಲೂ ಎಲ್ಲಾ ಪತ್ರಿಕೆಗಳ ಇಂತಹ ಕಾಲಂಗಳನ್ನು ತಪ್ಪದೆ ಓದುತ್ತೇನೆ.

ಭವಿಷ್ಯ ಪುರಾತನ ವಿಜ್ಞಾನ, ಇಲ್ಲಿನ ನೀತಿ ನಿಯಮಗಳನ್ನೆಲ್ಲಾ ಹಿಂದಿನ ಋಷಿಗಳು ತಾಳೆಗರಿ ಗ್ರಂಥಗಳಲ್ಲಿ ಬರೆದಿಟ್ಟಿದ್ದಾರೆ ಎಂದು ಕೇಳಿದ್ದೇನೆ. ಆದರೂ ಭವಿಷ್ಯ ತಿಳಿಸುವ ರೀತಿ ಮಾತ್ರ ಕಾಲಕ್ಕೆ ತಕ್ಕಂತೆ ಬದಲಾಗುತ್ತಲೇ ಇದೆ ಎನ್ನುವುದನ್ನು ನೀವು ಗಮನಿಸಿರಬೇಕು. ಈಗ 30-40 ವರ್ಷಗಳ ವಾರ ಮಾಸ ಭವಿಷ್ಯಕಾರರು ಏನಾಗುತ್ತದೆ ಎಂದು ಹೇಳುವ ಜೊತೆಗೆ

ಅವಕ್ಕೆ ಕಾರಣ ಮತ್ತು ಪರಿಹಾರಗಳನ್ನೂ ಸೂಚಿಸುತ್ತಿದ್ದರು. ನಿಮಗೆ ಧನಲಾಭ ಅದಕ್ಕೆ ಕಾರಣ ರಾಶಿಯ ಅಧಿಪತಿ ಶುಕ್ರ ಉಚ್ಚಫಲ ಕೊಡುತ್ತಿದ್ದಾನೆ ಮತ್ತೊಂದು ರಾಶಿಯವರ ಮೇಲೆ ಶನಿಯ ವಕ್ರದೃಷ್ಟಿ ಇರುವುದರಿಂದ ಅವರ ಉದ್ದೇಶಿತ ಕಾರ್ಯ ನೆರವೇರುತ್ತಿಲ್ಲ. ಇದಕ್ಕೆ ಪರಿಹಾರ ಬೇಕಾಗಿದ್ದರೆ ನವಗ್ರಹ ಸೇವೆ ಮಾಡಬೇಕು ಅಥವಾ ಹನುಮಾನ್ ಚಾಳೀಸವನ್ನು ದಿನಕ್ಕೆ 108 ಬಾರಿ ಪಠಿಸಬೇಕು. ಇನ್ನೊಂದು ರಾಶಿಯವರು ಇನ್ನೊಂದು ಗ್ರಹ ಕೊಡುತ್ತಿರುವ ಕೋಟಲೆಗಳಿಂದ ತಪ್ಪಿಸಿಕೊಳ್ಳಬೇಕಾದರೆ ಔದಂಬರ ವೃಕ್ಷ ಸುತ್ತಬೇಕು ಅಥವಾ ಪುಷ್ಯರಾಗ ಮಣಿಯ ಉಂಗುರ ಧರಿಸಬೇಕು. ಇದು ಆಗಿನ ಭವಿಷ್ಯದ ರೀತಿ.

ಮುಂದೆ ಕೌಟುಂಬಿಕ ಪತ್ರಿಕೆಗಳು ಬಂದವು. ಅವುಗಳ ಗಿರಾಕಿ ಇಡೀ ಕುಟುಂಬ. ಭವಿಷ್ಯಕಾರರ ಭಾಷೆ ಬದಲಾಯಿತು. ಆಗಿನ ಒಂದು ಘಟನೆ ಹೇಳಬೇಕು. ನನ್ನ ಸ್ನೇಹಿತ ಕಮ್ ಸಹೋದ್ಯೋಗಿ ರಾಜನಿಗೆ ಒಂದು ಹೆಸರಾಂತ ವಾರಪತ್ರಿಕೆಯ ಭವಿಷ್ಯವಾಣಿಯಲ್ಲಿ ಅಪಾರ ನಂಬಿಕೆ. ಆ ಪತ್ರಿಕೆ ಮಾರುಕಟ್ಟೆಗೆ ಬರುವ ಗುರುವಾರಗಳಂದು ಅವನು ಆಫೀಸಿಗೆ ಬರುವಾಗಲೇ ಆ ವಾರದ ಹೊಸ ಸಂಚಿಕೆ ಕೊಂಡುಕೊಂಡು ಬಂದು ಅರ್ಧಗಂಟೆ ಅದನ್ನು ಭಕ್ತಿಯಿಂದ ಪಠಿಸುತ್ತಿದ್ದ. ಒಂದು ದಿನ ಮಾತ್ರ ಅದನ್ನು ಓದಿದ ಕೂಡಲೆ ತುಂಬಾ ಕೋಪ ಮಾಡಿಕೊಂಡಿದ್ದ. ಕಾರಣ ವಿಚಾರಿಸಿದೆ.

ಅವನ ರಾಶಿಗೆ ಬರೆದಿದ್ದ ಭವಿಷ್ಯ ತೋರಿಸಿದ. ಅಲ್ಲಿ ತಾಯಿಯ ಆರೋಗ್ಯದಲ್ಲಿ ವ್ಯತ್ಯಯ, ತಂಗಿಗೆ ಕಚೇರಿಯಲ್ಲಿನ ಕೆಲಸದ ಬಗೆಗೆ ಮೇಲಿನವರಿಂದ ಮೆಚ್ಚುಗೆ, ಪತ್ನಿಗೆ ಪತ್ರಾಗಮನ, ಹಿರಿಯ ಸೋದರನಿಗೆ ವ್ಯವಹಾರದಲ್ಲಿ ಲಾಭ ಎಂದು ಬರೆದಿತ್ತು. ಇವನಿಗೆ ಏನಾಗುತ್ತದೆ ಎನ್ನುವುದರ ಬಗೆಗೆ ಪುರಾ ಮೌನ. ಅದನ್ನು ಓದಿದ ಮೇಲೂ ಇವನ ಕೋಪದ ಕಾರಣ ತಿಳಿಯಲಿಲ್ಲ. ಅವನ ತಾಯಿ ಈಚೆಗೆ ಮೃತರಾಗಿದ್ದರು. ತಮ್ಮದು ತುಂಬಾ ಹೊಂದಾಣಿಕೆಯ ಕುಟುಂಬ ಎಂದು ಹೇಳಿಕೊಳ್ಳುತ್ತಿದ್ದ. ತಂಗಿ ಅಣ್ಣನ ಒಳ್ಳೆಯ ಅದೃಷ್ಟ ಕೇಳಿ ಇವನಿಗೆ ಕೋಪ ಬಂದಿರಲಾರದು. ಇದು ಕುಟುಂಬ ಪತ್ರಿಕೆ ಅದಕ್ಕೆ ಎಲ್ಲಾರ ಭವಿಷ್ಯಾನೂ ಬರೀಬೇಕಾಗುತ್ತದೆ ಎಂದು ವಿವರಿಸಲು ಪ್ರಾರಂಭಿಸಿದೆ.

ಅದೆಲ್ಲಾ ಅವನಿಗೇ ಆಗಲೇ ಗೊತ್ತಿತ್ತು. ಈ ವಾರ ಇವನಿಗೆ ಏನಾಗುತ್ತದೆ ಎನ್ನುವುದರ ಒಂದು ಅಕ್ಷರವೂ ಇಲ್ಲದ್ದು ಅವನ ಪತ್ರಿಕೆಯ ಮೇಲಿನ ಕೋಪದ ಕಾರಣ ಎಂದು ಅವನೇ ವಿವರಿಸಿದ. ಈ ಪತ್ರಿಕೆಯ ಭವಿಷ್ಯದಲ್ಲಿ ಅವರ ಕುಟುಂಬದವರಿಗೆಲ್ಲಾ ಗೌರವ. ಈಗ ಬೇರೆಬೇರೆ ಊರುಗಳಲ್ಲಿರುವ ಅಣ್ಣ ತಂಗಿ ಹೆಂಡತಿ ತಾವು ಇರುವ ಕಡೆಯಲ್ಲಿಯೇ ಇದೇ ಪತ್ರಿಕೆಯನ್ನು ಕೊಂಡು ತಮ್ಮತಮ್ಮ ಭವಿಷ್ಯಗಳನ್ನು ನೋಡಿಕೊಳ್ಳುತ್ತಾರಂತೆ. ಈಗ ತಾನು ಇಲ್ಲಿ ದುಡ್ಡು ಕೊಟ್ಟು ಕೊಂಡ ಪತ್ರಿಕೆಯಿಂದ ತನಗೆ ಸಿಕ್ಕಿದ್ದೇನು ಎನ್ನುವುದು ಇವನ ಕೋಪದ ಕಾರಣ. ಸರಿ ನಿನ್ನ ರಾಶಿಯಲ್ಲಿ ಅಣ್ಣ ತಂಗಿ ಭವಿಷ್ಯ ಇದ್ದರೆ ಅವರ ರಾಶಿಯಲ್ಲಿ ನಿನ್ನ ಭವಿಷ್ಯ ಇರಬಹುದು ನೋಡು ಎಂದು ಹೇಳಿದೆ. ಅದನ್ನು ಅವನಾಗಲೇ ಮಾಡಿದ್ದ. ಅಣ್ಣನ ರಾಶಿಯಲ್ಲಿ ಅವರ ಹೆಂಡತಿ, ಹೆಂಡತಿಯ ಸೋದರಮಾವರ ಭವಿಷ್ಯ, ತಂಗಿಯ ರಾಶಿಯಲ್ಲಿ ಅವಳ ಗೆಳತಿಯರ ಗ್ರಹಗತಿಗಳಿತ್ತಂತೆ.

ನಾನು ಆ ಕಾಲಂ ಮತ್ತೊಮ್ಮೆ ಓದಿ ನನ್ನ (ಮೂರರಲ್ಲಿ ಒಂದರ) ರಾಶಿಯಲ್ಲಿದ್ದ ಸ್ನೇಹಿತನ ಮನಸ್ಸಿನಲ್ಲಿ ಗೊಂದಲ ತೋರಿಸಿ ನಿನ್ನ ವಿಚಾರ ಇಲ್ಲಿದೆ ನೋಡು, ನಿನ್ನ ಗೊಂದಲಕ್ಕೆ ನಿಮ್ಮ ಭವಿಷ್ಯಕಾರರೆ ಕಾರಣ ಎಂದು ಹೇಳಿದೆ. ತನ್ನದು ಸಿಂಹ ರಾಶಿ, ಆದಕ್ಕೇ ತನ್ನದು ಸಿಂಹ ಸ್ವಭಾವ ಎನ್ನುವ ಅಚಲ ನಂಬಿಕೆಯಿರುವ ಅವನಿಗೆ ನನ್ನಂತಹ ತನ್ನ ರಾಶಿಯೇ ತಿಳಿಯದ ಮಡೆಯನ ಮಾತಿನಲ್ಲಿ ನಂಬಿಕೆ ಹೇಗೆ ಬಂದೀತು?

ಮತ್ತೆ ಹತ್ತು ವರ್ಷದ ಹೊತ್ತಿಗೆ ಭವಿಷ್ಯದ ಭಾಷೆ ಬದಲಾಗಿತ್ತು. ಟೈನಿ, ಶೈನಿ ಮೊದಲಾದ ಗುಪ್ತನಾಮದ ಹೋರಾರತ್ನರು - ಮೇಷ: ಧನಲಾಭ, ಗೃಹಮೈತ್ರಿ, ಮಹಿಳೆಯರ ಆರೋಗ್ಯದಲ್ಲಿ ವ್ಯತ್ಯಯ; ಸಿಂಹ: ವ್ಯಾಪಾರದಲ್ಲಿ ನಷ್ಟ ಸ್ತ್ರೀ ಸೌಖ್ಯ, ವಿದ್ಯಾರ್ಥಿಗಳಿಗೆ ಮಿಶ್ರ ಫಲ - ಎನ್ನುವಂತಹ ಟೆಲಿಗ್ರಾಫ್ ಭಾಷೆ ಬಂತು. ಭವಿಷ್ಯಕಾರರು ತಮಗಿದ್ದ ಮಿತವಾದ ಜಾಗದಲ್ಲಿ ಎಲ್ಲರಿಗೂ ಆಸಕ್ತಿಯಿರುವ ರೋಟಿ, ಕಪಡಾ, ಮಖಾನ್, ಮನಿ ಮತ್ತು ಮ್ಯಾರೇಜ್ ವಿಷಯಗಳನ್ನು ಮಾತ್ರ ತಿಳಿಸಲು ಸಾಧ್ಯವಿತ್ತು.

ಪತ್ರಿಕೆಗಳ ನಡುವಿನ ಈಚಿನ ತೀವ್ರ ಪೈಪೋಟಿಯಲ್ಲಿ ಪೇಪರುಗಳಲ್ಲಿ ಮಸ್ತಾಗಿ ಜಾಗವಿದೆ. ಆರನೆಯ ಪುಟದಲ್ಲಿ ಮೂರಿಂಚಿನಲ್ಲಿ ಅವಿತಿರುತ್ತಿದ್ದ ಭವಿಷ್ಯವಾಣಿ ಕಾಲಂಗೆ ಈಗ ಎರಡನೆಯ ಪುಟಕ್ಕೆ ಭಡ್ತಿ, ಜೊತೆಗೆ ಮೂರು ಕಾಲಂ ಬೈ ಎಂಟು ಅಂಗುಲಗಳಷ್ಟು ವಿಶಾಲ ಡಿಸ್‌ಪ್ಲೇ. ಭವಿಷ್ಯದ ಭಾಷೆ, ಬರೆಯೋ ರೀತಿ ಎಲ್ಲಾ ಬದಲಾಗುತ್ತಿದೆ. ಟೈನಿ ಶೈನಿಗಳಂತಹ ಅನಾಮಿಕರ ಸ್ಥಾನದಲ್ಲಿ ಭವಿಷ್ಯ ಚಕ್ರವರ್ತಿ, ಹೋರಾರತ್ನ ಪಂಡಿತ, ದೈವಜ್ಞ ವಿಶಾರದ ಮೊದಲಾದ ಪದವೀಧರರು. ಅವರುಗಳ ಹೆಸರಿನ ಜೊತೆಗೆ ಅವರು ಆರುದಿನಗಳ ಬರಾಬ್ಬರಿ ಆರೇ ದಿನಗಳ ಗಡ್ಡದ ಮುಖದ ಮಗ್ ಷಾಟ್. ಅದೇ ಹನ್ನೆರಡು ರಾಶಿಗಳು, ಅದೇ ನಾಲ್ಕೈದು ವಿಷಯಗಳು, ಇದರಲ್ಲಿ ಏನು ಹೊಸತನ ಸಾಧ್ಯ ಅಂದುಕೊಂಡಿದ್ದೆ. ಆದರೂ ಪ್ರತಿದಿನ ಈ ಮಾಡರ್ನ್ ಹೋರಾರತ್ನರು ತೋರಿಸುತ್ತಿರುವ ಸೃಜನಶೀಲತೆ ಕಂಡು ದಂಗಾಗುತ್ತಿರುತ್ತೇನೆ.

ಹಿಂದೆ ಧನಲಾಭ ಎಂದು ಮಾತ್ರ ಹೇಳುತ್ತಿದ್ದರೆ ಈಗ ಹೆಚ್ಚಿನ ವರಮಾನಕ್ಕೆ ಹಿರಿಯ ಅಧಿ ಕಾರಿಗಳ ಸಹಾಯ, ಎನ್ನುವ ಹೆಚ್ಚಿನ ವಿವರಗಳು. ಹಾಗೆಯೇ ಹಿಂದೆ ದೇಹಾಲಸ್ಯ ಎಂದು ಮಾತ್ರ ಹೇಳುತ್ತಿದ್ದರೆ ಈಗ ಉಷ್ಣಾಧಿಕ್ಯದಿಂದ ಕಣ್ಣುನೋವು ಮೃಷ್ಟಾನ್ನ ಭೋಜನದಿಂದ ಆಲಸ್ಯ ಕೆಲಸದ ಒತ್ತಡದಿಂದ ಬಿಪಿ ಎನ್ನುವ ವಿವರಗಳು. ಭವಿಷ್ಯಕಾರರು ನಿಮ್ಮ ಮನೆಯವರನ್ನು ಮರೆಯುವುದಿಲ್ಲ. ನೆಂಟರ ಸಮಸ್ಯೆಗಳ ಉಲ್ಬಣ ದೈವ ಕಾರ್ಯಗಳ ಬಗೆಗೆ ಪಿತೃವರ್ಗದವರೊಡನೆ ಸಮಾಲೋಚನೆ ಸೂಕ್ತ ಪತ್ನಿವರ್ಗದವರ ಆಗಮನ ಎನ್ನುವ ಎಚ್ಚರಿಕೆಗಳು. ಈ ಹೋರಾರತ್ನರು ಮತ್ತೆ ಮತ್ತೆ ಬಳಸುವ ಪತ್ನಿವರ್ಗ ಪದದ ಅರ್ಥ ಮಲ್ಟಿಪಲ್ ಪತ್ನಿಯರೇ? ಅಥವ ಹೆಂಡತಿಯ ತಂದೆ-ತಾಯಿ, ಅಕ್ಕ - ತಂಗಿ ವಗೈರೆಗಳೇ? ನನಗೆ ಇನ್ನೂ ಗೊತ್ತಿಲ್ಲ.

ಭವಿಷ್ಯಕಾರರ ಮುಖ್ಯ ಟಾರ್ಗೆಟ್ ಆಂ ಆದ್ಮಿ ಸರಿ. ಆದರೆ ವಿಶೇಷ ಗುಂಪುಗಳನ್ನು ಮರೆಯುವುದಿಲ್ಲ. ಈಗ ಅದೆಂಥಹುದೋ ಥೀಮ್ ಪಾರ್ಟಿಗಳು ಎಂದು ಕೇಳಿದ್ದೆ. ಈಗ ಭವಿಷ್ಯದಲ್ಲೂ ಒಂದೊಂದು ದಿನ ಒಂದೊಂದು ಥೀಮ್. ಮೊನ್ನೆ ಥೀಮ್ ತೈಲ

ವ್ಯಾಪಾರಿಗಳು. ಅಂದಿನ ಭವಿಷ್ಯದ ಕಾಲಂ ತುಂಬಾ ಕನ್ಯಾ ರಾಶಿಯ ತೈ. ವ್ಯಾ. ಆದಾಯದಲ್ಲಿ ಹೆಚ್ಚಳ, ಧನುಸ್ಸು ರಾಶಿಯ ತೈ. ವ್ಯಾ. ಮಕ್ಕಳ ವಿವಾಹದ ವಿಚಾರದಲ್ಲಿ ಪ್ರಗತಿ, ತುಲಾ ರಾಶಿಯ ತೈ. ವ್ಯಾ. ಕಿವಿಗಳಿಗೆ ಸಂಬಂಧಪಟ್ಟ ರೋಗ ಎನ್ನುವ ಮಾತುಗಳು. ಹೀಗೆಯೇ ಅವರ ಗಮನ ವೈದ್ಯರು, ನೀರಾವರಿ ಇಲಾಖೆಯ ಉದ್ಯೋಗಿಗಳು, ಸಾಫ್ಟ್‌ವೇರ್ ಇಂಜನಿಯರುಗಳತ್ತ ಹೋಗಿರುವುದನ್ನು ನೋಡಿದ್ದೇನೆ. ಬಡತನ ರೇಖೆಯ ಕೆಳಗಿರುವವರನ್ನೂ ಅವರು ನಿರ್ಲಕ್ಷಿಸುವುದಿಲ್ಲ. ನಿನ್ನೆ ಮೀನ ರಾಶಿಯ ಹಳೇ ಪೇಪರುಗಳ ಮಾರಾಟಗಾರರಿಗೆ ಉತ್ತಮ ಲಾಭ ಎಂದಿತ್ತು. ಅಲ್ಪ ಸಂಖ್ಯಾತರನ್ನೂ ಅವರು ಮರೆಯುವುದಿಲ್ಲ. ಒಂದುದಿನ ತುಲಾ ರಾಶಿಗೆ ಸೇರಿದ ಬೇಹುಗಾರಿಕೆ ಇಲಾಖೆಯ ವಿನೋದ ಬರಹಗಾರರಿಗೆ ಸಾರ್ವಜನಿಕರಿಂದ ಮೆಚ್ಚಿಗೆ ಎಂದು ಬರೆದಿದ್ದನ್ನು ಓದಿದ್ದೆ. ಅಲ್ಲಿಯವರೆಗೂ ನನಗೆ ಬೇಹುಗಾರಿಕೆ ಇಲಾಖೆಯಲ್ಲಿ ವಿನೋದ ಬರಹಗಾರರೂ ಇರುತ್ತಾರೆ ಎನ್ನುವುದೇ ಗೊತ್ತಿರಲಿಲ್ಲ.

ಭವಿಷ್ಯದ ಕಾಲಂನ ಪರ್ಮನೆಂಟ್ ಗಿರಾಕಿಯಾದ ನನಗೆ ಒಂದೊಂದು ಸಾರಿ ಭವಿಷ್ಯಕಾರರು ಶುಭ ಎಂದು ಹೇಳುತಿದಾರೋ ಅಶುಭ ಎಂದು ಹೇಳುತಿದಾರೋ ಅರ್ಥವೇ ಆಗುವುದಿಲ್ಲ. ಹೋದವಾರ ಒಂದು ರಾಶಿಯವರ ಭವಿಷ್ಯದಲ್ಲಿ ದಂತ ವೈದ್ಯ ನಿಮ್ಮ ಅಳಿಯನಾಗುತ್ತಾನೆ ಎಂದು ಬರೆದಿತ್ತು. ಮಗಳಿಗೆ ಮದುವೆಯಾಗುತ್ತಿರುವುದು ಶುಭ ಸಮಾಚಾರ ಸರಿ. ಆದರೆ ಆ ಕನ್ಯಾಪಿತೃ ಎಂಡಿ ಮಾಡಿರುವ ಅಳಿಯನಿಗಾಗಿ ಕಾದಿದ್ದರೆ ಅವನಿಗೆ ಎಷ್ಟು ನಿರಾಶೆಯಾಗಿರಬೇಕು? ಅದೇ ದಿನ ಇನ್ನೊಂದು ರಾಶಿಯ ನವ ವಿವಾಹಿತರಿಗೆ ಸಂತಾನ ಭಾಗ್ಯ ಎಂದಿತ್ತು. ಅಜ್ಜ ಅಜ್ಜಿಯಾಗಲಿರುವವರಿಗೆ ಇದೇನೋ ಶುಭ ಸಮಾಚಾರ. ಆದರೆ ನವವಿವಾಹಿತ ಜೋಡಿ ಇನ್ನೂ ಮೂರು ವರ್ಷ ಮಕ್ಕಳು ಬೇಡ ಎಂದು ಆಗಲೇ ನಿರ್ಧರಿಸಿದ್ದರೆ ಅವರಿಗೆ ಎಷ್ಟು ಬೇಜಾರಾಗಿರಬೇಡ?

ಈಗಿನ ಪೇಪರುಗಳಲ್ಲಿ ಹಾಸ್ಯವೇ ಇರುಲ್ಲ ಎಂದು ಕೆಲವರು ದೂರುತ್ತಿರುತ್ತಾರೆ. ಅವರಿಗೆ ನನ್ನ ಸಲಹೆ – ದಯವಿಟ್ಟು ಭವಿಷ್ಯದ ಕಾಲಂ ಓದಿ.

❖❖❖

ಹೋಲಿಕೆ

ವಿಮಾನದ ಕುರ್ಚಿಗೆ
ನಮ್ಮನ್ನು ನಾವೇ
ಕಟ್ಟಿಕೊಳ್ಳುತ್ತೇವೆ
ಬಂಧನ ಅನಿಸಿದರೂ
ಸುರಕ್ಷತೆಗಾಗಿ
ಆಗುವಂತೆ ಮದುವೆ

– ಎಚ್. ಡುಂಡಿರಾಜ್

ತುಂತುರು

❖ ದನಂಆ

- ಮುನ್ನುಡಿ ಬರೆಯುವುದೆಂದರೆ ಆನೆಗೆ ಕನ್ನಡಿ ಹಿಡಿದಂತೆ
- An Indian will not Q for anything least of all for a Pee.
- ಪತ್ನಿಯ ತಪ್ಪುಗಳನ್ನು ವಿಮರ್ಶಿಸಬೇಡಿ. ಅವುಗಳಿಂದಾಗಿಯೇ ಒಳ್ಳೆಯ ಗಂಡ ಸಿಗುವುದನ್ನು ಅವಳು ತಪ್ಪಿಸಿಕೊಂಡಿದ್ದಾಳೆ.
- Canvas ಮೇಲೆ ಬಣ್ಣ ಚೆಲ್ಲಿ ಅದನ್ನ ಒರೆಸಿದ ಬಟ್ಟೆಯನ್ನು ಮಾರುವವನೇ ನವ್ಯ ಕಲಾವಿದ.
- ಇಂದೇ ನಿರ್ಲಕ್ಷಿಸಬಹುದಾದದ್ದನ್ನು ನಾಳೆಗೆ ಮುಂದೂಡಬೇಡಿ.
- Why is it maa ki, behan ki but not Baap ki?
- 'ಎಲೆ'ಯ ಬಹುವಚನ 'ಮರ' ಎಂದರೆ ತಪ್ಪೇ?
- You may be born poor, but you are a fool if you die poor.
- ಬಿನ್ ಲಾಡೆನ್‌ನನ್ನು ಹಿಡಿದರೆ ನೀಡುವ ಬಹುಮಾನದ ಮೊತ್ತವನ್ನು ಆಕರ್ಷಕವಾಗಿಸಲು, 49,999,999 ಡಾಲರ್ ಅಥವಾ 50,000,001 ಡಾಲರ್ ಎಂದು ನಿಗದಿಪಡಿಸಿರಬಹುದೇ?
- ಎಲ್ಲರೂ ಹುತಾತ್ಮರಾಗಲು ಹೊರಟರೆ ದೇಶವನ್ನು ಕಾಯುವವರಾರು?
- ಮಲ್ಲಿಕಾ ಷರಾವತ್: "Hero"ine
- ಪರೀಕ್ಷಾ ಕೊಠಡಿಯಲ್ಲಿ ಉತ್ತರಗಳನ್ನು ಮಾಹಿತಿ ಹಕ್ಕು ಕಾಯಿದೆಯಡಿ ಕೇಳಬಹುದೇ?
- ನನ್ನ ನೌಕರಿ ಸುಭದ್ರ. ಅದು ಬೇರೆ ಯಾರಿಗೂ ಬೇಡ.
- ದಂಡ ತೆತ್ತಿ ಪಡೆದ ಕಾರ್ನರ್ ಸೈಟ್: ಪೆನಾಲ್ಟಿ ಕಾರ್ನರ್ ಸೈಟ್!

❖❖❖



ಸತ್ಯಂ-ಶಿವಂ-ಸುಂದರಂ

❖ ದಾಶರಥಿ ದೀಕ್ಷಿತ್

''ಏಯ್ ರಾಮಾನುಜಾ-ಮಾದ್ವಾ-ಶಂಕರ್-ನೀವು ತ್ರಿಮತಸ್ತರು ದಸಾಕಾಯಲಿಕ್ಕೆ ಲಾಯಕ್ಕು-ನಾನಿಲ್ಲಿ ಗಂಟ್ಲು ಹರಿಯೋ ಹಾಗೆ ಹೊಡ್ಕೋತಿರೋದು ಯಾತಕ್ಕೆ? ಯಾರಿಗೆ? ಶುದ್ಧ ಅಯೋಗ್ಯ ಹುಡುಗರು.... ಏನ್ರೋ ನೀವು ಕಿಸಿಕಿಸಿ ನಗ್ತಾ ಕಿಟ್ಕೀಲಿ ನೋಡ್ತಿರೋದು......ಬೊಗಳೋ ಏ ವಿಶಿಷ್ಟಾದ್ವೈತ ರಾಮಾನುಜಾ....... ಬೊಗಳು......''

ಹಿಸ್ಟ್ರಿ ಮೇಸ್ಟ್ರು ಮಾದೇವಯ್ಯನವರು ಕಿಡಿಕಿಡಿ ಆಗಿದ್ದರು. ಕಿಟಕಿಯಲ್ಲಿ ಆಗತಾನೆ ಬಳುಕುತ್ತಾ ಹೋದ ಗೋಪಿಕಾಳೇ ಕಾರಣ. ಅವಳ ನಡಿಗೆ-ರೂಪ. ಗಾಳಿಗೆ ಹಾರುತ್ತಿದ್ದ ಸೆರಗು ಇವೆಲ್ಲಾ ಸತ್ಯವಾಗಿ ಕಂಡದ್ದು ರಾಮಾನುಜನಿಗೆ, ಸುಂದರವಾಗಿ ಕಂಡದ್ದು ಮದ್ವಾಚಾರಿಗೆ, ಆಹ 'ಶಿವಾ-ಶಿವಾ' ಎಂದು ಹಲುಬಿದವನು ಶಂಕರ. ಸತ್ಯಂ-ಶಿವಂ-ಸುಂದರಂ. ಪ್ರತ್ಯಕ್ಷ ಕಂಡಾಗ ಆದ ಆನಂದಕ್ಕೆ ಮೂವರೂ ಕಿಸಿ-ಕಿಸಿ ನಕ್ಕರು. ಈ ಕೀಚಲು ಗಂಟಲ ಮಾದೇವಯ್ಯನ ಚರಿತ್ರೆ ಬೋರು-ಶತಬೋರು ಯಾರಿಗೆ ಬೇಕಾಗಿದೆ!....

''ಪಾಯಿಂಟ್ ಆಫ್ ಆರ್ಡರ್ ಸಾರ್.... ಹೋಲ್ಡ್ ಯುವರ್ ಟಂಗ್.....''

-ಎಂದು ಎದ್ದುನಿಂತವನು ಸಿದ್ಧರಾಮ. ಅವನು ಮುಂದೆ ರಾಜಕೀಯ ಮುಖಂಡನಾಗಿ ವಿಧಾನಸೌದದವರೆಗೆ ಏರುತ್ತಾನೆಂದು ಇಡೀ ಶಾಲೆಗೆ-ಶಾಲೆಯೇಕೆ ಊರು ಊರೇಮಾತಾಡ್ಕೊತಾ ಇತ್ತು. ಸಿದ್ಧರಾಮ ಸಿಡಿದು ನಿಂತಾಗ ಮಾದೇವಯ್ಯನವರು ಸಿಟ್ಟಿನ ಮೂರನೇ ಕಣ್ಣು ಮುಚ್ಚಿ, ಶಾಂತರಾಗಿ ಕತ್ತು ಸರಿಪಡಿಸಿಕೊಂಡು, ಪ್ಯಾಂಟ್ ಜೇಬಿನಿಂದ ಕರವಸ್ತ್ರ ತೆಗೆದು ಹಣೆಯೊರಸಿ, ಗಂಭೀರ, ಶಾಂತ, ಗಂಟಲಿನಿಂದ ಹೇಳತೊಡಗಿದ್ದು ಏನೆಂದರೆ.....

''ಅಪ್ಪಾ-ಅಯ್ಯಾ-ಸಿದ್ರಾಮು.....ನಿನ್ನ ನಾನು ಮಾತೇ ಆಡಿಸಲಿಲ್ಲವಲ್ಲ.....ಕ್ಲಾಸ್‌ನಲ್ಲಿ ಡಿಸಿಪ್ಲಿನ್ ಬೇಕಪ್ಪಾ....ನೀವೇ ಮುಂದಿನ ಪ್ರಜೆಗಳು....ನಿಮ್ಮನ್ನು ಸತ್‌ಪ್ರಜೆ ಮಾಡೋದು ನಮ್ಮ ಕೆಲಸ. ನೀನ್ಯಾಕೆ ಸಿಟ್ಟಿಗೇಳ್ತೀ.....''

''ಅವಮಾನ ಮಾಡಿದ್ದೀರಿ ನೀವು.....''

''ನಾನು ಬೈದದ್ದು ಆ ರಾಮಾನುಜ-ಮದ್ವರಾಜ-ಶಂಕರ್-ಇವರಿಗಲ್ವೇನಪ್ಪಾ.... ಇದರಲ್ಲಿ ನಿನ್ನ ಪಾಯಿಂಟ್ ಬರೋದೇ ಇಲ್ಲಪ್ಪಾ...ದಯವಿಟ್ಟು ನೀನು ಕೂತ್ಗೋ...ಏಯ್...ರಾಮಾನುಜ.....ಮದ್ವರಾಜ....ನಾನು ಹೇಳಿದ್ದು....ತಿಳೀತೇ...''

-ಎಂದು ಮಹದೇವಯ್ಯನೋರು ತರಗತಿಯನ್ನು ಹತೋಟಿಗೆ ತರಲು ಮತ್ತೆ ಆರ್ಭಟಿಸಲು ಯತ್ನಿಸಿದರು ಸಿದ್ರಾಮ ಕೂಡಲಿಲ್ಲ, ಅವನು ಎದ್ದಾ ಅಂದ್ರೆ ಅವನ ಪಾರ್ಟಿಯವರೆಲ್ಲಾ ಎದ್ದು ನಿಲ್ಲಲೇಬೇಕು. ಸಿದ್ರಾಮ ಸಿಡಿದೆದ್ದ.

''ಆ ಮಾತು ಹಿಂದಕ್ಕೆ ತೊಗೊಳ್ರಿ......ಇಲ್ಲಾಂದ್ರೆ ಈಗಿಂದೀಗ್ಲೆ ವಾಕೌಟ್ ಮಾಡಿ ಇಡೀ ಕಾಲೇಜು ಸ್ಟ್ರೈಕ್ ಮಾಡಿ ಪ್ರತಿಭಟನೆ ತೋರಿಸಬೇಕಾಗುತ್ತದೆ....'' ಎನ್ನುತ್ತಿದ್ದಂತೇ ಯಾರೋ ಘೋಷಣೆ ಕೂಗಿದರು. ''ಡೌನ್ ವಿತ್ ಮಹದೇವಯ್ಯ'' ಆಚೆ ಈಚೆ ತರಗತಿ ವಿದ್ಯಾರ್ಥಿಗಳು ಹೊರಗೆ ಬರೋದನ್ನ ಆಯಾ ತರಗತಿ ಲಕ್ಚರುಗಳು ರೊಚ್ಚಿದ್ದ ಗುಂಪನ್ನು ಹತೋಟಿಗೆ ತರುವ ಪೋಲೀಸರಂತೆ ಯತ್ನಿಸುತ್ತಿದ್ದರು.

ಈ ಸಮಯಕ್ಕೆ ಗಫಾರ್ ಸಾಹೇಬರು ಬಂದರು. ಅವರ ಹಿಂದೆ ಪ್ರಾಂಶುಪಾಲರಾದ ಜೋಸೆಫ್ ಸಾಲೋಮನ್ ಸಾಹೇಬರು ಬಂದರು. ಗಫಾರ್ ಸಾಹೇಬರು ಸಾಲೋಮನ್ ಅವರ ಅಂಗರಕ್ಷಕರು. ಕಾಲೇಜಿನ ಹಿರಿಯ 4ನೇ ದರ್ಜೆನೌಕರ ಒಮ್ಮೆ ಪೈಲ್ವಾನ್ ಆಗಿದ್ದವರು.

''ವ್ಹಾಟ್ ಈಸ್ ದಿ ಮ್ಯಾಟರ್ ಮಹದೇವಯ್ಯ....''

-ಎಂದು ಸಾಲೋಮನ್ ಸಾಹೇಬ್ರು ಗತ್ತಿನಿಂದ ಟೈ ಗಂಟನ್ನು ಸರಿಪಡಿಸಿಕೊಳ್ಳುತ್ತಾ ಮಹದೇವಯ್ಯನವರನ್ನು ತಡವಿಕೊಂಡರು. ಸಧ್ಯಕ್ಕೆ ಪ್ರಾಂಶುಪಾಲರ ಆಗಮನದಿಂದ ಕ್ಲಾಸ್ ರೂಮಿನ ಸದ್ದು ಕಡಿಮೆ ಆಯಿತು. ಸಿದ್ರಾಮನ ಕಡೆಯವರು ನಿಂತಿದ್ದರಷ್ಟೆ- ಅವರ ಹಿಂದಿನ ಬೆಂಚಿನಿಂದ ದಿವ್ಯವಾಣಿಯೊಂದು ಎಲ್ಲರಿಗೂ ಕೇಳುವಂತೆ ನುಡಿಯಿತು.

''ಸಾರ್ ಮಹದೇವಯ್ಯನವರು ಕಿಟಕೀಲಿ ಗೋಪಿಕಾಳನ್ನು ನೋಡ್ತಾ ರಾಮಾನುಜನ್ನ ಬೈದರು. .....'' ಅವರು ಮಾತ್ರ ನೋಡಬೇಕು ಬೇರೆಯವರು ನೋಡಬಾರದು ಅನ್ನೊ ಕೊಂಕು ಇತ್ತು ಮಾತಲ್ಲಿ.

''ಗೋಪಿಕಾ ! ಹೂ ಈಸ್ ದಿಸ್ ಗೋಪಿಕಾ?.....'' -ಎಂದು ಪ್ರಶ್ನಿಸಿದ ಪ್ರಾಂಶುಪಾಲರು. ಅವರ ಅಂಗರಕ್ಷಕ ಗಫೂರನು ಸಹಾಯಕ್ಕೆ ಬಂದ.....

''ಓಸಾಬ್...ನೀವೂ ಖಿಡ್ಕಿಮೆ ಧೇಕ್ಕೆ ಕೊನ್ರೆ ಓ ಲಡ್ಕಿಕರ್‍ಕೊ ಪೂಜ್ಯಾನ್ಯೆ.....ಅವಮ್ಮ ಗೌರ್ನಮೆಂಟ್ ಅಡ್ವೋಕೇಟ್ ಕ ಭೇಟಿ ಗೋಪಿಕಾ ಅಮ್ಮಾ.....''

-ಎಂದಾಗ ಇಡೀ ಕ್ಲಾಸು ಡೌನ್ ವಿತ್ ಪ್ರಿನ್ಸಿಪಾಲ್ ಸಾಲೇಮಾನ್ ಎಂದು ಘೋಷಿಸಿತು. ಸಾಲೆಮಾನ್ ಸಾಹೇಬ್ರಿಗೆ ಈ ಗಫೂರ್ ಸಾಹೇಬು ಈತರಹ ನಿಜಹೇಳಲು ಪೇಚಿಗೆ ಬೀಳುವಂತೆ ಮಾಡುತ್ತಿದ್ದುದುಂಟು. ವಾತಾವರಣ ಗಂಭೀರವಾಗಿತ್ತು. ನಿಜ ಏನು ಅನ್ನೋದನ್ನ ಕಂಡುಹಿಡಿದು ಈ ರೀತಿಯ ಉದ್ರಿಕ್ತ ಪರಿಸ್ಥಿತಿಗೆ ಕಾರಣ ಏನು ಇದನ್ನು

ಇನ್ನೂ ಹದಗೆಡಿಸಿ ಊರಲ್ಲಿನ ಎಲ್ಲಾ ಸ್ಕೂಲು ಕಾಲೇಜು ಕಿಟಕಿಗಳ ಗಾಜು ರಸ್ತೆ ದೀಪಗಳ ಬಲ್ಬುಗಳನ್ನೂ ಈ ಎಚ್ಚೆತ್ತ ವಿದ್ಯಾರ್ಥಿವರ್ಗ ಒಡೆದು ಹಾಕುವುದನ್ನು ನಿಲ್ಲಿಸುವುದು ಪ್ರಾಂಶುಪಾಲರ ಕರ್ತವ್ಯ.

''ಪೋಲೀಸ್ ಕು ಬೋಲಿಂಗೇ....'' -ಎಂದ ಅಬ್ದುಲ್ ಗಫಾರ್ ಖಾನ್.

''ನೋನೊ-ನೊ ಪೋಲೀಸ್.....ಐ ವಿಲ್ ಹ್ಯಾಂಡ್ಲ್ ದಿ ಸಿಚುಏಷನ್.....''

-ಎಂದವರೇ ಪ್ರಾಂಶುಪಾಲರು ಕ್ಲಾಸ್ ರೂಮಿನ ಲಕ್ಚರರ್ ವೇದಿಕೆ ಏರಿ ಮುಂದಿದ್ದ ಮೇಜಿನ ಮೇಲೆ ಕೂತು ಎಲ್ಲರೂ ಕೂಡುವಂತೆ ವಿನಂತಿಸಿಕೊಂಡರು. ಎಲ್ಲರನ್ನೂ ಸಮಾಧಾನದ ಮಾತಿನಿಂದ ಸಂತೈಸುವುದರಲ್ಲಿ ಯಶಸ್ವಿಯಾದರು. ತದ ನಂತರ ಅಪರಾಧಿಯಂತೆ ಕೆಳಗೆ ಕೈ ಕಟ್ಟಿನಿಂತ ಮಾದೇವಯ್ಯನವರನ್ನು ನೋಡುತ್ತಾ.....

''ವ್ಹಾಟ್ ಈಸ್ ಆಲ್ ದಿಸ್ ಮಹದೇವಯ್ಯ....ಹೌ ಇಟ್ ಸ್ಟಾರ್ಟೆಡ್.....''

ಭಾರವಾದ ಮನಸ್ಸಿನಿಂದ ವಾರೆಗಣ್ಣನ್ನೂ ಬೀರುತ್ತಾ ಸಿದ್ಧರಾಮನನ್ನು ನೋಡಿದರು ಮಾದೇವಯ್ಯನವರು. ಸಿದ್ಧರಾಮ ಎದ್ದ -ಪಾಯಿಂಟ್ ಹಾಕಿದ-

''ಪ್ರಾಂಶುಪಾಲ ಮಹಾಶಯರೆ-ತಾವು ಕನ್ನಡದಲ್ಲೇ ವಿಚಾರಣೆ ಮಾಡಬೇಕು ಈ ನಾಡು ಕನ್ನಡ ನಾಡು ತಿಳಿದಿರಲಿ.......ನಿಮಗೆ ಕನ್ನಡ ಬರದೇ ಇದ್ರೆ ಕಲ್ತು ಬರೋ ತನಕ ನಾವು ಶಾಲೆ ಹೊರಗಡೆ ಘೋಷಣೆ ಮಾಡ್ತಾ ಮುಷ್ಕರದಲ್ಲಿರ್ತೇವೆ....

ಪ್ರಾಂಶುಪಾಲರು ಪೇಚಿಗೆ ಬಿದ್ದರು. ಸಿದ್ರಾಮ ಹೇಳುವುದರಲ್ಲಿ ನಿಜ ಇತ್ತು, ಕೆಲವೇ ಘಂಟೆಗಳ ಕೆಳಗೆ 'ಕಿಂಗ್ ಸಾಲೋಮನ್' ಪಿರೀಯಡ್‌ನಲ್ಲಿ ಇಂಗ್ಲೀಷ್ ಪಾಠವನ್ನು ಕನ್ನಡದಲ್ಲೇ ಮಾಡಬೇಕೆಂದು ತರ್ಲೆ ಮಾಡಿದ್ದರು. ಈಗೇನು ಮಾಡೋದು ಅಂತ ಗಫೂರನನ್ನು ನೋಡಿದರು.

''ಮೈ ಕನ್ನಡಿ ಮೆ ಎನ್ಕ್ವೈರೀ ಕರೂಂ'' -ಎಂದ. ನೊ' ಎಂದರು ಸಾಲೋಮನ್ ಮಾದೇವಯ್ಯನವರು ಪ್ರಾಂಶುಪಾಲರ ಮತ್ತು ವಿದ್ಯಾರ್ಥಿಗಳ ಒಮ್ಮತದಿಂದ ತಾವೇ ವಿಚಾರ ವಿನಿಮಯ ಮಾಡಿ ಈ ಪ್ರಸಂಗ ವಿಪರೀತಕ್ಕೆ ಹೋಗದಂತೆ ಮಾಡಬೇಕೆಂದು ಪ್ರಯತ್ನಿಸಿದಾಗ, ಅವರು ಅಪರಾಧಿ ಸ್ಥಾನದಲ್ಲಿರುವುದರಿಂದ ಅದು ಆಗಲ್ಲ ಎಂದು ಸಿದ್ರಾಮ ತೀರ್ಪು ಹೇಳಿದ. ಕಡೆಗೆ ಕನ್ನಡ ಪಂಡಿತರು ವಿಚಾರಣೆ ಮಾಡಲು ಅಡ್ಡಿ ಇಲ್ಲ ಎಂದು ಸರ್ವಾನುಮತದಿಂದ ನಿರ್ಧಾರವಾಯಿತು. ಇದೂ ಅಲ್ಲದೆ, ಈ ವಿಚಾರ ಕ್ಲಾಸ್‌ರೂಮಲ್ಲಿ ಆಗಕೂಡದು ಎಲ್ಲಾ ಕ್ಲಾಸಿನ ಹುಡುಗರೂ ಇಣಕುತ್ತಾರೆ ಪ್ರಾಂಶುಪಾಲರ ಆಫೀಸಿನಲ್ಲಿ ಆಗಬೇಕೆಂದೂ- ವಿದ್ಯಾರ್ಥಿ ಮುಖಂಡ ಸಿದ್ರಾಮ-ರಾಮಾನುಜ ಮದ್ವಾರಾಜ್-ಶಂಕರ್-ಮತ್ತು ಯಾವಪಾರ್ಟಿಗೂ ಸೇರದ ಹಿಂದುಳಿದವರ ಪ್ರತಿನಿಧಿಯಾಗಿ ಹಲಗ ಇರತಕ್ಕದ್ದೆಂದೂ ನಿರ್ಧಾರ ಆದಕೂಡಲೆ ಪ್ರಾಂಶುಪಾಲರ ಆಫೀಸು ಶುದ್ಧ ಮಾಡಲು ಗಫೂರ ಓಡಿಹೋದ.

ಕನ್ನಡ ಪಂಡಿತರು ಮುಖ್ಯ ಆಸನದಲ್ಲಿ ಮಂಡಿಸಿ ಮಧ್ಯಸ್ಥಿಕೆ ತೀಡುತ್ತಾ ವಿಚಾರಣೆಗೆ ತೊಡಗಿದರು.

''ಸಿದ್ರಾಮಾ ನಿಮ್ಮ ಪಾಯಿಂಟ್ ಏನು?''

''ಸಾರ್-ಈ ಮಹದೇವಯ್ಯನವರು ಜಾತೀಯತೆಯ ಮಾತೆತ್ತಿ ಕಾಲೇಜಿನ ವಾತಾವರಣ ಕಲಕಿ ಗಬ್ಬು ರಾಡಿ ಮಾಡ್ತಿದ್ದಾರೆ..''

''ಮಾದೇವಯ್ಯ......ನಿಮ್ಮ ಅಂಬೋಣ ಏನು?....''

''ನಾನು ನಿರಪರಾಧಿ ಪಂಡಿತರೆ- ಪಾಠ ಹೇಳುವಾಗ ಯಾವ ರೀತಿ ಹೇಳಿದರೆ ವಿದ್ಯಾರ್ಥಿಗಳಿಗೆ ವಿಷಯ ಮನದಟ್ಟಾಗುತ್ತೆಂತ ನನಗೆ ಗೊತ್ತು.... ಹಾಗೇ ಪಾಠ ಮಾಡ್ತಿದ್ದೆ....''

''ಸುಳ್ಳು.... ಈ ರಾಮಾನುಜ-ಮಧ್ವರಾಜ್-ಶಂಕರರನ್ನ ತ್ರಿಮತಸ್ಥರು ಎಂದ್ರು..... ಆಮ್ಯಾಲೆ ಅವರನ್ನ ದನಾ ಕಾಯಾಕೇ ಲಾಯಕ್ಕು ಅಂದ್ರು.....''

''ಅದ್ರಾಗೆ ತಪ್ಪೇನು...ಪಾಠದ ಕಡೆ ಗಮನ ಕೊಡ್ದೆ ಕಿಟ್ಕೀಲಿ ಹುಡಗೀರನ್ನ ನೋಡ್ತಾ ಕಿಸಿಕಿಸಿ ನಗಬೇಕು ಯಾಕೆ?''

''ಆ ಪಾಯಿಂಟಲ್ಲ ಸಾರ್...ಹುಡುಗೀರ್ನ ನಮ್ಮ ಪ್ರಿನ್ಸಿಪಾಲರೇ ನೋಡ್ತಾರೇಂತ ಗಫೂರ್ ಸಾಬ್ರೇ ಹೇಳಿದಾರೆ-ಅದ್ಕಲ್ಲ....'ದನಕಾಯೋದು' ಅಂದ್ರಲ್ಲ ಅದರ ಪಾಯಿಂಟು.....'' ಎಂದ ಸಿದ್ರಾಮ.

''ಅದು ಏನು ಬೈಧಂಗಾತೇನಪಾ....ನಿನ್ನ ಮನಸ್ನಾಗೆ ಏನದೆ ಹೇಳು...''

''ಶ್ರೀ ಕೃಷ್ಣ ದನ ಕಾಯ್ತಿದ್ದ...ನಮ್ಮಗೊಲ್ರು ದನ ಸಾಕೋದು-ಕಾಯೋದು ಮಾಡ್ತಾರೆ. ಪಶು ಸಂಗೋಪನಾ ಇಲಾಖೆಗೆ ನಮ್ಮ ಒಬ್ಬ ಮಂತ್ರೀನೇ ಅದಾರೆ ಅಂಥಾದ್ರಾಗೆ ದನಾ ಕಾಯೋರಿಗೆ ಅವಮಾನ ಮಾಡ್ತಾ ಅದಾರೆ ಮಾದೇವಯ್ಯ ನೋರು....''

''ಲೋಕಾಭಿರಾಮವಾಗಿ ರೂಢಿಯಾಗಿ ಬಂದ ಮಾತಪ್ಪ ಅದು ಅದನ್ನ ಗಂಭೀರವಾಗಿ ತೊಗೋಬಾರ್ದು''

ಇಂಥಾ ಮಾತೇ ನಮ್ಮನ್ನ ರೇಗ್ಸಾದು..... ಅವರ ಪಾಠ ಅವರೇ ಮಾಡ್ಲಿ - ಈ ತ್ರಿಮತಸ್ಥರು ಅಂತ ಅವರನ್ನು ಯಾಕೆ ಕ್ಲಾಸ್ ರೂಮಿನಿಂದ ಹೊರಗೆ ಹಾಕಲಿಲ್ಲ.... ಗೋಪಿಕಾಬಾಯಿನ್ನ ಆ ಮೂರು ಜನ ನೋಡಿದ್ದಾರೆ. ಮಾದೇವಯ್ಯನೋರು ನೋಡಿದಾರೆ-ನಮ್ಮ ಪ್ರಿನ್ಸಿಪಾಲರೂ ನೋಡ್ಯಾರೆ-ಅಲ್ಲೇನೊ ಗಫೂರ್ ಸಾಬ್....''

''ಹಾಂ ಸಾಬ್ - ಹಂಭಿದೇಖ...''

''ಅದು ಸತ್ಯ.....'' ರಾಮಾನುಜ.

''ಅದು ಸುಂದರ....'' ಮಧ್ವರಾಜ್.

''ಅದು ಜೀನತ್ ಅಮ್ಮಾನ್ ಎಂಬೋನಟಿ ಸತ್ಯಂ-ಶಿವಂ-ಸುಂದರ್ ಸಿನಿಮಾದಲ್ಲಿ ಇದ್ದಂಗೆ'' ಎಂದ ಶಂಕರ. ಕನ್ನಡ ಪಂಡಿತರು ತಲೆ ಕೆರೆದುಕೊಂಡರು. ವಿಚಾರಣೆ ಎಲ್ಲಿ ಎಲ್ಲಿಗೋ ಹೋಗಿತ್ತು. ಕಡೆಗೆ ಕನ್ನಡ ಪಂಡಿತರು ತೀರ್ಮಾನ ಹೇಳಿದರು.

''ಸುಂದರವಾದ ಸತ್ಯವನ್ನು ಎಲ್ಲರೂ ಶಿವ ಎಂದು ಒಪ್ಪಲಾಗಿದೆ. ಮಾದೇವಯ್ಯನವರು-'ದಸರಾ ಕಾಯೋಕೇ ಲಾಯಕ್ಕು' ಅಂದದ್ದು ತಪ್ಪು - ಕ್ಷಮಾಪಣೆ ಕೇಳಬೇಕು, ಎಲ್ಲರಿಗೂ ಸುಂದರವಾದದ್ದು ಕಣ್ಣಿಗೆ ಬೀಳೋದು ಸತ್ಯ. ಹುಡುಗರು ಕೇಳ್ಳಿ ಬಿಡ್ಲಿ ... ದಸಾ ಕಾಯಲಿ ಬಿಡ್ಲಿ ತಮ್ಮ ಪಾಡಿಗೆ ತಾವು ಲಕ್ಚರರುಗಳು ಪಾಠ ಎಂಬುದನ್ನು ಪಿರಿಯಡ್ ಪೂರ್ತಿ ವದರಿ ಹೋಗಬೇಕು. ಸದ್ಯಕ್ಕೆ ಈ ಪ್ರಸಂಗ ಇಲ್ಲಿಗೆ ನಿಲ್ಲಿಸಿ ಮುಂದೆ ಹೀಗೆ ಆಗದಂತೆ ಲಕ್ಚರರುಗಳು ಎಚ್ಚರಿಗೆ ಇಂದ ಇರಬೇಕು. ಈ ಗೋಪಿಕಾ ಪ್ರಕರಣದಲ್ಲಿ ಪ್ರಾಂಶುಪಾಲರೂ ಕೊಂಚ ಭಾಗಿ ಎಂದು ಗಪೂರ ಹೇಳಿದ್ದೂ, ತ್ರಿಮತಸ್ಥರು ಮಾಡಿದ್ದು ತಪ್ಪಲ್ಲ ಅದು ಮಾನವ ಸಹಜ ದೌರ್ಬಲ್ಯ ಎಂದೂ ಮಾದೇವಯ್ಯನವರೂ ಗೋಪಿಕೆಯನ್ನು ನೋಡಿದರು ಎಂಬುದೂ ಸಾಬೀತಾಗಿದೆ.

ಇನ್ನು ಮೇಲೆ ಎಲ್ಲರೂ ಕಿಟಕಿಯಲ್ಲೇ ನೋಡುತ್ತಿರಬೇಕು- ಲಕ್ಚರರು ಲಕ್ಚರ್ ಹೊಡಿತಿರಬೇಕು- ಇದು ನನ್ನ ತೀರ್ಮಾನ''

--ಎಂದು ನೆಶ್ಯ ಏರಿಸಿ ಎದ್ದರು. ಎಲ್ಲರೂ ಈ ತೀರ್ಪಿಗೆ ಮೆಚ್ಚಿಕೊಂಡು-- ಮಾದೇವಯ್ಯ 'ಸಾರಿ' ಬಾಯ್ಸ್-- ಎಂದಾಗ ಸಭೆ ಭರಕಾಸ್ತಾಯಿತು. ಇಡೀ ದೇಶದಲ್ಲೇ ಹರಡಬೇಕಾಗಿದ್ದ ವಿದ್ಯಾರ್ಥಿ ಮುಷ್ಕರವನ್ನು ಕನ್ನಡ ಪಂಡಿತರು ತಪ್ಪಿಸಿದ್ದರು.

ಹುಡುಗರೆಲ್ಲಾ ಕಿಟಕಿಯಲ್ಲಿ ಪಕ್ಕದ ಹುಡುಗಿಯರ ಕಾಲೇಜು ನೋಡಲು ಹೊರಟರು. ಇವರುಗಳು ಹೋಗುವ ಹೊತ್ತಿಗೆ ಹುಡುಗಿಯರೆಲ್ಲಾ ಆಗಲೇ ಅವರುಗಳ ಕ್ಲಾಸ್‌ರೂಮಿನ ಕಿಟಕಿಯಲ್ಲಿ ಹಾಜರಿದ್ದರು.

❖❖❖

ಪರಲೋಕದಲ್ಲಿ

ಇಲ್ಲಿರುವಾಗ ಎಲ್ಲರಿಗೂ
ಬೇರೆ ಬೇರೆ ಇನಿಷಿಯಲ್ಲು
ಎ.ಕೆ.ಸಿ.ಜಿ. ಇತ್ಯಾದಿ
ಪರಲೋಕದಲ್ಲಿ
ಎಲ್ಲ ಹೆಸರಲ್ಲೂ
ಒಂದೇ ಇನಿಷಿಯಲ್ಲಿ
ದಿ:

- ಎಚ್. ಡುಂಡಿರಾಜ್

ಗಾಂಪ ಮಠದ ಸ್ಥಿತಿ - ಗತಿ

❖ ಲೋಕನಾಥ ದೀಕ್ಷಿತ್

ಗಾಂಪ ಮಠದ ಆರ್ಥಿಕ ಸ್ಥಿತಿ ವಿಪರೀತ ಕುಸಿದಿತ್ತು. ಗುರು ಗಾಂಪರೊಬ್ಬರನ್ನು ಬಿಟ್ಟು ಮಿಕ್ಕ ಭಕ್ತಾದಿಗಳು, ಅಂದರೆ ಮಠದ ಕಿರಿ ಪಾರುಪತ್ತೆದಾರ ವೆಂಕಟರಮಣ, ಅವರ ಮಾವ ಕೋದಂಡಯ್ಯ, ಮಠಕ್ಕೆ ತನ್ನ ಮನೆಯನ್ನೇ ಬರೆದು ಕೊಟ್ಟ ಜೋಡಿದಾರ ಜಾನಕಿರಾಮಯ್ಯ, ಪ್ರಮುಖ ಶಿಷ್ಯ ಮಡ್ಡಿ ಎಲ್ಲರಿಗೂ ವಿಪರೀತ ಯೋಚನೆ. ಈ ಮಧ್ಯೆ ಗುರುಗಳ ಕೆಮ್ಮುತಾರಕಕ್ಕೆ ಹೋಗಿದೆ, ಶ್ವಾಸಕೋಶ ಪಂಚಮ ಸ್ವರದಲ್ಲಿ ಶೃತಿ ಹಿಡಿದಿತ್ತು. ಪ್ರತಿ ಪ್ರಶ್ನೆಗಳಿಗೆ ಕೆಮ್ಮಿನಿಂದಲೇ ಉತ್ತರಿಸುತ್ತಿದ್ದರು. ಈ ಕೆಮ್ಮು ಭಾಷೆ ಅರ್ಥವಾಗುತ್ತಿದ್ದುದು ಪಟ್ಟ ಶಿಷ್ಯ ಮಡ್ಡಿಗೆ ಮಾತ್ರ.

ಕೆಮ್ಮಿನ ಮೂಲಕ ಸಂದೇಶ ಪಡೆದಿದ್ದ ಮಡ್ಡಿ ತುರ್ತು ಸಭೆಕರೆದಿದ್ದ. ಸಭೆಗೆ ಷಾಮಿಯಾನ, ಕುರ್ಚಿ, ಮೈಕು ಸ್ಪೀಕರ್ ಇವುಗಳ ವ್ಯವಸ್ಥೆ ಆಗಿತ್ತು. ಸಭೆಯ ಅತಿ ಮುಖ್ಯ 'ಐಟಂ' ಆದ ಫಲಹಾರದ ವ್ಯವಸ್ಥೆ ಆಗಿರಲಿಲ್ಲ. ಅದೇ ಮಡ್ಡಿ ವೆಂಕಟರಮಣ ಇವರುಗಳಿಗೆ ಆಗಿರುವ ಯೋಚನೆ.

ಲಾರಿಗಟ್ಟಲೆ ಆಶ್ವಾಸನೆ ಕೊಡುವ ಮಠದ ಪೊಲಿಟಿಕಲ್ ಅಡ್‌ವೈಸರ್ ಪುಡಾರಿ ಪಿಳ್ಳಾರಯ್ಯ, ಫಲಹಾರದ ವ್ಯವಸ್ಥೆ ತಮ್ಮ ಹೊಣೆ ಎಂದು ಆಶ್ವಾಸನೆ ಕೊಟ್ಟಿದ್ದರು. ಎಂದಿನಂತೆ ಪುಡಾರಿಗಳು ನಾಪತ್ತೆ ಆಗಿದ್ದರು. ಪುಡಾರಿಗಳನ್ನು ನಂಬಿದ 'ಗಾಂಪರು' ಸಪ್ಪೆ ಮುಖ ಹಾಕಿದ್ದರು.

ಈಗ ಟಿ.ವಿ ವಾಹಿನಿಯಾದ ಗಾಂಪದರ್ಶಿನಿ ತಮ್ಮ ಸಾಮಾನು ಸರಂಜಾಮಿನೊಡನೆ ಬಂದರು. ಮಠದ ಸಭಾಂಗಣ 'ಸ್ಕ್ಯಾನ್' ಮಾಡಿದರು. ಈಗ ಮಠದ 'ಅಫಿಷಿಯಲ್ ಸ್ಪೋಕ್ಸ್‌ಮನ್' ಅವಸರವಾಗಿ ಹೊರಗೆ ಬಂದ. ಪ್ರಶ್ನಾವಳಿ ಪ್ರಾರಂಭವಾಯಿತು.

ಗಾಂಪದರ್ಶಿನಿ: ಈ ಅವಸರದ ಸಭೆ ಏತಕ್ಕಾಗಿ

ಮಡ್ಡಿ: ಮಠದ ಆರ್ಥಿಕ ಪರಿಸ್ಥಿತಿಯ ಸುಧಾರಣೆಗಾಗಿ. ಈಗ ಮಡ್ಡಿ ಕಾವಿ ಸರಿಯಾಗಿ ಹೊದ್ದ.

ಗಾಂಪದರ್ಶಿನಿ: ಈ ದಿನದ ಮನರಂಜನೆ ಕಾರ್ಯಕ್ರಮ.

ಮಡ್ಡಿ: ಅಭಿಷೇಕ್ ಬಚ್ಚನ್, ಐಶ್ವರ್ಯ ರೈ ಬರಬೇಕಿತ್ತು.

ಗಾಂಪದರ್ಶಿನಿ: ಹಾಗಾದ್ರೆ ಬರೋಲ್ಲವೇ

ಮಡ್ಡಿ: ಅವರು ಅರ್ಜೆಂಟಾಗಿ ವಿದೇಶಕ್ಕೆ ಹೋಗಿದ್ದರಿಂದ ಆಗ್ತಿಲ್ಲ.

ಗಾಂಪದರ್ಶಿನಿ: ಹಾಗಾದ್ರೆ ಇಂದಿನ ಕಾರ್ಯಕ್ರಮ.

ಮಡ್ಡಿ: ಗುರುಗಳ ಅಪ್ಪಣೆಯಂತೆ ಕಾರ್ಯಕ್ರಮ ಯೋಜಿಸಿದ್ದೇವೆ.

ಗಾಂಪದರ್ಶಿನಿ: ಆಯ್ತು ಬೇಗ ಹೇಳಿ....ಇಲ್ಲಿ ಕಾಲ ಕಳಿಯೋಕ್ಕೆ ಆಗೋಲ್ಲಾ...

ಮಡ್ಡಿ: ಜಾನಕಿರಾಮಯ್ಯ, ಅದೆ ನಂ ಜೋಡಿದಾರ್‍ರು ಅವರಿಂದ ಸ್ವಾಗತ ಭಾಷಣ....

ಗಾಂಪದರ್ಶಿನಿ: ಅದು ಬೇಡ ಮನರಂಜನೆ ಯಾರದ್ದೂ..

ಮಡ್ಡಿ: ನಮ್ಮ ಮಠದ ಭಯಂಕರ ಭಕ್ತ

ಗಾಂಪದರ್ಶಿನಿ: ಭಯಂಕರ ಅಂದ್ರೆ

ಮಡ್ಡಿ: ಅದೆ ನಟ ಭಯಂಕರ, ವೀರ ಪಾತ್ರ ಪ್ರವೀಣ ನಗಾರಿ ನರಿಸಿಂಹಯ್ಯ.

ಗಾಂಪದರ್ಶಿನಿ: ಓ....ಹಳಬ್ರು ...ಮೂವತ್ತು ವರ್ಷದಿಂದ ಮಾವನ ಮನೆಯಲ್ಲೆ ವಾಸವಾಗಿದ್ದಾರಲ್ಲಾ.....

ಮಡ್ಡಿ: ಆ....ಅವರೆ ಅವರಿಂದ ನಾಟಕದ ಹಾಡುಗಳು

ಗಾಂಪದರ್ಶಿನಿ: ಇನ್ಯಾರೂ ಒಳ್ಳೆ ಅವರು ಸಿಕ್ಕಲಿಲ್ಲವೇ

ಮಡ್ಡಿ: ಸಿಕ್ಕಿದಾರೆ.....ನಂ ಪುಡಾರಿ ಪಿಳ್ಳಾರಯ್ಯನ ಆರನೆ ಹೆಂಡತಿ ಮೂರನೆ ಮಗಳು 'ರಂಭಾ' ಅವರಿಂದ ಬ್ರೇಕ್ ಡ್ಯಾನ್ಸ್.....

ಗಾಂಪದರ್ಶಿನಿ: ಸಂತೋಷ, ಈಗ ಸಭೆ ಪರಿಪೂರ್ಣವಾಗಿ ಯಶಸ್ಸು ಕಾಣಬೇಕಾದ್ರೆ ಫಲಹಾರ ಬಹು ಮುಖ್ಯ. ಏನೇನು ಫಲಹಾರ ವ್ಯವಸ್ಥೆ ಮಾಡಿದ್ದಿರೀ

ಮಡ್ಡಿ: ಅದರದ್ದೆ ಸ್ವಲ್ಪ ಎಡವಟ್ಟಾಗಿದೆ. ಫಲಹಾರದ ಜವಾಬ್ದಾರಿ ವಹಿಸಿದ ಪಿಳ್ಳಾರಯ್ಯ ಪತ್ತೆ ಇಲ್ಲ. ಮೊಬೈಲ್ 'ನಾಟ್ ರೀಚಬಲ್' ಅಂತ ಬರ್‍ತಿದೆ.

ಗಾಂಪದರ್ಶಿನಿ: ಅಂದರೆ ಪುಡಾರಿ ಪಿಳ್ಳಾರಯ್ಯನವರ ಫಲಹಾರದ ವ್ಯವಸ್ಥೆ ಅಂದ ಹಾಗೆ ಆಯಿತು ....ಹೋಗಿ ಹೋಗಿ....ಮುಖ್ಯವಾಗಿ ಫಲಹಾರದ ವ್ಯವಸ್ಥೆಗೆ ಅವರನ್ನ ಏಕೆ ನಂಬಿದ್ರೀ ಅದಕ್ಕೆ ಬೇರೆಯಾರನ್ನಾದ್ರೂ ಕೇಳಬೇಕಿತ್ತೂ....

ಮಡ್ಡಿ: ಕೇಳಿದ್ವಿ.....ಯಾರೂ ಸಾಧ್ಯ ಇಲ್ಲಾ ಅಂದ್ರು

ಗಾಂಪದರ್ಶಿನಿ: ಮತ್ತೆ.

ಮಡ್ಡಿ: ಇವರು ಏನೂ ಇಲ್ಲಾಂದ್ರೂ ಕಡೆಪಕ್ಷ ಆಶ್ವಾಸನೆನಾದ್ರೂ ಕೊಡ್ತಾರೆ ಅದಕ್ಕೆ ಒಪ್ಪಿ ಕೊಂಡೆವು....

ಈಗ ಅವಸರಕ್ಕೆ 'ಮಂಕ' ಒಳಗಿನಿಂದ ಓಡಿ ಬಂದ "ಗುರುಗಳ ಆರೋಗ್ಯ ಹದಗೆಟ್ಟಿದೆ. ತಾರಕಕ್ಕೆ ಹೋಗಿದೆ ಮೂರು ಬಾರಿ 'ಶ್ವಾಸಕೋಶ' ಹೊರಗೆ ಬಂದು ಒಳಗೆ ಹೋಗಿದೆ-" ವಿಷಯ ತಿಳಿಸಿದ.

ತಕ್ಷಣ 'ಗಾಂಪದರ್ಶಿನಿ' ಛಾನೆಲ್ ನವರು ಗುರುಗಳ ಆರೋಗ್ಯ ಹದಗೆಟ್ಟಿದೆ. ಸರಿಯಾಗಿ ಹೇಳಬೇಕೆಂದರೆ – ಈಗಲೊ ಆಗಲೊ ಎಂಬಂತಾಗಿದೆ ಎಂದು.


ಬಣ್ಣ ಕಟ್ಟಿ ಬಿತ್ತರಿಸಿದರು, ಸೂಪರ್ ಸುದ್ದಿಯನ್ನು ಸುದ್ದಿ ನೋಡಿದ್ದೇ ತಡ ಜನ ಸಾಗರೋಪಾದಿಯಲ್ಲಿ ಮಠದ ದಿಕ್ಕಿಗೆ ನುಗ್ಗಿದರು. ಮಡ್ಡಿ ವೆಂಕಟರಮಣ ದಂಗಾದರು. ಈಗ ಇರುವ ಸಮಸ್ಯೆ ಫಲಹಾರದ್ದು. ವೆಂಕಟರಮಣ ತನ್ನ ಮಾವ ಕೋದಂಡಯ್ಯನಿಗೆ ಮೊಬೈಲಾಯಿಸಿದ. ಐದೇನಿಮಿಷಕ್ಕೆ ಫಲಹಾರ ವ್ಯಾನ್‌ನಲ್ಲಿ ಬಂತು. ಗಾಂಪರು ಮುಖದಲ್ಲಿ ಮುಗುಳ್ನಗೆಯ ಮಿಂಚು ಮೂಡಿತು.

ಈಗ ಫಲಹಾರ ಒಳಗೆ ಹೋಯಿತು. ವೆಂಕಟರಮಣನ ನಿರ್ದೇಶನದಲ್ಲಿ ಇಡಲಾಯಿತು. ಅಲ್ಲೆ ಇದ್ದ ಮಡೆಯ ಮುಚ್ಚಳಿಕೆ ತೆಗೆದ. ಬಿಸಿ ಬಿಸಿ ಕೇಸರಿಬಾತ್‌ನ ವಾಸನೆ ಮೂಗಿಗೆ 'ಘಂ' ಎಂದು ಹರಡಿತು. ತಡೆಯಲು ಆಗಲಿಲ್ಲ, ಒಂದೇ ಒಂದು ಚಮಚ ಬಾಯಿಗಿಟ್ಟು ಚಪ್ಪರಿಸಿದ.

ಜನಸಮೂಹ ನೋಡಿತು. ಗುರುಗಾಂಪರ ದರ್ಶನ ಮರೆಯಿತು. ಫಲಹಾರದ ಕಡೆ ನುಗ್ಗಿತು. ಪಕೋಡ ಪ್ರಿಯ ದಫ್ಢೇದಾರ ದೇರಣ್ಣ ಜನರನ್ನು ನಿಯಂತ್ರಿಸಲು ಹೋಗಿ ತಾವೂ ಕೇಸರಿಬಾತ್ ಸವಿದರು.

ನೂಕುನುಗ್ಗಲು ಹೆಚ್ಚಾಯಿತು. ಷಾಮಿಯಾನ ಕುಸಿಯಿತು. ಸಭೆ ನಡೆಯಲಿಲ್ಲ, ಆರ್ಥಿಕ ಸ್ಥಿತಿ ಸುಧಾರಿಸಲಿಲ್ಲ, ಈಗ ಮಠದ ಆರ್ಥಿಕ 'ಸ್ಥಿತಿ ಮಳೆಬಿಲ್ಲಿನಂತೆ ಆಗಿದೆ, ಇದ್ದ ಹಾಗೆ ಕಾಣುತ್ತದೆ ಕೈಗೆ ಸಿಗುವುದಿಲ್ಲ. ಈಗ ಮಠದ ಸ್ಥಿತಿ ಯಥಾಸ್ಥಿತಿ ಗತಿ ದೇವ್ರೆಗತಿ.''ಆರಕ್ಕೆ ಏರಿಲ್ಲ ಮೂರಕ್ಕೆ ಇಳಿದಿಲ್ಲ.''

❖❖❖



ಕನಕಲಕ್ಷ್ಮಿ ಕೆನಡಾಕ್ಕೆ ಹೊರಟ್ಟಿದ್ದು....

❖ ವೈ.ಎನ್. ಗುಂಡೂರಾವ್

ಕನಕಲಕ್ಷ್ಮಿ ಗೊತ್ತಲ್ವಾ? ಹೇಗೆ ತಾನೆ ಗೊತ್ತು ನಿಮ್ಗೆ. ಅವಳೇನು ಫಿಲಂ ಸ್ಟಾರಾ? ಫಿಲಂ ಸ್ಟಾರ್ ಅಲ್ಲದಿದ್ರೂ ಹಳ್ಳಿಗೆಲ್ಲಾ ಅವಳೇ ಸ್ಟಾರ್ ಅಂತ್ಲೇ ಹೇಳಬೇಕು. ಹುಟ್ಟಿದ್ದು ಸಂತೇಮರಳ್ಳಿಯಲ್ಲಿ. ಹೇಗೋ ಓದಿ ಎಸ್.ಎಸ್.ಎಲ್.ಸಿ. ಪಾಸುಮಾಡಿ ಬೆಂಗಳೂರು ತಲಪಿದ್ದೇ ವಿಶೇಷ. ಪಟ್ಟಣಕ್ಕೆ ಬಂದು ಸೇರಿದ್ದೇ ನೋಡಿ, ಪಟ್ಟಣದ ನಡವಳಿಕೆಗಳನ್ನೆಲ್ಲಾ ಹೇಗೆ ಕಲ್ತ್ಕೊಂಡು ಬಿಟ್ಲು. ಪಟ್ಟಣದೋರಿಗೆ ತಲೆಮೇಲೆ ಹೊಡೆದ ರೀತಿಯ ಅವಳ ರೀತಿ-ರಿವಾಜು ನೋಡಿದರೆ ಅವಳನ್ನು ಹಳ್ಳಿಯಲ್ಲಿ ಹುಟ್ಟಿದೋಳು ಅಂತಾ ಯಾರೂ ಹೇಳೋಕಾಗ್ತಾಯಿರ್ಲಿಲ್ಲ.

ಶ್ರೀನಿವಾಸ ಉಪಾದ್ರು ಮಗ ರಾಮಕೃಷ್ಣ ರೀಜನಲ್ ಕಾಲೇಜಿನಲ್ಲಿ ಸೀಟುಗಿಟ್ಟಿಸಿದವನು ಪ್ರತಿವರ್ಷ ರ್‍ಯಾಂಕ್ ವಿದ್ಯಾರ್ಥಿ ಎಂದೇ ಪಟ್ಟ ಕಟ್ಟಿಸಿಕೊಂಡು ಕಡೆಗೆ ಬೆಂಗಳೂರಿನ ಬಹುರಾಷ್ಟ್ರೀಯ ಕಂಪನಿಯೊಂದರಲ್ಲಿ ಐದಂಕಿ ಸಂಬಳ ಎಣಿಸತೊಡಗಿದಾಗ ಅದೆಂತಾದ್ದೋ ವ್ಯಾಮೋಹ ಹಳ್ಳಿ ಕಡೆ ಎಳೆಯ ತೊಡಗಿತು. ಹಳ್ಳಿಗೂ ಹೋದ. ತಂದೆ ತಾಯಿಯ ಬಲವಂತಕ್ಕೆ ಕಟ್ಟುಬಿದ್ದು ಮೈಸೂರಿನ ಚೆಲುವೆ ಸ್ವಾತಿಯನ್ನ ಮದುವೆಮಾಡಿಕೊಂಡ. ಹೆಂಡತಿಗೆ ಹೊತ್ತು ಹೋಗಲೆಂದು ಅದೇನೋ ಒಂದು ಕೆಲ್ಸಾಂತುಕ್ಕೊಡಿಸ್ದ. ಆದರೆ ಅದೇ ಮುಂದೆ ಅವರಿಗೆ ಅದೃಷ್ಟದ ರೇಖೆಯಾಗಿಬಿಡಬೇಕೇ! ಇಬ್ಬರೂ ದುಡಿಯಲು ಹೊರಗೆ ಹೊರಟರೆ, ದುಡಿದು ಉಸ್ಸಪ್ಪಾ ಎಂದು ಮನೆತಲುಪಿದರೆ ಕಾಫಿ ಮಾಡಿಕೊಡೋರಾದ್ರೂ ಇದ್ದಿದ್ದರೆ ಎಷ್ಟು ಚೆನ್ನಾ! ಅನಿಸಿದ್ದೇ ತಡ, ಹಳ್ಳಿಗೆ ಹೋಗಿ ಯಾರನ್ನಾದರೂ ಕರ್ಕೊಂಡುಬಂದು ಮನೇಲಿ ಇಟ್ಕೊಂಡ್ರೆ ಹೇಗೆ ಅಂತಾ ಐಡಿಯಾ ಹೊಳೆದದ್ದೇ ತಡ ಇಬ್ಬರೂ ಮರು ದಿವಸ ರಜೆಹಾಕಿ ಹಳ್ಳಿಗೆ ಹೋದ್ರು.

ಕನಕಲಕ್ಷ್ಮಿಗೆ ಆಗ್ಲೆ ಮದುವೆಯಾಗಿ ಐದುವರ್ಷವಾಗಿತ್ತು. ಮಕ್ಕಮರಿ ಒಂದೂ ಇಲ್ದೆ ರೇಷ್ಮೆ ಇಲಾಖೆಯಲ್ಲಿ ರೇಷ್ಮೆ ನೂಲಿನ ಲೆಕ್ಕ ಬರ್ಕೊಂಡು ಕುಳಿತಿದ್ಲು. ಇವಳೇ ಸರಿಯಾದ ಹುಡುಗಿ ಎಂದು ಆರಿಸಿದ ರಾಮಕೃಷ್ಣ ಕನಕಲಕ್ಷ್ಮಿಯ ತಂದೆ ತಾಯಿ ಮುಂದೆ ತಮ್ಮ ಪ್ಲಾನ್ ಇಟ್ರು.

ನೀವು ಹೇಳೋದೇನೋ ಸರಿ, ಆದ್ರೆ ಅವಳಗಂಡ ಒಂದು ಕಡೆ ಇವಳೊಂದು ಕಡೆ ಹೇಗಿರ್ತಾರೆ ಹೇಳಿ, ಅದೇನ್ ಚೆನ್ನಾ? ಎಂದು ಪಿಟೀಲು ತಂತಿ ಮೀಟಿದರು. ಬಿಡಿ, ಅದಕ್ಯಾಕೆ

ಯೋಚ್ನೆ ಮಾಡ್ತೀರಾ. ನಾವಿರೋ ಮನೆ ಹಿಂಭಾಗದಲ್ಲಿ ಚಿಕ್ಕದೊಂದು ಮನೆ ಇದೆ. (OUT HOUSE). ಅದನ್ನೇ ಇವರ್ಗೆ ಕೊಡೋಣ. ಅಲ್ಲೇ ಇದ್ಕೊಂಡು ನಮ್ಮನೇನೂ ನೋಡ್ಕೊಂಡು ಕೆಲ್ಸ ಮಾಡ್ಕೊಂಡಿರ್ಲಿ. ಅವಳ ಗಂಡನಿಗೂ ಒಂದು ಕೆಲ್ಸಾಂತ ಕೊಡ್ಸಿದ್ರಾಯ್ತಲ್ಲಾ ಎಂದ ರಾಮಕೃಷ್ಣ

ಕನಕಲಕ್ಷ್ಮಿಗೆ ಸ್ವರ್ಗ ಮೂರೇ ಗೇಣು. ಕಂತೆ ಎತ್ಕೊಂಡು ಬೆಂಗಳೂರಿನ ಶಿವನಗರಕ್ಕೆ ಬಂದೇ ಬಿಟ್ಳು. ಬೆಳಗಾಗೆದ್ದು ಗಂಡನಿಗೆ ಕಾಫಿ ಮಾಡಿಕೊಟ್ಟು ರಾಮಕೃಷ್ಣರ ಮನೆಗೆ ಬಂದ್ರೆ, ಇಲ್ಲಿ ಅವರಿಬ್ಬರಿಗೂ ಕಾಫಿ ತಿಂಡಿ ಮಾಡಿಕೊಟ್ಟು ಇಬ್ಬರೂ ಆಫೀಸಿಗೆ ಹೊರಟ ನಂತರ ತನ್ನಮನೆಯ ಕೆಲಸ. ನಂತರ ಸಂಜೆ ಹೊತ್ತಾಗೆ ಹೋಗಿ ಇಬ್ಬರಿಗೂ ಬಿಸಿಬಿಸಿ ಅಡಿಗೆ ರೆಡಿಮಾಡಿಟ್ಟು ತನ್ನ ಮನೆಗೆ ಹೋದ್ರೆ ಮಾರನೆಯದಿನ ಆರುಗಂಟೆ ವರ್ಗೆ ಮಾತಾಡ್ಸೋವರಿಲ್ಲ.

ಹೀಗೆ ನಾಲ್ಕಾರು ವರ್ಷ ಕಳೆದೇ ಹೋಯ್ತು. ರಾಮಕೃಷ್ಣನಿಗೆ ಇದ್ದಕ್ಕಿದ್ದಂತೆ ವಿದೇಶ ಯಾತ್ರೆ ಅಂತ ಅವನ ಹಣೇಲಿ ಬರೆದ ಬರಹ ಮಿಂಚತೊಡಗಿತು. ಹೆಂಡತಿಯನ್ನು ಬಿಟ್ಟು ಹೋಗೋದಾದ್ರೂ ಹೇಗೆ ಅಂತಾ ಮೂರು ಹಗಲು ಮೂರು ರಾತ್ರಿ ಯೋಚ್ನೆಮಾಡಿ ಕಡೆಗೆ ಇಬ್ರೂ ಹೊರಡೋದೆಂದು ತೀರ್ಮಾನಿಸಿ, ಮನೆಕಡೆ ನೋಡಿಕೊಳ್ಳಲು ಕನಕಲಕ್ಷ್ಮಿ ಅವಳ ಗಂಡನಿಗೆ ತಿಳಿಸಿ ಕೆನಡಾಕ್ಕೆ ಹೊರಟರು. ಮಧ್ಯೆ ಮಧ್ಯೆ ಉಪಾದ್ರು ಬಂದು ಬೆಂಗಳೂರಲ್ಲಿ ವಾರೊಪ್ಪತ್ತಿದ್ದು ಹೋಗ್ತಿದ್ರು.

ಒಂದೆರಡು ವರ್ಷ ಕಳೆದೇ ಹೋಯ್ತು. ಕನಕಲಕ್ಷ್ಮಿಗೆ ಹೂವು ಅರಳಲೇ ಇಲ್ಲ. ಅವಳಗಂಡನಿಗೆ ಇದೊಂದು ಕೊರತೆ ಅಂತ ಅನ್ನಿಸಲೇ ಇಲ್ಲ. ಒಂದೊಂದು ಸಾರಿ ಕನಕಲಕ್ಷ್ಮಿಗೆ ಮನಸ್ಸಿಗೆ ತುಂಬ್ಕೊಂಡಾಗ ಮುದ್ದಾದ ಮಗು ಇದ್ದಿದ್ರೆ ಅಂತ ಅನಿಸದೆ ಇರ್ತಿರ್ಲಿಲ್ಲ.

ಕಡೆಗೊಂದು ದಿವಸ ರಾಮಕೃಷ್ಣ ಕೆನಡಾದಿಂದ ಫೋನುಮಾಡಿದ. ಯಾರನ್ನಾದ್ರೂ ಹಿಡ್ಕೊಂಡು ಪಾಸ್‌ಪೋರ್ಟ್ ಮಾಡಿಸ್ಕೋ. ನಾನು ಬಂದು ವೀಸಾ ಮಾಡಿಸ್ತೇನೆ. ಸ್ವಾತಿಗೆ ಎರಡು ತಿಂಗಳು. ನೀನು ಇಲ್ಲಿಗೆ ಬರ್ಬೇಕಾಗುತ್ತೆ. ಕನಕಲಕ್ಷ್ಮಿಗೆ ಸ್ವರ್ಗ ಮೂರೇಗೇಣು. ಕನಕಲಕ್ಷ್ಮಿ ಎಲ್ಲಿ ಕೆನಡಾ ಎಲ್ಲಿ? ವಿಷಯ ತಿಳಿಸಲು ಊರಿಗೆ ಹಾರಿದಳು. ಸಂತೇಮಾರಳ್ಳಿ ಸುತ್ತಾಮುತ್ತಾ ಇದೇಮಾತು. ಕನಕಲಕ್ಷ್ಮಿ ಕೆನಡಾಗೆ ಹೋಗ್ತಾಳಂತೆ...ಕನಕಲಕ್ಷ್ಮಮ್ನೋರು ಕೆನಡಾಗೆ ಓಯ್ತಾರಂತೆ....... ದಿನ ಬೆಳಗಾದ್ರೆ ಸಂತೆಮರಳ್ಳಿ ಸುತ್ತಮುತ್ತಾ ಹದಿನೈದು ಹಳ್ಳಿಗೆ ರಾತ್ರೋರಾತ್ರಿ ವಿಷಯ ಲೀಕಾಗೋಯ್ತು. ಬೆಳಗಾದ್ರೆ ಕನಕಲಕ್ಷ್ಮೀ ತಾಯಿಗೆ, ಬಂದೋರ್ಗೆಲ್ಲಾ ಉಪ್ಪಿಟ್ಟು ಕಾಫಿ ಮಾಡಿಮಾಡಿ ಸೊಂಟ ಬಿದ್ದೋಯ್ತು. ಉಪ್ಪಿಟ್ಟು ಕಾಫಿ ಗಡದ್ದಾಗಿ ತಿಂದು ಹೊರಗೆ ಹೋದ ನಂತರ, "ಕೆನಡಾಗೆ ಹೋಗೋದು ಅಂದ್ರೆ ಅದೇನು ಸಂತೇಮರಳ್ಳಿ ಬಸ್ಸಿಗೆ ಹತ್ತಿ ದಂಗೆ ಅಂತಾ ತಿಳ್ಕೊಂಡಿದ್ದಾಳೆ" ಎಂದು ಬೆನ್ನ ಹಿಂದೆ ಕುಹಕವಾಡಿದರು.

ಮಧ್ಯದಲ್ಲಿ ಬೆಂಗಳೂರಿಗೆ ಬಂದು ಒಂದೆರಡು ಸಾರೆ ಪಾಸ್‌ಪೋರ್ಟ್‌ಗೆ ಯಾರನ್ನ ಹಿಡಿಯೋದು, ವೀಸಾಗೆ ಯಾರ್ಗೆ ತಗಲ್ಕೊಂಡ್ರೆ ಸಿಗುತ್ತೆ ಅನ್ನೋವಿಷಯನ್ನೆಲ್ಲಾ

ಕೂಡಿಹಾಕಿದ್ಲು. ಬೆಂಗಳೂರಿನಲ್ಲಿದ್ದ ಪಕ್ಕದ ಮನೆಯ ರಜನಿ ಇವಳ ವಯಸ್ಸಿನವಳೇ. ಅವಳಿಗೆ ಮದ್ವೆ ಇನ್ನೂ ಆಗದಿದ್ರೂ ಹುಡುಗಾಟಿಕೆ ಮಾತ್ರ ನಿಂತಿರಲಿಲ್ಲ. ಕನಕಲಕ್ಷ್ಮೀನ ಕರ್ದು "ನೀ ಹೀಗೆ ಹಳ್ಳಿ ಗುಗ್ಗು ತರಹ ಇದ್ರೆ ಆಗುತ್ತಾ. ಕೆನಡಾಗೆ ಹೋಗೋವ್ಳಿಗೆ ಸರಿಯಾದ ಡ್ರೆಸ್ಸು ಅದೂ ಇದೂ ಬೇಡ್ವಾ" ಅಂತಾ ಪುಸಲಾಯಿಸಿದಳು. ಏನೇನು ಬೇಕೋ ಅದನ್ನೆಲ್ಲಾ ಕೊಂಡ್ಕೊಂಡು ಬಂದ್ಲು. ಅದರಲ್ಲಿ ಸ್ಲೀವ್‌ಲೆಸ್ ಬ್ಲೌಸ್, ಜೀನ್ಸ್ ಪ್ಯಾಂಟ್ ಎಲ್ಲಾ ಸೇರ್ಕೊಂಡಿತ್ತು ಅಂತಾ ಬೇರೆ ಹೇಳ್ಬೇಕಾಗಿಲ್ಲ ಅಲ್ವಾ. ವೀಸಾ ಪಾಸ್ ಪೋರ್ಟ್‌ಹಣನ್ನೆಲ್ಲಾ ಚಟ್ಟಿಗರಿಸಿ ಬಿಟ್ಳು.

ಆ ಕಡೆಯಿಂದ ರಾಮಕೃಷ್ಣ ಪಾಸ್‌ಪೋರ್ಟ್ ರೆಡಿಯಾಯ್ತಾ ಎಂದು ಮೋರ್ಚಿಂಗ್ ಬಾರಿಸಿದ. ಕನಕಲಕ್ಷ್ಮಿಗೆ ಏನೂ ಮಾತನಾಡಲು ತೋಚದೆ ಮುಂದಿನವಾರ ಬರುತ್ತೆ ಅಂತಾ ಸುಳ್ಳು ಉರುಳಿಸಿದಳು. ಸರಿ ಹೇಗೋ ಕ್ಯೂ ನಿಂತು, ಯಾರ್ಯಾರ್ನೋ ಹಿಡ್ದು ಪಾಸ್‌ಪೋರ್ಟ್ ಕೈಗೆ ಬಂದಾಗ ಕೆನಡಾಕ್ಕೆ ಏರ್‌ಟಿಕೆಟ್ಟು ಸಿಕ್ಕಿದಷ್ಟೇ ಸಂತಸದಿಂದ ಶಾವಿಗೆ ಪಾಯಸ ಮಾಡ್ಕೊಂಡು ಕುಡ್ದು ಗಂಡನಿಗೂ ಹೊಟ್ಟೆ ತುಂಬಾ ಅದನ್ನೇ ಕುಡಿಸಿದ್ಲು ಅವತ್ತಿನ ಊಟ ಅದೇ!

ಮತ್ತೂ ಒಂದು ತಿಂಗಳು ಕಳೆದೇ ಹೋಯ್ತು. ರಾಮಕೃಷ್ಣನಿಂದ ಫೋನ್ ಬಾರದಿದ್ದಾಗ ಬೆಂಗಳೂರಿನಲ್ಲಿ ಕೂತು ಏನು ಮಾಡೋದು ಎಂದು ಯೋಚಿಸಿ ಊರಬಸ್ಸು ಹತ್ತಿದಳು. ಊರಿಗೆ ಹೋದದ್ದೇತಡ "ಏನೇ ಕನಕಲಕ್ಷ್ಮೀ ಕೆನಡಾಕ್ಕೆ ಹೋಗ್ತೀನಿ ಅಂತಾ ಸಂತೆಮರಳ್ಳಿ ಬಸ್ ಹತ್ತಿಬಿಟ್ಯಾ?" ಎಂದು ರೇಗಿಸಿದಾಗ ಹೋಗಲಾರದ ನಿರಾಸೆ, ಕಿಚಾಯಿಸಿದವರ ಕುಹಕದ ನುಡಿಗೆ ಕೋಪ ಬಂದು ಅವರ ಮುಂದೆ ಪಾಸ್‌ಪೋರ್ಟ್ ಹಿಡಿದಾಗ ಕಿಚಾಯಿಸಿದವರ ಬಾಯಿಗಳು ಬಂದ್ ಆಗಿದ್ದವು. ನಾಲ್ಕಾರುದಿನವಿದ್ದು ಬೆಂಗಳೂರಿಗೆ ಬಂದು ರಾಮಕೃಷ್ಣನ ಫೋನಿಗೆ ಕಾದಳು. ಬರೇ ಕ್ಷೇಮ ಸಮಾಚಾರದ ವಿಚಾರ ವಿರುತ್ತಿತ್ತೇ ವಿನಃ ಕನಕಲಕ್ಷ್ಮಿಯನ್ನು ಕರೆಯದಿದ್ದುದು ನಿರಾಸೆ ತರಿಸಿತ್ತು. ರಾಮಕೃಷ್ಣ ಕಡೆಗೂ ಒಂದುದಿನ ಫೋನ್ ಮಾಡಿದಾಗ, "ನೋಡು ಕನಕಲಕ್ಷ್ಮೀ ಸ್ವಾತಿ ಬಾಣನ್ತನಕ್ಕೆ ನಿನ್ನನ್ನೇ ಕರೆಸ್ಕೋ ಬೇಕು ಅಂದ್ಕೊಂಡಿದ್ದೆ. ಆದ್ರೆ ಸ್ವಾತಿಗೆ ಅಬಾರ್ಷನ್ ಆಗೋಯ್ತು. ಅವಳು ಆಸ್ಪತ್ರೆಯಿಂದ ನಿನ್ನೆತಾನೇ ಬಂದ್ಲು. ಇನ್ನೂ ಹದಿನೈದು ದಿವಸ ರೆಸ್ಟ್ ತಗೊಳ್ಳಲಿ. ನಂತರ ಫೋನ್ ಮಾಡ್ತೇನೆ. ಮನೆಕಡೆ ಹುಷಾರು" ಎಂದು ರಾಮಕೃಷ್ಣ ಹೇಳಿದಾಗ ಕನಕಲಕ್ಷ್ಮಿಗೇ ನಿಜಕ್ಕೂ ಅಬಾರ್ಷನ್ ಆದರೀತಿಯಾಗಿತ್ತು.

ಊರಲ್ಲೆಲ್ಲಾ ಕೆನಡಾಕ್ಕೆ ಹೋಗುತ್ತೇನೆಂದು ಹೇಳಿದ್ದ ಕನಕಲಕ್ಷ್ಮಿ ಬೆಂಗಳೂರಿನ ಮನೆಬಿಟ್ಟು ಅತ್ತಿತ್ತ ಓಡಾಡಲಾರದೆ ವಿಲಿವಿಲಿ ಒದ್ದಾಡತೊಡಗಿದಳು.

❖❖❖

ಗುಳು ಗುಳು ಗುಮ್ಮ

❖ ತುರುವೇಕೆರೆ ಪ್ರಸಾದ್

ನಮ್ಮೂರ ಗಣಪತಿ ಜಾತ್ರೆಯ ಸಂದರ್ಭದಲ್ಲಿ ಬಾಯಿ ಚಪಲ ತಡೆಯಲಾರದೇ ರಸ್ತೆ ಬದಿಯ ಪಾನೀಪೂರಿ ಚಪ್ಪರಿಸಿದ್ದರ ಪರಿಣಾಮ ಹೊಟ್ಟೆಯಲ್ಲಿ ಗುಳುಗುಳು ಶುರುವಾಯಿತು. ಈ ಗುಳು ಗುಳು ನಿಲ್ಲಿಸಲು ದಾಳಿಂಬೆ ಸಿಪ್ಪೆ, ಸೀಬೆ ಚಿಗುರಿನ ಕಷಾಯ, ಬ್ಲಾಕ್ ಟೀ, ನಿಂಬೆ ಷರಬತ್ತು ಮುಂತಾದ ಮನೆ ಮದ್ದು ಉಪಚಾರಗಳು ನಡೆದವು. ಜೊತೆ ಜೊತೆಗೆ ಆಲೋಪತಿ, ನಾಟಿ, ಆಯುರ್ವೇದಿಕ್, ಹೋಮಿಯೋಪತಿ ವಿಧಾನದ ಆಂಟಿ ಗುಳ್ ಗುಳ್ ಗುಳಿಗೆಗಳನ್ನು ಗುಳುಂ ಮಾಡಿದ್ದೂ ಆಯಿತು. ಈ ಎಲ್ಲಾ ರಣ ವೈದ್ಯದ ಪರಿಣಾಮ ಹೊಟ್ಟೆಯಲ್ಲಿ ಗುಳುಗುಳು ಏನೋ ನಿಂತಿತು. ಆದರೆ ಮತ್ತೊಂದು ಹೊಸ ಸಮಸ್ಯೆ ಶುರುವಾಯಿತು. ಹೊಟ್ಟೆಯ ಯಾವುದೋ ಮೂಲೆಯಲ್ಲಿ ಗಾಳಿಗುಳ್ಳೆ ರೂಪು ಗೊಂಡು ಹೊಕ್ಕುಳಬಳ್ಳಿ ಹಾಯ್ದು ಕರುಳೆಲ್ಲಾ ಸುತ್ತಿ ಆಸನದ ತುದಿಯಲ್ಲಿ ಭೋರ್ಗರೆ ಯುತ್ತಾ ಮೋಕ್ಷ ಕಾಣುವಾಗ ಉಂಟಾಗುತ್ತಿದ್ದ ಬ್ರಹ್ಮಾನಂದ ಸಂಪೂರ್ಣವಾಗಿ ನಿಂತು ಹೋಯಿತು. ಕೆಳಮುಖವಾಗಿ ಪ್ರವಹಿಸುತ್ತಿದ್ದ ಗಾಳಿ ಮೇಲ್ಮುಖವಾಗಿ ಚಲಿಸಲಾರಂಭಿಸಿ ಢರ್ ಢರ್ ತೇಗು ಷುರುವಾಯಿತು. ರಬ್ಬರ್ ಟ್ಯೂಬಿನಂತಿದ್ದ ಹೊಟ್ಟೆ ತನ್ನ ಬಳುಕುವಿಕೆ ಕಳೆದುಕೊಂಡು ಬೆನ್ನಿಗೆ ಕಚ್ಚಿ ಕೂತಂತೆ ಹೊಕ್ಕಳ ಸುತ್ತ ಯಾರೋ ಇಕ್ಕಳ ಹಾಕಿ ಎಳೆದಂತೆ ಸೆಳೆತ ಷುರುವಾಯಿತು. ಮತ್ತೆ ಡಾಕ್ಟರ ಬಳಿ ಓಡಿದೆ. ಡಾಕ್ಟರು ಗ್ಯಾಸ್ಟ್ರಿಕ್ಕಿಗೆ ಮಾತ್ರೆ ಕೊಟ್ಟರು. ಆಮೇಲೆ ಬ್ಲಡ್, ಯೂರಿನ್ನು, ಸ್ಟೂಲ್ಸ್ ಟೆಸ್ಟುಗಳನ್ನೂ ಮಾಡಿಸಿ ಅಂದರು. ಅದೂ ಆಯಿತು. ಆಮೇಲೆ ಕಲ್ಚರ್ ಟೆಸ್ಟ್ ಕೂಡಾ ಆಯಿತು. ಆಮೇಲೆ ಹೊಟ್ಟೆಯಲ್ಲಿನ ಜಂತು, ಲಾಡಿ ಹುಳುಗಳಿಗೆ ಸದ್ಗತಿ ದೊರಕಿಸಿದ್ದಾಯಿತು. ಭಯೋತ್ಪಾದಕರಂತೆ ಹೊಟ್ಟೆಯಲ್ಲಿ ಹಾವಳಿ ಮಾಡುತ್ತಿರುವುದು ಬ್ಯಾಸಿಲಿಸ್‌ಗಳಿರಬಹುದು ಎಂದು ಶಂಕಿಸಿ ಅದಕ್ಕೆ ಚಿಕಿತ್ಸೆಯೂ ಆಯಿತು. ಕಡೆಗೆ ಹೊಟ್ಟೆಯೊಳಗೆ ಪೈಪ್ ತೂರಿಸಿ ಎಂಡೋಸ್ಕೋಪಿ ಮಾಡಿಸಿದ್ದೂ ಆಯಿತು. ಯಾವ ಪ್ರಯೋಜನವೂ ಆಗಲಿಲ್ಲ. ಎಲ್ಲಾ ನಾರ್ಮಲ್ ಅಂತಲೇ ಬಂತು. ಆದರೆ ಹೊಕ್ಕುಳಲ್ಲಿ ಕ್ಯಾಟರ್‌ಪಿಲ್ಲರ್‌ಗೆ ಕಟ್ಟಿದ ರಬ್ಬರ್ ಎಳೆದಂತೆ ಸೆಳೆತ ಮಾತ್ರ ಹೋಗಲೇ ಇಲ್ಲ. ವೈದ್ಯಕೀಯ ತಪಾಸಣೆಗಳು ನಾರ್ಮಲ್ ಆಗಿದ್ದರ ಜೊತೆಗೆ ನನ್ನ ಊಟ, ತಿಂಡಿ, ರೇಗುವುದು, ಬಯ್ಯುವುದು ಇತರೆ ಎಲ್ಲಾ ಚಾಳಿಗಳೂ ನಾರ್ಮಲ್ ಆಗಿದ್ದನ್ನು ಗಮನಿಸಿದ ನನ್ನ ಹೆಂಡತಿ

ನಿಮಗೆ ಯಾವ ದೊಡ್ಡ ರೋಗವೂ ಇಲ್ಲ, ಹೊಟ್ಟೆಯಲ್ಲಿ ಏನೋ ಇದೆ ಅಂತ ಅಂದ್ಕೊಂಡಿದ್ದೀರ ಅಷ್ಟೆ ಇದೊಂತರ ಮನೋದೈಹಿಕ ಅಂದ್ರೆ ಸೈಕೋಸೋಮ್ಯಾಟಿಕ್ ಡಿಸೀಸ್ ಅಂತ ಸರ್ಟಿಫಿಕೇಟ್ ಕೊಟ್ಟು ತನ್ನ ಪಾಡಿಗೆ ತಾನು ನಿರಾಳವಾಗಿಬಿಟ್ಟಳು

ಆದರೆ ಈ ಹೊಟ್ಟೆ ಅನ್ನುವ ಬ್ರಹ್ಮಾಂಡದಲ್ಲಿ ಎಲ್ಲೋ ಒಂದು ಕಡೆ ಏನೋ ಯಡವಟ್ಟಾಗಿದೆ ಎಂಬ ಅನುಮಾನ ನನ್ನನ್ನು ಕಾಡುತ್ತಲೇ ಇತ್ತು. ವೈದ್ಯಕೀಯ ಸಂಶೋಧನೆಗೆ ನನ್ನ ಹೊಟ್ಟೆ ಒಂದು ದೊಡ್ಡ ಸವಾಲು ಎನಿಸುತ್ತಿತ್ತು. ಈಗಾಗಲೇ ಪಥ್ಯ ಪಥ್ಯ ಎಂದು ವಡೆ, ಮಸಾಲೆ ದೋಸೆ, ಗೋಬಿ, ಬೋಂಡ ಇವುಗಳ ಸಾಮೀಪ್ಯವಿಲ್ಲದೆ ಹೊಟ್ಟೆ ಕರಗಿ ಬಡವಾಗಿ ಹೋಗಿತ್ತು. ಇದನ್ನು ಹೀಗೇ ಬಿಡಬಾರದೆಂದು ಮತ್ತೊಬ್ಬ ವೈದ್ಯರ ಬಳಿಗೆ ಹೋದೆ. ಅವರು ನನ್ನ ಹೊಟ್ಟೆಯನ್ನೆಲ್ಲಾ ಮೈದಾ ಹಿಟ್ಟಿನಂತೆ ನಾದಿದರು. ಅನಂತರ ತಮ್ಮ ಪರಿಣಿತ ವ್ಯಾಖ್ಯಾನವನ್ನು ಉದುರಿಸಿದರು. ಮೇಲ್ನೋಟಕ್ಕೆ ಇದು ಹೊಟ್ಟೆಯ ಸಮಸ್ಯೆ ಅಂತ ನಿಮಗೆ ಅನಿಸುತ್ತೆ. ಆದರೆ ಇದು ಬೇರೇ ಏನೋ ಸಮಸ್ಯೆ ಇರಬಹುದು. ಲಿವರ್‌ನಲ್ಲೋ, ಕಿಡ್ನಿಯಲ್ಲೋ, ಪ್ರಾಸ್ಟೇಟ್ ನಲ್ಲೋ ಏನಾದರೂ ಪ್ರಾಬ್ಲಮ್ ಆದರೂ ಹೀಗೆ ನೋವು ಸೆಳೆತ ಬರುತ್ತೆ. ಯಾವುದಕ್ಕೂ ಒಂದು ಸ್ಕ್ಯಾನಿಂಗ್ ಮಾಡಿಸಿಬಿಡಿ ಎಂದ್ರು. ಸರಿ. ಇಷ್ಟೆಲ್ಲಾ ಆಗಿದೆ ಇದೂ ಒಂದು ಆಗಿ ಹೋಗಲಿ ಅಂತ ಮರುದಿನ ತುಮಕೂರಿಗೆ ಹೋದೆ

ನಾನು ಬಸ್ ಹತ್ತುವ ಮುಂಚೆ ನನ್ನ ಆತ್ಮೀಯ ಗೆಳೆಯ ಪರಮೇಶಿ ಒಂದಿಷ್ಟು ಸಲಹೆಗಳನ್ನು ನೀಡಿದ್ದ. ಬಸ್ ನಲ್ಲಿ ಹೋಗುತ್ತಾ ಚನ್ನಾಗಿ ನೀರು ಕುಡಿದುಕೊಂಡು ಹೋಗು, ಬ್ಲಾಡರ್ ತುಂಬಿದ್ರೆ ಸ್ಕ್ಯಾನಿಂಗ್ ವ್ಯೂ ತುಂಬಾ ಕ್ಲಿಯರ್ ಆಗಿರುತ್ತೆ ಅಂತ. ಸರಿ ಎಂದು ನಾನು ಎರಡು ಲೀಟರ್ ಬಿಸ್ಲೇರಿ ವಾಟರ್ ಬಾಟಲನ್ನು ಬ್ಯಾಗಿನಲ್ಲಿ ಹಾಕಿಕೊಂಡೆ. ಕೆ.ಬಿ. ಕ್ರಾಸ್ ನಿಂದ ತುಮಕೂರಿನವರೆಗೆ ಉದ್ದಕ್ಕೂ ಗಟ ಗಟ ಎಂದು ಬಾಟಲೆತ್ತಿ ನೀರು ಖಾಲಿ ಮಾಡಿದೆ. ಬಸ್ ಇಳಿದ ಕೂಡಲೇ ಒಂದು ಎಳನೀರು ಸೇವನೆಯೂ ಆಯಿತು. ಆಟೋ ಸ್ಟ್ಯಾಂಡಿನಿಂದ ಸ್ಕ್ಯಾನಿಂಗ್ ಸೆಂಟರ್‌ಗೆ ಬರುವ ವೇಳೆಗೆ ಬ್ಲಾಡರ್ ಸಿಡಿದು ಹೊಗುತ್ತೋ ಏನೋ ಎನ್ನುವಂತಾಗಿತ್ತು. ಸೀದಾ ರಿಸೆಪ್ಷನ್ ಹತ್ತಿರ ಓಡಿ ಬಂದೆ. ನಮ್ಮೂರ ವೈದ್ಯರು ನೀಡಿದ್ದ ಚೀಟಿ ಕೊಟ್ಟೆ, ಅಲ್ಲಿದ್ದ ತ್ರಿವಕ್ರೆ 25 ನೇ ನಂಬರ್ ಟೋಕನ್ ಕೊಟ್ಟಳು. ಎಷ್ಟನೇದು ಒಳಗಿದೆ ಎಂದು ಕೇಳಿದೆ. ಎರಡನೇಯದು ಅಂದ್ಲು. ಜೀವ ಧಡ್ ಅಂದಿತು. ಅಂದ್ರೆ ಇನ್ನೂ 22 ಜನ ಒಳಹೋಗಿ ಬರಬೇಕು. ಮೈ ಗಾಡ್ ಅಲ್ಲಿ ತನಕ ಈ ಬ್ಲಾಡರ್ ಗತಿ? ಒಂದು ಕ್ಷಣವೂ ತಡೆಯಲಾಗುವುದಿಲ್ಲ ಎನಿಸಿ ಪಕ್ಕದ ಟಾಯ್ಲೆಟ್‌ಗೆ ಹೋಗಿ ಹಗುರಾಗಿ ಬಂದೆ

ಅಲ್ಲಿ ಕುಳಿತಿದ್ದ 22 ಜನರಲ್ಲಿ ಹೆಚ್ಚಿನವರು ಗರ್ಭಿಣಿಯರು ಮತ್ತು ಕಿಡ್ನಿ ಕಲ್ಲಿನ ಸಮಸ್ಯೆಯಿಂದ ಬಳಲುತ್ತಿರುವವರೇ ಎಂದು ಗೊತ್ತಾಯಿತು. ಅಲ್ಲಿ ಕೂತು ಏನು ಮಾಡುವುದು ಎಂದು ಈಚೆ ಬಂದೆ. ಪೇಟೆಯೆಲ್ಲಾ ಸುತ್ತಾಡಿದೆ. ಬಾಯಾರಿಕೆ ಯಾಗುತ್ತದೆಂದು ಯರ್‍ರಾಬಿರ್‍ರಿ ನೀರು ಕುಡಿಯುವ ಹಾಗಿರಲಿಲ್ಲ, ಬ್ಲಾಡರ್ ತುಂಬಿ ಮತ್ತೆ

ಖಾಲಿ ಮಾಡಬೇಕಾಗಿ ಬಂದರೆ ಏನು ಮಾಡುವುದು ಎಂಬ ಭಯ ಕಾಡುತ್ತಲೇ ಇತ್ತು. ಸಿಟಿಯಲ್ಲಿ ತಕ್ಷಣ ಶೌಚಾಲಯಗಳು ಕಣ್ಣಿಗೆ ಬೀಳುವುದಿಲ್ಲವಾದುದರಿಂದ ಒಂದರ್ಧ ಗಂಟೆ ತಡೆಹಿಡಿಯಬಹುದು ಎಂಬ ಧೈರ್ಯವೂ ಇತ್ತು. ಕೆಲವು ಸಲ ನನಗೆ ಟೆನ್ಷನ್‌ನಿಂದಲೇ ಬ್ಲಾಡರ್ ತುಂಬಿದ ಅನುಭವಗಳಾಗಿದ್ದವು. ಅಂತಹ ಪರಿಸ್ಥಿತಿ ಬಾರದಿರಲಿ ದೇವರೇ ಎಂದು ಬೇಡಿಕೊಂಡೆ

ತುಮಕೂರಿನ ರಸ್ತೆ ರಸ್ತೆ ಗಲ್ಲಿ ಗಲ್ಲಿಗಳನ್ನೆಲ್ಲಾ ಸರ್ವೆ ಮಾಡಿದ ಮೇಲೆ ಹೋಟೆಲೊಂದರಲ್ಲಿ ಊಟ ಕತ್ತರಿಸಿದೆ. ಚನ್ನಾಗಿ ನೀರು ಕುಡಿದು ಮತ್ತೆ ಸ್ಕ್ಯಾನಿಂಗ್ ಸೆಂಟರ್‌ನತ್ತ ನಡೆದು ಬಂದೆ. ಆ ವೇಳೆಗೆ ಮತ್ತೆ ಅಲ್ಲಿ ಹತ್ತಾರು ಹೊಸ ಗಿರಾಕಿಗಳು ಹಾಜರಿದ್ದರು. ಹಳಬರು ಹಾಗೇ ಮುಖ ಹಿಂಡಿಕೊಂಡು ಪ್ಯಾಂಟ್ ಜಿಪ್ ಮುಟ್ಟಿ ನೋಡಿಕೊಳ್ಳುತ್ತಾ ಒದ್ದಾಡ್ತಿದ್ರು. ಯಾಕೆ ಲೇಟು ಅಂತ ವಿಚಾರಿಸಿದೆ. ಡಾಕ್ಟ್ರು ಊಟಕ್ಕೆ ಹೋಗಿದಾರೆ ಅಂತ ಗೊತ್ತಾಯ್ತು. ಈ ಹಳಬರು ತುಂಬಿದ ಬ್ಲಾಡರ್ ಸಿಡಿಯುವ ಒತ್ತಡಕ್ಕೆ ಸಿಕ್ಕಿ ಪರದಾಡುತ್ತಿದ್ದರು. ಯೂರಿನ್ ಖಾಲಿ ಮಾಡುವಂತೆಯೂ ಇಲ್ಲ, ಹಿಡಿದಿಡುವಂತೆಯೂ ಇಲ್ಲ, ಅಂತಹ ತ್ರಿಶಂಕು ಸ್ಥಿತಿ. ಅಕಸ್ಮಾತ್ ಯಾರಾದರೂ ಮೇಲೆದ್ದರೆ ಸ್ವಾಗತಕಾರಿಣಿ ದಯವಿಟ್ಟು ಯಾರೂ ರೀಸೆಸ್‌ಗೆ ಹೋಗಬೇಡಿ ಡಾಕ್ಟರ್ ಈಗ ಬರ್ತಾರೆ ಅಂತ ಗಂಟೆ ಗಂಟೆಗೆ ಉಲಿತಾನೇ ಇದ್ದಳು.

ಈ ಮಧ್ಯೆ ಒಂದು ಬದಿಯಲ್ಲಿ ಮೂಲೆಯಲ್ಲಿ ಕುಳಿತಿದ್ದ 25ರ ಯುವತಿಯು ತನ್ನ ಪಕ್ಕದಲ್ಲಿದ್ದ ಪುಟ್ಟ ಹುಡುಗನೊಬ್ಬನಿಗೆ ನೀರು ಕುಡಿಸಲು ಹರ ಸಾಹಸ ಮಾಡುತ್ತಿದ್ದಳು. ಹುಡುಗ ನೀರು ಕುಡಿಯಲ್ಲ ಅಂತ ರಚ್ಚೆ ಮಾಡುತ್ತಿದ್ದ. ಯುವತಿ ಸುಂದರಳಾಗಿದ್ದುದರಿಂದ ಮತ್ತು ನನ್ನನ್ನು ಆಕರ್ಷಿಸಿದ್ದರಿಂದ ಆ ಹುಡುಗನಿಗೆ ಸಮಾಧಾನ ಮಾಡುವ ನೆಪದಲ್ಲಿ ಅತ್ತ ಹೊರಟೆ. ಆ ಪುಟ್ಟ ಹುಡುಗನದು ಏನೋ ಕಿಬ್ಬೊಟ್ಟೆ ನೋವಿನ ಸಮಸ್ಯೆಯಂತೆ. ಯಾಕೆ ಹೀಗೆ ಹಠ ಮಾಡ್ತಿದಾನೆ ಅಂತ ವಿಚಾರಿಸಿದೆ. ನೋಡಿ ಇವನು ನಮ್ಮಕ್ಕನ ಮಗ, ನೀರು ಕುಡಿಯಲ್ಲ, ರೀಸಸ್ ಮಾಡ್ಬೇಕು ಅಂತ ಹಠ ಮಾಡ್ತಿದಾನೆ ಅಂತ ಆ ಯುವತಿ ಹುಡುಗನನ್ನು ಬೈದಳು

ಪಾಪ ತುಂಬಾ ಅರ್ಜಂಟ್ ಅನಿಸ್ತಿದೆಯೇನೋ. ಡಾಕ್ಟರ್ ಬರೋದು ಲೇಟಾಗಬಹುದು ಒಂದ್ಸಾರಿ ಮಾಡ್ಲಿ ಬಿಡಿ ಅಂತ ನಾನು ಹುಡುಗನ ಪರ ವಹಿಸಿ ಮಾತಾಡಿದೆ. ಅಯ್ಯೋ ಈಗ ಅರ್ಧ ಗಂಟೆ ಕೆಳಗೆ ಚಡ್ಡೀಲೇ ಮಾಡ್ಕೊಂಡಿದ್ದ ಅಂತ ಮುಖ ಹಿಂಡಿದಳು ಹುಡುಗಿ. ಯಾಕೆ ಅಂದೆ ನಾನು. ಇವನು ಅಳ್ತಿದ್ದನ್ನು ನೋಡಿ ಆ ರಿಸೆಪ್ಷನಿಸ್ಟ್ ಎಂಬ ಹಿಡಿಂಬೆ, ಹುಶ್, ಅತ್ರೆ ದಪ್ಪ ಸೂಜೀಲಿ ಚುಚ್ಚಿಸ್ತೀನಿ ಅಂತ ಕಣ್ಣು ಬಿಟ್ಟು ಹೆದರಿಸಿದ್ಲು ಅಷ್ಟೆ ಇವನು ಚಡ್ಡಿಲೇ ಮಾಡ್ಕೊಂಡ. ಮತ್ತೆ ಬ್ಲಾಡರ್ ತುಂಬೋದು ಬೇಡ್ವಾ ಹೇಳಿ. ನನಗಂತೂ ಇಲ್ಲಿ ಕಾದು ಕಾದು ಸಾಕಾಗಿ ಹೋಗಿದೆ ಅಂತ ಅವಳು ತೀರಾ ಅರ್ಜಂಟಾದವಳಂತೆ ಗೊಣಗಿದಳು.

ಅಯ್ಯೋ ಪಾಪ ಅನಿಸ್ತು. ಈ ಡಾಕ್ಟ್ರು ಒಳ್ಳೆ ಸುಂದರವಾದ ಹುಡುಗಿಯನ್ನು ಸ್ವಾಗತಕಾರಿಣಿಯಾಗಿ ನೇಮಿಸಬಾರದಲ್ಲ ಅನಿಸಿತು. ಅದರಿಂದ ಬ್ಲಾಡರ್ ಪ್ರಾಬ್ಲಮ್ ಮತ್ತೂ ಅಕ್ಯೂಟ್ ಆಗುತ್ತಿತ್ತೇನೋ ಅನೋ ಅನುಮಾನ ಹಿಂದೇನೇ ಬಂತು. ಅಲ್ಲೇ ಆ ಹುಡುಗಿಯ ಪಕ್ಕದಲ್ಲೇ ಕೂತೆ. ಏನು ಪುಟ್ಟ ನಿನ್ನ ಹೆಸರು ಅಂತ ಕೇಳಿದೆ, ಅಪ್ಪಿ ಎಂದಿತು. ಅಪ್ಪಿ ಭಾರೀ ಒಳ್ಳೆಯವನು ನೀರಿನ ಬಾಟಲು ಅವನ ಕೈಯಲ್ಲೇ ಕೊಡಿ ಅವನೇ ಕುಡೀತಾನೆ ಅಲ್ವಾ ಅಪ್ಪಿ ಅಂತ ಪೂಸಿ ಹೊಡೆದೆ. ಅಪ್ಪಿ ಹೂ ಎಂಬಂತೆ ತಲೆಯಾಡಿಸಿದ. ಅಷ್ಟರಲ್ಲಿ ಡಾಕ್ಟರು ಬಂದರು. ನಾನು ಹುಡುಗಿಯ ಪಕ್ಕ ಬೆಚ್ಚಗೆ ಕೂತೆ. ಹುಡುಗಿಯೂ ಅಪ್ಪಿಯ ಚಿಂತೆ ಬಿಟ್ಟಂತೆ ಕಂಡಿತು.

ನನ್ನ ಸರದಿ ಬಂದಾಗ ಒಳಗೆ ಹೋದೆ. ಡಾಕ್ಟರ್ ನನ್ನ ತಪಾಸಣೆ ಷುರು ಮಾಡಿದರು. ಯಾಕೆ ನೀರು ಕುಡಿದಿಲ್ವ ಅಂದ್ರು, ಕುಡಿದಿದ್ದೆ ಸರ್ ಅಂದೆ. ನಡ್ಕೊಂಡ್ ಬಂದ್ರಾ ಅಂತ ಕೇಳಿದ್ರು. ಹೌದು ಅಂದೆ, ಅದಿಕ್ಕೆ ಮತ್ತೆ ಬಿಸಿಲಿಗೆ ನೀರು ಆವಿಯಾಗಿ ಹೋಗಿದೆ ಬ್ಲಾಡರ್‌ತನಕ ಬಂದೇ ಇಲ್ಲ ಅಂತ ನಕ್ಕರು. ಹುಡುಗಿ ಪಕ್ಕ ಕೂತಿದ್ದಕ್ಕೆ ಸಣ್ಣಗೆ ಬೆವರಿ ಆವಿಯಾಗಿದೆ ಅಂತ ನಾನೂ ಹೇಳಲಿಲ್ಲ, ಅವರೂ ಕೇಳಲಿಲ್ಲ. ಇನ್ನೊಂದು ಬಾಟಲು ನೀರು ಕುಡಿಯಿರಿ ಆಮೇಲೆ ಟ್ರೈ ಮಾಡೋಣ ಅಂತ ಆಚೆ ಕಳಿಸಿದರು. ನಾನು ಆಚೆ ಬಂದೆ. ಅಪ್ಪಿ ಕುರ್ಚಿ ಕೆಳಗೆ ಬಾಟಲು ಇಟ್ಟು ಟಿ.ವಿ. ನೋಡ್ತಿದ್ದ. ನಾನು ಸೀದ ಆ ಬಾಟಲು ಎತ್ತಿ ಗಟ ಗಟ ಅಂತ ಕುಡಿದು ಡರ್ ಅಂತ ತೇಗಿದೆ. ಮತ್ತೆ ಅರ್ಧ ಗಂಟೇಲಿ ಯಶಸ್ವಿ ಸ್ಕ್ಯಾನಿಂಗ್ ಆಯಿತು, ಡಾಕ್ಟ್ರು ಕಿಡ್ನಿ ಗಾಲ್ ಬ್ಲಾಡರ್,ಲಿವರ್, ಪ್ರಾಸ್ಟೇಟ್ ಎಲ್ಲಾ ನಾರ್ಮಲ್ ಆಗಿದೆ ಏನೂ ಯೋಚನೆ ಮಾಡಬೇಡಿ ಹೋಗಿ ಅಂದ್ರು, ಮತ್ತೆ ಟಾಯ್ಲೆಟ್‌ನಲ್ಲಿ ಹಗುರಾಗಿ ಖುಷಿಯಿಂದ ಈಚೆ ಬಂದೆ. ಅಪ್ಪಿ ಹಿಂದಿನಿಂದ ಓಡಿ ಬಂದ. ಅಂಕಲ್ ಅಂಕಲ್ ಮನೆಗೆ ಹೊರಟ್ರಾ ಅಂತ ಕೇಳಿದ. ಹೂ ಪುಟ್ಟ ನಿಂದು ಸ್ಕ್ಯಾನಿಂಗ್ ಆಗೋ ತನಕ ಪಿಸ್ ಮಾಡಬೇಡ ಎಂದೆ. ತುಂಬಾ ಅರ್ಜಂಟಾಗಿತ್ತು ಅಂಕಲ್, ಚಿಕ್ಕಿ ಬಿಡ್ಲಿಲ್ಲ ಅದಿಕ್ಕೆ ಅಂದ. ನನಗೆ ಗಾಭರಿಯಾಗೆ ಅದಿಕ್ಕೆ ಅಂತ ಕೇಳಿದೆ. ಮತ್ತೆ ಮತ್ತೆ ನೀರಿನ ಬಾಟ್ಲಲ್ಲೇ ಮಾಡ್ಬಿಟ್ಟೆ ಅಂದ. ಥೂ ನಿನ್ನ ಎಲ್ಲಿ ಆ ಬಾಟಲು ಅಂತ ಕೇಳಿದ್ರೆ ಅದನ್ನ ನೀವೇ ಗಟ ಗಟ ಅಂತ ಎತ್ತಿ ಕುಡುದ್ರಲ್ಲಾ ಅಂತ ಚಪ್ಪಾಳೆ ತಟ್ಟಿ ನಕ್ಕ. ಉಂಡದ್ದೆಲ್ಲಾ ಬಾಯಿಗೆ ಬಂದಂತಾಗಿ ಚರಂಡಿಯ ಕಡೆಗೆ ಓಡಿದೆ.

ನನಗೆ ಹೊಕ್ಕುಳ ಬಳ್ಳಿಯ ಸೆಳೆತ ಕಮ್ಮಿಯಾಗಿದೆ. ಗುಳು ಗುಳು ಗುಮ್ಮ ಮಾಯವಾಗಿದೆ ಅದು ಡಾಕ್ಟರ್ ನನ್ನ ತಲೆಯಲ್ಲಿದ್ದ ಅನುಮಾನದ ಹುಳ ತೆಗೆದುಹಾಕಿದ್ದರಿಂದಲೇ ಅಥವಾ ಅಪ್ಪಿಯ ಮೂತ್ರ ಚಿಕಿತ್ಸೆಯ ಪ್ರಭಾವವೋ ಇನ್ನೂ ಗೊತ್ತಾಗಿಲ್ಲ.

❖❖❖

ಶ್ರಾವಣ ಮಾಸದ, ಮಾಸದ ನೆನಪು

✤ ಬೇಲೂರು ರಾಮಮೂರ್ತಿ

ಶ್ರಾವಣ ಮಾಸ ಬಂದಾಗ, ಕೈಗೊಂದು ಚೊಂಬು ಸಿಕ್ಕಾಗ, ಅಂತ ಸಂಪತ್ತು ಸ್ನಾನಕ್ಕೆ ಹೋದ. ಮೊದಲನೇ ಶ್ರಾವಣ ಶನಿವಾರ. ಚೊಂಬೋ, ಪಂಚಪತ್ರೆನೋ ಕೈಲಿ ಹಿಡಿದು ವೆಂಕಟೇಶಾಯ ಮಂಗಳಂ, ಶ್ರೀನಿವಾಸಾಯ ಮಂಗಳಂ ಅಂತ ನಾಮದೇವರ ನಾಮ ನಾಲಿಗೆ ಮೇಲೆ ನಲಿದಾಡಿಸಿ ಪಡಿ ಬೇಡ ಬೇಕು. ಹಾಗೆ ದೇವರ ಮುಂದೆ ನಿಂತು ಪಡಿ ಬೇಡಿದಾಗ ಅನುಸೂಯಮ್ಮ ಒಂದೆರಡು ಹಿಡಿ ಅಕ್ಕಿ, ಒಂದು ರೂಪಾಯಿ ನಾಣ್ಯ ಹಾಕಿದರು. ಮೂರು ಪ್ರದಕ್ಷಿಣೆ ಹಾಕಿ ದೇವರಿಗೆ ನಮಸ್ಕರಿಸಿ, ಪಂಚಪಾತ್ರೆನ ಇನ್ನೇನು ಕೆಳಗಿಡಬೇಕು ಅಂದು ಕೊಂಡಾಗ ಅನುಸೂಯಮ್ಮ "ಇದೇನು ಪಂಚಪಾತ್ರೆ ಕೆಳಗೆ ಇಡ್ತಾ ಇದೀರ ಹೋಗಿ ಒಂದು ನಾಲ್ಕು ಮನೆ ಪಡಿ ಬೇಡ್ಕೊಂಡು ಬರದಿದ್ರೆ ಶ್ರೇಯಸ್ಸಲ್ಲ, ಹೋಗಿ ಈ ಬೀದೀಲಿರೋ ಮನೇಲಾದ್ರೂ ಬೇಡ್ಕೊಂಡು ಬನ್ನಿ" ಅಂದರು ನೋಡು ಇದು ಹೊಸ ಏರಿಯಾ. ಯಾರಿಗೂ ಪರಿಚಯವಿಲ್ಲ, ಅದೂ ಅಲ್ದೆ ಇದು ಹೈಟೆಕ್ ಏರಿಯಾ. ಯಾರಿಗೂ ಪಡಿ ಬೇಡೋ ವಿಚಾರ ಗೊತ್ತಿರಲ್ಲ ಅಂದರೂ, ಅನಸೂಯಮ್ಮ ನಮ್ಮ ಪದ್ಧತಿ ನಾವು ಬಿಡೋಕಾಗಲ್ಲ ಅಂತ ಬಾಗಿಲಿಂದಾಚೆ ಅಟ್ಟಿದರು. ಸಂಪತ್ತುಗೆ ಬಹಳ ಕಸಿವಿಸಿಯಾಯಿತು. ಕೆಂಪಂಚಿನ ಪೀತಾಂಬರದ ಪಂಚೆ, ಮೇಲೆ ಅದೇ ಬಣ್ಣದ ಶಲ್ಯ, ಕರೀಮುಖಕ್ಕೆ ಬಿಳೀ ವಿಭೂತಿ, ಕೆಂಪುನಾಮ, ಹುಡುಗರು ಹೆಂಗಸರೂ ಹೆದರಿಕೊಳ್ಳೋಕೆ ಇದಕ್ಕಿಂತ ಬೇರೆ ವೇಷ ಬೇಕೇ.

ಸಂಪತ್ತು ಎದುರು ಮನೆಗೆ ಹೋದರು. ನಾಯಿ ಜೋರಾಗಿ ಬೊಗುಳಿತು ಹೆದರಿದರು. ಹೆಜ್ಜೆ ಹಿಂದಕ್ಕಿಡಬೇಕೇ ಮುಂದಕ್ಕೆ ಇಡಬೇಕೇ ಗೊತ್ತಾಗಲಿಲ್ಲ, ಮತ್ತೆ ನಾಯಿ ಬೊಗಳಿತು. ನಾಯಿ ಕಾಣ್ತಿಲ್ಲ ಬರೀ ಬೊಗಳುವಿಕೆ ಮಾತ್ರ ಕೇಳ್ತಿದೆ. ಹಿಂದೆಯೇ ಮಕ್ಕಳು ನಗುವ ಸದ್ದು. ನಾಯಿ ಬೊಗಳುವಿಕೆ, ಮಕ್ಕಳ ನಗು ಜೊತೆಜೊತೆಯಾಗಿ ಬಂದವು. ನೋಡಿದರೆ ನಾಯಿ ಬೊಗಳೋ ಕ್ಯಾಸೆಟ್ ಹಾಕಿದ್ದಾರೆ. ಯಾರೋ ಹೆಂಗಸು ಒಳಗಿನಿಂದ ಬಂದರು. ಯಾರಪ್ಪಾ ಅಂದರು. ಸಂಪತ್ತು ಪೆದ್‌ಪೆದ್ದಾಗಿ ಶ್ರೀನಿವಾಸಾಯ ಮಂಗಳಂ ಅಂದರು. ಆಕೆ ಏನು ಮಾಡಬೇಕು ಅಂತ ಕೇಳಿದರು. ಇದಕ್ಕೆ ಅಕ್ಕಿ ದುಡ್ಡು ಹಾಕಬೇಕು ಅಂದು ಪಂಚಪಾತ್ರೆ ತೋರಿಸಿದರು. ಆಕೆ ಸಿಟ್ಟಾಗಿ ಯಾಕೆ ಬೆಲ್ಲ ಬದನೇಕಾಯಿ ತೆಂಗಿನಕಾಯಿ ಎಲ್ಲ ಬೇಡ್ವಾ.... ಕೊಟ್ರೆ ಇಲ್ಲೇ ಅಡಿಗೆ ಮಾಡ್ಕೊಂಡು ಊಟ ಮಾಡಿಬಿಡ್ತೀಯಾ ಅಂದು ರಪ್ಪಂತ ಬಾಗಿಲು ಹಾಕಿಕೊಂಡು ಒಳಗೆ ಹೋದರು. ಸಂಪತ್ತು ಪೆಚ್ಚಾಗಿ ಇನ್ನೊಂದು ಮನೆಗೆ ಹೋದರು.

ಬಾಗಿಲಿನಲ್ಲೇ ಯಜಮಾನರು ಸಿಗರೇಟ್ ಸೇದ್ತಾ ಕೂತಿದ್ದರು. ಸಂಪತ್ತು ಶ್ರೀನಿವಾಸಾಯ ಮಂಗಳಂ ಅಂದರು. ಯಜಮಾನರು ಒಂದು ತರಹ ನೋಡಿದರು. ನಂತರ ಕೈಲಿದ್ದ ಸಿಗರೇಟ್ ನೆಲದ ಮೇಲೆ ಹಾಕಿ ಕಾಲಿನಿಂದ ಹೊಸಕಿ 'ಏನು' ಅಂದರು. ಇದಕ್ಕೆ ಅಕ್ಕಿ, ದುಡ್ಡು ಹಾಕಿ ಅಂದರು ಸಂಪತ್ತು. ಎರಡೆರಡೂ ಇಲ್ಲ ಅಕ್ಕಿಬೇಕೋ, ದುಡ್ಡು ಬೇಕೋ ಅಂತ ಕೇಳಿದರು. ಸಂಪತ್ತು ನಿಮ್ಮಿಷ್ಟ ಅಂದರು. ಅವರು ಅಕ್ಕಿನೇ ಹಾಕಿದರು. ಯು ಲುಕ್ ಟು ಬಿ ಎನ್ ಎಜುಕೇಟೆಡ್....ವ್ಹಾಟ್ ಈಸ್ ದಿ ಪ್ರಾಬ್ಲಂ ಅಂತ ಕೇಳಿದರು. ಇದು ನಮ್ಮ ಮನೆ ಪದ್ಧತಿ, ಶ್ರಾವಣಮಾಸದಲ್ಲಿ ಎಲ್ಲಾ ಶನಿವಾರಗಳೂ ನಾವು ಹೀಗೆ ಪಡಿ ಬೇಡಬೇಕು ಅಂದರು. ಹೆಂಡತಿ ಒಳಗಿಂದ ಭಿಕ್ಷದವರ ಹತ್ರ ಏನ್ರೀ ನಿಮ್ಮ ಮಾತು ಅಂತ ಕಿರುಚಿದ್ದಕ್ಕೆ ಅವರು ಒಳಗೆ ಹೋದರು.

ಸಧ್ಯ ಇವನೊಬ್ಬನಿಗಾದರೂ ಅರ್ಥ ಆಯ್ತು ಅಂದ್ಕೊಂಡು ಸಂಪತ್ತು ಇನ್ನೊಂದು ಮನೆಗೆ ಹೋದರು. ಆಕೆ "ಅಯ್ಯೋ ಪಾಪ ನೋಡೋಕೆ ಚೆನ್ನಾಗಿದ್ದೀರ ಭಿಕ್ಷೆ ಬೇಡೋಕ್ಕೆ ಏನ್ ಬಂತು ಗ್ರಹಚಾರ. ಒಂದ್ ನಿಮಿಷ ಇರಪ್ಪ ಅಂದು ಒಳಗೆ ಹೋಗಿ ಹಿಂದಿನ ದಿನದ ಅನ್ನ ಸಾರು ತಂದು ಪಾತ್ರೆ ಇದೆಯಾ ಅಂತ ಕೇಳಿದರು. ಸಂಪತ್ತುಗೆ ಸಿಟ್ಟು ಬಂದರೂ ಅಕ್ಕಿ, ದುಡ್ಡು ಕೊಡಿ ಅಂದರು. ಆಕೆಗೆ ಸಿಟ್ಟು ಬಂತು. ಕೊಟ್ಟಿದ್ದು ತಗೊಳಯ್ಯ, ನೀನು ಕೇಳಿದ್ದು ನಾವು ಕೊಡಬೇಕಾ ಅಂತ ರೇಗಿದರು. ಸಂಪತ್ತು ಇನ್ನೇನೋ ಹೇಳೋದ್ರಲ್ಲಿದ್ದಾಗ ಬಾಯ್ ಮುಚ್ಕೊಂಡು ಹೋಗು ಅಂದು ಬಾಗಿಲು ತೋರಿಸಿದರು. ಏನಪ್ಪ ಇದು ಗ್ರಹಚಾರ ಅನಸೂಯಂಗೆ ಹೇಳಿದರೆ ಅರ್ಥ ಆಗಲ್ಲ ಅಂತ ಬಯ್ದುಕೊಂಡೇ ಇನ್ನೊಂದು ಮನೆಗೆ ಹೋದರು. ಸ್ವಲ್ಪ ವಯಸ್ಸಾದವರು ಒಳಗಿಂದ ಬಂದಾಗ ಸಂಪತ್ತು ಶ್ರೀನಿವಾಸಾಯ ಮಂಗಳಂ ಅಂದರು. ಅವರು ನಗುತ್ತಾ ಓ ಶ್ರಾವಣ ಶನಿವಾರ ಅಲ್ವ ಬಂದೆ ಒಂದು ನಿಮಿಷ ಅಂದು ಒಳಗೆ ಹೋಗಿ ಅಕ್ಕಿನೂ, ದುಡ್ಡು ಕೊಟ್ಟರು- ಸಧ್ಯ ಈ ಮನೇಲಿ ನನ್ನ ಮರ್ಯಾದೆ ಉಳೀತು ಅಂದ್ಕೊಂಡು "ನಾನು ಈ ರೋಡಲ್ಲಿ ನಾಲ್ಕನೇ ಮನೆಗೆ ಹೊಸದಾಗಿ ಬಂದಿದೀವಿ ನಾಗಮಂಗಲ ನಮ್ಮೂರು. ನರಸಿಂಹಯ್ಯ ನಮ್ತಂದೆ, ನಾಗಮ್ಮ ನಮ್ತಾಯಿ, ಅನಸೂಯ ನನ್ನ ಹೆಂಡ್ತಿ ಆನಂದ, ಆರತಿ ನನ್ನ ಮಕ್ಕಳು. ಅವಿನಾಶ್, ಆತ್ರೇಯ-ಅರುಂಧತಿ ನನ್ನ ಮೊಮ್ಮಕ್ಕಳು ಅಂದರು. ಅವರು ನಕ್ಕು ನಿಮ್ಮ ಹೆಸರೇ ಹೇಳಲಿಲ್ಲ ಅಂದಾಗ ಸಂಪತ್ತು ನಕ್ಕು "ಸಂಪತ್ತು" ಅಂದರು ಆಯ್ತು ಹೋಗಿ ಬನ್ನಿ ಅಂದು ಬಾಗಿಲು ತೋರಿಸಿದರು. ಸಧ್ಯ ಇನ್ನೊಂದೆರಡು ಮನೆ ಹೀಗೇ ಸಿಕ್ಕಿಬಿಟ್ರೆ ಸಾಕಪ್ಪಾ ಅಂದುಕೊಂಡು ಇನ್ನೊಂದು ಮನೆಗೆ ಹೋದರು. ಬಾಗಿಲು ತೆಗೆದಿತ್ತು, ಒಳಗೆ ನುಗ್ಗೇ ಬಿಟ್ಟರು. ಕೋಣೇಲಿ ಹುಡುಗಿಯೊಬ್ಬಳು ಡ್ರೆಸ್ ಮಾಡ್ಕೊತಾ ಇದ್ಲು ಅದು ಡ್ರೆಸ್ಸಿಂಗ್ ಮಿರರಲ್ಲಿ ಕಾಣ್ತಿತ್ತು ಶ್ರೀನಿವಾಸಾಯ ಮಂಗಳಂ ಅಂದರು ಆ ಹುಡುಗಿ ಗಾಭರಿಯಿಂದ ಅರೆಬರೆ ಉಡುಪಿನಲ್ಲೇ ಹೊರಬಂದು ಸಂಪತ್ತುನ ನೋಡಿ ಗಹಿಗಹಿಸಿ ನಕ್ಕಳು ಇಬ್ಬರ ನಡುವೆ ಅರೆಬೆತ್ತಲೆಗೆ ಪೈಪೋಟಿ ನಡೆದ ಹಾಗಿತ್ತು. ಸಂಪತ್ತು ಶ್ರೀನಿವಾಸಾಯ ಮಂಗಳಂ ಅಂದಿದ್ದು ಆ ಹುಡುಗಿಗೆ ತಮಾಷೆಯಾಗಿ ಕಂಡಿರಬೇಕು. ಟೆಲ್ ಎಗ್ಯೆನ್ ಅಂದಳು. ಸಂಪತ್ತು ಹೇಳಿದಾಗ ವಾಟ್ ಷುಡ್ ಐ ಡು ಅಂತ ಕೇಳಿದಳು. ಸಂಪತ್ತು ಪುಟ್ ರೈಸ್ ಅಂಡ್ ಮನಿ ಇನ್ ದಿಸ್ ಅಂದು ಪಂಚಪಾತ್ರೆ ತೋರಿದರು. ಆರ್ ಯೂ ಪೂರ್ ವೈ ಆರ್ ಯು ಬೆಗ್ಗಿಂಗ್ ಅಂತ ಕೇಳಿದಳು. "ಐ ಆಮ್ ನಾಟ್ ಬೆಗ್ಗಿಂಗ್" ಅಂದು ಶ್ರಾವಣ


ಮಾಸದ ಮಹತ್ವ ತಿಳಿಸಿದರು. ಆ ಹುಡುಗಿ ಐ ಡೋಂಟ್ ಕುಕ್ ಸೋ ನೋ ರೈಸ್. ಬಟ್ ಐ ಕೆನ್ ಗಿವ್ ಯು ಮನಿ ಅಂದು ಹತ್ತುರೂಪಾಯಿ ಹಾಕಿದಳು ಸಂಪತ್ತು ಹೊರಟಾಗ ಆ ಹುಡುಗಿ ಜಸ್ಟ್ ಎ ಮಿನಿಟ್ ಯು ಲುಕ್ ಸ್ಮಾರ್ಟ್ ಇನ್ ದಿಸ್ ಡ್ರೆಸ್ ಎಂದು ಮೂರು ಫೋಟೋ ತಗೊಂಡಳು. ಆರ್ ಯೂ ಕಮಿಂಗ್ ಟುಮಾರೋ ಆಲ್ಸೋ ಅಂತ ಕೇಳಿದಳು. ನೆಕ್ಸ್ಟ್ ಸಾಟರ್ಡೇ ಅಂದು ಸಂಪತ್ತು ಹೊರಟರು. ಆಕೆ ಟಾಟಾ ಮಾಡಿದಳು ಸಧ್ಯ ಇನ್ನೊಂದೆರಡು ಮನೆ ಮುಗಿದರೆ ಸಾಕಪ್ಪಾ ಅಂತ ಸಂಪತ್ತು ಹೊರಟರು. ಆ ಮನೆಯವರು ಕೆಲಸ ಮಾಡಿದರೇ ಭಿಕ್ಷೆ, ರಾತ್ರಿಯ ಪಾತ್ರೆ ತೊಳ್ಕೊಡು, ಇಲ್ಲ ಬಟ್ಟೆ ಇಸ್ತ್ರಿ ಮಾಡಿಕೊಡು, ಒಂದಿಷ್ಟು ಬಟ್ಟೆ ಒಗೆದುಕೊಡು ಅಂದರು ಸಂಪತ್ತು ಶ್ರಾವಣ ಮಾಸದ ವಿಚಾರ ತಿಳಿಸಿದರೂ ಅವರು ಕೇಳಲಿಲ್ಲ, ಸಾಕಪ್ಪಾ ಸಾಕು ಅಂದು ಕೊಂಡು ಸಂಪತ್ತು ಮನೆಗೆ ಬಂದರು.

ಲೇ ಅನಸೂಯ ಮುಂದಿನ ವಾರದಿಂದ ನನ್ನನ್ನು ಆಚೆ ಕಳಿಸಬೇಡ. ಪಡಿ ಬೇಡೋದೇನಿದ್ರೂ ಮನೇಲೇ ಅಂದರು. ಅವರು ಇನ್ನೇನು ಡ್ರೆಸ್ ಬದಲಾಯಿಸಬೇಕು ಅಂದುಕೊಂಡಾಗ ಬಾಗಿಲು ಸದ್ದಾಯ್ತು. ಬಾಗಿಲು ತೆಗೆದರೆ ಪೋಲೀಸು ಜೊತೆಗೆ ಹತ್ತುರೂಪಾಯಿ ಹಾಕಿದ ಹುಡುಗಿ. ಅವಳು ತಕ್ಷಣ "ಸೇಮ್ ಮ್ಯಾನ್...ಸೇಮ್ ....ಆಸ್ಕ್ ಹಿಂ..." ಅಂದಳು. ಪೋಲೀಸು "ರೀ ಬೆಳಗ್ಗೆ ನೀವು ಇವರ ಮನೆಗೆ ಭಿಕ್ಷೆ ಬೇಡಕ್ಕೆ ಹೋಗಿದ್ರಾ" ಅಂತ ಕೇಳಿದರು. ಅದಲ್ಲ ಸಾರ್ ಅಂತ ಸಂಪತ್ತು ಹೇಳೋಕೆ ಹೋದಾಗ "ಕೇಳಿದ್ದಕ್ಕೆ ಉತ್ತರ ಕೊಡ್ರೀ" ಅಂದರು ಸಂಪತ್ತು ಹೌದು ಅಂದರು "ಆಗ ಅವರ ಮನೇಲಿದ್ದ ಎಂಟು ಬಂಗಾರದ ಬಳೆ ತಗೋಂಡು ಬಂದ್ರಾ" ಅಂತ ಕೇಳಿದರು. ಸಂಪತ್ತು ಗಾಭರಿಯಿಂದ "ಸಾರ್ ನನ್ನ ಮಾತು ಕೇಳಿ ಇದು ಶ್ರಾವಣ ಮಾಸ...." ಅಂತ ಸಂಪತ್ತು ಬೇಗ ಬೇಗ ಹೇಳಿದರು. "ಓನ್ಲಿ ಹೀ ಕೇಮ್....ಹೀ ಮೈಟ್ ಹ್ಯಾವ್ ಟೇಕನ್ ಆಸ್ಕ್ ಹಿಮ್" ಅಂದಳು ಹುಡುಗಿ. "ಪೋಲೀಸು ನೋಡಿ..ಮರ್ಯಾದೆಯಾಗಿ ಬಳೆ ಕೊಟ್ಬಿಡಿ ಇಲ್ದಿದ್ರೆ" ಅಂದರು. ಅನುಸೂಯ ಗಾಭರಿಯಿಂದ "ನೋಡಿ ಅವರು ಯಾವ ಬಳೇನೂ" ತಂದಿಲ್ಲ, ಹಾಗೆಲ್ಲ ಬೇರೆಯವರ ಬಳೇನ ಮುಟ್ಟೊಲ್ಲ ಅವರು. ಇವತ್ತು ಶ್ರಾವಣ ಶನಿವಾರ ನೋಡಿ ನಾನೇ ಕಳಿಸಿದೆ ಅಂದರು "ಬಳೆ ಕದ್ಕೊಂಡು ಬನ್ನಿ ಅಂತನ" ಅಂತ ಕೇಳಿದರು ಪೋಲೀಸು. ಇಲ್ಲ ಇಲ್ಲ ಪಡಿ ಬೇಡೋಕೆ ಅದು ನಮ್ಮ ಪದ್ಧತಿ".

ನಮ್ಮ ಪದ್ಧತಿ ಏನು ಗೊತ್ತಾ, "ಮರ್ಯಾದೆಯಾಗಿ ಕೇಳೋದು, ಆಗಲೂ ಬಾಯಿ ಬಿಡದಿದ್ರೆ ಲಾಠಿ ರುಚಿ ತೋರಿಸೋದು. ಆಗಲೂ ಬಾಯಿಬಿಡದಿದ್ರೆ ಏರೋಪ್ಲೇನ್ ಹತ್ತಿಸೋದು" ಅಂದರು ಪೋಲೀಸು ಸಂಪತ್ತು ಸಿಟ್ಟಿನಿಂದ ಸರ್ ನಾನು ರಿಟೈರ್ಡ್ ಆಫೀಷಿಯಲ್ಲು ಸ್ವಲ್ಪ ಮರ್ಯಾದೆ ಕೊಟ್ಟು ಮಾತಾಡಿ. ನಿಮಗೆ ಅನುಮಾನ ಇದ್ದರೆ ನನ್ನ ಮನೆ ಹುಡುಕಿ...ಹಾಗೆಲ್ಲ ಮಾತಾಡಬೇಡಿ ಅಂದರು. ಇಬ್ಬರಿಗೂ ವಾದವಿವಾದ ನಡೀತು "ನೀವು ಒಳ್ಳೆ ಮಾತಿನಲ್ಲಿ ಹೇಳಲ್ಲ, ನಡೀರಿ ಸ್ಟೇಷನ್ನಿಗೆ" ಅಂದು ಪಂಚೆಗೆ ಕೈ ಹಾಕಿದರು ಪೋಲೀಸು. ಇರ್ರೀ ಡ್ರೆಸ್ ಬದಲಾಯಿಸಿ ಬರ್ತಿನಿ ಅಂದರು ಸಂಪತ್ತು. "ಬೇಡ..ನಮಗೆ ಹೊಡೆಯೋಕೆ ಈ ಡ್ರೆಸ್ ಅನುಕೂಲ. ಏಟಿನ ರುಚಿ ಚುರ್ ಅಂದರೆ ನೀವೇ ಬಾಯಿ ಬಿಡ್ತೀರ" ಅಂದರು. ಅಷ್ಟೊತ್ತಿಗೆ ಮನೇಲಿ ಗಲಾಟೆ ಷುರುವಾಯ್ತು ಆ ಬೀದಿಯರೆಲ್ಲ ಸಂಪತ್ತನ್ನು "ನೋಡಿ ಇವರು ಬೆಳಗ್ಗೆ ನಮ್ಮನೆಗೂ ಬಂದಿದ್ರು ನಮ್ಮನೇಲಿ ಏನೇನು ಹೋಗಿದೆಯೋ

ನೋಡ್ಕೊಬೇಕು'' ಅಂದು ಮನೆಗೆ ಓಡಿದರು. ಶ್ರಾವಣ ಮಾಸದ ಪಡಿ ಬೇಡೋ ಡ್ರೆಸ್‌ನಲ್ಲೇ ಸಂಪತ್ತನ್ನು ಪೋಲೀಸು ಎಳ್ಕೊಂಡು ಹೋದರು. ಜೊತೆಗೆ ಆ ಹುಡುಗಿನೂ. ಸಂಪತ್ತು ಅವಮಾನದಿಂದ ಕುಗ್ಗಿದರು ಸ್ವಲ್ಪ ದೂರ ಹೋದ ಮೇಲೆ ಆ ಹುಡುಗಿಯ ರೂಂ ಮೆಟ್ ಎದುರಾದಳು. ಆಗ ವಿಚಾರ ಸ್ಪಷ್ಟವಾಯಿತು. ರೂಂ ಮೆಟ್ ''ಬಳೆ ನಾನು ಹಾಕೊಂಡು ಹೋಗಿದ್ದೆ'' ಅಂದು ಬಳೆ ತೋರಿಸಿದಳು. ಎಲ್ಲರೂ ತಲೆ ತಗ್ಗಿಸಿದರು. ಹೆಣ್ಣು ಅನ್ನೋದನ್ನು ನೋಡದೇ ಆ ಹುಡುಗಿಗೆ ಕಪಾಳಕ್ಕೆ ಬಾರಿಸಿದರು ಸಂಪತ್ತು. ಎಲ್ಲರೂ ಐ ಆಮ್ ಸಾರಿ ಅಂದರು. ಪೋಲೀಸಿಗೆ ನೀವು ಸಂಜೆ ನಮ್ಮನೇಗೆ ಬನ್ನಿ ಬರುವಾಗ ಈ ಡ್ರೆಸ್ ಬಿಚ್ಚಿ ಮಾಮೂಲಿ ಡ್ರೆಸ್ಸನಲ್ಲಿ ಬನ್ನಿ ಅಂದರು ಸಂಪತ್ತು. ''ಯಾಕೆ ಸಾರ್'' ಅಂತ ಕೇಳಿದ್ದಕ್ಕೆ ''ಈಗ ಆ ಹುಡುಗಿಗೆ ಕೊಟ್ಟ ಏಟನ್ನು ನಿಮಗೂ ಕೊಡೋಕೆ...ಡ್ಯೂಟಿ ಮಾಡೋಕೆ ರೀತಿ ನೀತಿ ಬೇಡವೇನ್ರೀ'' ಅಂತ ರೇಗಿದರು. ಪೋಲೀಸ ಕನಿಕರದಿಂದ ''ಸರ್ ನಿಮ್ಹತ್ರ ಹೊಡೆಸ್ಕೊಳೋಕೆ ಸಂಜೆ ತನಕ ಯಾಕೆ ಕಾಯಬೇಕು. ಈಗಲೇ ಹೊಡೀರಿ ಸಾರ್ ಆಶೀರ್ವಾದ ಅಂದ್ಕೊತೀನಿ'' ಅಂದರು. ಅವರನ್ನು ತಿನ್ನೋ ಹಾಗೆ ನೋಡಿ ಮನೆಗೆ ಬಂದರು. ಅನಸೂಯಮ್ಮ ಹತ್ತಿರ ಬಂದು ''ಏನೂಂದ್ರೆ ಮುಂದಿನ ಶ್ರಾವಣ ಶನಿವಾರ'' ಅಂತ ಏನೋ ಹೇಳಕ್ಕೆ ಬಂದಾಗ ಸಂಪತ್ತು ''ನೀನು ಬಾಯಿ ಮುಚ್ಚು'' ಅಂದಿದ್ದು ಇಡೀ ಬೀದಿಗೆ ಕೇಳಿಸಿತು.

❖❖❖



ಆ ದಿನ ಈ ದಿನ

✧ ಆನಂದ

ಆಗಸ್ಟ್ 20. ಸಾಹಿತಿ ಶೇಷನಾರಾಯಣ ಅವರ 80ನೇ ಹುಟ್ಟುಹಬ್ಬಕ್ಕೆ ನಾವೆಲ್ಲ ಸೇರಿದ್ದೆವು-ಅಂದರೆ ಊಟಕ್ಕೆ. ''ಇಂದು 'ಅಂತರರಾಷ್ಟ್ರೀಯ ಸೊಳ್ಳೆ ದಿನ' ಎಂದು ನಿಮಗೆ ಗೊತ್ತುಂಟೊ?'' ಕೃಷ್ಣ ಸುಬ್ಬರಾವ್ ಕೇಳಿದರು.

ನನಗೆ ಯಥಾಪ್ರಕಾರ ಗೊತ್ತಿರಲಿಲ್ಲ.

ಅಂದರೆ ಸೊಳ್ಳೆಯ ಬಗ್ಗೆ ನನಗೆ ಏನೂ ಗೌರವ ಇಲ್ಲ ಎಂದೇನಿಲ್ಲ. ಹಾಡುತ್ತಾ ಬಂದು ಒಳ್ಳೆ ಜಾಗ ಆರಿಸಿ ದೇಹದ ಮೇಲೆ ಕುಳಿತು ಬೋರ್‌ವೆಲ್ ಮಾದರಿ ಕೊರೆಯುವ ಈ ಸೊಳ್ಳೆಯ ಹೆಸರಿನಲ್ಲಿ ಒಂದು ದಿನವೆ ಎಂದು ಬೆಕ್ಕಸ ಬೆರಗಾಗಿ ಮೂಗಿನ ಮೇಲೆ ಬೆರಳನ್ನಿಟ್ಟಾಗ ಅಲ್ಲಿ ಕುಳಿತಿದ್ದ ಸೊಳ್ಳೆಯೊಂದು ಗುಂಯ್ ಎಂದು ಹಾರಿ ಹೋಯಿತು.

'ಅಂತರರಾಷ್ಟ್ರೀಯ ಸೊಳ್ಳೆ ದಿನ' ಎಂದಾಗ ಯಾವುದು ಅಂತರರಾಷ್ಟ್ರೀಯ - ಸೊಳ್ಳೆಯೋ, ದಿನವೋ ಗೊತ್ತಾಗಲಿಲ್ಲ. ಸೊಳ್ಳೆ ಎಂದಾಗ ಯಾವ ಸೊಳ್ಳೆ ಮಲೇರಿಯಾ ಬರಿಸುವ ಸೊಳ್ಳೆಯೆ? ಫಿಲೇರಿಯಾ ಬರಿಸುವ ಪ್ರಬೇಧವೆ? ಅಥವಾ ಸಮಸ್ತ ಸೊಳ್ಳೆ ಪ್ರಬೇಧಗಳನ್ನು ಸೇರಿಸಿ ಒಂದು ಕಾಂಪೊಸಿಟ್ ದಿನವೇ? ಗೊತ್ತಾಗಲಿಲ್ಲ.

ಆದರೆ ಚಿಂತನೆಗೆ ದೂಡಿತು.

ಈಗ ಪ್ಲೇಗ್ ವಿರಳ. ಆದರೂ ಅದನ್ನು ಹರಡುವ ಇಲಿಗಳ ಹೆಸರಿನಲ್ಲಿ 'ಅಂತರರಾಷ್ಟ್ರೀಯ ಇಲಿಗಳ ದಿನ'ವನ್ನೇಕೆ ಆಚರಿಸಬಾರದು? ಇಲಿ ಎಂದ ಮೇಲೆ ಹೆಗ್ಗಣವನ್ನು ದೂರವಿರಿಸಲು ಸಾಧ್ಯವೆ? ಮೇರಾ ಭಾರತ್ ಮಹಾನ್‌ನಲ್ಲಿ ಹೆಗ್ಗಣಗಳು ಗೊಡೋನ್‌ಗಳಲ್ಲಿ, ಚರಂಡಿಗಳಲ್ಲಿ ಮಾತ್ರ ಕಾಣುತ್ತದೆ ಎಂದು ಹೇಳಲಾಗದು. ಪ್ರತಿ ಸರ್ಕಾರಿ ಇಲಾಖೆಯಲ್ಲೂ ವಿವಿಧ ಗಾತ್ರದ ಹೆಗ್ಗಣಗಳನ್ನು ನೋಡಬಹುದು.

ಅಂದಮೇಲೆ 'ಅಂತರರಾಷ್ಟ್ರೀಯ ಹೆಗ್ಗಣ ದಿನ' ಆಚರಿಸದೇ ಇರಲು ಸಾಧ್ಯವೇ? ಅಂದು ಬೇಕಾದರೆ ಸರ್ಕಾರ ನೆಗೋಷಿಯಬಲ್ ಇನಸ್ಟ್ರುಮೆಂಟ್ಸ್ ಕಾಯಿದೆ ಪ್ರಕಾರ ಸಾರ್ವತ್ರಿಕ ರಜೆಯನ್ನು ಘೋಷಿಸಬಹುದು. ಏಕೆಂದರೆ ಹೆಗ್ಗಣಗಳೂ ಸಾರ್ವತ್ರಿಕ ತಾನೆ? ಈ ಸಮಾರಂಭಕ್ಕೆ ಯಾವುದೇ ರಾಜಕಾರಣಿಯನ್ನು ತುಂಬು ಹೃದಯದಿಂದ ಮುಖ್ಯ ಅತಿಥಿಯನ್ನಾಗಿ ಕರೆಸಬಹುದು.

ಅಂ.ಹೆ.ದಿನದಂತೆ 'ತಿಗಣೆ ದಿನ' ಬೇಡವೆ? ಏಕೆಂದರೆ ಪ್ರಯಾಣ ಮಾಡುವಾಗ ನಮ್ಮನ್ನು ಚುಚ್ಚುವುದು ಬರೇ ಪ್ರಯಾಣ ದರವಲ್ಲ, ಸೀಟಿನಡಿ ಇರುವ ತಿಗಣೆ ಸಹ. ಜಿರಳೆ ಏನು ಪಾಪ ಮಾಡಿದೆ ಎಂದು ಅದನ್ನು ನಿರ್ಲಕ್ಷಿಸಲು ಸಾಧ್ಯ? ಅದಿಲ್ಲದ ಜಾಗ ಇದೆಯೆ? ಪಂಚತಾರಾ ಹೋಟೆಲಿನಿಂದ ಹಿಡಿದು ಪಂಚೆಯನ್ನೇ ಸೂರು ಮಾಡಿ ಮನೆ ಮಾಡಿಕೊಂಡಿರುವ ಗುಡಿಸಲಿನಲ್ಲಿ ಸಹ ವಿವಿಧ ಗಾತ್ರದ ಜಿರಳೆಗಳು ಸರಪರ ಓಡಾಡಿಕೊಂಡಿರುತ್ತವೆ. ಅಂದ ಹಾಗೆ ಗೌತಮ ಬುದ್ಧ ಆ ದುಃಖಭರಿತ ಮಹಿಳೆಗೆ 'ಸಾವಿಲ್ಲದ ಮನೆಯಿಂದ ಉಪ್ಪು ತಾ' ಎನ್ನುವ ಬದಲು 'ಜಿರಳೆ ಇಲ್ಲದ ಮನೆಯಿಂದ ಉಪ್ಪು ತಾ' ಎಂದಿದ್ದರೂ ಆಕೆ ಉಳ್ಳಾಲದಲ್ಲಿ ಠೇವಣಿ ಕಳೆದುಕೊಂಡ ಜೆಡಿಎಸ್ ನಂತೆ ಸೋಲುತ್ತಿದ್ದಳು. ಆದುದರಿಂದ 'ಅಂತರರಾಷ್ಟ್ರೀಯ ಜಿರಳೆ ದಿನ' ಆಚರಿಸಬಹುದು.

ಹಾಗೆಯೇ 'ಸರ್ಪ ದಿನ' ಸಹ ಆಚರಿಸಬಹುದು. ಯಾರ ನೆನಪಿನಲ್ಲಿ ಎಂದಿರಾ? ಹಸಿರು ಹಾಸಿನ ನೆಲದಲ್ಲಿರುವ ಹಸಿರು ಹಾವಿನಂತೆ ನಮ್ಮ ಸುತ್ತಮುತ್ತಲಿರುವ 'ಹಿತೈಷಿ ಮಿತ್ರರ' ನೆನಪಿನಲ್ಲಿ, ಅಂದರೆ Snake in the ಗ್ರಾಸ್ಸು.

ಅದೋ ನೋಡಿ. ಕತ್ತೆ ಕಿರುಚುತಿದೆ. ನಾನೂ ಇದ್ದೇನೆ ಎಂದು ಹೇಳಿಕೊಳ್ಳಲು. ಎಷ್ಟು ಭಾರ ಹೊರುತ್ತದೋ ಅಷ್ಟೇ ಮೂದಲಿಕೆಗೆ ಒಳಗಾಗಿರುವ ಮೂಕ ಪ್ರಾಣಿ. ಅನೇಕ ಉಗ್ರ ಹೋರಾಟಗಳಲ್ಲಿ ಕೊಂಡೊಯ್ಯುವ ಭಾರಿ ಮೆರವಣಿಗೆಗಳಲ್ಲಿ ಕತ್ತೆಯದೇ ಲೀಡಿಂಗ್ ಪಾತ್ರ. ಅದರ ಹಿಂದೆ ಇತರರು. ಇಷ್ಟು ಬಯೋ ಡಾಟಾ ಸಾಲದೆ 'ಅಂತರರಾಷ್ಟ್ರೀಯ ಕತ್ತೆ ದಿನ' ಆಚರಿಸಲು?

ಎಷ್ಟು ಚೆನ್ನಾಗಿ ಬಾಲ ಅಲ್ಲಾಡಿಸುತ್ತಿದೆ ನೋಡಿ ಇದು. ನೋಡಲು ಎರಡು ಕಣ್ಣುಗಳು ಸಾಲದು. ಕನ್ನಡಕವೂ ಬೇಕು. ಅದೇ ನಾಯಿ ಬಗ್ಗೆ ಹೇಳುತ್ತಿದ್ದೇನೆ. ನಿಷ್ಠಾವಂತ ಪ್ರಾಣಿ. ನಮ್ಮ ಹಿರಿಯ, ಕಿರಿಯ ಗೌರವಾನ್ವಿತ ನೇತಾಗಳು ಹೈ ಕಮಾಂಡ್/ಐ ಕಮಾಂಡ್ ಮುಂದೆ ಹೀಗೇ ಬಾಲ ಅಲ್ಲಾಡಿಸುತ್ತಾರೆ ಎಂದು ಎಲ್ಲ ಬಲ್ಲ ಮೂಲಗಳು ತಿಳಿಸುತ್ತವೆ. ಅವರೆಲ್ಲರ ನೆನಪಿನಲ್ಲಿ ನಾವು 'ಅಂತರಾಷ್ಟ್ರೀಯ ಶ್ವಾನ ದಿನ' ಆಚರಿಸೋಣ. 'ಅಂತರರಾಷ್ಟ್ರೀಯ ನಾಯಿ ದಿನ' ಎಂದು ಹೇಳಲು ಅದೇಕೋ ಮುಜುಗರ. ಶ್ವಾನ ದಿನಕ್ಕೆ ಹೈ ಕಮಾಂಡ್/ಐ ಕಮಾಂಡ್ ಖಂಡಿತ ಒಪ್ಪಿಗೆ ನೀಡುತ್ತದೆ.

ನೇತಾಗಳ ಬಗ್ಗೆ ಹೇಳುವಾಗ ಇನ್ನೊಂದು ವಿಷಯ ನೆನಪಿಗೆ ಬರುತ್ತದೆ. ಹಿಂದುಳಿದ/ ಹಿಂದುಳಿಯಲು ಬಯಸುವ/ ತುಳಿಸಿಕೊಂಡಿರುವ ಜನಗಳ ಬಗ್ಗೆ ಈ ಮಂದಿ ಅಪಾರವಾಗಿ ಕಣ್ಣೀರು ಸುರಿಸುತ್ತಾರೆ. ಈ ಕಣ್ಣೀರಿನಿಂದ ಸದಾ ಒದ್ದೆಯಾಗಿರುವ ಇವರ ಗೌರವಾರ್ಥ 'ಅಂತರರಾಷ್ಟ್ರೀಯ ಮೊಸಳೆ ದಿನ' ಆಚರಿಸಬಾರದೇಕೆ?

ಊಸರವಳ್ಳಿ ಕಾದಿದೆ. 'ಬಣ್ಣ ಬದಲಾಯಿಸುವುದರಲ್ಲಿ ನಾನೇ ಮೊದಲಿಗ ಎಂದುಕೊಂಡಿದ್ದೆ. ಆದರೆ ನಿಮ್ಮ ಅನೇಕ ನೇತಾಗಳನ್ನು ನೋಡಿದ ಮೇಲೆ ನಾನು ಅವರಂತೆ

ಬಣ್ಣ ಬದಲಾಯಿಸಿಕೊಳ್ಳಬೇಕೇನೋ ಎಂದೆನಿಸುತ್ತಿದೆ' ಎಂದು ಅದು ಹೇಳುವಂತಿದೆ. ಅಂತಹ ನೇತಾಗಳ ಗೌರವಾರ್ಥ 'ಅಂತರರಾಷ್ಟ್ರೀಯ ಊಸರವಳ್ಳಿ ದಿನ' ಆಚರಿಸೋಣವೆ?

Cat has nine lives ಎನ್ನುತ್ತಾರೆ. ಅಂದರೆ ಅದು ಅಷ್ಟು ಸುಲಭವಾಗಿ ಸಿಕ್ಕಿಬೀಳದ ಪ್ರಾಣಿ. ಅದು ಹೇಗೋ ತಪ್ಪಿಸಿಕೊಳ್ಳುತ್ತದೆ. ನಮ್ಮ ರಾಜಕಾರಣಿಗಳು ಹಾಗೆಯೇ ಅಲ್ಲವೆ? ಈ ಪಕ್ಷದಲ್ಲಿ ಸಾಯುವ ಬದಲು ಆ ಪಕ್ಷದಲ್ಲಿ ಸಲ್ಲಲು ಬಯಸುತ್ತಾರೆ. ಅಲ್ಲೂ ಸಾಯುವ ಪರಿಸ್ಥಿತಿ ಬಂದಾಗ ತಮ್ಮದೇ ಆದ ಪಕ್ಷ ಸ್ಥಾಪಿಸಿ ಬದುಕಿ ಉಳಿಯಲು ಪ್ರಯತ್ನಿಸುತ್ತಾರೆ. ಅಂತಹ ಮಹಾತ್ಮರ ನೆನಪಿನಲ್ಲಿ 'ಅಂತರರಾಷ್ಟ್ರೀಯ ಮಾರ್ಜಾಲ ದಿನ' ಆಚರಿಸೋಣವೆ? ಆ ಸಮಾರಂಭಕ್ಕೆ ಮಾರ್ಜಾಲ ಸನ್ಯಾಸಿಗಳನ್ನು ಹೃದಯಪೂರಕವಾಗಿ ಸ್ವಾಗತಿಸಬಹುದು.

ಗೋಮಾತೆಯನ್ನ ಮರೆತಿದ್ದೀರಾ ಎಂದಿರಾ? ಅದು ಹೇಗೆ ಸ್ವಾಮಿ ಸಾಧ್ಯ? ಟ್ರಾಫಿಕ್ ಪೋಲೀಸರೀಗ ನೆನಪಿಗೆ ಬರುತ್ತಿದ್ದಾರೆ. ಏನು ಸಂಬಂಧ ಎಂದಿರಾ? ಅಲ್ಲಾ ಸ್ವಾಮಿ ಬೀಡಾಡಿ ಹಸುವೊಂದು ರಸ್ತೆ ಸಂಚಾರವನ್ನು ನಿಲ್ಲಿಸುವಷ್ಟು ಸುಲಭವಾಗಿ ಬೇರೆ ಯಾರು ನಿಲ್ಲಿಸಬಹುದು? ಆದುದರಿಂದ ಟ್ರಾಫಿಕ್ ಪೋಲೀಸರು 'ಅಂತರರಾಷ್ಟ್ರೀಯ ಬೀಡಾಡಿ ಗೋ ದಿನ' ಆಚರಿಸಬಹುದು. ಆದರೆ ಇಂತಹ ಗೋಗಳು ಭಾರತದಲ್ಲಿ ಮಾತ್ರ ಕಾಣಸಿಗುವುದರಿಂದ ಇದನ್ನು 'ಅಂತರರಾಷ್ಟ್ರೀಯ ದಿನ' ಎಂದು ಸೆಲೆಬ್ರೇಟ್ ಮಾಡಲು ಸಾಧ್ಯವೇ? ಯೋಚಿಸಬೇಕು. ಹಸು ನಂತರ ಎಮ್ಮೆ ಅಲ್ಲವೆ? ದಪ್ಪ ಚರ್ಮದವರಿಗಾಗಿ 'ಅಂತರರಾಷ್ಟ್ರೀಯ ಎಮ್ಮೆ ದಿನ' ಬೇಡವೆ?

ಇನ್ನು ಕುದುರೆ.

ರೇಸ್‌ನಲ್ಲಿ ಗೆದ್ದ ತಕ್ಷಣ ಮನೆಯ ನೆನಪು ಮಾಡಿಕೊಂಡು, ಇನ್ನೊಂದು ಈವೆಂಟ್‌ಗೆ ಕಾಯದೆ ದುಡ್ಡು ಎಣಿಸಿಕೊಂಡು ಹೊರ ನಡೆಯುವಂತಹ ಸಮಯ ಪ್ರಜ್ಞೆ ತೋರುವ ಕುದುರೆ ಪ್ರಿಯರ ನೆನಪಿಗಾಗಿ 'ಅಂತರರಾಷ್ಟ್ರೀಯ ಜೂಜಿನ ಕುದುರೆ ದಿನ' ಆಚರಿಸಲು ಸಾಧ್ಯ. ಆದರೆ ಜೂಜಿನ ಕುದುರೆಗಳು ಹೇರಳವಾಗಿದ್ದರೂ ಅಂತಹ ಮಂದಿ ತೀರಾ ವಿರಳವಾದ್ದರಿಂದ ಸಮಾರಂಭ ನಡೆದರೆ ಕೋರಂ ಇಲ್ಲದಿರುವ ಸಾಧ್ಯತೆಯೇ ಹೆಚ್ಚು.

ಇನ್ನು ಕಾಲ್ ಸೆಂಟರ್ ನಿಶಾಚಾರರ ಹೆಸರಿನಲ್ಲಿ 'ಅಂತರರಾಷ್ಟ್ರೀಯ ಗೂಬೆ ದಿನ' ಆಗದೆ?

ಆದರೆ ಇವೆಲ್ಲ ಮನುಷ್ಯರು ಪ್ರಾಣಿಗಳ ಹೆಸರಿನಲ್ಲಿ ಆಚರಿಸಬಹುದಾದ ದಿನಗಳು. ಪ್ರಾಣಿಗಳು ಮನುಷ್ಯನ ಹೆಸರಿನಲ್ಲಿ ಆಚರಿಸಬಹುದಾದ ದಿನಗಳಾದರೆ ಒಂದೇ ದಿನ ಸಾಕು. ಅದೇ 'ಅಂತರರಾಷ್ಟ್ರೀಯ ಅತಿ ಕ್ರೂರ ಪ್ರಾಣಿ ದಿನ'. ಏಕೆಂದರೆ ಅ.ಕ್ರೂ.ಪ್ರಾ ಮಾನವ ತಾನೆ?

❖❖❖

ಸಾವಲ್ಲೂ ಸಜ್ಜಿಗೆ

❖ ಸಾಯಿಲಕ್ಷ್ಮಿ .ಎಸ್

ಆಶ್ರಮವಾಸಿ, ಆಧ್ಯಾತ್ಮ ಜೀವಿ ದೊಡ್ಡಪ್ಪನ ಸಾವು ಬೆರಗಾಗುವಂತೆ ಸಂಭವಿಸಿತು. ನೋಡಲು ಥೇಟ್ ಶಂಕರಾಚಾರ್ಯರಂತಹ ರೂಪಿನ ಅವರ ಒಳ್ಳೆಯ ನಿಲುವು, ಮೈ ಬಣ್ಣ ಮುಖದ ತೇಜಸ್ಸು ಅವರ ಇಡೀ ಋಷಿ ಜೀವನಕ್ಕೊಂದು ಮೆರಗು ತಂದು ಕೊಟ್ಟಿತ್ತು. ತಾವೇ ಒಗೆದು ಕಚ್ಚೆ ಹಾಕಿ ಉಡುತ್ತಿದ್ದ ಬಿಳಿಯ ಧೋತಿ ಅದಕ್ಕೊಪ್ಪುವ ಅಷ್ಟೇ ಮಿಂಚುವ ಬಿಳಿಯ ಮೇಲುಹೊದಿಕೆ ತೊಟ್ಟು ನಡೆದಾಡುವ ಭಂಗಿಯೂ ವಿಶಿಷ್ಟವೇ. ಸಂಸಾರವಂದಿಗರಾಗೂ ಸನ್ಯಾಸಿ ಜೀವನ, ಏಕಾಂತವಾಸ ಅವರದು. ದೊಡ್ಡಮ್ಮನಿದ್ದುದು ದೂರದ ಹರಿಹರದಲ್ಲಿ ಹಿರೀ ಮಗನ ಆರೈಕೆಯಲ್ಲಿ. ಅತಿವಾಚಾಳತ್ವದ ಅವರಿಗೂ, ನಮ್ಮ ದೊಡ್ಡಪ್ಪನಿಗೂ ಮಾತು ನಿಂತು ಹೋಗಿ ಹಲವಾರು ವರ್ಷಗಳೇ ಕಳೆದು ಹೋಗಿದ್ದವು. ಆದರೂ ಗಂಡ, ಮಗನ ಮನೆಗೆ ಪ್ರವಚನದ ನಿಮಿತ್ತ ಬರುತ್ತಾರೆಂದರೆ ಸಾಕು ದೊಡ್ಡಮ್ಮನ ಸಡಗರ ನೋಡಬೇಕು. ಥಳಗುಟ್ಟುವ ಮುಖವನ್ನು ಇನ್ನಷ್ಟು ತಿಕ್ಕಿ ತೊಳೆದು, ಕಾಸ್ ಅಗಲ ಕುಂಕುಮವಿಟ್ಟು, ಕೈ ತುಂಬಾ ಗಾಜಿನ ಬಳೆ ಏರಿಸಿ, ಕೆನ್ನೆ-ಕಾಲುಗಳಿಗೆ ಅರಿಶಿನ ಪೂಸಿ, ಮಲ್ಲಿಗೆ ಹೂ ಮುಡಿದು, ಅಂಚಿನ ರೇಷಿಮೆ ಸೀರೆ ಯುಟ್ಟು ಎದುರುಗೊಳ್ಳಲು ಸಿದ್ಧವಾಗುವರು. ಆಕ್ಷಣಕ್ಕೆ ಅವರಿಗೆ ಪತಿ ತನ್ನನ್ನು ಮಾತನಾಡಿಸುವುದಿಲ್ಲ ಎಂಬ ಸತ್ಯ ಹೊಳೆಯುತ್ತಲೇ ಇರಲಿಲ್ಲ.

ಛೇಡಿಸಲು ನಮ್ಮಲ್ಲಿ ಯಾರಾದರೂ

'ನಿಮಗೆ ದೃಷ್ಟಿ ತಾಕೋ ಹಾಗಿದೀರಿ'. ಅಂದರೆ ಸಾಕು ದೊಡ್ಡಮ್ಮ 'ದೃಷ್ಟಿ ಹಾಯಿಸಿದರಲ್ಲವೇ ತಾಕೋಕೆ' ಎಂದು ಬದಲು ಹೇಳುವಾಗಲಷ್ಟೇ ಅವರಿಗೆ ತೋಚುವುದು ವಾಸ್ತವ. ಆದರೂ ಕಂಗಳ ಗೆಲವು, ಮುಖದ ಚೆಲುವು ಮಾಸುತ್ತಿರಲಿಲ್ಲ. ಅವರ ಸುತ್ತ ಆಗಷ್ಟೇ ಮುತುವರ್ಜಿಯಿಂದ ತಯಾರಿಸಿದ ಪಾಯಸ, ಚಿತ್ರಾನ್ನ, ಹೋಳಿಗೆ, ಪಲ್ಯ, ಗೊಜ್ಜು, ಸಂಡಿಗೆ, ಬಾಳಕ, ಬಾಳೆ ಎಲೆಯೊಡನೆ ದೊಡ್ಡಪ್ಪನಿಗಾಗಿ ಕಾಯುತ್ತಿದ್ದವು.

ಇಂತಹ 'ದೃಷ್ಟಿ' ಪತ್ನಿಗೂ ಹಾಕದ ದೊಡ್ಡಪ್ಪ ಬಗೆ ಬಗೆಯ ಲೋಕಾರೂಢಿ ಮಾತುಗಳನ್ನಾಡುವರು. 'ವಯಸ್ಸಾದವರು, ಪೂರ್ತಿಯಾಗಿ ಬಾಗಿಲ ಚಿಲಕ ಹಾಕಿ ಮಲಗಬಾರದು. ಹಾಕಿದ ಹಾಗೂ ಇರಬೇಕು, ಅಪರೂಪದ ಸಂದರ್ಭದಲ್ಲಿ ಜೋರಾಗಿ ಗುದ್ದಿದರೆ ತೆಗೆದುಕೊಳ್ಳೋ ಹಾಗೂ ಇರಬೇಕು' ಅವರು ಈ ಮಾತುಗಳನ್ನು ಪಾಲಿಸುತ್ತಲೂ

ಇದ್ದರು. ಒಂಟಿಯಾಗಿದ್ದ ಅವರು ತಮ್ಮ ಅಡುಗೆ, ಕೆಲಸ 82ರ ಪ್ರಾಯದಲ್ಲೂ ಪರೆಯದ ಉತ್ಸಾಹವಲ್ಲಿ, ಶಿಸ್ತಿನಿಂದ ಮಾಡಿಕೊಳ್ಳುತ್ತಿದ್ದರು. ಗ್ರಂಥಗಳನ್ನು ಬರೆಯಲು ಕುಳಿತರೆ ತಪಸ್ಸಿಗೆ ಕುಳಿತಂತೇ – ಅಂತಹ ಧ್ಯಾನಸ್ಥಿತಿ. ತಮ್ಮ ವಸ್ತ್ರಗಳನ್ನು ತಾವೇ ಒಗೆದು ಕೊಳ್ಳುವಷ್ಟು ಅಚ್ಚುಕಟ್ಟು, ಬಂದು ಹೋದಲ್ಲೆಲ್ಲಾ, ನಾಲ್ಕೈದು ನ್ಯೂಸ್‌ಪೇಪರ್ ಹಾಳೆ ಹಿಡಿದು ಬರುವರು. ಉಪಹಾರವೋ, ಫಲಹಾರವೋ ಆದ ನಂತರ '20' ನಿಮಿಷಗಳ ಲಘು ವಿಶ್ರಾಂತಿಗೆ ದೇಹವನ್ನು ಒಡ್ಡಿ ಕೊಳ್ಳುವರು. ಆಗ ಹಾಸಿರುವ ಚಾಪೆ, ಕಾರ್ಪೆಟ್ ಮೇಲೆ ಈ ಪೇಪರ್ ಕೈ ಚೀಲದಿಂದ ತೆಗೆದು ಹಾಸಿ, ವಿಶ್ರಮಿಸುವರು. ವಾಪಸ್ಸು ಹೋಗುವಾಗ, ಅದನ್ನು ಮಡಿಸಿ, ಜೋಡಿಸಿ, ಜೋಪಾನವಾಗಿ ಜೊತೆಯಲ್ಲಿ ಒಯ್ಯಲು ಮರೆಯುತ್ತಿರಲಿಲ್ಲ. ಅಷ್ಟು ಓರಣ ಅವರ ಸ್ವಭಾವದಲ್ಲಿ.

ಇಂತಹ ದೊಡ್ಡಪ್ಪನನ್ನು ನೋಡಿಕೊಂಡು ಹೋಗಲು ಬೆಂಗಳೂರಿನಲ್ಲೇ ವಾಸಿಸುತ್ತಿದ್ದ ಮಗ, ಸೊಸೆ, ನಾವು ಆಗಾಗ ಹೋಗಿ ಬರುತ್ತಿದ್ದೆವು. ಇದ್ದಕ್ಕಿದ್ದ ಹಾಗೆ ಒಂದು ದಿನ ಸನ್ನತಿಗೆ ಸುಮಾ, ಪುಟ್ಟ ಮಗನೊಡನೆ ಮಾಡಿದ್ದ ತಿಂಡಿ ತುಂಬಿಕೊಂಡು, ಮಾವನನ್ನು ನೋಡಲು ಆಶ್ರಮಕ್ಕೆ ಬಂದಳು. ಬಾಗಿಲು ಬಡಿದಳು, ಕಾದಳು, ತೆರೆಯುವ ಸುಳಿವೇ ಕಾಣಲಿಲ್ಲ. ಆಗ ಮಗನನ್ನು ಹತ್ತಿಸಿ ಕಿಟಕಿಯಿಂದ ನೋಡುವಂತೆ ಮಾಡಿದಳು, 'ಅಜ್ಜನ' ಮಂಚಕ್ಕೆ ಕಟ್ಟಿದ ಸೊಳ್ಳೆಪರದೆ ಹಾಗೆ ಇದೆ, ಅಜ್ಜ ಎದ್ದೇ ಇಲ್ಲ ಅನ್ನಿಸುತ್ತೆ, ಎಂದು ಕೂಗಿದ ಆ ಪೋರ. ಸುಮಾಗೂ ಗಾಬರಿಯಾಯಿತು, ಬಲವಾಗಿ ಬಾಗಿಲು ದೂಡಿದರೆ, ಕಟ್ಟಿದ ಸೊಳ್ಳೆಪರದೆ ಹಾಗೆ ಇದ್ದು, ಮಾವ ನೆಲದ ಮೇಲೆ ಅಂಗಾತ ಮಲಗಿಬಿಟ್ಟಿದ್ದಾರೆ. ಹೃದಯ ಬಾಯಿಗೆ ಬಂದಂತಹ ಅನುಭವ. ಮೂಗಿನ ಹೊಳ್ಳೆಯಡಿ ಕೈಹಿಡಿದು ನೋಡಿದಳು. ಪ್ರಾಣ ಪಕ್ಷಿ ಹಾರಿ ಹೋಗಿರುವುದು ಅರಿವಿಗೆ ಬಂತು. ನಂತರ ಸಂಬಂಧಪಟ್ಟವರಿಗೆಲ್ಲಾ ಕರೆ ಹೋಯಿತು. ಹರಿಹರದಲ್ಲಿದ್ದ ದೊಡ್ಡಮ್ಮನಿಗೂ ಸುದ್ದಿ ಹೋಯಿತು. ಅವರು ಆಸೆಪಟ್ಟು, ಹಟ ಹಿಡಿದು, ಸಂಸಾರವೇ ಬೇಡವೆಂದ ದೊಡ್ಡಪ್ಪನನ್ನೂ ಅವರೇ ತನ್ನ ಕೊರಳಿಗೆ ಹಾರ ಹಾಕಬೇಕೆಂದು ಪಟ್ಟು ಹಿಡಿದು ಮದುವೆಯಾದವರು. ಆಕೆಗೆ ಜೀವ ಹೋದಂತಹ ಭಾವ. ಗಂಡ ಎಂದರೆ ಮಹಾ ಪ್ರೀತಿ, ಭಕ್ತಿ. ಎಂದೂ ಅವರಿಗೆ ತಾನು ಪರಿತ್ಯಕ್ತೆ ಎಂಬ ಆಲೋಚನೆ ಮೂಡೇ ಇರಲಿಲ್ಲ. ಹರಿಹರದಿಂದ ಅಳುತ್ತಳುತ್ತಾ ಓಡಿ ಬಂದರು. ರಾತ್ರಿ 8ರ ಹೊತ್ತಿಗೆ ಹಿರೀ ಮಗ, ಸೊಸೆ, ಮೊಮ್ಮಕ್ಕಳೊಂದಿಗೆ ಬಂದಿಳಿದ ದೊಡ್ಡಮ್ಮ, ಧೈರ್ಯವಾಗಿ, ಮಲಗಿಸಿದ್ದ ದೊಡ್ಡಪ್ಪನ ಬಳಿ ಕುಳಿತು, ಅಳುತ್ತಿರುವಾಗ ನಾವೆಲ್ಲಾ ಊಟವನ್ನು, ಬಾಳೆ ಎಲೆಯನ್ನು ಹಿಡಿದು ಪ್ರವೇಶಿಸಿದೆವು. ಸತ್ತವರ ಸಂಬಂಧಿಕರಿಗೆ ಹಸಿವು, ಬಾಯಾರಿಕೆ, ಬಾಯಿರುಚಿ ಹೆಚ್ಚೇ.

ಎಲ್ಲರೂ ಊಟ ಮುಗಿಸುವವರೆಗೂ, ದೊಡ್ಡಮ್ಮನ ದುಃಖದ ಕಟ್ಟೆ ನೆರೆ ಬಂದ ನದಿಯಂತಿತ್ತು. ಕ್ರಮೇಣ ಅದು ಕ್ಷೀಣಿಸುವಂತೆ, ದೊಡ್ಡಮ್ಮನ ಸಂಕಟದೊಡನೆ ಹಸಿವು ಸೇರಿ ಚುರುಗುಟ್ಟಿಸಲಾರಂಭಿಸಿತು. ಅವರಿಗೆ ರಾತ್ರಿ ಪ್ರತಿದಿನ ಫಲಾಹಾರ. 'ದೊಡ್ಡಮ್ಮ ನಿಮಗೇನು?' ಎಂದೆ. ಬಿಕ್ಕಳಿಸುತ್ತಾ 'ಅವರೇ ಹೋಗಾಯ್ತು, ಇನ್ಯಾಕೇ ಈ ಹಾಳು ಹೊಟ್ಟೆ ಚಿಂತೆ' ಎಂದರು.


ಅಷ್ಟೊಂದು ರುಚಿಪ್ರಿಯೆ ದೊಡ್ಡಮ್ಮನ ಬಾಯಲ್ಲಿ ಇಂತಹ ವೈರಾಗ್ಯದ ಮಾತೇ. ಶೋಭಿಸದು ಎನಿಸಿ ತುಸುಕಾಲ ಸುಮ್ಮನಿದ್ದೆ. ದೊಡ್ಡಮ್ಮನ ಅಳು ತಹಬದಿಗೆ ಬಂತು. 'ಸಾಯಿ' ಎಂದು ನನ್ನ ಕರೆದರು. ಏನು ಎಂಬಂತೆ, ಹುಬ್ಬೆತ್ತಿ ಪ್ರಶ್ನಿಸಿದೆ.

'ಒಂದು ಸ್ವಲ್ಪ ರವೆ ತೊಳೆಸಿಕೊಂಡು ಬಾರೆ' ಎಂದರು. 'ಆಯಿತು' ಎಂದು ತಲೆಯಾಡಿಸಿ ಎದ್ದೆ. ಅಷ್ಟರಲ್ಲಿ ದೊಡ್ಡಮ್ಮ 'ಹೇಗೆ ಮಾಡ್ತೀಯಾ ಹೇಳು?' ಎಂದರು. 'ಚಿರೋಟಿ ರವೆ ಹುರಿಸು, ಮಾಡಿ ತರ್ತೀನಿ'

'ಹಾಗಲ್ಲ ಅದು. ಬೆಣ್ಣೆ ಕಾಸಿದ ತುಪ್ಪ ಇದ್ರೆ, ಹಾಕಿ ಚಿರೋಟಿ ರವೆ, ಸಣ್ಣ ಉರೀಲಿ ಹುರೀಬೇಕು. ಆಯ್ತಾ, ಆಮೇಲೆ ಹಾಲು ಕಾಯಿಸಿ, ಅದಕ್ಕೆ ಸಕ್ಕರೆ ಬೆರೆಸಿ, ಕರಗೋವಾಗ, ಒಂದೆಸಳು ಒಳ್ಳೇ ಕಾಶ್ಮೀರಿ ಕೇಸರಿ ತೇಲಿ ಬಿಡು. ಬಣ್ಣ ಬಿಟ್ಟ ಮೇಲೆ, ಚಿಟಕಿ ಏಲಕ್ಕಿ ಪುಡಿ 'ಗಂ' ಅಂತಾ ಸೇರಿಸು. ಗೋಡಂಬಿ ಒಂದ್ನಾಲ್ಕು, ತುಪ್ಪದಲ್ಲಿ ಹುರಿದು ಹಾಕು, ರವೆ ಸೇರಿಸಿ, ಕಲಕಿ ಸಣ್ಣ ಉರೀಲಿ, ಮುಚ್ಚಿಡು. ಇಷ್ಟು ಸಾಕು, ನಂಗೆ ಇನ್ನೇನೂ ಬೇಡಾ, ಯಾರಿಗೆ ಸೇರತ್ತೇ? ಈ ದುಃಖದಲ್ಲಿ ವಯಸ್ಸಾದ ಜೀವ, ಪ್ರಾಣ ಇರಲೀಂತ ಬೇರೆಯವರಿಗೆ ಕೈಕಾಲು ಜಿಡಿಸಬಾರದು ನೋಡು ಅದಕ್ಕೇ, ಮೇಲು ತುಪ್ಪ ಅದೂ ಇದೂಂತ ತರೋಕೆ ಹೋಗಬೇಡಾ, ನನಗೆ ಗಂಟಲಿಂದ ಒಳಕ್ಕೆ ಇಳಿಯೊಲ್ಲ ಈ ಬೇಜಾರಲ್ಲಿ. ಪುನಃ ದೊಡ್ಡಮ್ಮ ಅಶ್ರುತಪ್ತರಾದರು. ಅವರಿಗೆ ಪ್ರಿಯಪತಿ ತಮ್ಮನ್ನು ಅಗಲಿದ ಸಂಕಟ ಒಂದೆಡೆಯಾದರೆ, ಮತ್ತೊಂದೆಡೆ ನಾನು ತೊಳೆಸುವ ರವೆ 'ಕೇಸರಿಬಾತ್' ಹಾದಿಯಲ್ಲಿ, ಪರಿವರ್ತನೆಯಲ್ಲಿ ಹದದಲ್ಲಿ ಕುಲಗೆಟ್ಟರೆ ಎಂಬ ಆತಂಕ.

ಆ ಕ್ಷಣಕ್ಕೆ ನಾನು ವಿಸ್ಮಯಗೊಂಡಿದ್ದು ಬದುಕಿನ ಅದ್ಭುತ ಜೀವಿಸುವ ಕಲೆಗಾರಿಕೆಗೆ, ಪ್ರತಿ ಜೀವಿಯ, ಬಾಳಿಗೆ ಮರಳುವ ಶಕ್ತಿಗೆ, ಆಸಕ್ತಿಗೆ, ಸ್ಮಶಾನ ವೈರಾಗ್ಯದ ತಾತ್ಕಾಲಿಕತೆಗೆ

❖❖❖



ಆಸ್ಪತ್ರೆಯಲ್ಲಿ.....!!

✣ ಓಂ ಪ್ರಕಾಶ್

ನಾನು ಕೆಲಸ ಮಾಡೋದು ಮಾರ್ಥಾಸ್ ಆಸ್ಪತ್ರೇಲಿ. ಮೆಡಿಸನ್ ವಿಭಾಗದಲ್ಲಿ ನಮ್ಮ ಸಂಗಡಿಗರ ಜೊತೆ ರೌಂಡ್ಸ್ ಮಾಡುವಾಗ ಹಲವಾರು ನಗೆ-ಚಟಾಕಿಗಳು ಸಿಡೀತಾ ಇರುತ್ತವೆ! ಇವುಗಳ ದೆಸೆಯಿಂದಲೇ ನಾವು ಆರೋಗ್ಯವಾಗಿರೋದು ಅಂತ ನನಗೆ ಹಲವಾರು ಸಲ ಅನ್ನಿಸುತ್ತೆ.

★★★

ಮೊನ್ನೆ ಔಟ್‌ಪೇಷೆಂಟ್ ವಿಭಾಗಕ್ಕೆ ಒಬ್ಬ ಬಂದ. ಅವನ ಫೈಲಿನಲ್ಲಿ, ಒಂದು ವರ್ಷದ ಹಿಂದೆ ಬಂದು ತೋರಿಸಿದ್ದ. ಆಗ ಡಾಕ್ಟರೊಬ್ಬರು ನ್ಯೂರೋಬಯಾನ್ ಮಾತ್ರೆ ಬರೆದು ಕೊಟ್ಟು, ಹದಿನೈದು ದಿನ ಆದ ಮೇಲೆ ಬನ್ನಿ ಎಂದಿದ್ದರು. ಈ ಭೂಪ, ಒಂದು ವರ್ಷದ ನಂತರ ಬಂದಿದ್ದ! 'ಅದೇ ಮಾತ್ರೆ ಬರೆದು ಕೊಡಿ ಡಾಕ್ಟ್ರೆ!' ಎಂದ. ನಾನು 'ಯಾಕೆ' ಅಂದೆ. 'ಅದರಿಂದ ಚೆನ್ನಾಗಿ ನಿದ್ರೆ ಬರುತ್ತೆ' ಅಂದ. ಸರಿ, ಅವನಿಗೆ ಯಾಕೆ ನಿದ್ದೆ ಕೆಡಿಸೋದು ಅಂತ ಬರೆದು ಕೊಟ್ಟೆ. ಈಗಲೂ ಯಾವ ಸುಖನಿದ್ರೇಲಿ ಮುಳುಗಿದಾನೋ?

★★★

ಸುಮಾರು 60 ವಯಸ್ಸಿನವರು ಅವರ ಸರದೀಗೆ ಕಾಯ್ತಾ ಕೂತಿದ್ದರು. ಬೆಳಗ್ಗೆ ಒಂಭತ್ತು ಗಂಟೆಯಿಂದ ಹತ್ತೂವರೆ ವರೆಗೂ ಕಾಯಬೇಕಾಯಿತು. ನಾನು ರೇಗಿ, ಅಲ್ಲಾರಿ, ಸಾಧಾರಣ ನೆಗಡಿ, ಕೆಮ್ಮು ಇದಕ್ಕೆ ಯಾಕೆ ಆಸ್ಪತ್ರೆಗೆ ಬಂದುಕಾಲಹರಣ ಮಾಡ್ತೀರ? ಅಂದೆ. ಆತ ಶಾಂತನಾಗಿ ಉತ್ತರಿಸಿದ. 'ನಾನು ಹುಟ್ಟಿದ್ದೇ ಈ ಆಸ್ಪತ್ರೇಲಿ ಡಾಕ್ಟ್ರೆ! ಏನಾದರೂ ನಾನು ಇಲ್ಲೇ ಬರೋದು!!

★★★

ನನ್ನ ಸಂಗಾತಿ ಜಯರಾಜ್ ಖ್ಯಾತವೈದ್ಯ. ಆತನ ಹಾಸ್ಯ ಪ್ರವೃತ್ತಿ ನಮ್ಮನ್ನೆಲ್ಲ ಹಾಸ್ಯದ ಕಡಲಿನಲ್ಲಿ ಮುಳುಗಿಸುವುದು ಸಾಮಾನ್ಯ! ಒಂದು ಸಲ ಮಹಿಳೆಯೊಬ್ಬಳು ಬಂದಳು. 'ಡಾಕ್ಟರ್ ಸಾಬ್, ನನಗೆ ಸಿರ್‌ಮೇ ದರದ್, ಪೈರ್‌ಮೇ ದರದ್, ಕಮರ್ ಮೇ ದರದ್, ಸಾರೇ ಬದನ್‌ಮೇ ತಿಡಕ ಮಾರ್ತಾ ಹೈ!' ಅಂತ ತನ್ನ ಕಷ್ಟಗಳ ಪ್ರವರವನ್ನೇ ಒಪ್ಪಿಸಿದಳು.

ಜಯರಾಜ್ (ಸ್ವಲ್ಪವೂ ನಗದೆ) 'ನ್ಯೆ ಮಾ, ಏ ಸ್ಯೆಂಟ್ ಮಾರ್ತಾ ಹೈ!' ಅಂದರು. ನಮಗೆ ನಗು ತಡೆಯಲು ಅಸಾಧ್ಯವಾಯಿತು!!

★★★

ನಂ ಆಸ್ಪತ್ರೇಲಿ ಏನನ್ನೂ ದುಂದು ಖರ್ಚುಮಾಡೋಕ್ಕೆ ಸಿಸ್ಟರ್‌ಗಳು ಬಿಡೋದಿಲ್ಲ. ಮಳೆ ಬಂದಾಗಲೆಲ್ಲ ಸುರಿಯೋ ನೀರನ್ನ ಶೇಖರಿಸೋದು, ಪ್ರಪಂಚದಲ್ಲೇ ಮೊದಲ ಬಾರಿಗೆ ಚಾಲ್ತೀಗೆ ಬಂತು! ಅದನ್ನ ಈಗ Rain water harvesting ಅಂತ ಕರೀತಾರೆ! ಈ ವಾತಾವರಣದಲ್ಲಿ, ನನ್ನ ಗೆಳೆಯ ಸರ್ಜನ್ ಅವರನ್ನ ನಾನು ಕ್ವಿಜ಼್ ಪ್ರಶ್ನೆ ಕೇಳಿದೆ. ನಂ ಆಸ್ಪತ್ರೇಲಿ ಒಂದು ಅಂಶ ಇದೆ! ಅದು The height of Luxury! ಅದು ಯಾವುದು? ಅಂತ. ಬಹಳ ಸಲಹೆಗಳು ಬಂದವು. ಕೊನೆಗೆ ಎಲ್ಲರೂ ಸೋತು, ಏನು ಅಂದರು. ನಾನು ಗಂಭೀರನಾಗಿ "There is a calling bell in the Morthary!" ಅಂದೆ!!

★★★

ಹೌಸ್ ಸರ್ಜನ್ ಇಂಟರ್‌ವ್ಯೂ ನಡೀತಾ ಇತ್ತು. ಒಬ್ಬ ತರುಣ, ಪಾಪ, ನಂ ಆಸ್ಪತ್ರೇಲಿ ಕೆಲಸ ಮಾಡಬೇಕು ಅಂತ ಬಹು ಇಷ್ಟವಿತ್ತೇನೋ-

ಅವನೇ ಮಾತನಾಡಲು ಶುರುಮಾಡಿದ. ನಿರರ್ಗಳವಾಗಿ ಅವನ ಹೇಳಿಕೆಗಳು ಮುಗಿದ ಮೇಲೆ ನಾವೇ ಸುಸ್ತಾದೆವು. ನಾನು ನಗುತ್ತ, "You are Loquacious, are you not?!!" ಅಂದೆ ಆತ, ಪಾಪ "No sir, I am Suresh!" ಅಂದ!!

★★★

ಆಸ್ಪತ್ರೇಲಿ ತರಬೇತಿಗೆ ಇಂಟರ್ನ್‌ಗಳು ಸೇರ್ತಾ ಇರ್ತಾರೆ. ಅವರಿಗೆ ಕಲಿಸೋದು ಬಹು ಜವಾಬ್ದಾರಿ ಕೆಲಸ, ಒಬ್ಬಳು Intern ಸೇರಿದಳು. ಮರುದಿನ ಮುಂಜಾನೆ, ಒಬ್ಬ stroke ಆಗಿದ್ದ ವೃದ್ಧರು ಕಾಲವಾದರು. ಮರಣ ಸರ್ಟಿಫಿಕೇಟ್ ಆಕೆ ಬರೆದಿಟ್ಟಿದ್ದಳು. ಆದರೆ, ನಿದ್ದೆಗಣ್ಣೋ ಏನೋ, cause of Death Columnನಲ್ಲಿ ಡಾ॥ ಕವಿತಾ ಅಂತ ನಮೂದಿಸಿದ್ದಳು!!

★★★

ಇನ್ನೊಂದು ಇಂಟರ್‌ವ್ಯೂ. ಆಸ್ಪತ್ರೆಯ ಸ್ನಾತಕೋತ್ತರ ಅಧ್ಯಯನಕ್ಕೆ ಸೇರಲು ಹಲವು ಅಭ್ಯರ್ಥಿಗಳಿದ್ದರು. ಒಬ್ಬ ವೈದ್ಯನ್ನ ಕೇಳಿದೆ. 'ಆಸ್ಪತ್ರೆಯಲ್ಲಿ ಅತಿ ಮುಖ್ಯ ವ್ಯಕ್ತಿ ಯಾರು?' (ಇದು Standard ಪ್ರಶ್ನೆ) ಆತ Administrator!' ಅಂದ. ಈ ಉತ್ತರದಿಂದ ಅಡ್‌ಮಿನಿಸ್ಟ್ರೇಟರ್‌ಗೆ ಮಾತ್ರ ಸಂತಸವಾದಂತೆ ಕಂಡಿತು!!! ಈಗ ಆ ಅಭ್ಯರ್ಥಿ ಯಾವುದೋ ಆಸ್ಪತ್ರೇಲಿ ನಿರ್ದೇಶಕನಾಗಿ ಇರಬಹುದು.

★★★

ತೀವ್ರವಾದ Tonsillitis ಆ ಹುಡುಗನಿಗೆ, ನನ್ನ ಸಹೋದ್ಯೋಗಿಯೊಬ್ಬರು ಪೆನಿಸಿಲಿನ್

ಟೆಸ್ಟ್ ಡೋಸ್ ಕೊಟ್ಟು ನಂತರ ಪೂರ ಡೋಸ್ ಅಂತ ಬರೆದರು. ನನಗೆ ಈ ಹುಡುಗನ ಮುಖ ನೆನಪಿನ, ಆಳದಲ್ಲಿ ಇತ್ತು! "ಇವನಿಗೆ ಪೆನಿಸಿಲಿನ್ ಅಲರ್ಜಿ ಇದೆ; ಎರಡು ವರ್ಷದ ಹಿಂದೆ ಟೆಸ್ಟ್ ಡೋಸಿಗೇ Reaction ಆಗಿ ಒಂದು ದಿನ ಆಸ್ಪತ್ರೇಲಿ ಇರಬೇಕಾಯ್ತು!" ಅಂದೆ. ಆದರೆ ಆ ಯುವಕ 'ಸಾರ್, ನಾನು ಇಲ್ಲಿಗೆ ಬಂದೇ ಇಲ್ಲ! 'ಅಂತ ನಿರಾಕರಿಸಿದ. ಇದೊಂದು ಸಾಲ್ವ್ ಆಗದ ಒಗಟಾಯಿತು. ಅಷ್ಟರಲ್ಲಿ, ಆ ಹುಡುಗನ ತಂದೆ ಬಂದರು; ಸ್ಕೂಟರ್ ನಿಲ್ಲಿಸಿ ಬರೋದಕ್ಕೆ ಲೇಟಾಯಿತು ಅಂದರು. ನಾನು ಸಮಸ್ಯೆಯನ್ನು ಅವರ ಮುಂದಿಟ್ಟೆ. ಆತ ಗಹಗಹಿಸಿ ನಕ್ಕ! ಡಾಕ್ಟ್ರೆ, ಇವನು ರವೀಂದ್ರ! ಸುರೇಂದ್ರ ಇವನು ಅವಳಿ - ಜವಳಿ! ನಾವೆಲ್ಲ ಚಕಿತರಾದೆವು. ಕೊನೆಗೆ, ಬೇರೆ ಆಂಟಿ - ಬಯಾಟಿಕ್ ಕೊಟ್ಟು ಕಳಿಸಿದೆವು ಅನ್ನಿ!!

❖❖❖



ನಿಮ್ ಆರ್ಡರ್ ನ ಈ ಮೇಲ್

ಅಟಾಚ್ಮೆಂಟ್ ಮಾಡುಕ್ಕಾಗುಲ್ಲ ಕ್ಷಮ್ಸಿ !

ಅಮ್ಮ - ಮಗಳು

❖ ನೀಲತ್ತ ಹಳ್ಳಿ ಕಸ್ತೂರಿ

ಕೊರವಂಜಿ ಅಂತ ಒಬ್ಬ ಕಣಿ ಹೆಂಗಸು ಇದ್ದಳು. ತಿಂಗಳು ತಿಂಗಳೂ ತಪ್ಪದೇ ಬರುತ್ತಿದ್ದಳು. ಆಕೆ ಇದ್ದುದು ಇಪ್ಪತ್ತೈದು ವರ್ಷ. ಒಂದು ತಿಂಗಳೂ ಬರುವುದು ತಪ್ಪಿಸಲಿಲ್ಲ. ಒಂದು ತಿಂಗಳೂ ತಡ ಆಗಲಿಲ್ಲ. ಪ್ರತಿ ತಿಂಗಳ ಮೊದಲನೆಯ ದಿನ ಕರಾರುವಕ್ಕಾಗಿ ಹಾಜರು. ಸಂಬಳವಾದರೂ ಒಮ್ಮೆ ಇಮ್ಮೆ ತಪ್ಪೀತು, ತಡವಾದೀತು. ಕೊರವಂಜಿ ಹಾಗಲ್ಲ. ತಪ್ಪದೆ ಕಾಲಕ್ಕೆ ಸರಿಯಾಗಿ ಹಾಜರಾಗುತ್ತಿದ್ದಳು.

ಕೊರವಂಜಿ ಕಣಿ ಹೇಳುತ್ತಿದ್ದಳು. ಅಂದರೆ ಕಾಗಕ್ಕ ಗುಬ್ಬಕ್ಕ ಕತೆ ಅಲ್ಲ, ಆಗದ ಹೋಗದ ಭವಿಷ್ಯವಲ್ಲ, ಕಣಿ ಅಲ್ಲ - ಅವಳು ಹೇಳುತ್ತಿದ್ದ ಕಣಿ ನಿತ್ಯ ಜೀವನದ ಸಂಗತಿಗಳು ಬಾಳಿನ ಬಿಗುವನ್ನು ಸಡಿಲಿಸಿ ಗಂಟಿಕ್ಕಿಕೊಂಡ ಮುಖಗಳನ್ನು ಬಿಡಿಸಿ ನಗಿಸುವಂತಹ ಕಣಿ. ಬಾಳು ಸನಿಯ, ಸಾವು ದೂರ ಅಥವಾ ನೋವು ಇಲ್ಲವೇ ಗೋಳು ದೂರ ಎಂದು ತಿಳಿಸುವಂಥ ಕಣಿ ಹೇಳುತ್ತಿದ್ದಳು.

ನಗುವುದು ಸಹಜ, ಅದು ಪ್ರಕೃತಿ, ನಗಿಸುವುದು ಹಾಗೂ ಇತರರು ನಕ್ಕಾಗ ತಾನೂ ನಗುವುದು, ಸುತ್ತಮುತ್ತಲೆಲ್ಲ ನಗೆಯ ಮಲ್ಲಿಗೆಯನ್ನು ಚೆಲ್ಲುವುದು. ಮುಖಗಳ ಮೇಲೆ ದುಕ್ಕಗಟ್ಟಿದ ಗೆರೆಗಳನ್ನು ಬಿಡಿಸುವುದು ಇದೇ ಸಂಸ್ಕೃತಿ. ತನಗೆ ನೋವು ಆದರೂ, ಅದನ್ನು ಜಗಕ್ಕೆ ಹರಡದೆ, ಕೇವಲ ನೆಲವನ್ನೇ ನೀಡುವುದು ಸುಸಂಸ್ಕೃತಿ.

ಕೊರವಂಜಿ ಕಣಿ ಹೆಂಗಸು. ಆದರೂ ಅರಳಿದ್ದು ಇಂಥ ಸುಸಂಸ್ಕೃತಿ. ನನಗೆ ತಿಳಿದಂತೆ, ಆಕೆ ಅತ್ತದ್ದೇ ಇಲ್ಲ, ಒಂದುಸಲ ಬಿಟ್ಟು. ಆಕೆ ಅತ್ತದ್ದು ಒಂದೇ ಸಲ. ಅದು ಭಾರತವೆಲ್ಲಾ ಅತ್ತಾಗ, ಭಾರತ ಏಕೆ ಜಗತ್ತೇ ಅತ್ತಾಗ. 1948ರ ಫೆಬ್ರವರಿಯಲ್ಲಿ ಕೊರವಂಜಿ ಬಂದದ್ದು ಅಳುಮುಂಜಿಯಾಗಿ, ಭಾರತದ ಬಾಪು, ಜಗತ್ತಿನ ದಾರಿದೀಪ ಆರಿ ಹೋದಾಗ ಕೊರವಂಜಿ "ನಾನು ಈಗ ಅಳುಮುಂಜಿ ಎಂದು ಕಣ್ಣೀರು ಹಾಕುತ್ತಾ ಬಂದಿದ್ದಳು.

ಹೀಗೆ ಇಪ್ಪತ್ತೈದು ವರ್ಷ ಬಾಳಿದಳು. ನಗಿಸಿ ನಲಿದಳು. ನಗಿಸುವವರನ್ನು ಸೃಷ್ಟಿಸಿದಳು. ನಗೆಯ ಪರಂಪರೆಯನ್ನೇ ಆರಂಭಿಸಿದಳು. ಇಪ್ಪತ್ತೈದು ಆಯಿತು. ಇದ್ದಕ್ಕಿದ್ದಂತೆ ಹೊರಟೇ ಹೋದಳು. ನಿಸೂರಾಗಿ ಹೊರಟುಹೋದಳು." ನನಗೆ ಪೇಟೆ ಸಹವಾಸ ಸಾಕು, ಕಾಡಿಗೇ ಹೋಗತೀನಿ" ಅಂತ ನಗುನಗುತ್ತಾಲೇ ಟಾಟಾ ಹೇಳಿ ಮಾಯವಾದಳು. ಹೇಗೆ ಬಂದಳೋ

ಹಾಗೆಯೇ ಹೋದಳು. ಅಯ್ಯೋ ಕೊರವಂಜಿ, ನೀನು ಇದ್ದದ್ದೇ ಗೊತ್ತಾಗಲಿಲ್ಲವಲ್ಲೆ'' ಎಂದು ಎಷ್ಟೋ ಜನ ದೇಶಾವರಿ ಪೆದ್ದು ನಗೆ ಸೂಸಿದರು ಆಗ ಅದಕ್ಕೂ ನಕ್ಕಿರಬೇಕು. ಅಯ್ಯೋ ಹೋಗಯ್ಯ, ಕನ್ನಡ ದಾಸಯ್ಯ, ನಿನಗೆ ನಾನೇಕೆ ಬೇಕು? ನಿನ್ನ ನಾಡಿಗಿಂತ ನನಗೆ ಕಾಡೇ ಚಂದ'' ಎಂದು ಕೊಂಡಿರಬೇಕು. ಕೈಬೀಸಿಕೊಂಡು ನಡೆದೇ ಬಿಟ್ಟಳು.

ಆಗ ಹಲವರಿಗಾದರೂ ಹೊಟ್ಟೆ ಚುರ್ ಎಂದಿತ್ತು. ಅಯ್ಯೋ, ಕೊರವಂಜಿ ಹೋಗೇ ಬಿಟ್ಟಳಲ್ಲ, ನಮಗೆಲ್ಲ ಎಂಥ ಮಲ್ಲಿಗೆ ಕಂಪು ಹಂಚುತ್ತಿದ್ದಳು, ರುಚಿರುಚಿ ಗರಿಗರಿ ಕುರುಕಲು ತಿಂಡಿ ಕೊಡುತ್ತಿದ್ದಳು. ಕೊರವಂಜಿ ಕಾಡಿಗೆ ಹೋದ ಮೇಲೆ ನಮಗೆ ನಾಡೇ ಕಾಡು'' ಎಂದು ಕೊರಗಿದವರೂ ಉಂಟು. ಕನ್ನಡಿಗರ ಹಣೇಬರಹವೇ ಇಷ್ಟು, ನಗುವುದಕ್ಕೆ ಬಾರದು, ನಗಿಸುವವರು ಬಂದರೆ ಅವರನ್ನು ಬಾಳಗೊಡರು. ಅಳುಮುಂಜಿಯೇ ನಮಗೆ ಖಾಯಂ! ಹೀಗೆ ಪೇಚಾಡುತ್ತಿದ್ದುದೂ ಉಂಟು.

ಆದರೆ ''ಅಷ್ಟು ನಿರಾಸೆ ಬೇಕಾಗಿಲ್ಲ, ಕೊರವಂಜಿ ಹೋದಳು ನಿಜ, ಆದರೆ ನಾನು ಅವಳ ಮಗಳು ಇದೋ ಬಂದಿದ್ದೇನೆ, ಅಪರಂಜಿ! ಅಮ್ಮನಷ್ಟು ಅಲ್ಲವಾದರೂ, ಸಾಕಷ್ಟು ಅಂಥದೇ ಕಣಿ ನಾನೂ ಹೇಳತೀನಿ. ಅಮ್ಮನ ನಗೆಯನ್ನೇ ಮತ್ತೆ ನೆನಪುಮಾಡಿಕೊಡುತೀನಿ.'' ಹೀಗೆ ಭರವಸೆ ಕೊಡುತ್ತ ಬಂದಿದಾಳೆ. ಇವಳೂ ಏನು ಕಡಿಮೆ ಇಲ್ಲ, ಅಮ್ಮ ಕೊರವಂಜಿ ಅಪರಂಜಿ ಆದರೆ, ಈ ಮಗಳು ಅಪರಂಜಿ ಸವರನ್ನು! ಸವರನ್ನು ಸ್ವಲ್ಪ ಬೆರಕೆ ಆದರೂ ಕೆಲಸಕ್ಕೆ ಬರುತ್ತಲ್ಲ. 'ಅಪರಂಜಿ'ನೂ ಹಾಗೇ ಇವಳಿಗೂ ಈಗ ಪ್ರಾಯ, ಇಪ್ಪತ್ತೈದರ ಹರೆಯ. ಈಗ ಹುಷಾರು, ಅಪರಂಜಿ, ಅಮ್ಮಾ ಹೋದಹಾಗೆ ನೀನೂ ಹೊರಟು ಹೋಗುವುದಿಲ್ಲ ತಾನೇ! ಈಗ ವಾಸಿ ಕನ್ನಡನಾಡು. ಸ್ವಲ್ಪ ಗೆಲುವಾಗಿದೆ. ಅಂದ ಹಾಗೆ ಈಗ ಹೋಗಲು ಕಾಡೆಲ್ಲಿದೆ? ನಾಡೇಕಾಡು ಆಗಿ ಹೋಗುತ್ತಿದೆಯಲ್ಲ. ಈ ಕಾಂಕ್ರೀಟು ಕಾಡೇ ಗತಿ. ಇದೇ ನಾಡು, ಇದೇ ಸರ್ವಸ್ವ. ಇಲ್ಲಿ ಇದ್ದು ಕೊಂಡೇ ಈ ನಾಡವರಿಗೆ ಅಮ್ಮನ ಕಣಿಯನ್ನೂ, ನಿನ್ನ ಗೆಲುವು ನಗೆಯನ್ನೂ ಹಂಚುತಾ ಇರಮ್ಮ.

ಕೊರವಂಜಿ ನೆನಪು ಉಳಿಸುತಾ ಇದೀಯಾ, ನಿಲ್ಲಿಸಬೇಡ, ತಪ್ಪಿಸಬೇಡ, ಇನ್ನೂ ಸರಿಯಾಗಿ, ಹಸಿರಾಗಿ, ನವಿರಾಗಿ, ಪೊಗದಸ್ತಾಗಿ ಮುಂದುವರಿಸಮ್ಮ ಅಪರಂಜಿ!

'ಕೊರವಂಜಿ' ಕಾಲಕ್ಕೂ ಈಗಿಗೂ ವ್ಯತ್ಯಾಸ ಇದೆ. ಆಗ ಆಯುಷ್ಯ ಕಡಿಮೆ. ಈಗ ಜಾಸ್ತಿ. 70-80-90ರ ಮುದಿಯರೂ ಬೇಕಾದಷ್ಟು ಜನ ಇದಾರೆ. ಪತ್ರಿಕೆಗೂ ಹಾಗೇ ಆಗಲಿ. ಅಲ್ಪಾಯಸ್ಸು ಹಳೆಯಮಾತು ಆಗಲಿ.

'ಅಪರಂಜಿ', ತನ್ನ ತಾಯಿಯ ಉಳಿಕೆ ಶತಾಯುಷ್ಯವನ್ನೂ ಮೈಗೂಡಿಸಿಕೊಂಡು ಬಾಳಲಿ. 'ಕೊರವಂಜಿ' ಪರಂಪರೆ ಬತ್ತದಿರಲಿ, ಬಾಡದಿರಲಿ, ಬೆಳೆಯಲಿ, ಬೆಳಗಲಿ ಅನ್ನೋಣವೇ?

❖❖❖

ಮುಂದಕಿದ್ದಾವಕ ಕ!

❖ ಶ್ರೀಮತಿ ಅರುಣಾ ಆರ್. ಕಾರಂತ

ನಮ್ಮ ಮಲೆನಾಡಿನ ರೈತರ ಸ್ವಭಾವವೇ ವಿಚಿತ್ರನೋಡಿ. ಈ ವರ್ಷ ಮೇ ತಿಂಗಳು ಕಳೆದು ಜೂನ್ ತಿಂಗಳ ಮೊದಲ ಏಳು ದಿನಗಳು ಸದ್ದಿಲ್ಲದೆ ಹಿಂದೆ ಸರಿದರೂ ಮಲೆನಾಡಿಗೆ ಮಳೆರಾಯನ ದರ್ಶನವೇ ಇಲ್ಲ. ಜನರೆಲ್ಲ ಹೀಗಾದ್ರೆ ಹೇಗೆ? ಈ ಬಿಸಿಲಿನ ತಾಪಕ್ಕೆ ಅಡಿಕೆ ಮರದ ಬೆಂಡು ಕಳಚಿ ಬೀಳುತ್ತಿದೆ. ಈಗಲೇ ಕುಡಿಯುವ ನೀರಿನ ಸಲೆಗಳು ತಳ ಕಂಡಿವೆ, ಎಲ್ಲೂ ಒಂದು ಹಸಿರೆಲೆ ಕಾಣುತ್ತಿಲ್ಲ. ಜಾನುವಾರುಗಳ ಮೇವಿಗೂ ತತ್ವಾರ ಎಂದೆಲ್ಲ ಕುಂತಲ್ಲಿ ನಿಂತಲ್ಲಿ ಒಂದೇ ಸಮನೆ ಗೋಣಗಾಟ ಶುರುಮಾಡಿದ್ದಾರೆ. ಇದೇ ಸಂದರ್ಭವೆಂದು ಹಳ್ಳಿಯ ರಾಜಕೀಯ ಪುಡಾರಿಗಳು ಇದಕ್ಕೆಲ್ಲಾ ಸರಕಾರವೇ ಕಾರಣ, ಜಿಲ್ಲೆಯ ಉಸ್ತುವಾರಿ ಸಚಿವರು ನೈತಿಕ ಹೊಣೆಹೊತ್ತು ರಾಜಿನಾಮೆ ಕೊಡಬೇಕು ಎಂದು ಬಡಬಡಿಸುತ್ತಿದ್ದಾರೆ. ಹಳ್ಳಿಯ ಹಿರಿಯ ಅಡಿಕೆ ಭಾಗಾಯತುದಾರರು 'ರಾಜಾಕಾಲಸ್ಯಕಾರಣ' ಅಂತ ಮಾತಿಲ್ವ? ಮೇಲಿನ ಆಳುವವರು ಸರಿಯಾಗಿದ್ದಿದ್ರೆ ಎಲ್ಲ ಸರಿ ಇರ್ತಿತ್ತು, ಕಾಲಕಾಲಕ್ಕೆ ಮಳೆ ಬೀಳ್ತಿತ್ತು, ಬರ ಹತ್ರ ಸೈತ ಬರ್ತಿರ್ಲಿಲ್ಲ. ಈಗ ಅಧಿಕಾರದಲ್ಲಿರೊವೆಲ್ಲಾ ತಂತಮ್ ಬುಡಗಟ್ಟಿ ಮಾಡ್ಕಂಬುದೆ ಮಾಡ್ತ ವಿನ ರೈತ ಬದ್ಕಿದ್ಯ, ಸತ್ತಿದ್ಯ ಎಂದು ಕೇಂಬುದಿಲ್ಲೆ ಎಂದು ಶಂಖ ಊದುತ್ತಿದ್ದಾರೆ.

ಇಷ್ಟೆಲ್ಲಾ ಆಗುವ ಹೊತ್ತಿಗೆ ಬಂತಯ್ಯ ಮಲೆನಾಡಿನಲ್ಲಿ ಮೊದಲ ಮಳೆ. 'ಸಂಜೆ ಹೊತ್ತಿಗೆ ಮನೆಗೆ ಬಂದ ನೆಂಟರು ಹೋಗುವುದಿಲ್ಲವಂತೆ. ಹಾಗೆ ಸಂಜೆ ಹೊತ್ತಿಗೆ ಹಿಡಿದ ಮಳೆ ಬಿಡುವುದಿಲ್ಲವಂತೆ' ಒಂದೇ ಸಮನೆ ಸಂಜೆ ಐದರ ಸುಮಾರಿಗೆ ಆಲಿಕಲ್ಲು ಸಹಿತ ಬೀಳುತ್ತಿದ್ದ ಮಳೆ ಕತ್ತಲಾಗುತ್ತಿದ್ದಂತೆ ಕರಗಲೂ ಇಲ್ಲ, ಮಳೆ ಸಂದು ಕಡಿಯದೆ ಒಂದೇ ಸಮನೆ ಸುರಿಯಹತ್ತಿತು. ಇದರೊಂದಿಗೆ ಗಾಳಿಯ ಆರ್ಭಟವೂ ಬೇರೆ ಸೇರಿತು. ಯಾರ ಮನೆಯ ಎಷ್ಟು ಹಂಚು ಹಾರಿತೊ? ಯಾರ ತೋಟದಲ್ಲಿ ಎಷ್ಟು ಅಡಿಕೆ ಮರ ನೆಲಕ್ಕುರುಳಿತೊ? ಯೋಚಿಸಲಿಕ್ಕೆ ನೋಡಿಕೊಂಡು ಬರಲೂ ಆಗದಂತೆ ಕುಂಭದ್ರೋಣ ಮಳೆ ಸುರಿದು ಮರುದಿನ ಮಧ್ಯಾನ್ಹದ ಹೊತ್ತಿಗೆ, ಸ್ವಲ್ಪ ವಿಶ್ರಾಂತಿ ತೆಗೆದುಕೊಂಡಿತು. ಆಕಾಶದಲ್ಲಿ ಮೋಡ ಚದುರಿ ಸೂರ್ಯ ಕಣ್ಣು ಬಿಟ್ಟ.

ಆ ಒಂದು ದಿನದ ಮಳೆಗೆ ನಮ್ಮ ಮಲೆನಾಡಿಗರ ಎಲ್ಲ ರಾಗವೂ ಬದಲಾಯ್ತು. 'ಅಯ್ಯೋ ಎಂಥಾ ಮಳೆ, ಹೀಂಗಾದ್ರೆ ಮನೆ ಮಾರು ಉಳಿಯಲಿಕ್ಕಿದೆಯೆ? ಇಂಥ ಮಳೆ ಇಂಥಾ ಗಾಳಿ ನನ್ನ ಜೀವಮಾನದಲ್ಲೆ ಕಂಡಿದ್ದಿಲ್ಲೆ, ಕಂಡಿತಾ ಈ ಮಳೆ ಒಳ್ಳೆಯದಕ್ಕೆ ಬಂದಿದ್ದಲ್ಲ, ಊರು ಹಾಳು ಮಾಡ್ಲಿಕ್ಕೇ ಬಂದಿದ್ದು' ಎಂಬೆಲ್ಲಾ ಹುಯ್ಲು ಎಲ್ಲೆಡೆ ಕೇಳಿ ಬಂತು. ಇದನ್ನೆಲ್ಲಾ

ಮೌನವಾಗಿ ಗಮನಿಸುತ್ತಿದ್ದ ನನ್ನವರು ಮೀಸೆಯಡಿಯಲ್ಲಿಯೆ ನಗುತ್ತಾ ಏನನ್ನೊ ಗುಣಗುಣಿಸುತ್ತ ಅವರದೇ ಲಹರಿಯಲ್ಲಿದ್ದರು. ಜನ ಎಲ್ಲ ಮಳೆಯಿಂದ ಹೈರಾಣಾಗಿದ್ರೆ ಇವರು ತನಗೇನೂ ಸಂಬಂಧವಿಲ್ಲವೆಂಬಂತೆ ತಮ್ಮದೇ ಪ್ರಪಂಚದಲ್ಲಿದ್ದು ಹಾಡ್ಕೊಳ್ತಾ ಇದ್ದಾರಲ್ಲ ಎಂದು ಸ್ವಲ್ಪ ಸಿಟ್ಟು ಬಂದು, 'ಅದೇನು ಗಟ್ಟಿಯಾಗಿ ಹೇಳಬಾರ್ದೆ? ಈ ಮಳೆ, ಜನರ ಪರಿಪಾಟಲು ನೋಡಿದ್ರೆ ಅಯ್ಯೋ ಅನ್ನಿಸಿದ್ರೆ. ನೀವು ಜನಕರಾಯನ ತರಹ ಶಾಂತವಾಗಿ ಇದ್ದೀರಿ' ಎಂದೆ. ಅಲ್ಲೇ ಇಷ್ಟು ದಿನ ಜನ ಮಳೆ ಇಲ್ಲ ಅಂತ ಬೊಬ್ಬೆ ಹೊಡ್ದಿದ್ದನ್ನ ಕೇಳಿದ್ದಿಯಲ್ಲ. ಈಗ ಈ ಒಂದು ದಿನದ ಮಳೆಗೇ ಇದೇ ಜನ ಪ್ಲೇಟು ತಿರುಗಿಸಿ ಕುಣಿಯುತ್ತಿರುವುದನ್ನು ನೋಡಿದ್ರೆ ನಗದೆ ಇನ್ನೇನು ಮಾಡ್ಲಿ?

ಅಶ್ವಿನಿ, ಭರಣಿ, ಕೃತಿಕಾ, ರೋಹಿಣಿ, ಮೃಗಶಿರಾ ಐದು ಮಳೆಗಳು ಒಂದು ಹನಿಯನ್ನೂ ಸುರಿಸದೆ ಹಾಗೆ ಹೋದುವು. ಈ ಮಳೆ ಆರಿದ್ರಾ ಕೂಡಾ ಕೆ ಕೊಟ್ಟಿದಿದ್ರೆ ಇನ್ನೇನೆಲ್ಲಾ ಆಗುತ್ತಿತ್ತೊ, ಯೋಚಿಸಿದರೆ ಭಯ ಆಗ್ತದೆ. ಅಂತದ್ರಲ್ಲಿ ಈ ಒಂದು ದಿನದ ಮಳೆಗೆ ಏನೊ ಅನಾಹುತ ಆದವರಂತೆ ಮಾಡ್ತಾ ಇದ್ದಾರಲ್ಲ, ನಮ್ಮ ಜನಕ್ಕೆ ತಾಳ್ಮೆ ಎಂಬುದು ಒಂದು ಚೂರೂ ಇಲ್ಲ, ಅಂತ ಅನ್ನಿಸುತ್ತಿದ್ದಾಗ ಮನಸ್ಸಿನಲ್ಲಿ ಏನೊ ಒಂದು ನಾಲ್ಕು ಲೈನು ಪದ್ಯ ಮೂಡಿತು. ಅದನ್ನೇ ಗುಣಿಗುಣಿಸುತ್ತಿದ್ದೆ, ಬರ್ಕೊಳ್ಳೊದಾದ್ರೆ ಬರ್ಕೊ ಎಂದರು. ಅವರು ಹೇಳಿದ ಹಾಡು ಹೀಗಿದೆ:

ಒಂದೇ ದಿನವು ಬಿದ್ದಽ ಮಳಿಗೆ
ಹೀಂಗಂದಽರೇನು ಹೇಳೆ ಗೆಳತಿ
ಇದ್ದಾ ವಿನ್ನ ಮುಂದಽ ಮುಂದ
ಮುಂದಕಿದ್ದಾಽವಽಽಽ
ಹಗಲು ಬಿಸಿಲು ದಗೆಯೊ ಇರುಳು
ದಿಗಿಲುಗುಡುವ ಧೆತ್ತಿನ ಕಾವು
ಮಗ್ಗುಲ ಹೊಳ್ಳಿ ಹೊಳ್ಳಿಽ ಹಾರಿತು
ನಿದ್ದಿ ನಿನ್ನಽಽ ನಿರುಕಿಸಿಽಽ
ಹಾಳು ಮನಿಶ್ಯಾನ ಜಲ್ಮ ನೋಡಿ
ತಾಳಲಾರ್ದು ಒಂದಽ ಖೋಡಿ
ಬಿಸಿಲ ಝಳಕ ಅಯ್ಯೋ ಬಿಸಿಲು
ಹಳವಂಡಾಯ್ತು ಜೀವ ಎಂಬಽ ಮಾತು
ಮಳೆಗು ಚಳಿಗು ಬಿಸಿಲಿಗು ಒಂದಽ
ಮುಂದಕಿದ್ದಾವಽ ಇನ್ನೂ ಬದುಕೂ
ಮುಂದಕಿದ್ದಾವಽ ಕಾಲ ಇನ್ನೂ ಇದ್ದಾವಽ
ಬೇಕು ಅಂದ್ರ ಹಂಗಽ ಕುರಿದು
ಬೇಡಾಂದ್ರ ಹೀಂಗಽ ಸರಿದು.
ನಿಲ್ಲಲೇನು ಜೀತದಾಳೇ ನಿನ್ನ

ನಿನ್ನ ನಾಳ ಬಲ್ಲಾಕಿ. ಪ್ರಕೃತೀ
ಎಲ್ಲ ತಾಳಬಲ್ಲಾಕಿs ತಿಳಿಯೊ
ಭೂಮಿ ತಾಯಿ ಅಗ್ನಿ ಆಕಾಶ
ನೀರು ಗಾಳಿ ಆಡೋ ಆಟ
ಇನ್ನು ಇದ್ದಾವs ಗೆಳತಿ
ಮುಂದರೆದ್ದಾವs
ಎದಿಯತೆರೆದು ಕಿವಿಯ ಹದಮಾಡಿ
ಕೇಳು ನೆಲದ ನುಡಿಯs ನಡೆಯ
ನೀನು ಉಳಿದು ಉಳಿಯಗೊಟ್ಟೂಪರರ
ಇಂದು-ನಿನ್ನೆ ಕಳೆದುs ಮುಂದs
ನಾಳೆ ಕಿದ್ದಾವs ಮುಂದs ಮುಂದಕಿದ್ದಾವss.

ನಂತರದ ಮಳೆಯನ್ನು ಕಾಣ್ತಾನೇ ಇದ್ದೀರಿ 'ಚಿಗರಿಗಂಗಳ ಚೆಲುವಿ ಚೆದsರಿ ನಿಂತಾಳ ನೋಡೊ ಬೆದರು ನಿಂತಾsಳ' ಎಂಬ ಬೇಂದ್ರೆಯವರ ಮಾತಿನಂತೆ ಪ್ರಕೃತಿ ಮಾನವನ ವಿಕೃತಿಗೆ ಬೆದರಿ, ಸಡ್ಡು ಹೊಡೆದು ಕೆದರಿ ನಿಂತಂತೆ ಕಾಣುತ್ತಿದೆ. ಆರ್ದ್ರಾಮಳೆ ಎಂದರೆ ಒಂದು ಕಾಲಕ್ಕೆ ನೆಲದ ತೇವ ಆರದಂತೆ ಜಿನುಗುಡುವ ಸೋನೆಮಳೆಯ ನಿತ್ಯಧಾರೆ. ಈಗ ತದ್ವಿರುದ್ಧ. ಅಣ್ಣತಮ್ಮರ ಮಳೆಯೆಂದೇ ಕರೆಯುವ ಪುರ್ವಸು-ಪುಷ್ಯಗಳಲ್ಲಿ ಮಳೆ ಇನ್ನಾವ ರೀತಿಯಿಂದ ತನ್ನ ಪ್ರತಾಪ ತೋರಿಸುವುದೊ ಇಲ್ಲವೆ ಬಾರದೆ ಕೈಕೊಟ್ಟು ಮುನಿಸುಗೊಳ್ಳುತ್ತದೊ ತಿಳಿಯದು. ಮಲೆನಾಡಿನ ಸಾಂಪ್ರದಾಯಿಕ ಬೆಳೆಯಲ್ಲದ ಮೆಕ್ಕೆ ಜೋಳ, ಹತ್ತಿ ಬಿತ್ತಿ ಝಣ ಝಣ ಹಣದ ಕನಸು ಕಂಡ ರೈತ ಹಳ್ಳ ಹತ್ತಿದ್ದಾನೆ. ಈಗ ನನ್ನವರನ್ನು ಚೇಡಿಸುವ ಸರದಿ ನನ್ನದಾಗಿದೆ! ಯಾವ ಬಾಯಲ್ಲಿ ಆ ಹಾಡು ಹೇಳಿದರೊ ಏನೋ ಎಲ್ಲಾ ಮಳೆಯೂ ನಾನು, ತಾನು ಎನ್ನುವಂತೆ ಸುರಿಯವ ಹಾಗೆ ಕಾಣ್ತದೆ. ಇನ್ನಾದರೂ ಸತ್ಯ ಹೇಳುವುದನ್ನು ಸ್ವಲ್ಪ ಕಡಿಮೆ ಮಾಡಿ, ಜನ ಬದುಕಿ ಕೊಳ್ಳಲಿ' ಎಂದು ಕೆಣಕಿಯಾಡಿದೆ.

❖❖❖

ಮಾಲಿನ್ಯ

ದೊಡ್ಡ ದೊಡ್ಡ ನಗರಗಳಲ್ಲಿ
ವಾಯು ಮಾಲಿನ್ಯ
ಶಬ್ದ ಮಾಲಿನ್ಯ
ಜಲ ಮಾಲಿನ್ಯ
ಶಬರಿಮಲೆಯಲಿ
ಜಯಮಾಲಿನ್ಯ

- ಎಚ್. ಡುಂಡಿರಾಜ್

ಪಾಪಿ ಸಮುದ್ರ ಹೊಕ್ಕರೂ....

❖ ಗೌತಮ

'ಒಸಾ ಪಿಚ್ಚರ್ ಬಂದಾಗ ಮೆರವಣಿಗೇಲಿ ಓಗಿ ತೇಟರ್ ಮುಂದೆ ಸ್ಟಾರ್ ಕಟ್ಟೋದು, ಅಂಡ್ರೆಡ್ ಡೇಸ್‌ಗಳು ಓಡಿದಾಗ ಮತ್ತೆ ಮೆರವಣಿಗೇಲಿ ಓಗೋದು, ಷ್ಟಾರ್‌ಗಳ ಉಟ್ಟಿದ ಅಬ್ಬದಲ್ಲಿ ಮೆರವಣಿಗೆ ಓಗೋದು, ಯಾವುದೇ ಓರಾಟವಾಗಲಿ ಅದರಲ್ಲಿ ಬಾಗವಯಿಸಿ ಬೀದಿ ದೀಪಗಳಿಗೆ, ಬಸ್ಸುಗಳಿಗೆ ಗುರಿ ಇಟ್ಟು ಕಲ್ಲು ಒಡೆಯೋದು,' ಇಂತಾ ಅತ್ತಾರು ಕೆಲಸಗಳ ಮಧ್ಯೇನೂ ಪರೀಕ್ಸೆಗೆ ಕುಂತ್ಕಂತೀವಲ್ಲ ಅದಕ್ಕೆ ನನ್ನಂತೋರನ್ನ ತಾರೀಪು ಮಾಡಬೇಕು. ಅದು ಬಿಟ್ಟು ಎಸ್ಸೆಲ್ಸಿ ಅಂತಾ ಜುಜುಬಿ ಪರೀಕ್ಸೇಲಿ ನಮ್ಮಂತೋರನ್ನ ಪೇಲ್ ಮಾಡೋದು ಅದ್ಯಾವ ನ್ಯಾಯ? ನಿಂಪರೀಕ್ಸಾ ಮಂಡಲಿಗೆ ದಿಕ್ಕಾರ. ನಿಂಪರೀಕ್ಸೇನೂ ಬೇಡ, ನಿಮ್ಮೆಸ್ಸೆಲ್ಸೀನೂ ಬೇಡ. ನಿಮ್ತಾವೇ ಮಡಿಕ್ಕಳ್ಳಿ. ಉಟ್ಸಿದ್ದೇವ್ರು ಉಲ್ಲು ಮೇಯಿಸ್ದೇ ಇರ್ತಾನಾ?' ಅಂತ ಸತತ ಏಳನೇ ಸಲ ಫೇಲಾದಾಗ ನಮ್ಮ ಸಿಂಗ್ರಿ ನಿರ್ಧರಿಸಿಬಿಟ್ಟ. ಮುಂದೆ?

'ಅಪ್ಪ ನಾನು ಬಿಸಿನೆಸ್ ಮಾಡ್ತೀನಿ. ಪ್ಯಾನ್ಸಿ ಸ್ಟೋರ್ ಮಡಗ್ತೀನಿ. ಒಂದೆಲ್ಡು ಲಕ್ಸ ಕೊಡು' ಅಂತ ಸೀರಿಯಸ್ಸಾಗಿ ಅವನನ್ನ ಹೆತ್ತ ಅಪ್ಪನ್ನ ಕೇಳಿದ. ಅಪ್ಪ 'ಭಿಲ್ಕುಲ್ ಆಘಾಖಿಲ್ಲ' ಅಂತ ಘಟ್ಟಿಯಾಗಿ ಘಂಠಾಘೋಷವಾಗಿ ಹ್ಳೇಳಿಬಿಟ್ಟ.

'ಮತ್ತೆ? ನಾನೇನ್ಮಾಡ್ಲಿ?' ಅಪ್ಪನನ್ನ ಗುರಾಯಿಸಿ ಕೇಳಿದ. 'ಏನಾರ ಮಾಡ್ಕಂಡು ಸಾಯಿ' ಅಂತಂದ ಅವರಪ್ಪ. ಸಿಂಗ್ರಿ ಕೆಲಸಕ್ಕೆ ಟ್ರೈ ಮಾಡಿದ. ಆದರೆ, ಓನ್ಲೀ ಇನ್ ವೇನ್.

ಸರಿ ಗಡ್ಡ ಬಿಟ್ಟ, ಸ್ನಾನ ಮಾಡೋದನ್ನ ಬಿಟ್ಟ, ತಲೇಗೆ ಎಣ್ಣೆ ಹಚ್ಚಿಕೊಳ್ಳೋದನ್ನ ಬಿಟ್ಟ ಪ್ಯಾಂಟು ಷರುಟು ಒಗೆಯೋದನ್ನ ಬಿಟ್ಟ 'ಭಿಕಾರಿ' ಸಿನಿಮಾದ ಹೀರೋ ಥರಾನೇ ಆಗಿಬಿಟ್ಟ 'ಎಲ್ಲಿಗೇ ಪಯಣಾ ಯಾವುದೋ ದಾರೀ' ಅಂತ ಹಾಡುತ್ತಾ ಅಂಡಲೆಯುತ್ತಿದ್ದಾಗ ಹುಡುಗಿಯೊಂದು ಡಿಕ್ಕಿ ಹೊಡೆಯಿತು. ಮುಂದೆ ಹೋಗಿ ಹಿಂದೆ ತಿರುಗಿದಾಗ ಆ ಹುಡುಗಿಯೂ ಹಿಂದೆ ಹೋಗಿ ಮುಂದೆ ತಿರುಗಿತ್ತು. ಇವನಲ್ಲಿ ಧಿಡೀರಾಗಿ ಪ್ರೇಮ ಭುಗಿಲೆದ್ದಿತು. ಅವಳ ಹಿಂದೆ ಓಡಬೇಕೆನ್ನುವಷ್ಟರಲ್ಲಿ ಅವಳು ಬಸ್ ಹತ್ತಿದ್ದಳು. ಹತಾಶನಾಗಿಬಿಟ್ಟ, ಅವಳ ಧ್ಯಾನದಲ್ಲೇ ಕಾಲ ಕಳೆಯತೊಡಗಿದ. ಹತ್ತಾರು ದಿನಗಳ ನಂತರ ಅವಳ ದರ್ಶನ ಸಿಂಗ್ರಿಗೆ ಲಭ್ಯವಾಯಿತು. ಅವಳೂ ಇವನನ್ನು ಗುರುತಿಸಿದಳು. ಆದರೆ ಅಷ್ಟರಲ್ಲಿ ಮತ್ತೆ ಬಸ್ ಹತ್ತಿ ಮಾಯವಾದಳು. ಅವಳ ಮನಸ್ಸು ಇವನಿಗೆ ಅರ್ಥವಾಗಲಿಲ್ಲ, ಹರಸಾಹಸ ಪಟ್ಟು ಅವಳ ಮನೆಯನ್ನು ಕಂಡುಹಿಡಿದ. ಬಿಟ್ಟಿದ್ದನ್ನೆಲ್ಲಾ ಮತ್ತೆ ಕಟ್ಟಿಕೊಂಡ.

"CEO" ಚಿತ್ರದ ಹೀರೋ ಆದ. ಅವಳ ಹಿಂದೆ ನಾಯಿಯಂತೆ ಅಲೆದ. ಉಹು, ಅವಳು ಒಲಿಯಲಿಲ್ಲ, ಪ್ರೇಮ ಪತ್ರಗಳನ್ನು ಅವಳ ಕೈಗೆ ರವಾನಿಸಿದ. ಅವಳು ಬಿಚ್ಚಿ ಕೂಡಾ ನೋಡಲಿಲ್ಲ, ಕೈ ಮೇಲೆ ಬ್ಲೇಡಿನಿಂದ ಕುಯ್ದುಕೊಂಡು ಅವಳಿಗೆ ರಕ್ತದರ್ಶನ ಮಾಡಿಸಿದ. 'ಉಹು' ತಲೆ ಅಲ್ಲಾಡಿಸಿದಳು. ಭೂಮಿಯ ಮೇಲೆ ಕಾಲುಗಳನ್ನಿಟ್ಟು, ಅವಳಿರುವ ರೂಮಿನತ್ತ ದೃಷ್ಟಿ ನೆಟ್ಟು 'ಕೊಲ್ಲು ಉಡುಗಿ ಹೊಮ್ಮೆ ನನ್ನನ್ನು' ಅಂತ ಕೆಟ್ಟ ರಾಗದಲ್ಲಿ ಹಾಡಿದ. 'ಪ್ರೀತ್ಸೇ ಪ್ರೀತ್ಸೇ' ಅಂತ ಬೇಡಿಕೊಂಡ. ಹುಡುಗಿಯ ಅಣ್ಣ ತಕ್ಷಣ ಆಚೆ ಬಂದು ಇವನಿಗೆ ತದುಕಿದ. ಒಂದು ವಾರ ಆಸ್ಪತ್ರೆಯಲ್ಲಿದ್ದ. ಉಹು, ಅವನ ಎಲ್ಲ ಪ್ರಯತ್ನಗಳೂ ವಿಫಲವಾದವು. ಭಗ್ನ ಪ್ರೇಮಿ ಎಂಬ ಪಟ್ಟವನ್ನು ತನಗೆ ತಾನೇ ಕಟ್ಟಿಕೊಂಡ. ಅವಳ ಮೇಲೆ ಆಸಿಡ್ ಎರಚುವ ಧೈರ್ಯವಾಗಲಿಲ್ಲ, ಕಡೆಗೂ ಆತ್ಮಹತ್ಯೆ ಮಾಡಿಕೊಳ್ಳುವ ನಿರ್ಧಾರಕ್ಕೆ ಬಂದುಬಿಟ್ಟ. ಜೀವನದಲ್ಲಿ ಭಗ್ನಪ್ರೇಮಿಯಾಗಿ ಆತ್ಮಹತ್ಯೆ ಮಾಡಿಕೊಳ್ಳೊ ಸಂದರ್ಭ ಬಂದರೆ 'ಟಿಪ್ಪೂ ಡ್ರಾಪ್' ನಲ್ಲೇ ಮಾಡಿಕೊಳ್ಳಬೇಕು ಅನ್ನೋದೇ ಅವನ ಕಟ್ಟಕಡೆಯ ಕೊಟ್ಟ ಕೊನೆಯ ಆಸೆ.

ಸರಿ, ಒಂದು ಪತ್ರ ಬರೆದ. 'ನನ್ನ ಸಾವಿಗೆ ನನ್ನ ಪ್ರೇಯಸಿಯೇ ಕಾರಣ. ಅವಳು ಯಾರನ್ನೇ ಕಟ್ಟಿಕೊಂಡರೂ ಪರವಾಗಿಲ್ಲ, ಒಟ್ಟಿನಲ್ಲಿ ಸುಖವಾಗಿದ್ದರೆ ಸಾಕು. ಮುಂದಿನ ಜಲುಮದಲ್ಲಾದರು ಇವಳೇ ನನ್ನ ಎಂಡಿರಾಗಲಿ ಅಂತ ಆ ದ್ಯಾವರಲ್ಲಿ ಪಾತ್ರಿಸಿಕೊಳ್ತೀನಿ. ಜೈ ಕರ್ನಾಟಕ'

ಇನ್ನೇನು, ಬೆಳಿಗ್ಗೆ ಎದ್ದು ನಂದಿಗೆ ಹೊರಡಬೇಕು, ಪೇಪರಿನಲ್ಲಿ ಸುದ್ದಿ ಕಾಣಿಸಿತು. 'ಅಪಾಯದ ಅಂಚಿನಲ್ಲಿ ಟಿಪ್ಪೂ ಡ್ರಾಪ್'.

ಸಿಂಗ್ರಿ ತಲೆಯ ಮೇಲೆ ಕೈ ಹೊತ್ತ. 'ಬಗವಂತಾ, ನನ್ನ ಮ್ಯಾಲೆ ನಿನಗೇಕಿಷ್ಟು ದ್ವೇಸಾ, ನನ್ನ ಕೊನೇ ಆಸೆಗೂ ಕಲ್ಲು ಆಕಿದೆಯಲ್ಲ' ಅಂತ ಆ ದೇವರಿಗೆ ಬೈದ. ಹಾಗೇ ಸುಮ್ಮನೆ ದಾರಿಗುಂಟಾ ನಡೆದ. ಎದುರಿಗೆ ವೈಯ್ಯಾರಿಯೊಬ್ಬಳು ಬರುತ್ತಿದ್ದಳು. ಇವನನ್ನು ನೋಡಿ 'ಕಿಸಕ್' ಅಂದಳು. ಆ ಕ್ಷಣದಲ್ಲಿ ಟಿಪ್ಪೂ ಡ್ರಾಪ್ ವಿಷಯಾನ್ನೇ ಡ್ರಾಪ್ ಮಾಡಿ ವೈಯ್ಯಾರಿಯ ಹಿಂದೆ ಹೆಜ್ಜೆ ಹಾಕಿದ.

ಜೈ ಕರ್ನಾಟಕ!

❖❖❖

ಕಾರಣ

ನಂ ಅಜ್ಜಯ್ಯ
ಪ್ಯೂರ್ ವೆಜ್ಜಯ್ಯ
ನಂ ಅಪ್ಪಯ್ಯ
ಬರೀ ಸೊಪ್ಪಯ್ಯ
ಆದ್ರಿಂದ ನಾನು
ತಿನ್ನೋದಿಲ್ಲ ಉ

– ಎಚ್. ಡುಂಡಿರಾಜ್

'ಅಹಂ ದಡ್ಡಾಸ್ಮಿ'

❖ ವಿ. ಪ್ರಾಣೇಶ್‌ರಾವ್

(ಆರ್. ನರಸಿಂಹಾಚಾರ್‌ರಿಂದ ಪ್ರೇರಿತರಾದ ದಾಶರಥಿ ದೀಕ್ಷಿತರು 'ಕೊರವಂಜಿ'ಯಲ್ಲಿ ಬರೆದರು. ಅವರಿಂದ ಪ್ರೇರಿತರಾದ 'ವಿಪ್ರ'ರು 'ಅಪರಂಜಿ'ಯಲ್ಲಿ ಬರೆದಿದ್ದಾರೆ. ಏನಂತ! ಮುಂದೆ ಓದಿ...)

ದೇಶದ ಏಕಮೇವಾದ್ವಿತೀಯ ಎನಿಸಿರುವ ಮಠವೊಂದು ತಿಗಳರ ಪೇಟೆಯ ಮೂರ್ಖಪುರ ಬಡಾವಣೆಯಲ್ಲಿದೆ. 'ದಡ್ಡೇಶಮಠ' ಅರ್ಥಾತ್ 'ದಡ್ಡರ ದೊಡ್ಡಿ' ಎಂದೇ ಪ್ರಖ್ಯಾತವಾಗಿರುವ ಈ ಮಠದ ಮಹಾದ್ವಾರದ ಮೇಲೆ 'ದಡ್ಡನಾದರೆ ಏನು ದಬಕನಾದರೆ ಏನು ಗಡ್ಡ ಮೀಸೆ ಬಂದರೆ ಸಾಕು' ಎಂಬ ಧ್ಯೇಯ ವಾಕ್ಯವನ್ನು ಬರೆಸಲಾಗಿದೆ. 'ತೀರ್ಥಪ್ರಿಯ' ಎಂಬುದೂ ಸೇರಿ ಶ್ರೀ 1008 ಶ್ರೀ ಶ್ರೀ ಅಲ್ಲಲ್ಲ ಲೆಕ್ಕವಿಲ್ಲದಷ್ಟು 'ಶ್ರೀ' ಬಿರುದಾಂಕಿತರಾದ ಶ್ರೀಶ್ರೀಶ್ರೀ 'ದಡ್ಡೇಶತೀರ್ಥ'ರು ಮಠದ ಯತಿವರ್ಯರು. ಇನ್ನು ಇವರ ದೈವ ಅಮೂರ್ತ ಸ್ವರೂಪನೂ ಸರ್ವಾಂತರ್ಯಾಮಿಯೂ ನಮ್ಮ ನಿಮ್ಮೆಲ್ಲರೊಳು ಶಾಶ್ವತ ನೆಲೆಸಿರುವವನೂ ಆದ 'ಶ್ರೀ ದಡ್ಡೇಶ ಪ್ರಭು'ವು. ತಲತಲಾಂತರಗಳ ಹಿಂದೆ ಈ ಮಠದ ಪ್ರಥಮ ಹಾಗೂ ಸಂಸ್ಥಾಪನಾಚಾರ್ಯರೂ ಆದ ಅಂದಿನ ಗುರುಗಳಿಗೆ 'ಪೃಷ್ಠವು' ಎಂದು ತಣ್ಣಗಾಗುವುದೊ ಅಂದು ಸಾವು ಸಮೀಪಿಸಿತು ಎಂದು ತಿಳಿಯಬೇಕು' ಎಂದು ಯಾರೊ ಜೋಯಿಸ ನುಡಿದಿರುತ್ತಾರೆ. ಒಂದು ದಿನ ಗುರುಗಳು ತಮ್ಮ ಶಿಷ್ಯರೊಡಗೂಡಿ ಸಂಚರಿಸುತ್ತಿರುವಾಗ ಹಳ್ಳವೊಂದರಲ್ಲಿ ತಮ್ಮ ಮುದಿ ಕುದುರೆಯ ಮೇಲಿಂದ ಆಯತಪ್ಪಿ ಕೆಳಕ್ಕೆ ಬೀಳುತ್ತಾರೆ. ಆಗ 'ಪೃಷ್ಠಶೀತ'ಕ್ಕೆ ತಾವು ಬಲಿಯಾದೆವೆಂದು ಭ್ರಮಿಸಿ ಬೋಧೆ ತಪ್ಪುತ್ತಾರೆ. ಆಗ ಗುರುಗಳು ಕೈಲಾಸವಾಸಿಗಳಾಗಿದ್ದಾರೆಂದು ಭಾವಿಸಿದ ಮೂರ್ಖ ಶಿಷ್ಯರು ಅವರನ್ನು ನೀರಿನ ತೊಟ್ಟಿಗೆಸೆಯುತ್ತಾರೆ. ಹಾಗೆ ನೀರಿನ ತೊಟ್ಟಿಗೆಸೆಯಲ್ಪಟ್ಟ ಗುರುಗಳು ದಡ್ಡೇಶ ಪ್ರಭುವಿನಲ್ಲಿ ಐಕ್ಯರಾದಂದಿನಿಂದ ಪ್ರತಿ ವರ್ಷವೂ ಕಾಮನ ಹುಣ್ಣಿಮೆಯಂದು ಇಲ್ಲಿ ಪ್ರಥಮ ಶ್ರೀಗಳ ಸಾಂವತ್ಸರಿಕ ಶ್ರಾದ್ಧ ಅರ್ಥಾತ್ 'ದಡ್ಡತನದ ಆರಾಧನೆ' ಜರುಗುತ್ತದೆ. ಅಂದು ತಳಿರು ತೋರಣಗಳಿಂದ ಹೂಹಾರಗಳಿಂದ ಸಿಂಗಾರಗೊಂಡ ಮಠದ ಮಹಾದ್ವಾರದ ಮುಂಭಾಗದಲ್ಲಿ ಗುರುಗಳ ನೇತೃತ್ವದಲ್ಲಿ ಮುಖ್ಯ ಶಿಷ್ಯರೊಡಗೂಡಿ ಇತರ ಶಿಷ್ಯಕೋತಿ ಅಲ್ಲಲ್ಲ ಶಿಷ್ಯಕೋಟಿ ಮುಂಜಾನೆಯಿಂದ ಮಧ್ಯಾಹ್ನದವರೆಗೆ ಸತತವಾಗಿ ಬಾಯಿಬಡಿದುಕೊಳ್ಳುತ್ತಾರೆ – ಈ ಹಿಂದೆ ಕಾಲವಾದ ಗುರುಗಳನ್ನು ನೆನೆದು! ಈ ಬಾಯಿ

ಬಡಿದುಕೊಳ್ಳುವಿಕೆಗೆ ಮುಖ್ಯ ಪ್ರೇರಣೆ ನಡು ಮಧ್ಯಾಹ್ನದ ನಂತರದ ಮಹಾ ಮಂಗಳಾರತಿಯಾದ ಮೇಲೆ ಸಿಕ್ಕುವ ಹಾಲು ಹೋಳಿಗೆಯ ಭರ್ಜರಿ ಊಟ. ಹುಣ್ಣಿಮೆ ದಿನದಂದು ಆಗಸದಂಚಿಗೆ ಕಾಣುವ ಚಂದ್ರನ ವಿಸ್ತಾರದಷ್ಟು ದೊಡ್ಡ ಹೂರಣದ ಹೋಳಿಗೆ, ರೇಶಿಮೆಯಷ್ಟು ಮಿದುವಾದ ಆ ಹೋಳಿಗೆ ಗಂಟಲಲ್ಲಿ ಇಳಿಯಲು ಇಳಿದ ಉಷ್ಣದ ನೊರೆಹಾಲು, ಜಾತಿ ಹಸುಗಳ ತಾಜಾ ಬೆಣ್ಣೆ ಕರಗಿಸಿದ ಬಿಸಿ ತುಪ್ಪದ ಊಟ ಯಾರಿಗುಂಟು ಯಾರಿಗಿಲ್ಲ. ಎಲ್ಲರೂ ಬಾಯಿ ಬಡಕೊಂಡು ಆದಮೇಲೆ ಮಟಮಟ ಮಧ್ಯಾಹ್ನ ಶಂಖವಾದ್ಯ ಜಾಗಟೆ ತಮ್ಮಟೆಯ ಘೋಷದೊಂದಿಗೆ ಜರುಗುವ ಮಹಾ ಮಂಗಳಾರತಿಯ ನಂತರ ಭರ್ಜರಿ ಊಟ – ಪೋಣಿಸುವ ಕಾರ್ಯಕ್ರಮ! 'ಶ್ರಾದ್ಧದೂಟ ಸುಮ್ಮನೆ। ನೆನೆಸಿಕೊಂಡು ಜುಮ್ಮನೆ। ನೀರೂರಿ ನಾಲಿಗೆ ಕುಣಿವುದಯ್ಯ ಕಮ್ಮನೆ। ಲಲ್ಲಲಲ್ಲ ಲಲ್ಲಲಾ ಎಂಬ ಹಾಡಿನಲ್ಲಿರುವಂತೆ 'ಭಕ್ತಾದಿ'ಗಳು ಸಂಭ್ರಮಿಸಿದ್ದೇ ಸಂಭ್ರಮಿಸಿದ್ದು.

ಮಠದ ಮೊದಲ ಗಾಂಪರೊಡೆಯರು ಅವರಿಗೆ ಮಠದಲ್ಲಿ ಹೇಳಿದ ಕೆಲಸವನ್ನು ಮಾಡುತ್ತ, ಮರುಳ, ಮಂಕ, ಮುಟ್ಠಾಳ, ಮಡೆಯ, ಮಡ್ಡಿ ಎಂಬ ಬಿರುದುಗಳನ್ನು ಹೊಂದಿದ ಐವರು ಶಿಷ್ಯರಿದ್ದರು. ಈ ಐವರು 'ಎಡವಟ್ಟು ಎರಡು ಹರದಾರಿ' ಎಂಬ ಮಾತಿನಂತೆ ಕೈ ಹಾಕಿದ ಯಾವುದೇ ಕೆಲಸವನ್ನು ಹಾಳುಮಾಡಿ ಹತ್ತಿ ಬಿತ್ತಿ ಬಿಡುತ್ತಿದ್ದರು. ಈ ಪರಂಪರೆ ಇಂದಿಗೂ ಮುಂದುವರೆದುಕೊಂಡು ಬಂದಿದೆ ಎಂದರೆ ಯಾರಿಗೂ ಆಶ್ಚರ್ಯವಾಗದಿರದು. ಇಂದಿನ ಮಠದಲ್ಲಿ ಮಠದ ಪಾರುಪತ್ಯಗಾರರಂತೆ ವರ್ತಿಸುತ್ತಿರುವ ಶಿಷ್ಯಶಿಖಾಮಣಿಗಳಾದ ದಡ್ಡ, ದಬಕ, ತಿಗಳ, ತೆಪರ, ತಿಳಿಗೇಡಿಗಳಿದ್ದಾರೆ. ಯಾವುದಕ್ಕೂ ಕೆಲಸಕ್ಕೆ ಬಾರದವರು. 'ಅಣಸು ಹಾಕಿದ ಒನಕೆಯಂತೆ ಇವರ ಬುದ್ಧಿ ಚಿಗುರುತ್ತಿರುತ್ತದೆ'. ಮೇಲಾಗಿ ತಿಂಡಿಪೋತ ರಾಮಣ್ಣಗಳೂ ಬೇರೆ – ವಿಶೇಷವಾಗಿ ಇವರ ಗುರುಗಳು! ಇನ್ನು ಭಕ್ತಾದಿಗಳೂ ಅಪಾರ ಸಂಖ್ಯೆಯಲ್ಲಿದ್ದಾರೆ. ಅಲ್ಲ ಇಂದು ಯಾವ ಮಠಕ್ಕೆ ಭಕ್ತಾದಿಗಳಿಲ್ಲ! ಸುಮ್ಮನೆ ಕಣ್ಣು ಮುಚ್ಚಿಕೊಂಡು ಕುರಿಗಳಂತೆ ಗುರುಗಳಿಗೆ ಬಾಬಾಗಳಿಗೆ ದೀಪದ ಹುಳುಗಳಂತೆ ಮುಕುರಿಕೊಳ್ಳುವ ಅದೆಷ್ಟು ಜನ ಭಕ್ತರಿಲ್ಲ. ಇಂದು ದಡ್ಡತನ ಜಗದ್ವ್ಯಾಪಿಯಾಗಿದೆ. ಮಠದ ಒಳಗೂ ಹೊರಗೂ ದಡ್ಡರ ದೊಡ್ಡ ಪಡೆಯೇ ಇದೆ. ಗಣೇಶ ಹಾಲು ಕುಡಿಯುತ್ತಾನೆ ಎಂದು ನಂಬುವವರಿದ್ದಾರೆ. ಬಂಗಾರದ ವಸ್ತು ಒಡವೆ ಹಣಕಾಸು ದ್ವಿಗುಣಗೊಳಿಸುತ್ತೇವೆ ಎನ್ನುವವರಲ್ಲಿ ಬಂಗಾರ ಹಣಕಾಸು ಕಳೆದುಕೊಂಡವರಿದ್ದಾರೆ. ನಿಧಿ ಶೋಧನೆಗಾಗಿ ಹೆತ್ತ ಕರುಳ ಕುಡಿಯನ್ನೇ ಬಲಿಕೊಟ್ಟವರಿದ್ದಾರೆ. ಮಾಟ, ಮಂತ್ರ, ಯಜ್ಞ ಯಾಗಾದಿಗಳು, ವಶೀಕರಣ... ಒಂದೇ ಎರಡೇ ಈ ದಡ್ಡರನ್ನು ಬಲಿ ತೆಗೆದುಕೊಳ್ಳಲು. ಸುದ್ದಿ ಮಾಧ್ಯಮಗಳ ಮೂಲಕ ಇಂದು ಎಲ್ಲ ಗೊತ್ತಿದ್ದೂ 'ಇರುಳು ಕಂಡ ಬಾವಿಯಲ್ಲಿ ಹಗಲು ಬೀಳುವವರ ಸಂಖ್ಯೆ ಜಾಸ್ತಿಯಾಗುತ್ತಿದೆ' ಎಂಬಲ್ಲಿಗೆ ತಿಗಳರ ಪೇಟೆಯ ಮೂರ್ಖಪುರ ಬಡಾವಣೆಯ 'ದಡ್ಡರ ದೊಡ್ಡಿ' ಎಂದೇ ಪ್ರಖ್ಯಾತವಾಗಿರುವ 'ದಡ್ಡೇಶಮಠ' ಉರುಫ್ 'ಗಾಂಪರಮಠ'ದ ಕಥಾನಕದ ಉಪ್ಪೋದ್ 'ಘಾತ'ವು ಸಮಾಪ್ತವಾದುದು.

1. 'ಶ್ರೀ ಸತ್ಯನಾರಾಯಣ ಪ್ರಸಾದದ ಕಥೆ' ಎಂಬ ಪ್ರಹಸನವು:

ಅಂದು ಮಠದಲ್ಲಿ ಸಾಮೂಹಿಕ ಸತ್ಯನಾರಾಯಣ ಪೂಜೆ. ತನ್ನಿಮಿತ್ತ ಬೆಳಗಿನಿಂದ ಮಠದಲ್ಲಿ ಸಂಭ್ರಮ. ಸಡಗರ. ಶಿರೀ ಮಠವು ತಳಿರು ತೋರಣ ಹೂಹಾರಗಳಿಂದ ಸಿಂಗರಿಸಿಕೊಂಡು ನವವಧುವಿನಂತೆ ಶೋಭಾಯಮಾನವಾಗಿತ್ತು. ಹೂ ಹಣ್ಣುಗಳು ದವಸಧಾನ್ಯಗಳು ಎಂದಿಗಿಂತ ಅಂದು ದುಪ್ಪಟ್ಟು ಬಂದು ಬೀಳುತ್ತಿದ್ದವು. ಮಠದ ಪಾರುಪತ್ಯಗಾರರಂತೆ, ಹಿರೇಮಣಿಗಳಂತೆ ವರ್ತಿಸುತ್ತಿದ್ದ ಶಿಷ್ಯಶಿಖಾಮಣಿಗಳಾದ ದಡ್ಡ ದಬಕ, ತಿಗಳ, ತೆಪರ, ತಿಳಿಗೇಡಿಗಳಿಗೆ ಎಲ್ಲಿಲ್ಲದ ಸಂಭ್ರಮ, ಬಿಡುವಿಲ್ಲದ ಕೆಲಸ ಕಾರ್ಯಗಳು.

ಗುರುಗಳು ದಬಕನನ್ನು ಕರೆದು ಪೂಜೆಗೆ ಮಂಟಪವನ್ನು ಕಟ್ಟಲು ಹೇಳಿದರು.

ಸ್ವಲ್ಪಸಮಯದ ನಂತರ ಅಲ್ಲಿಗೆ ಬಂದ ದಡ್ಡ ದಬಕ ಮಂಟಪಕ್ಕೆ ಕಟ್ಟಿದ್ದ ಎಲೆ-ಹೂವು, ಕಬ್ಬು ಬಾಳೆಗಳನ್ನು ಮೆಚ್ಚುಗೆಯಿಂದ ಮುಟ್ಟಿ ಸರಿಸಿ ನೋಡಿದ. ಮಂಟಪದ ಹಿಂದೆ ಗೋಡೆಯ ಮೇಲಿದ್ದ ಕೆಲವು ಅಕ್ಷರಗಳು ಅವನ ಕಣ್ಣಿಗೆ ಬಿದ್ದವು. ಅವುಗಳನ್ನು ಓದಿದ ಅವನು ಹಿಂತಿರುಗಿ ದಬಕನ ಕಡೆ ನೋಡಿದರೆ ಅವನು ಜೊಲ್ಲು ಸುರಿಸುತ್ತ, ಲೊಟ್ಟೆ ಹೊಡೆಯುತ್ತ ಕುಳಿತಿದ್ದಾನೆ.

ಅವನ ಪಾಡನ್ನು ನೋಡಿದ ಇವನಿಗೆ ಏನೋ ರಸವತ್ತಾದುದಿರಬೇಕು ಅಂತ ಅನಿಸಿ ಏನು ಎಂಬಂತೆ ಹುಬ್ಬೇರಿಸಿ ಮೌನವಾಗಿ ಪ್ರಶ್ನಿಸಿದ. ಅವನು ಇನ್ನಷ್ಟು ಜೊಲ್ಲು ಸುರಿಸುತ್ತಾ "ಇಂದು 'ಪ್ರಸಾದ' ಅಂದ್ರೆ ದ್ರಾಕ್ಷಿ ಗೋಡಂಬಿ, ತುಪ್ಪ ಸುರಿದ ಸಪಾದ ಭಕ್ಷ್ಯ ಯಥೇಚ್ಛಕಣೋ..." ಎಂದು ಮತ್ತೆ ಮತ್ತೆ ನಾಲಿಗೆ ಸವರಿಕೊಂಡ.

ಇದನ್ನು ಕೇಳುತ್ತ ಕುಳಿತುಕೊಂಡ ದಡ್ಡ ಸರಕ್ಕನೆ ಮಂಟಪದ ಕಡೆ ಸರಿದು ಹೋಗಿ ಮತ್ತೊಮ್ಮೆ ಹೂ ಎಲೆಗಳನ್ನು ಸರಿಸಿ ನೋಡಿದರೆ ಅಲ್ಲಿ ದಬಕ ಬರೆದಿದ್ದುದೇನು?! ॥ಶ್ರೀ ಸತ್ಯನಾರಾಯಣ ಪ್ರಸನ್ನ॥ ಎಂಬುದರ ಬದಲಾಗಿ ॥ಸೀರಿ ಸತ್ತನರಯಾಣ ಪ್ರಸಾದ॥ ಎಂದು.

ಆಗ ಫೋಳ್ಳನೆ ನಕ್ಕ ದಡ್ಡ 'ನಂಗು ಬೆಕ್ಕು' ಎಂದು ಆ ಸಾಲಿನ ಮುಂದೆ ಸೇರಿಸಿದ. ಅಷ್ಟರಲ್ಲಿ ಅಲ್ಲಿಗೆ ಬಂದ ತಿಗಳ 'ಪ್ರಸಾದ ನಂಗು ಬೇಕು' ಎಂಬುದನ್ನು 'ನುಂಗಬೇಕು' ಎಂದು ತಿದ್ದಲು ಹೋಗಿ 'ನುಗಬೇಕು' ಎಂದು ಬರೆದು ಸುಸ್ತಾದ.

ಇಷ್ಟೆಲ್ಲ ಆಗುತ್ತಿರುವಾಗ ಅಲ್ಲಿ ಒಳಗೆ ಗುರುಗಳು ಪ್ರಸಾದ ಹೇಗಾಗಿದೆ ಎಂದು ಪ್ರಸಾದಕ್ಕೆ ಮೋಕ್ಷ ಕಾಣಿಸುತ್ತಿದ್ದರು ಎಂಬಲ್ಲಿಗೆ 'ಶ್ರೀ ದಡ್ಡೇಶ ಮಠ'ದಲ್ಲಿ ಜರುಗಿದ 'ಶ್ರೀ ದಡ್ಡೇಶ ಪ್ರೇರಿತ' 'ಸೀರಿ ಸತ್ತನರಯಾಣ' ಅಲ್ಲಲ್ಲ 'ಶ್ರೀ ಸತ್ಯನಾರಾಯಣ ಪ್ರಸಾದದ ಕಥೆ' ಎಂಬ ಪ್ರಹಸನವು ಪರಿಸಮಾಪ್ತವಾದುದು.

2. "ಕಡುಬಿನ ಕಾಳಗವೂ, ಗುರುಗಳ ಉದರೋಷ್ಣಪ್ರಾಪ್ತಿಯೂ'

ಒಮ್ಮೆ ಗುರುಗಳಿಗೆ ಕಡುಬು ತಿನ್ನಬೇಕು ಎನ್ನಿಸಿತು. ಅದರಲ್ಲೂ ಮಸ್ತಿಕಡುಬು ಎಂದರೆ ಅವರಿಗೆ ಪಂಚಪ್ರಾಣ. ಮಸ್ತಿ ಕಡುಬು ಒಂದು ವಿಶೇಷ ರಸಜನ್ಯ ಭಕ್ಷ್ಯವು. ಇದರ ಇತಿಹಾಸ,

ಮೂಲ ಪ್ರಕಾರ ಯಾವುದೂ ಅಷ್ಟಾಗಿ ತಿಳಿದುಬಂದಿಲ್ಲವಾದರೂ ಅಬಾಲ ವೃದ್ಧರಾದಿಯಾಗಿ ಲೊಟ್ಟೆ ಹೊಡೆದು ತಿಂದು ಆನಂದಿಸಬಹುದಾದ ಸಿಹಿ ತಿನಿಸು. ಬೇರೆ ಯಾವುದೇ ವಿಷಯದಲ್ಲಿ ದಡ್ಡರಾಗಿದ್ದರೂ ದಡ್ಡ ದಬಕರಾದಿಯಾಗಿ ಈ ಐವರೂ ನಳಪಾಕ ಪ್ರವೀಣರು. ಇಂಗು ತೆಂಗು ದ್ರಾಕ್ಷಿ ಗೋಡಂಬಿ ಹಾಕುವುದರಲ್ಲಿ ವ್ಯತ್ಯಾಸ ಮಾಡಿಯಾರೇ. ಕರಿಬೇವು ಹಾಕುವಲ್ಲಿ ಬೇವಿನಸೊಪ್ಪೂ ಒಳ್ಳೆಣ್ಣೆ ಹಾಕುವಲ್ಲಿ ಹರಳೆಣ್ಣೆ ಹಾಕಿಯಾರೇ. ಈ ಮಠದಲ್ಲಿ ಇವರದು ಸಾಕ್ಷಾತ್ ನಳಭೀಮರ ಅವತಾರವೋ ಅಥವಾ ದೇವ ಬಾಣಸಿಗರಿಗೆ ಇವರ ಅವತಾರದಲ್ಲಿ ಅಜ್ಞಾತವಾಸವೋ ಅವರ ದೈವ ದಡ್ಡೇಶ ಪ್ರಭುವಿಗೇ ಗೊತ್ತು.

ಮಸ್ತಿಕಡುಬು – ಬೆಲ್ಲ ಹೂರಣದ ಜೊತೆಗೆ ಕಾಲ್ಟಿಕಲ್ಸಕ್ರಿ, ದೀಪದ ದ್ರಾಕ್ಷಿ ಗೋಡಂಬಿ, ಏಲಕ್ಕಿಹುಡಿ, ಪಚ್ಚಕರ್ಪೂರ... ಹೀಗೆ ಏನೆಲ್ಲ ಸೇರಿಸಿ ಘಮ್ಮೆನುವಂತೆ ಕರಿದ ಗೇಣುದ್ದದ ತಿನಿಸು ಗಾಂಪರೊಡೆಯರಿಗೆ ಅಮೃತ ಸಮಾನ, ಬಳ್ಳಾರಿ ಬೀchiಯವರು ಒಂದು ಪ್ರಸಂಗದಲ್ಲಿ ಹೀಗೆ ಹೇಳುತ್ತಾರೆ: 'ಅಮ್ಮ ನಿಮ್ಮ ಪಾಲಿಗೆ ಒಂದೆರಡು ಕಡುಬನ್ನು ಇರಿಸಿಕೊಂಡು, ಉಳಿದದ್ದನ್ನು ನನಗೆ ಹಾಕಿ' ಅಂತ. ಅದೇ ರೀತಿ ಗುರುಗಳು ದಡ್ಡ ದಬಕರಿಗೆ ಸ್ವಲ್ಪ ಉಳಿಸಿ ಗಡಿಗೆಗಟ್ಟಲೆ ತುಪ್ಪದಲ್ಲಿ ಮೊರಗಟ್ಟಲೆ ಕಡುಬನ್ನು ಮೆದ್ದು ಮಲಗಿದರು.

ರಾತ್ರಿ ಸರಿ ಹೊತ್ತಿನಲ್ಲಿ ಏನೊ ಗುಡು ಗುಡು ಅಂತ ಉರುಳಾಡಿದ ಸದ್ದು! ತೆಪರನಿದ್ದು "ದಬಕ, ಏಳೊ ಭೂಕಂಪ ಆಗತಾ ಇದೆ" ಎಂದ. "ಇಲ್ಲ ಪಕ್ಕದ ಕೋಣೆಯಲ್ಲಿ ಕುಂಬಳಕಾಯಿ ಉರುಳಾಡುವಂತಿದೆ" ಎನ್ನುತ್ತಾ ಕಣ್ಣು ಹೊಸಕಿಕೊಂಡು ಹೋಗಿ ನೋಡುತ್ತಾರೆ. ಗುರುಗಳು ಗದಗುಟ್ಟಿ ಹೊರಳಾಡುತ್ತಿದ್ದಾರೆ! ತೇಲುಗಣ್ಣು ಮೇಲುಗಣ್ಣು ಮಾಡುತ್ತಿರುವ ಗುರುಗಳ ಬಳಿ ಐವರೂ ಹೋಗಿ ನೋಡಿದಾಗ ಅವರು ಹೊಟ್ಟೆ ಹಿಡಿದುಕೊಂಡು ಗೋಳಾಡುವುದು ಕಂಡುಬರುತ್ತದೆ. ಕಲ್ಲುಬಂಡೆಯಂತಾಗಿರುವ ಹೊಟ್ಟೆಯಲ್ಲಿ ತುಪ್ಪ ಹೆಪ್ಪುಗಟ್ಟಿದೆ! ದಬಕನಿಗೆ ಏನೊ ಹೊಳೆಯಿತು. ಎಲ್ಲರನ್ನೂ ಕರೆದುಕೊಂಡು ಹಿತ್ತಲಿನ ಕಡೆ ಹೊರಟನು. ಸ್ವಲ್ಪ ಹೊತ್ತಿನಲ್ಲೇ ಐದೂ ಜನರೂ ಒಳಗೆ ಬಂದು ಗುರುಗಳನ್ನು ಕೈಕಾಲುಗಳ ಬಳಿ ಆನಾಮತ್ತಾಗಿ ಎತ್ತಿಕೊಂಡು ಅವರು ಲಬೊಲಬೊ ಅಂತ ಹೊಯ್ಕೊಳ್ಳುತ್ತಿದ್ದರೂ ಬಿಡದೆ ಧಗಧಗನೆ ಉರಿಯುತ್ತಿರುವ ಬೆಂಕಿಯ ಮೇಲೆ ಹೊಟ್ಟೆಯ ತುಪ್ಪ ಕರಗುತ್ತದೆಂದು ಊಗಾಡಿಸಿಯೇ ಊಗಾಡಿಸಿದರು. ಅವರು ತಮ್ಮನ್ನು ಖಂಡಿತವಾಗಿಯೂ ಬೆಂಕಿಗೆಸೆಯುತ್ತಾರೆಂದು ಭಾವಿಸಿದ ಗುರುಗಳಿಗೆ ಬೋಧೆ ತಪ್ಪಿತು. ಸ್ವಲ್ಪ ಹೊತ್ತಿನಲ್ಲೇ ಎಚ್ಚರವಾದ ಗುರುಗಳಿಗೆ ಹೊಟ್ಟೆಯಲ್ಲಿರುವುದೆಲ್ಲ ವಾಂತಿಯಾಗಿ ನಿರಾಳವಾಯಿತು. ಅಂತೂ ಇಂತೂ ಗುರುಗಳ ಉದರೋಷಣ ಪ್ರಾಪ್ತಿಯಿಂದ ಕಡುಬಿನ ಕಾಳಗ ಕೊನೆಗೊಂಡಿತ್ತು.

3. 'ಅಹಂ ದಡ್ಡಾಸ್ಮಿ' ಎಂಬ ಬೋಧನೆಯು:

ಗೋಧೂಳಿ ಸಮಯದಲ್ಲಿ ಆ ಮೋಟು ಗೋಡೆಯ ಬಳಿ ಬಂದು ಗಾಂಪರೊಡೆಯರು ಆಸೀನರಾದರು. ದಡ್ಡತನ, ಮೂರ್ಖತನ, ಭೋಳೆತನ, ಬೆಪ್ಪನ, ಗಾಂಪತನದ ಅಪರಾವತಾರದಂತಿದ್ದ ದಡ್ಡ, ದಬಕ, ತಿಗಳ, ತೆಪರ, ತಿಳಿಗೇಡಿಗಳು ಅಲ್ಲಲ್ಲೇ ಕುಳಿತುಕೊಂಡರು. ಸ್ವಲ್ಪ ಹೊತ್ತಿನಲ್ಲೇ ಕೆಲವು ಭಕ್ತಾದಿಗಳೂ ಬಂದು ಅಲ್ಲಿ ನೆರೆದರು.

ಕಣ್ಣುಮುಚ್ಚಿ ಧ್ಯಾನಾಸಕ್ತರಾದ ಗಾಂಪರೊಡೆಯರು ಗಾಂಪೇಶ ಪ್ರಭುವಿನ ಧ್ಯಾನದಿಂದ ಹೊರಬಂದು 'ಅಹಂ ದಡ್ಡಾಸ್ಮಿ', 'ಅಹಂ ದಡ್ಡಾಸ್ಮಿ' ಎಂದು ಒಂದೆರಡಾವರ್ತಿ ಉದ್ಗರಿಸಿದರು. ನಿಧ ನಿಧಾನವಾಗಿ ಕಣ್ಣು ತೆರೆದು ಸುತ್ತಲೂ ಕುಳಿತ ಭಕ್ತವೃಂದವನ್ನು ವೀಕ್ಷಿಸಿದರು. 'ಅಹಂ ದಡ್ಡಾಸ್ಮಿ' ಎಂದರೇನು? 'ನಾನು ದಡ್ಡ ಎಂದಲ್ಲವೇ?' ನಾನು ದಡ್ಡ, ನೀನು ದಡ್ಡ, ಎಲ್ಲರೂ ದಡ್ಡರೇ. ಆ ದಡ್ಡೇಶ ಪ್ರಭುವೊಬ್ಬನೇ ಜಾಣ ನಾವೂ ನೀವೂ ಜಾಣರಾಗಲು ಸಾಧ್ಯವಿಲ್ಲ, ಜಾಣರೆಂಬ ಭ್ರಮೆಯಲ್ಲಿ ಇದ್ದೇವೆ ಅಷ್ಟೆ ಮೇಲಾಗಿ ದಾಸರೇ ಹೇಳಿಲ್ಲವೇ, 'ಏನ ಬಲ್ಲೆನು ನಾನು ನೆರೆಸುಜ್ಞಾನ ಮೂರುತಿ ನೀನು' ಎಂದು...' ಎನ್ನುತ್ತ ಗುರುಗಳು ಭಾವಪರವಶರಾದರು. ''ಗುರುವೇ ಒಂದು ಸಂದೇಹ, ಜಾಣರ ಜಾಣನಾದ ದೇವನನ್ನು 'ದಡ್ಡೇಶ ಪ್ರಭು'ವೆಂದು ಏಕೆ ಕರೆಯುತ್ತೀರಿ?!'' ದಡ್ಡ ದಬಕ ಒಮ್ಮೆಲೇ ಪ್ರಶ್ನಿಸಿದರು. ''ಅವನನ್ನು ಪ್ರೀತಿಯಿಂದ ಏನೆಂದು ಕರೆದರೂ ಸರಿ. ದಡ್ಡನೆಂದರು ಅವನೇ. ಡಬಕನೆಂದರೂ ಅವನೇ'' ಎಂದು ನುಡಿದರು ಗುರುಗಳು. ವ್ಯಾಕರಣದ ಪ್ರಕಾರವೂ ಸರಿ 'ದಡ್ಡರಿಗೆ ಈಶ ದಡ್ಡೇಶ' - ನಾಮಪದ.

ಲೌಕಿಕಕ್ಕೆ ಬರುತ್ತಾ ''ನೋಡಿ ಭಕ್ತಾದಿಗಳೇ, ನಾವು ಮನೆಯಲ್ಲಿ ಹೆಂಡತಿ ಎದುರು ದಡ್ಡರಾಗದೇ ವಿಧಿಯಿಲ್ಲ, ಅಲ್ಲಿ ದಡ್ಡರಾಗದೇ ವಿಧಿಯಿಲ್ಲ, ಅಲ್ಲಿ ದಡ್ಡರಾಗೇ ವರ್ತಿಸಬೇಕು. ಅವಳಲ್ಲಿ ಜಾಣತನವನ್ನು ತೋರಬಾರದು. ದಡ್ಡತನದಲ್ಲೇ ಎಲ್ಲ ಸುಖವನ್ನೂ ಕಾಣಬೇಕು. ನನಗಿಂತಲೂ ನಿಮಗೆ ಇದರ ಅನುಭವ ಜಾಸ್ತಿ'' ಎಂದು ನಕ್ಕರು ಗುರುಗಳು. ''ಅಂತೆಯೇ ಕಛೇರಿಯಲ್ಲಿ ಬಾಸಿನೆದುರು ನೀವು ಎಂದೂ ಜಾಣರಾಗಲು ಹೋಗಬಾರದು ಅವನು ಕತ್ತೆಯನ್ನು ಕುದುರೆ ಎಂದರೆ ಅಹುದು ಎನ್ನಬೇಕು. ನಿನಗೆ ಬುದ್ಧಿ ಇಲ್ಲಾ ಎಂದು ಬೈದಾಡಿದರೆ ಅದನ್ನು ಪರಮ ಪ್ರಸಾದ ಎಂದು ಸ್ವೀಕರಿಸಬೇಕು. ಹೀಗೇ ಬದುಕಿನ ಮಾರ್ಗವನ್ನು ಕಂಡುಕೊಳ್ಳಬೇಕು. ಅಹಂ ದಡ್ಡಾಸ್ಮಿ ಅಹಂ ದಡ್ಡಾಸ್ಮಿ'' ಎನ್ನುತ್ತಾ ಗುರುಗಳು ಅಲ್ಲಿಂದ ಎದ್ದರು. ಶಿಷ್ಯರೂ ಭಕ್ತಾದಿಗಳೂ ಅವರನ್ನು ಹಿಂಬಾಲಿಸಿದರು.


4. ಪ್ರೀತಿ ಪ್ರೇಮ ಪ್ರಣಯ ಅರ್ಥಾತ್ ಪ್ರೇಮ ಪ್ರಸಂಗವು:

ಅದೊಂದು ರಾತ್ರಿ ಊರಿನ ಟೂರಿಂಗ್ ಟಾಕೀಸಿನಲ್ಲಿ 'ಲವ್ ಟ್ರೇನಿಂಗ್' ಸಿನಿಮಾ ನಡೀತಾ ಇದೆ. ಅದು ಹೇಗೊ ಮಠದಿಂದ ತಪ್ಪಿಸಿಕೊಂಡು ಬಂದ ತಿಳಿಗೇಡಿ 'ಲವ್ ಟ್ರೇನಿಂಗ್'ನ ಆಸ್ವಾದಿಸುತ್ತಾ ಕುಳಿತುಕೊಂಡಿದ್ದಾನೆ. ಪಕ್ಕದಲ್ಲಿ ಅವನ ಫಿಯಾನ್ಸಿ ಮಠಕ್ಕೆ ಆಗಾಗ್ಗೆ ಪ್ರಸಾದಕ್ಕೆ ಬರುತ್ತಿದ್ದವರಲ್ಲಿ ಒಬ್ಬಳು. ತಿಳಿಗೇಡಿ 'ಲವ್ ಟ್ರೇನಿಂಗ್‌ನಲ್ಲಿ ನಿರತನಾಗಿದ್ದಾಗ' ಯಾವನೊ ಒಬ್ಬ ಇವನ ಕಾಲನ್ನು ತುಳಿದುಕೊಂಡು ನಡೆದಿದ್ದಾನೆ. ''ಯಾವನಲೇ ಅವನು ಬದ್ಮಾಶ್ ಮಗನ್ನ ತಂದು'' ಅಂತ ಕಿರುಚಿದಾಗ ಅವನು ಮಾತನಾಡದೇ ಮುಂದೆ ನಡೆಯುತ್ತಾನೆ. ತಿಳಿಗೇಡಿಗೆ ಏನೊ ಅನುಮಾನ - ಇವನನ್ನು ಎಲ್ಲೊ ನೋಡಿರುವಂತಿದೆಯಲ್ಲ ಅಂತ. ಕತ್ತಲಲ್ಲಿ ಹಾಗೇ ದೃಷ್ಟಿಸಿ ನೋಡುತ್ತಾನೆ. ಅನುಮಾನವೇ ಇಲ್ಲ, ಅವನು ಅವನೇ. ತನ್ನ ಗುರು ಮಹಾಶಯ! ಗುರುವಿನ ಬೆನ್ನು ಹತ್ತಿ ಹೊರಗೆ ಹೋದ ಶಿಷ್ಯ ನೋಡಿದ್ದೇನು! ಅಲ್ಲೊಂದು ಆಟೋ. ಅದರಲ್ಲಿ ಗುರುಗಳು ಹಾಗೂ ಜೊತೆಗೊಬ್ಬ ಶಿಷ್ಯೆ! ''ಇದೇನು ಗುರುಗಳೇ ತಾವು ಇಲ್ಲಿ - ಅದೂ ಇಷ್ಟು ಹೊತ್ತಿನಲ್ಲಿ?!!''

ತಿಳಿಗೇಡಿಯ ಪ್ರಶ್ನೆ ತಿಳಿಗೇಡಿತನದ ಪ್ರಶ್ನೆಯಾಗಿ ಕಂಡಿರಬೇಕು ಗುರುಗಳಿಗೆ. ಆಗ ಗುರುಗಳೆಂದರು, "ರಾತ್ರಿ ಬಹಳ ಹೊತ್ತು ನಿದ್ರೆ ತಾಕಲಿಲ್ಲ. ಏನೊ ಸಂಕಟ. ತಳಮಳ. 'ಭಕ್ತ ಪ್ರಹ್ಲಾದ' ಚಿತ್ರವನ್ನಾದರೂ ನೋಡೋಣ ಎಂದು ಬಂದೆವು. ಆದರೆ ಇಲ್ಲೇನೊ ಬೇರೆ ಚಿತ್ರ ಆಡುತ್ತಿದೆ. ನಮಗೆ ಇದೆಲ್ಲ ಸರಿ ಬರೋದಿಲ್ಲ. ಮಠಕ್ಕೆ ಹೊರಟಿದ್ದೇವೆ...." ಅವರ ಈ ಸಮಜಾಯಿಷಿಗೆ ತಿಳಿಗೇಡಿ, "ಅದು ಸರಿ ಗುರುಗಳೇ. ಇವರು ಯಾರೊ ಗೊತ್ತಾಗಲಿಲ್ಲ!" ಎಂದು ಅನುಮಾನದ ರಾಗ ಎಳೆದ. "ಯಾರೊ ಅನಾಥೆಯಂತೆ ಪಾಪ..." ಎಂದರು. "ಛಿ ಯಾರು ಯಾರೊ ಗುರುಗಳ ಪಕ್ಕ ಕೂರುವುದೇ. ಶಾಂತಂ ಪಾಪಂ ಶಾಂತಂ ಪಾಪಂ" ಎನ್ನುತ್ತ ತಿಳಿಗೇಡಿ ಕೈನೀಡಿ ಆ 'ಅನಾಥೆ'ಯನ್ನು ಕೆಳಕ್ಕೆ ಎಳೆದುಕೊಂಡ. ಕತ್ತಲೆಯಲ್ಲಿ ಆಟೊ ಓಡಿತು.

ಅನಾಥೆಯ ಕೈಹಿಡಿದು ಹೆಜ್ಜೆ ಹಾಕಿದ ತಿಳಿಗೇಡಿ ಕತ್ತಲೆಯಿಂದ ಬೀದಿ ದೀಪದ ಬೆಳಕಿಗೆ ಬಂದು ಹಿಂತಿರುಗಿ ನೋಡುತ್ತಾನೆ. ತಾನು ಕೈಹಿಡಿದವಳು ಬೇರೆ ಯಾರೂ ಅಲ್ಲ. ಪ್ರತಿ ಅಮವಾಸ್ಯೆ ಕರಿ ಸೀರೆಯಲ್ಲಿ ಗುರುಗಳ ಆಶೀರ್ವಾದಕ್ಕಾಗಿ ಮಠಕ್ಕೆ 'ವಿಶೇಷವಾಗಿ' ಆಗಮಿಸುವ ಗುರುಗಳ ಅಂತರಂಗ ಶಿಷ್ಯೆ – ಭಗವತಿ. ಗುರುಗಳು ಮಂತ್ರಾಕ್ಷತೆಯನ್ನು ಅವಳ ಮೇಲೆ ಹಾಕಿ ಮೈಸವರಿ ಸ್ವೀಕರಿಸುತ್ತಿದ್ದುದನ್ನು ಕಣ್ಣಾರೆ ತಿಳಿಗೇಡಿ ನೋಡಿದ್ದಾನೆ. ಗುರುಗಳು ಯಾವುದೇ ವಿಷಯದಲ್ಲಿ ದಡ್ಡರಾದರೂ. ಈ ಪ್ರೀತಿ ಪ್ರೇಮದ ವಿಷಯದಲ್ಲಿ ಮಹಾಜಾಣರು ಎಂದು ತಿಳಿಯುತ್ತಾನೆ ತಿಳಿಗೇಡಿ. ಇಷ್ಟು ಸಾಕಲ್ಲವೇ ಗಾಂಪ ಶಿಷ್ಯರಿಗೆ ಪ್ರೀತಿಯ ದಾರಿಯಲ್ಲಿ ಮುಂದುವರಿಯಲು.....

❖❖❖



ಅಭಿನಂದನೆಗಳೊಂದಿಗೆ



ಅಪರಂಜಿಯ ಅಭಿಮಾನಿ

ಬೊಜ್ಜುಂ ಶರಣಂ ಗಚ್ಛಾಮಿ

❖ ಎನ್. ರಾಮನಾಥ್

ಬೊಜ್ಜು

ಎರಡು ಎಂದರೆ ಎರಡೇ ಅಕ್ಷರ.

ಅಲ್ಲಪ್ಪ ಮೂರು ಮಾತ್ರೆಗಳು ಎನ್ನುತ್ತಾರೆ ಪ್ರೊ||ಅ.ರಾ.ಮಿತ್ರ. ಚಂದದ ಮಿತ್ರರಿಗೆ ಛಂದದ ಮಾತ್ರೆಗಳ ಮೇಲೆ ಅಪಾರ ಪ್ರೇಮ. ಛಂದಸ್ಸನ್ನು ಹಿಡಿದರೆ ನಮಗೂ ಮಾತ್ರೆಗಳು ಬಂದೇ ಬರುತ್ತವೆ ಗುಳಿಗೆಗಳ ರೂಪದಲ್ಲಿ! ಆ ಮಾತು ಅಂತಿರಲಿ. ಬೊಜ್ಜಿಗರ ವಿಷಯಕ್ಕೆ ಬರೋಣ.

ಎಂತಹ ಹಿತ ಅಂತಹವರಿಗೆ ಆತು ಕುಳಿತುಕೊಳ್ಳುವವರಿಗೆ.

ಎಂತಹ ಮಿತ ಅವರ ಓಡಾಟಹಾರಾಟಕ್ಕೆ.

ಬೊಜ್ಜು ಮನುಷ್ಯನಿಗೆ ಅವಶ್ಯ. ಬೊಜ್ಜೇ ಇರದಿದ್ದರೆ ಅಂತಹ ವ್ಯಕ್ತಿಯನ್ನು ಗಳುವಿನ ಮೇಲೆ ಬಟ್ಟೆ ಹರವಲು ಮಡಿಕೋಲಿನೋಪಾದಿಯಲ್ಲಿ ಉಪಯೋಗಿಸುತ್ತಿದ್ದರಂತೆ ಆ ಕಾಲದಲ್ಲಿ. ಈಗ? ಎಲ್ಲವನ್ನೂ ಗಿನ್ನಿಸ್ ಅಥವಾ ಲಿಂಕಾ ಪುಸ್ತಕದ ಹಾಳೆಗಳಲ್ಲಿ ಅಕ್ಷರಗಳಾಗುವ ಲೆಕ್ಕಕ್ಕೆ ಸಾಧಿಸಹೊರಡುವುದು ಈಗಿನವರ ಪರಿ. ಬೊಜ್ಜಿನ ಸುತ್ತಳತೆ ಅಳೆಯುತ್ತಾ ಇನ್ನೂ ಎರಡಿಂಚಾದ್ರೆ ರೆಕಾಲ್ಡು ಎನ್ನುತ್ತಾ ಬೊಜ್ಜಂ ಏರಿಪ ಸಿಹಿಯಂ ತಿನ್ನುವ ಬೊಜ್ಜೇಶರು ನಮ್ಮಲ್ಲಿ ಬಹಳ ಸಿಗುತ್ತಾರೆ.

ಬೊಜ್ಜಿನ ಆರಂಭ ಎಂದು, ಯಾವ ಕಾರಣಕ್ಕೆ ಹೇಗೆ ಆಯಿತು ಎಂಬುದರ ಬಗ್ಗೆ ಬಗೆಬಗೆಯ ವಾದಗಳಿವೆ. ಜಗದ ಮೊದಲ ಬೊಜ್ಜಿಗ ಗಣಪತಿ ಎಂದು ಹಲವರು, ಕುಂಭಕರ್ಣ ಎಂದು ಇನ್ನು ಕೆಲವರೂ ಮತ್ತು ಬಕಾಸುರನೇ ಬೊಜ್ಜಾದಿಗ (ಬೊಜ್ಜು ಹೊಂದಿದವರಲ್ಲಿ ಮೊದಲಿಗ) ಎಂಬ ಕೆಲವು ಜನಗಳದೂ ವಾದಗಳಿವೆ. ಗಣಪ ತಿಚಿ ತಜಡಿಥಿ ಚಿಛಿಣಾತಜ.ಹುಟ್ಟಿದ ಕೆಲವೇ ಗಂಟೆಗಳಲ್ಲಿ ಯುದ್ಧ ಮಾಡಿ ಜಗದ ಅತಿ ಚಿಕ್ಕ ವಯಸ್ಸಿನ ಹೋರಾಟಗಾರನಾಗಿ ನಿಜಕ್ಕೂ ಹುಟ್ಟುಹೋರಾಟಗಾರನೆಂದು ಬಿರುದು ಪಡೆದು ಆ ಕಾಲದ ಪಾಯಸ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ಹೆಸರು ದಾಖಲಿಸಿಕೊಂಡ ಗಣಪ ಚುರುಕಾಗಿದ್ದುದರಿಂದ ಹೊಟ್ಟೆದಪ್ಪ ಇದ್ದರೂ ಬೊಜ್ಜು ಇರಲಿಲ್ಲ ಮತ್ತು ಹೊಟ್ಟೆದಪ್ಪ ಇದ್ದದ್ದು ಅವನ ತಲೆಗೆ ಟಚಿಣಭಿಟಿರ ಆಗಿರುವ ಕಾರಣಕ್ಕಾಗಿ ಮಾತ್ರ ಎಂದು ಆತನ ಭಕ್ತರು

ಉಳಿಯುತ್ತಿದ್ದಾರೆ. ಆದರೆ ಅಷ್ಟೇನೂ ಚುರುಕಾಗಿ ಓಡಾಡದೆ ಇದ್ದಲ್ಲಿಯೇ ಬಿದ್ದಿರುತ್ತಿದ್ದ ಕುಂಭಕರ್ಣ ಮೊದಲ ಬೊಜ್ಜಿಗ ಎಂದು ಕೆಲವರು ನುಡಿದರೂ, ಮಲಗಿದಾಗ ಕುಂಭಕರ್ಣ ತಿನ್ನುತ್ತಿರಲಿಲ್ಲ. ಎದ್ದಾಗ ತಿಂದು ಅಲೆದಾಡಲು ಹೋಗುತ್ತಿದ್ದನಾದುದರಿಂದ ಕಾಯ ಬೆಳೆದರೂ ಅದು ಬೊಜ್ಜುರಹಿತವದುದು ಎನ್ನುತ್ತಾರೆ. ಆದರೆ ಬಕಾಸುರ ಇದ್ದೆಡೆಯೇ ಪ್ರತಿದಿನ ಬಂಡಿ ಬಂಡಿ ಆಹಾರ ಮುಕ್ಕುತ್ತಿದ್ದುದರಿಂದ ಬೊಜ್ಜು ಬೆಳೆದು ಭೀಮನೊಡನೆ ಕುಸ್ತಿ ಆಡಲಾರದೆ ಗೊಟಕ್ ಎಂದ ಎಂಬ ಮಾತು ಹೆಚ್ಚು ಸಮಂಜಸ ಎನ್ನಿಸುತ್ತದೆ.

ನನಗಂತೂ ಬೊಜ್ಜು ಬಹಳ ಪ್ರಿಯವಾದ ಅಂಶ. ರಸ್ತೆಯಲ್ಲಿ ನರಪೇತಲರು ಚಕಚಕನೆ ನಡೆದು ಬೇಗ ನೋಡುಗರ ದೃಷ್ಟಿಯಿಂದ ಹೊರಹೋಗುವುದರಿಂದ ಅವರು ವಿಶ್ಲೇಷಣೆಗೆ ಸಿಗದೆಯೇ ಉಳಿದುಬಿಡುತ್ತಾರೆ. ಆದರೆ ಬೊಜ್ಜಿಗರ ಮಾತೇ ಬೇರೆ. ಅವರ ಮಂದಗಮನ ರಾಜಠೀವಿಯಿಂದ ನಡೆದಾಡುವ ಅಂಬಾರಿಯಾನೆಯೋಪಾದಿಯಲ್ಲಿ ಇದ್ದು ಮನಕ್ಕೆ ಮುದ ನೀಡುತ್ತದೆ. ಬೊಜ್ಜನ್ನೇ ಆಸ್ತಿಯಾಗಿಸಿಕೊಂಡ ಟುನ್‌ಟುನ್, ಒಲಿವರ್ ಹಾರ್ಡಿ ಮುಂತಾದವರು ನನಗೋ ಪ್ರಾತಃಸ್ಮರಣೀಯರು. ನಾನು ಇಷ್ಟು ಹೇಳುವಾಗಲೇ ನನ್ನ ಸುತ್ತಳತೆಯ ಬಗ್ಗೆಯೂ ನಿಮಗೆ ಒಂದು ಅಂದಾಜು ಸಿಕ್ಕಿರಬೇಕು. ಆದರೆ ಇತ್ತೀಚೆಗೆ ಬೆಳಕಿಗೆ ಬಂದ ಒಂದು ಸುದ್ದಿಯ ಪ್ರಕಾರ ಪ್ರಪಂಚದಲ್ಲಿ ಇನ್ನು ಮುಂದೆ ಬೊಜ್ಜೇ ಇರಲಾರದಂತೆ. ವಿಜ್ಞಾನಿಗಳು ತಮ್ಮ ಪಾಡಿಗೆ ತಾವಿರದೆ ಬೊಜ್ಜು ನಿವಾರಕ ಜೀನ್ ಒಂದನ್ನು ಕಂಡುಹಿಡಿದಿದ್ದಾರಂತೆ. ಆ ಜೀನ್ ಇರುವ ಒಂದು ಇಂಜೆಕ್ಷನ್ ತೆಗೆದುಕೊಂಡರಾಯ್ತು - ಮರುದಿನದಿಂದ ಬೋಂಡಾ, ಬಜ್ಜಿ ಮೊಟ್ಟೆ ಬಾಸುಂದಿ ಮುಂತಾದ ಬೊಜ್ಜು ಬರುವ ತಿಂಡಿಗಳನ್ನು ಮಣಗಟ್ಟಲೆ ತಿಂದರೂ ಬೊಜ್ಜು ಬರುವುದಿಲ್ಲವಂತೆ! ಈ ಸುದ್ದಿ ಎಂದಿನಂತೆ ಇಂಟರ್‌ನೆಟ್‌ನಲ್ಲಿ ವೈರಸ್ ಹರಡುವಂತೆ ಹರಡಿ ಹಲವು ಜನ ಹಲವು ವಿಧದಲ್ಲಿ ನಾಲಿಗೆಗೆ ಕೆಲಸ ಕೊಡುವಂತಾಯಿತು.

ಬೊಜ್ಜು ನಿವಾರಣೆಗೆ ನಮ್ಮ ಧಿಕ್ಕಾರವಿದೆ. ನರಪೇತಲರು, ಕಡ್ಡಿಗಳು ಅಬ್ಬಬ್ಬಾ ಎಂದರೆ 5ಗಜದ ಸೀರೆಯನ್ನೋ, 2 ಮೀಟರ್‌ನ ಪ್ಯಾಂಟ್‌ಪೀಸನ್ನೋ ಖರೀದಿಸಿಯಾರು. ಆದರೆ ಡುಮ್ಮಡುಮ್ಮಿಯರಿಗೆ ತೊಡಲು ಶಾಮಿಯಾನಾಗಟ್ಟಲೆ ಬಟ್ಟೆ ಬೇಕಾಗುತ್ತದೆ. ಬೊಜ್ಜೇಶ-ಬೊಜ್ಜಿಣಿಯರಿಂದಲೇ ನಮಗೆ ವ್ಯಾಪಾರ. ಅವರೇ ನಮ್ಮ ಜೀವನಾಧಾರ. ಅವರನ್ನು ಸಣ್ಣಗಾಗಿಸಿದರೆ ನಮ್ಮ ಹೊಟ್ಟೆಯ ಮೇಲೆ ತಣ್ಣೀರಬಟ್ಟೆಯೇ ಗತಿ ಎಂದು ಅಲವತ್ತಿಕೊಳ್ಳುತ್ತಾ ಪ್ರತಿಭಟಿಸಿದ ಸೇಠ್ ಬೊಜ್ಜೂಬಾಯಿ.

ಬೊಜ್ಜು ಇರುವವರು ಶಾಂತಿಪ್ರಿಯರು. ಮೊದಲೇ ಭಯೋತ್ಪಾದನೆ ಹೆಚ್ಚುತ್ತಿರುವ ಈ ಕಾಲದಲ್ಲಿ ಕೃಶತೆ ಹೆಚ್ಚಿಸಿ, ಬೊಜ್ಜು ಇಳಿಸಿ ಶಾಂತಚಿತ್ತರಲ್ಲಿ ಅಶಾಂತಿ ಮೂಡಿಸುವುದು ಸಲ್ಲದು. ನೀವು ಯಾವುದೇ ಬೀದಿಜಗಳ ಗಮನಿಸಿ. ಹೊಡೆದಾಡುವವರು, ಒಬ್ಬರನ್ನೊಬ್ಬರು ಅಟ್ಟಿಸಿಕೊಂಡುಹೋಗುವುದು ಸೊಣಕಲರೇ. ಡೊಣಪರು ಜಗಳವಾಡುವುದು, ಕೋಪಿಸಿಕೊಳ್ಳುವುದು ವಿರಳ. ಆದ್ದರಿಂದ ದಿನೇ ದಿನೇ ಬೊಜ್ಜಿಗರ ಸಂಖ್ಯೆ ಬೆಳೆಯಲಿ ಎಂದರು ಶಾಂತಿಮಠಾಧೀಶರಾದ ಶಾಂತಪ್ಪನವರು.

ಅಹುದೇ? ಬೊಜ್ಜು ಇರುವವರಿಗೆ ಕೋಪ ಕಡಿಮೆಯೇ? ಎಂದೆ.

ನಿಜ ಹೇಳಬೇಕೆಂದರೆ ಬೊಜ್ಜು ಇರುವವರಿಗೆ ಕೋಪ ಬರುವುದಿಲ್ಲವೆಂದೇನಿಲ್ಲ, ಹೊಡೆಯುವಷ್ಟು ಕೋಪ ಬರುತ್ತದೆ. ಆದರೆ ಹೊಡೆಸಿಕೊಳ್ಳುವವನೂ ದಪ್ಪವಿರುವವನೇ ಆದರೆ ಕೈಗೆ ಸಿಗುತ್ತಾನೆ. ಸಣಕಲನಾದರೆ ಓಡುತ್ತಾನೆ. ಬೊಜ್ಜಿನಿಂದ ದಪ್ಪವಾದವರಿಗೆ ಓಡಲು ಸಾಧ್ಯವೇ? ನಗೆಪಾಟಲಿಗೀಡಾಗುತ್ತಾರಷ್ಟೆ. ಕೈಲಾಗದವನು ಮೈ ಪರಚಿಕೊಂಡ ಎನ್ನುವ ಗಾದೆಯಂತಾಗುತ್ತದಷ್ಟೆ ಆಳಿಡಿಜಣಾಅಟಿಟು ಛಿಜಾಟಿರಿ ಇುಜಿ ಛಿಜಣಣಜಡಿ ಕಿಚಿಡಿಣ ಡಿಜಿ ತಿಚಿಟಿಡಿಣಡಿಟು ಇುಚಿಣ ಛಿರಿಣಾಟಜ ಟಚಿಳಿಜ ಣ ನಗೆಪಾಟ್ಲು, ಬೊಜ್ಜಿಗರು ಒಳಗೊಳಗೇ ಕುದಿಯುತ್ತಿದ್ದರೂ ಹೊರಗೆ ಶಾಂತರಾಗಿರುವ ಸೋಗು ಹಾಕುತ್ತೇವಷ್ಟೆ ಎಂದರು ಆ ದಢೂತಿ ಸ್ವಾಮಿಗಳು. ಸ್ವಾನುಭವಪ್ರೇರಿತನಾದ ನಾನೂ ಅವನ ವಾದಸರಣಿಗೆ ತಲೆದೂಗಿದೆ.

ಬೊಜ್ಜು ನಮಗೆ ಪರಂಪರಾಗತವಾಗಿ ಬಂದದ್ದು. ಬೊಜ್ಜು ಇಲ್ಲವಾಗಿಸಹೋದರೆ ಮೆಚ್ಚನಾ ಪರಮಾತ್ಮನು ಎಂದ ಸ್ವಾಮಿಗಳು ಬೊಜ್ಜು ಮನುಜನಿಗೆ ಬರಲೇಬಾರದೆಂದಿದ್ದರೆ ಆ ದಯಾಮಯನಾದ ದೇವನು ಹಸುವಿನ ಹಾಲಿನಲ್ಲಿ ಕೊಬ್ಬಿನ ಅಂಶವನ್ನೇ ಇಡುತ್ತಿರಲಿಲ್ಲ. ಮನುಜ ಹಾಲು ಕುಡಿದು, ಬೆಣ್ಣೆ ತಿಂದು ದಪ್ಪವಾಗಬೇಕು ಎಂಬುದು ಅವನ ನಿಯಮ ಎಂದು ನುಡಿದರು.

ಶಾಂತಪ್ಪನವರಿಂದ ಬೀಳ್ಕೊಂಡು ಹೊರಬಂದು ಅಲ್ಲಿಯೇ ಇದ್ದ ಷೂ ಅಂಗಡಿಯವನನ್ನು ಬೊಜ್ಜು ಒಳ್ಳೆಯದೋ ಕೆಟ್ಟದ್ದೋ? ಎಂದು ಕೇಳಿದೆ.

ನಾವು ಚೆನ್ನಾಗಿರಬೇಕಾದರೆ ಜನ ದಪ್ಪಗಿರಬೇಕು ಎಂದರು ಅಂಗಡಿಯ ಯಜಮಾನರು.

ಏಕೆ?

ಸಣ್ಣ ಜನ ನಿಜಕ್ಕೂ ಸಣ್ಣ ಜನರೇ. ಅವರಿಂದ ನಮಗೆ ಯಾವ ವಿಧವಾದ ವ್ಯಾಪಾರವೂ ಆಗುವುದಿಲ್ಲ. ಆದರೆ ಠೊಣಪರು ಹಾಗಲ್ಲ, ಬೆಳಗ್ಗೆ ಜಾಗಿಂಗಿಗೆ ಒಂದು ಮಾದರಿಯ ಪಾದರಕ್ಷೆ, ನಂತರ ಸಂಜೆ ಆಟವಾಡಲು ಇನ್ನೊಂದು ಬಗೆಯ ಪಾದರಕ್ಷೆ, ಟ್ರೆಡ್‌ಮಿಲ್ ಮೇಲೆ ಸವಾರಿ ಮಾಡಲು ಒಂದು ಜೊತೆ ಚಪ್ಪಲಿ... ಹೀಗೆ ನಮ್ಮ ಉತ್ಪಾದನೆಗಳನ್ನು ಹೆಚ್ಚುಹೆಚ್ಚಾಗಿ ಉಪಯೋಗಿಸುವುದು ದಪ್ಪಗಿರುವವರೇ. ಆದ್ದರಿಂದ ದಪ್ಪನೆಯವರ ಸಂಖ್ಯೆ ಸಾಸಿರವಾಗಲಿ. ಬೊಜ್ಜು ನಿವಾರಿಸಲು ಯಾವುದೋ ಜೀನ್ ಕಂಡುಹಿಡಿದವನ ಮನೆ ಹಾಳಾಗಲಿ ಎಂದು ಹರಸಿದರು ಯಜಮಾನರು.

ನಿಜ. ಬೋಂಡ ಬಜ್ಜಿ ಬಗೈರ್ ಬದುಕು ಬದುಕಿದ್ರೆ ಭಗವಂತನೂ ಭೇಷಂತ ಬೆಸ್ತಟ್ಟಲ್ಲ. ಪೊಗದಸ್ತಾಗಿ ಪ್ಲೇಟ್‌ಗಟ್ಲೆ ಫಳಾರ ಪರರಿಂದ ಪೀಕಿ, ಪಟ್ಟಿದ್ದೆ ಪವಡಿಸೋ ಮರಮಸುಖಿ ಪುಣ್ಯದಿಂದಲೇ ಫಲಪ್ರದವಾದ ಪ್ರಾಕ್ಟೀಸು ನಾವು ವೈದ್ಯರ್ದು. ಮನುಷ್ಯ ಮಜವಾಗಿ ಮೈಮರೆತು ಮಕ್ಕರಿಗಟ್ಲೆ ಮುಕ್ಕದೆಯಿದ್ರೆ, ಮಧುಮೇಹ ಮರೆಯಲ್ಲೇ ಮಾಯವಾಗ್ಬಿಡತ್ತೆ. ಹಾಗಾಗ್ದೆ ಎಲ್ರೂ ಚೆನ್ನಾಗ್ ತಿಂದು, ಬೂಜ್ಜು ಬೆಳೆಸಿ ಡಯಾಬಿಟಿಸ್, ಬಿಪಿ ಬೆಳೆಸ್ಕೊಂಡ್ರೆ ನಮಗೆ ಶುಭ. ಇಲ್ದಿದ್ರೆ ಅಧೋಗತಿ. ಆದ್ರಿಂದ ಬೊಜ್ಜು ಚಿರಾಯುವಾಗಲಿ ಅನ್ನೋದೇ ನಮ್ಮ ಅಂಬೋಣ ಎಂದರು ಡಾಕ್ಟರ್ ವೈದ್ಯನಾಥ್.


ಬೆಲ್ಟ್ ಕಂಪನಿಯವರು, ಟ್ರಾಕ್‌ಸೂಟ್ ತಯಾರಕರು, ಜಾಗರ್ಸ್ ಅಸೋಸಿಯೇಷನ್‌ನವರು, ಡುಮ್ಮರನ್ನೇ ಸದಸ್ಯರಾಗಿ ಹೊಂದುವ ನಗೆಕೂಟದವರು ಹಾಗೂ ಮೂರೇ ದಿನಗಳಲ್ಲಿ ಬೊಜ್ಜು ಕರಗಿಸಿ ಎನ್ನುತ್ತಾ ದುಡ್ಡು ಕರಗಿಸುವ ಸಂಸ್ಥೆಗಳೆಲ್ಲಾ ಸೇರಿ ಸರ್ಕಾರದ ಕೈ ಬಿಸಿ ಮಾಡಿ ಸಣ್ಣಗಾಗಿಸುವ ಜೀನ್ ಹೊರಬಾರದಂತೆ ಮಾಡಲು ತಾಕೀತು ಮಾಡಿದರು. ಆದರೆ ಸರ್ಕಾರ ಸಮ್ಮಿಶ್ರವಾದುದರಿಂದ ಮಿಶ್ರಭಿನ್ನರು (ಮನೆಯೊಳಗಿನ ಮಾರಿಗಳು) ಇದಕ್ಕೆ ವಿರೋಧ ವ್ಯಕ್ತ ಪಡಿಸಿದರು.

ವಿಚಾರ ಭಾರತೀಯ ವೈಜ್ಞಾನಿಕ ಸಂಸ್ಥೆಯನ್ನು ಮುಟ್ಟಿತು. ಅಲ್ಲಿನ ಮುಖ್ಯಸ್ಥರ ಕೈ ಬಹಳ ತಣ್ಣಗಿವೆ ಎಂದು ಬೊಜ್ಜುವಿರೋಧಿಗಳಿಗೆ ಗಾಳಿಸುದ್ದಿ ಬಂದಿತು. ಅವರೆಲ್ಲಾ ಸೇರಿ ಆತನ ಕೈ ಬೆಚ್ಚಗಾಗಿಸಿದರು.

ಸಣ್ಣಗಾಗಿಸುವ ಜೀನನ್ನೇ ದಪ್ಪವಾಗಿಸುವ ತಂತ್ರ ಈಗ ಸಿದ್ಧಿಸಿದೆಯಂತೆ. ಜಗದಲ್ಲಿ ದಪ್ಪನೆಯವರು ವಿರಳವಾಗುವುದಿಲ್ಲವಂತೆ. ಬದಲಿಗೆ ಕಡ್ಡಿಗಳಿಗೂ ಜಂಕ್‌ಫುಡ್ ಬಲವಾಗಿ ತಿನ್ನಿಸುವ ಏರ್ಪಾಟು ನಡೆದಿದೆಯಂತೆ. ಸರ್ವಂ ಬೊಜ್ಜುಮಯಂ ಜಗತ್ ಆಗಲಿದೆಯಂತೆ. ಜಗವೇ ಒಂದಾಗಿರುವಾಗ ನಾವು ಬೇರಾಗುವುದೇ? ಬನ್ನಿ ಅವರ ಮಂತ್ರವನ್ನೇ ನಾವೂ ಹಾಡೋಣ. ಮಂತ್ರ ಯಾವುದು ಅಂದ್ರೇನೂ? ಅದೇರೀ...

ಸ್ವೀಟುಂ ಶರಣಂ ಗಚ್ಛಾಮಿ, ಬೋಂಡಾ ಶರಣಂ ಗಚ್ಛಾಮಿ, ನಿದ್ರಾ ಶರಣಂ ಗಚ್ಛಾಮಿ
ತೈಲಂ ಶರಣಂ ಗಚ್ಛಾಮಿ, ಮದ್ಯಂ ಶರಣಂ ಗಚ್ಛಾಮಿ, ಬೊಜ್ಜುಂ ಶರಣಂ ಗಚ್ಛಾಮಿ.

❖❖❖



ಘಾಸಿಪಟ್ಟು ಕೂತೆ ನಾನು

❖ ನಾಗೂಶ್ರೀ ಸೂರಿ

ಘಾಸಿಪಟ್ಟು ಕೂತೆ ನಾನು ಹೆಚ್ಚು ಕಾಸಿಗೆ
ನೀವು ಕೊಂಚ ಹೇಳಿ ನೋಡಿ ನಮ್ಮ ಬಾಸಿಗೆ

ಅನ್ನ ಸಾರು ತಿನ್ನುತಿದ್ರೆ ಮನೆಯಲಿ
ಇರುತೆ ಕೊಂಚ ಕಾಸು month ಉ ಕೊನೆಯಲಿ
ಹೊರಗೆ ಹೋಗಿ ಒಂದು ಬಾರಿ ತಿಂದು ಬಂದರೆ
ಅರ್ಧಜೇಬು ಖಾಲಿಯಾಗಿ ಪಡುವೆ ತೊಂದರೆ

ಘಾಸಿಪಟ್ಟು ಕೂತೆ ನಾನು .. ..

ಮಾವ ಕೊಟ್ಟ ಸೂಟು ಈಗ ಮಾಸಿದೆ,
ಬೇರೆ ಬೇಕು ಆದ್ರೆ ಎಲ್ಲಿ ಕಾಸಿದೆ?
ಹೊಲಿಸಬಹುದು ಅರ್ಧ ಪ್ಯಾಂಟು ಒಂದು ಕಾಲಿಗೆ
ಇನ್ನು ಅರ್ಧ ಕಾಯಬೇಕು ಬರುವ ಸಾಲಿಗೆ

ಘಾಸಿಪಟ್ಟು ಕೂತೆ ನಾನು .. .. ..

ಅರವತ್ತರ ದಶಕದ ಬೇಕರಾರು ಕರ್ ಕೆ ಹಮೆ ಯೂ ನ ಜಾಯಿಯೆ ... ಹಾಡಿನ ಅಣಕವಾಡು

ಪ್ರಭಾ ಕಣ್ಣಿನ ಆಸ್ಪತ್ರೆ
ಮತ್ತು
ಸಂಶೋಧನಾ ಕೇಂದ್ರ

504, 40ನೇ ಅಡ್ಡ ರಸ್ತೆ, 7ನೇ ಬ್ಲಾಕ್, ಜಯನಗರ,

ಬೆಂಗಳೂರು – 560 070

ದೂರವಾಣಿ : 2634 4131, 41 / 2663 7041

ಮತ್ತು

ವಿಠಲ ಅಂತರರಾಷ್ಟ್ರೀಯ
ನೇತ್ರಶಾಸ್ತ್ರಸಂಸ್ಥೆ

ನಂ. 1, 2ನೇ ಅಡ್ಡರಸ್ತೆ, 2ನೇ ಮುಖ್ಯ ರಸ್ತೆ, 7ನೇ ಬ್ಲಾಕ್,

ಬನಶಂಕರಿ 3ನೇ ಹಂತ,

ಹೊಸಕೆರೆಹಳ್ಳಿ, ಬೆಂಗಳೂರು – 560 085

ದೂರವಾಣಿ : 2672 2213 /14 / 15/19

Mailing Date
5th of every month
Mailled at Rajajinagar - PO

CPMG/KA/BGW-544/2006-2008
RNI-KAR KAN / 2005/ 15457

Printed by: V.R. NATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003.
Printed at: Ravi Graphics, 53/8, 2nd Main Road, Industrial Town, Rajajinagar, Bangalore - 560 010. Ph : 2330 5999.
Editor : M. SHIVAKUMAR